

ಕಸ್ತೂರಿ

ಫೆಬ್ರುವರಿ, ೧೯೮೪

ರೂ. ೨.೫೦

‘ಕಸ್ತೂರಿ’ಯ ಅರ್ಧವಾರ್ಷಿಕ ಪರಿವಿಡಿ

ಕ್ರಮ: ಲೇಖನದ ಹೆಸರು, ತಿಂಗಳು, ಪುಟಸಂಖ್ಯೆ

ಸಪ್ಟಂಬರ್ ೧೯೬೬ ರಿಂದ ಫೆಬ್ರುವರಿ ೧೯೬೭ ರ ವರೆಗೆ

ಸ = ಸಪ್ಟಂಬರ್ ಅ = ಅಕ್ಟೋಬರ್ ನ = ನವೆಂಬರ್ ಡಿ = ಡಿಸೆಂಬರ್
ಜ = ಜನೆವರಿ ಫೆ = ಫೆಬ್ರುವರಿ

ದೇಶ-ನಗರ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ನೀತಿಕಥೆ

ಪದಾರ್ಥ ಚಿಂತಾಮಣಿ

ಪುಸ್ತಕ ವಿಭಾಗ

ಪ್ರಾಣಿ ಜೀವನ

ರಹಸ್ಯ ಸಾಹಸ ಸೋಜಿಗ

ವಿಜ್ಞಾನ

ಸಾಮಾನ್ಯ

ಹರಟೆ ನಗೆಬರಹ



ಕಸ್ತೂರಿ

ಕನ್ನಡ ಡೈಜೆಸ್ಟ್



ವ್ಯವಸ್ಥಾಪಕ ಸಂಪಾದಕ :
ಎಸ್. ಎ. ಪಾಟೀಲ

ಸಹಸಂಪಾದಕ :
ಮಾಧವ ನಾ. ಮಹಿಷಿ

◆◆

ಆಳಿ :
ಪಿ. ಆರ್. ಪಾಟೀಲ

◆◆

ಮುಖಪುಟ :
ಪ್ರತೀಕ್ಷೆ

◆◆

ಚಿತ್ರ :
ಎನ್. ಸಿ. ದೇಸಾಯಿ

ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI, February 1985

ಬೆಳಕಿಂಡಿ

ನೆರೆಹೊರೆಯುವರ ಮನಸ್ಸಿನ ವಿರುದ್ಧವಾಗಿ ಯಾರೂ ಶಾಂತಿಯಿಂದ ಜೀವಿಸಲು ಸಾಧ್ಯವಿಲ್ಲ. -ಎಂ.ಎಂ.ಬಿ.

*

ಸಾಮಾನ್ಯ ಮಾನವನಿಗೆ ಸಾರಾಸಾರ ವಿಚಾರ ಮಾಡುವ ಸಾಮರ್ಥ್ಯವಿದೆ ಎಂಬ ತರ್ಕವನ್ನಾಧರಿಸಿದ್ದರಿಂದಲೇ ಅರ್ಥಶಾಸ್ತ್ರದ ಅನೇಕ ತತ್ವಗಳು ಸುಳ್ಳಾಗಿವೆ.

—ಅಗಸ್ಟ ಡೆಟಾಫ್

•

ಮೂರ್ಖನು ಮಿತ್ರರಿಂದ ಕಲಿಯುವದಕ್ಕಿಂತಲೂ ಹೆಚ್ಚು ಜಾಣ ಶತ್ರುಗಳಿಂದ ಕಲಿಯುತ್ತಾನೆ. —ಜಾಕ್ಸ ಡೇವಲ್

•

ಕಲಾವಿದ ವಿಶ್ವದ ಒಂದು ಕ್ಷುದ್ರ ತುಣುಕು ಮಾತ್ರ. ನಾವು ಸೌಂದರ್ಯಕ್ಕಾಗಲಿ, ಆನಂದಕ್ಕಾಗಲಿ ಕೊಡುವುದಕ್ಕಿಂತ ಹೆಚ್ಚಿನ ಮಹತ್ವವನ್ನು ನಾವು ಅವನಿಗೆ ಕೊಡಬಾರದು.

—ಪಿಕಾಸೊ

ಚಂದಾದಾರರಿಗೆ ಸೂಚನೆ

"ಕಸ್ತೂರಿ" ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಹಚಿಂತನ

ಕೃತಿಚೌರ್ಯ ?

ಕಳೆದ ಅಕ್ಟೋಬರ್ ಸಂಚಿಕೆಯಲ್ಲಿ ಬಂದ ನನ್ನ 'ಸಂತನ ಸಮಾಧಿ'ಯನ್ನು ಶ್ರೀ ಮಾಸ್ತಿಯವರ 'ನವರಾತ್ರಿ' ಪುಸ್ತಕದಿಂದ ನಾನು ಎತ್ತಿಕೊಂಡು ಮೂಲವನ್ನು ಸ್ಮರಿಸದೆ ಅಪಚಾರವಾಗಿದೆಯೆಂಬ ತೆರದಲ್ಲಿ ಶ್ರೀಮತಿ ಉಮಾ ರಮೇಶ್ ಡಿಸೆಂಬರ್ 'ಸಹಚಿಂತನ'ದಲ್ಲಿ ಬರೆದಿದ್ದಾರೆ. ಇದು ಸತ್ಯಕ್ಕೆ ದೂರವಾದ ಕಲ್ಪನೆ. ಯಾಕೆಂದರೆ ನಾನು ೧೯೭೩ರಲ್ಲಿ ಓದಿದ ಒಂದು ಹಿಂದೀ ಮಾಸಿಕದಲ್ಲಿ ಶ್ರೀ ಹೀರಾಲಾಲ ಶರ್ಮಾ ಎಂಬವರು ಈ ಘಟನೆಯನ್ನು ಬರೆದಿದ್ದರು. ಅದನ್ನು ಗುರುತು ಹಾಕಿಕೊಂಡಿದ್ದೆ. ಈ 'ಸಂತನ ಸಮಾಧಿ'ಯ ಮೂಲ ಪ್ರಾಯಶಃ ಮಾಸ್ತಿಯವರಿಗೂ ಗೊತ್ತಿರಲಿಕ್ಕಿಲ್ಲ, ಹಿರಾಲಾಲರಿಗೂ ತಿಳಿದಿರಲಿಕ್ಕಿಲ್ಲ. ರಾಮಾಯಣ, ಮಹಾಭಾರತ, ಪಂಚತಂತ್ರ, ಹಿತೋಪದೇಶ ಮುಂತಾದ ಕಥೆಗಳಿಗೆ ಯಾರೂ ಕಾಪಿರೈಟ್ ಸಾಧಿಸಲಾರರಷ್ಟೆ! ಇದೇ ರೀತಿ ಇಂಥ ಲೋಕಪ್ರಚಾರದಲ್ಲಿರುವ ಕಿರುಗತೆಗಳು ಕೂಡ.

ಕಳೆದ ೨೦ ವರ್ಷಗಳಿಂದ ಅನೇಕ ಪತ್ರಿಕೆಗಳಿಗೆ ಬರೆಯುತ್ತಿರುವ ನನಗೆ ಕನ್ನಡ ಕೃತಿಗಳನ್ನೇ ಅನಾಮತ್ತಾಗಿ ಎತ್ತಿಕೊಂಡು ನನ್ನ ಹೆಸರಿನಲ್ಲಿ ಪ್ರಕಟಿಸುವ ಅಗತ್ಯವೇನೂ ಇಲ್ಲ. ಪ್ರಸ್ತುತ ಕತೆ ಕೂಡ ಹೀರಾಲಾಲರ ಲೇಖನದ ಭಾಷಾಂತರ ಮಾತ್ರ.

ಕೃಷ್ಣರಾಜಸಾಗರ —ಎಸ್. ವಿಶ್ವನಾಥ

ಅವಂತಿ ಮತ್ತು ವಿಜ್ಞಾನ

'ಅವಂತಿ ಮತ್ತು ಪಾಶ್ಚಾತ್ಯ ವಿಜ್ಞಾನ' ಒಂದು ಒಳ್ಳೆಯ ಬೆಳವಣಿಗೆ. ಆದರೆ ಅದಕ್ಕೂ ಕೆಲ ಆಕ್ಷೇಪಗಳು ಬರಬಹುದು. ಹೈಫ್ರಿಕ್ವೆನ್ಸಿ ಧ್ವನಿ ಆತ್ಮದ ಧ್ವನಿಯಾಗಿರದೆ ಒಂದು ವಿದ್ಯುತ್ ತರಂಗವಾಗಿ ಉಳಿದುಕೊಳ್ಳಬಹುದಾದ ಧ್ವನಿಯಾಗಿರಬಹುದು. ಅಲ್ಲದೆ $E=MC^2$ ತತ್ವವನ್ನೊಪ್ಪಿದರೆ ಆತ್ಮದ ಪ್ರಶ್ನೆ ಬರಲಾರದು. ವಿಶ್ವದ ಎಲ್ಲ M ಅನ್ನು E ಯಾಗಿ ಮಾಡಿದಾಗ ಏನುಳಿಯುತ್ತದೆ? ಇದೂ ಅಲ್ಲದೆ C ಇರುವುದರಿಂದ Timeನ ಪ್ರಶ್ನೆ ಬರುತ್ತದೆ. ಇಡೀ ವಿಶ್ವವನ್ನೇ C^2ನಲ್ಲಿ ಒಡಿಸಬಹುದೆ? ಇಲ್ಲ; ಇದು ಸಾಪೇಕ್ಷವಾಗಿದೆ. ಆದರೆ ವಿಶ್ವದ ಎಲ್ಲ Eಯನ್ನು MC^2ನಲ್ಲಿ ಪರಿವರ್ತಿತವಾಗಗೊಡದಿದ್ದರೆ ಚಲನವಲನ ಮತ್ತು ಸಮಯ ನಿಂತು ಬಿಡುತ್ತದೆ. ಚಲನ ಮತ್ತು ಸಮಯಗಳೆರಡೂ ಪರಸ್ಪರ ಸಂಬಂಧಪಟ್ಟವುಗಳು. ಇವು ಒಂದನ್ನು ಬಿಟ್ಟು ಇನ್ನೊಂದಿರಲಾರವು. ಹೀಗಾಗಿ ಚಲನೆಗೆ ಸಮಯ ಮತ್ತು ಸಂಬಂಧಿತ ವಸ್ತುವಿನ ಅಗತ್ಯವಿದೆ. ಇವೆರಡೂ ಶಿಥಿಲವಾದಾಗ ಚಲನೆ ನಿಂತುಬಿಡುತ್ತದೆ. ಅದು O ಆದಾಗ $E=O$ ಆಗುತ್ತದೆ. ಆಗ $M=O$ ಸಹ ಆಗಲೇಬೇಕು. ಇಂತು ವಿಶ್ವದದಲ್ಲಿಯ ಅಂತರ್ ವ್ಯಾಪಾರಗಳನ್ನು ನಿಲ್ಲಿಸಿದರೆ E ಮತ್ತು $M=O$ ಆಗುತ್ತದೆ. ಇದೇ ವಿಶ್ವದ ಜೀವಚಕ್ರ.

ನಮ್ಮ ಆತ್ಮವೊಂದು ವಿಶಿಷ್ಟ ಅಣುಗಳ ವಿಶೇಷ ಪರದಾಟ. ಜೀವವೂ ಅದೇ. ಭೌತಶಾಸ್ತ್ರದಂತೆ ಆತ್ಮಕ್ಕೂ ಸೂತ್ರ ಇರಬೇಕು, ಜೀವಕ್ಕೂ ಇರಬೇಕು. ಆದ್ದರಿಂದಲೇ 'ಅಹಂ ಬ್ರಹ್ಮಾಸ್ಮಿ'ಯಲ್ಲಿ ಬರುವ 'ಅಹಂ' ಮತ್ತು 'ಬ್ರಹ್ಮ' ಎರಡರ ತತ್ವಗಳೂ ಒಂದೇ. ಆತ್ಮ ಒಂದು ವಿಶೇಷ Tಯ ಹಿಡಿತದಲ್ಲಿ ಮತ್ತು ಈ ವಸ್ತು ವಿಶಿಷ್ಟದಲ್ಲಿ ಸಿಕ್ಕಾಗ ಜೀವಾತ್ಮವಾಗುತ್ತದೆ, ಇಲ್ಲವಾದರೆ ವಿಶ್ವವಾಗುತ್ತದೆ–ಪರಮಾತ್ಮವಾಗುತ್ತದೆ. ಜೀವವು ರಾಸಾಯನಿಕ ಕ್ರಿಯೆಗೊಳಗಾಗಿದ್ದರೆ ಆತ್ಮವು ಭೌತಿಕ ಕ್ರಿಯೆಗೊಳಗಾಗಿದೆ.

ನಾವು ಆತ್ಮದ ಇಂಥ ಪರದಾಟವನ್ನು ಅರಿತುಕೊಂಡು, ನಿಲ್ಲಿಸಿದಾಗ ಅದೇ ಮುಕ್ತಿಯೆನಿಸುತ್ತದೆ. ಅದೇ ನಾವು ಅದನ್ನು ಹಾಗೆಯೇ ಬಿಟ್ಟರೆ ಅದು ಅಲೆದಾಡಿ ಅಲೆದಾಡಿ ಕೊನೆಗೆ ತಾನೇ ನಿಲ್ಲುತ್ತದೆ. ಅದೂ ಮುಕ್ತಿಯೇ. ಆದುದರಿಂದ ಆತ್ಮವು ಕೂಡ ವಿಶ್ವದಂತೆಯೇ ಒಂದು E-M-Cಗಳ ವಿಶೇಷ ಸಂಯೋಗವೇ ಆಗಿದ್ದು, ಜಡ–ಚೇತನಗಳಿಗಿಂತ ಭಿನ್ನವೇನಲ್ಲ, ಆದುದರಿಂದಲೇ ಅದು 'ತತ್ವಮಸಿ.'

($E=$ಶಕ್ತಿ; $M=$ವಸ್ತು; $C=$ಕಾಲದ ಗತಿ ಮತ್ತು $T=$ಕಾಲ.)

ಬೆಳಗಾಂವಿ —ಆರ್. ಕೆ. ಕುಲಕರ್ಣಿ

ವೈನವಿರೇಳಿಸುವ 'ಅವಂತಿ' ಸತ್ಯಕಥೆಯನ್ನು ಓದಿ ನಿಜಕ್ಕೂ ದಂಗಾದೆ! ವಿಜ್ಞಾನಕ್ಕೆ ಸವಾಲಾಗುತ್ತಿರುವ ಇಂತಹ ಕೌತುಕದ ಘಟನೆಗಳು ವಿಶ್ವದಲ್ಲಿ ಹಿಂದೆಯೂ ನಡೆಯುತ್ತಿದ್ದವು; ಈಗಲೂ ನಡೆಯುತ್ತಿವೆ; ಮುಂದೂ ನಡೆಯುತ್ತವೆ.

ಬರೋಡ —ಎಸ್ಕೆ ಹಳೆಯಂಗಡಿ

ಕೈಲಾಸಂ ನೆನಪು

ಜನವರಿ 'ಕಸ್ತೂರಿ'ಯಲ್ಲಿ 'ಕೈಲಾಸಂ: ಒಂದು ನೆನಪು' —ಶ್ರೀ ಆರ್. ಬಸವರಾಜರ ಲೇಖನ ಸಕಾಲಿಕ. ಅಂಚೆ ಇಲಾಖೆಯು ಕೈಲಾಸಂರವರ ಚಿತ್ರವಿರುವ ಒಂದು ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿ ಗೌರವಿಸುತ್ತಿದ್ದರೆ ಆನಂದವಾಗುತ್ತಿತ್ತು.

ಗದಗ —ಚಂದಾ ಬೇಗಂ

ಜನೆವರಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಆರ್. ಬಸವರಾಜರ 'ಕೈಲಾಸಂ: ಒಂದು ನೆನಪು' ಲೇಖನ ಮಾನನೀಯವಾಗಿದೆ.

ಕೈಲಾಸಂ ತಂದೆ ಪರಮಶಿವ ಅಯ್ಯರ್ ಸೆಂಟ್ರಲ್ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಅಧ್ಯಾಪಕರು, ಅನಂತರ ನ್ಯಾಯವಾದಿ, ಅನಂತರ ಅಸಿಸ್ಟೆಂಟ್ ಕಮಿಷನರ್' ಎಂದಿದ್ದಾರೆ,

ಆದರೆ ಕೈಲಾಸಂ ಅವರಿಗೆ ಆತ್ಮೀಯರಾಗಿದ್ದ 'ಭಾರತಿ'ಯವರ "ಆರ್ಯ ಕೈಲಾಸಂ". (ಈ ಪುಸ್ತಕದ ಸಂಪಾದಕರು ಶ್ರೀ ಬಿ. ಎಸ್. ರಾಮರಾಯರು ಕೈಲಾಸಂ ನೆರಳಿನಂತಿದ್ದವರು) ಪುಸ್ತಕದಲ್ಲಿ 'ಕೈಲಾಸಂ ತಂದೆ ದೊಡ್ಡ ಜಡ್ಜಿಗಳು' (ಪುಟ ೫) ಎಂದಿದೆ.

ಕೈಲಾಸಂ ತಂದೆಯವರನ್ನು ಕುರಿತ ಭಿನ್ನಾಭಿಪ್ರಾಯಗಳಲ್ಲಿ ಯಾವುದು ಸರಿ?

ಕಡಪಾ —ಜಾನಮದ್ದಿ ಹನುಮಂತಶಾಸ್ತ್ರಿ

ಉತ್ತಮ ಸಂಚಿಕೆ

ಜನೆವರಿ 'ಕಸ್ತೂರಿ'ಯ ಮುಖಪುಟ ಅಂದವಾಗಿದ್ದಂತೆ ಅಂತರಂಗ ಕೂಡ ಚೆನ್ನಾಗಿತ್ತು. ಒಟ್ಟಿನಲ್ಲಿ ಹೊಸ ವರ್ಷವನ್ನು ಓದುಗರ ಜೊತೆಯಲ್ಲಿ ಸರಿಸಮಾನವಾಗಿ ಹಂಚಿಕೊಂಡಿದ್ದೀರಿ.

ವಿಟ್ಲ —ಬಾಲಗೋಪಾಲ

ಆಕಾಶ ವೀಕ್ಷಣೆ

ಜನೆವರಿ 'ಕಸ್ತೂರಿ'ಯಲ್ಲಿ ಜಿ. ಟಿ. ನಾರಾಯಣರಾಯರ 'ಇದು ಜನೆವರಿ ತಿಂಗಳ ಆಕಾಶ' ಲೇಖನ ಗಗನಪ್ರೇಕ್ಷಕನಾದ ನನಗೆ ತುಂಬಾ ಸಂತೋಷ ಕೊಟ್ಟಿತು. ಇದೇ ರೀತಿಯಲ್ಲಿ ಪ್ರತಿ ತಿಂಗಳ ಗಗನ ವೀಕ್ಷಣೆಯನ್ನು ಘಂಟೆಗಳಿಗೆ ಅನುಸಾರವಾಗಿ ಮತ್ತು ಚಿತ್ರಗಳಲ್ಲಿ ದಿಕ್ಸೂಚಿಗಳೊಡನೆ ಹಾಗೂ ನಕ್ಷತ್ರಗಳ ಭಾರತೀಯ ಹೆಸರು ಮತ್ತು ಇಂಗ್ಲೀಷ್ ಹೆಸರುಗಳೊಡನೆ ಕೊಟ್ಟಲ್ಲಿ ತುಂಬಾ ಅನುಕೂಲವಾಗುತ್ತದೆ. ಶ್ರೀಯುತರು 'ಹಾರಿಜನ (horizon = ಕ್ಷಿತಿಜ) ಎಂಬ ಪದ ಬಳಸಿದ್ದಾರೆ. ಆದರೆ ಭಾರತೀಯ ಪುರಾತನ ಖಗೋಳ ಶಾಸ್ತ್ರಜ್ಞರು 'ಹರಿಜ' (ಹರಿ = ಸೂರ್ಯ ಜ = ಹುಟ್ಟು) ಎಂಬ ಪದವನ್ನು Horizon (= ಕ್ಷಿತಿಜ > ಕ್ಷಿತಿ > ಭೂಮಿ ಜ = ಹುಟ್ಟು)ಗೆ ಬದಲಾಗಿ ಬಳಸಿದ್ದಾರೆ. ಶ್ರೀಯುತರು 'ಹಾರಿಜನ್' ಕ್ಕಿಂತ 'ಹರಿಜ'ವನ್ನೇ ಬಳಸಬಹುದಾಗಿತ್ತಲ್ಲವೇ?

ಹಳ್ಳಿಖೇಡ —ಸಿ. ಎನ್. ಎಸ್. ಆದಿಶೇಷ

ಜನೆವರಿ ಸಂಚಿಕೆಯಲ್ಲಿ ಪ್ರಕಟವಾದ ಜಿ. ಟಿ. ನಾರಾಯಣರಾವ್ ಅವರ 'ಇದು ಜನೆವರಿ ತಿಂಗಳ ಆಕಾಶ' ಲೇಖನ ಉತ್ತಮ ಕಥೆಯಂತೆ ಓದಿಸಿಕೊಂಡು ಹೋಯಿತು.

ಡಾ. ಆರ್. ಸಿ. ಅಗಡಿಯವರ 'ಹುಚ್ಚು ನಾಯಿ ರೋಗ' ಲೇಖನ ಹುಚ್ಚುನಾಯಿ ಕಡಿದಾಗ ಮೂಢ ನಂಬಿಕೆಯಿಂದ ಏನಾದರೋ ಶುಶ್ರೂಷೆ ಮಾಡುವವರ ಕಣ್ತೆರೆಸುವಂತಿದೆ.

ಮುಳ್ಳಿ —ವಿಜಯೀಂದ್ರ ಕುಲಕರ್ಣಿ

ವರದಕ್ಷಿಣೆ

ರಣಜಿತ ದೇಸಾಯರ ಶ್ರೇಷ್ಠ 'ವರದಕ್ಷಿಣೆ' ಕತೆಯನ್ನು ಜನಾರ್ದನ ಕುಲಕರ್ಣಿ ಸಮರ್ಥವಾಗಿ, ಮೂಲದಷ್ಟೇ ಕಲಾತ್ಮಕವಾಗಿ ಅನುವಾದಿಸಿದ್ದಾರೆ.

ಸದಾಶಿವಗಡ —ಎಸ್. ಆರ್. ಹೆಗಡೆ

ಕಸ್ತೂರಿ

ವರ್ಷ: ೨೯ | ಫೆಬ್ರವರಿ, ೧೯೮೫ | ಸಂಚಿಕೆ : ೬

ಹೊಸ ಪ್ರಧಾನಿ ಮತ್ತು ಬರಲಿರುವ ಭಾರತ

ರಮಾರಮಣ

ಶ್ರೀ ರಾಜೀವ ಗಾಂಧಿಯವರ ಪಕ್ಷ ಅಭೂತ ಪೂರ್ವ ಬಹುಮತ ಪಡೆದು ಇತ್ತೀಚಿನ ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆಗೆ ಆಯ್ಕೆಗೊಂಡಿದೆ. ರಾಷ್ಟ್ರೀಯ ವಿರೋಧಿ ಪಕ್ಷಗಳ ಪ್ರಾತಿನಿಧ್ಯ ತೀರ ದುರ್ಬಲಗೊಂಡು ಪ್ರಾದೇಶಿಕ ಪಕ್ಷವಾದ ತೆಲುಗು ದೇಶಂ ಅತಿ ದೊಡ್ಡ ವಿರೋಧಿ ಗುಂಪಾಗಿ [illegible]ಟ್ಟಿದೆ. ಬಾಂಗ್ಲಾ ಯುದ್ಧದಲ್ಲಿ ದೊರೆತ ವಿಜಯದಿಂದಾಗಿ ಜನಪ್ರಿಯತೆಯ ಶಿಖರದಲ್ಲಿದ್ದಾಗಲೂ ಇಂದಿರಾ ಗಾಂಧಿಯವರಿಗೆ ಅವರ ಮಗ ಗಳಿಸಿದಷ್ಟು ಸ್ಥಾನಗಳನ್ನೂ ಮತಗಳನ್ನೂ ಪಡೆಯುವುದು ಸಾಧ್ಯವಾಗಿರಲಿಲ್ಲ. ಇದು ಹೇಗೆ ಸಾಧ್ಯವಾಯಿತೆಂಬ ಬಗ್ಗೆ ಬುದ್ಧಿವಂತರು ಬಗೆ ಬಗೆಯಾಗಿ ಭಾಷ್ಯ ಮಾಡಬಹುದು. ಹಾಗೆ ಮಾಡುವುದರಿಂದ ಐತಿಹಾಸಿಕ ವಿಶ್ಲೇಷಣೆಯ ಕುತೂಹಲ ಕೆಲ ಮಟ್ಟಿಗೆ ತಣಿಯಬಹುದೇ ಹೊರತು ವಿಧಾಯಕವಾದದ್ದೇನೂ ಸಾಧಿಸಿದಂತಾಗಲಿಕ್ಕಿಲ್ಲ.

ಪ್ರಧಾನಿ ರಾಜೀವ ಗಾಂಧಿಯವರಿಗೆ ಅವರೇ ಬಯಸಿರದಿದ್ದಷ್ಟು ಬಹುಮತ ಪ್ರಾಪ್ತವಾಗಿರುವುದು ಭವಿಷ್ಯತ್ತಿನಲ್ಲಿ ಹಲವಾರು ಸಾಧ್ಯತೆಗಳಿಗೆ ಎಡೆಮಾಡಿಕೊಟ್ಟಿದೆ. ನಮ್ಮದು ಸಂವಿಧಾನಾತ್ಮಕವಾಗಿ ಬಹುಪಕ್ಷೀಯ ಸಂಸದೀಯ ಪ್ರಜಾಸತ್ತೆ. ಹಾಗಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಅದು ಏಕ ಪಕ್ಷೀಯ ಪ್ರಜಾಸತ್ತೆ(ಕಮ್ಯೂನಿಸ್ಟ್ ಮಾದರಿಯಲ್ಲಿ)ಯಾಗಿ ಪರಿಣಮಿಸುವ ಶಕ್ಯತೆಯನ್ನು ತಳ್ಳಿಹಾಕಲು ಬರುವಂತಿಲ್ಲ. ಇನ್ನೊಂದು ಸಾಧ್ಯತೆಯೆಂದರೆ ಇನ್ನೊಂದು ಪ್ರಬಲ ಬಹುಮತವಿರುವ

ಪಕ್ಷವಾದ ಕಾಂಗ್ರೆಸ್ಸು ತನ್ನ ಭಾರದಡಿಯಲ್ಲೇ ಕುಸಿಯಲೂಬಹುದು. ಆದರೆ ಈ ಎರಡೂ ಸಾಧ್ಯತೆಗಳ ಬಗ್ಗೆ ಯೋಚಿಸುವಾಗ ಪ್ರಧಾನಿಗೆ ಸರ್ವಾಧಿಕಾರತ್ವದ ಮಹತ್ವಾಕಾಂಕ್ಷೆ ಇಲ್ಲವೆ ತೀವ್ರ ಅಧಿಕಾರಲಾಲಸೆಯುಳ್ಳ ಬಹುಸಂಖ್ಯ ಕಾಂಗ್ರೆಸ್ಸಿಗರು ತಮ್ಮ ತಮ್ಮಲ್ಲೆ ಕಚ್ಚಾಡತೊಡಗಿ ಪಕ್ಷದ ಕೇಂದ್ರೀಯ ನಿಯಂತ್ರಣ ಈ ನವನಾಯಕನಿಗೆ ದುಸ್ಸಾಧ್ಯವಾದೀತೆಂಬಂಥ ಪರಿಸ್ಥಿತಿಯನ್ನು ಕಲ್ಪಿಸಬೇಕಾಗುತ್ತದೆ. ಇವೆರಡೂ ಕಲ್ಪನೆಗೆ ಮೀರಿದ ಸಾಧ್ಯತೆಗಳೇನಲ್ಲವಾದರೂ ರಾಜೀವರ ಹಿನ್ನೆಲೆಯನ್ನು, ಅವರು ಪ್ರಧಾನಿಯಾದ ನಂತರ ಕೈಕೊಂಡ ಕೆಲ ಕ್ರಮಗಳನ್ನು, ದೇಶದ ಒಟ್ಟಾರೆ ರಾಜಕೀಯ ಚಿತ್ರವನ್ನು ಗಮನಿಸಿದರೆ ಒಂದು ಸ್ಥೂಲ ಕಲ್ಪನೆಯನ್ನು ರೂಪಿಸಿಕೊಳ್ಳಲು ಶಕ್ಯವಾಗುತ್ತದೆ.



ಅಜ್ಜ ಜವಾಹರಲಾಲ ನೆಹರೂರವರು ಭಾರತದ ವರಿಷ್ಠರಾಗಿ ಅಧಿಕಾರ ವಹಿಸಿಕೊಂಡ ಸಮಯದಿಂದಲೇ ರಾಜೀವ ಹಾಗೂ ಅವರ ತಮ್ಮ ಸಂಜಯ ಗಾಂಧಿಯವರ ಜೀವನ ಪ್ರಾರಂಭವಾಗುತ್ತದೆ. ಪ್ರಧಾನಿಯ ಮನೆಯಲ್ಲೇ – ದೇಶದ ಸಕಲ ರಾಜಕೀಯ ಚಟುವಟಿಕೆಗಳ ಕೇಂದ್ರದಲ್ಲೇ – ಅದೇ ಹವೆಯನ್ನು ಉಸಿರಾಡುತ್ತ ಬೆಳೆದ ಈ ಇಬ್ಬರ ಮೇಲೂ ಆ ಘನಿಷ್ಠ ವಾತಾವರಣದ ಪರಿಣಾಮ ಪರೋಕ್ಷವಾಗಿಯಾದರೂ ಸಾಕಷ್ಟು ಆಗಿರಲೇಬೇಕು. ಆದರೆ ಮುಂದೆ ಈ ಇಬ್ಬರು ಯುವಕರು ಬೆಳೆದ ಬಗೆಯನ್ನು ನಿರೀಕ್ಷಿಸಿದರೆ ಅವರವರ ಸ್ವಭಾವಗಳಲ್ಲಿಯ ಅಂತರ ಸ್ಪಷ್ಟವಾಗುತ್ತ ಹೋಗುವುದು. ಸಂಜಯ ತಾಯಿಯ ಮುದ್ದಿನ ಮಗನಾಗಿ ದೇಶದ ಪ್ರಧಾನಿಯ ಮಗನಿಗೆ ಪರೋಕ್ಷವಾಗಿ ದೊರೆಯುವ ಅಧಿಕಾರದ ರುಚಿಯನ್ನೇ ಮೆಚ್ಚಿ ತಾನೇ ತಾಯಿಯ ವಾರಸುದಾರನೆಂಬ ರೀತಿಯಲ್ಲಿ ಬೆಳೆದರು. ಅವರನ್ನು ಅಟೋಮೊಬೈಲ್ ಇಂಜಿನಿಯರಾಗಿ ಮಾಡಲು ಪ್ರಯತ್ನ ನಡೆಯಿತಾದರೂ ಅವರು ರಾಜಕಾರಣದಲ್ಲಿ ತಾಯಿಯ ಬೆನ್ನೆಲುಬೆನಿಸುವಂತೆಯೇ ತಮ್ಮನ್ನು ರೂಪಿಸಿಕೊಂಡರು. ಅಧಿಕಾರಪ್ರಿಯರಿಕೆಯ ಸಕಲ ಗುಣದೋಷಗಳನ್ನು ಅವರಲ್ಲಿ ಗುರುತಿಸಬಹುದಾಗಿತ್ತು. [illegible] ಅವರ ಚಟುವಟಿಕೆಗಳಿಂದಲೂ ಅವರ ಸುತ್ತಲೂ ಹಬ್ಬಿಕೊಂಡಿದ್ದ ಮಿತ್ರ ಪರಿವಾರದಿಂದಲೂ ತಿಳಿದುಕೊಳ್ಳಬಹುದು. ಆದರೆ ರಾಜೀವ ಸೋದರನಿಗಿಂತ ಭಿನ್ನವಾಗಿ ರಾಜಕೀಯದ ಸೋಂಕು ಸಹ ತಗಲದಂತೆ ಎಚ್ಚರಿಕೆಯಿಂದ ತಮ್ಮ ಜೀವನೋಪಾಯಕ್ಕಾಗಿ ವೈಮಾನಿಕನಾಗಿ ತರಬೇತಿ ಪಡೆದು ಅದನ್ನೇ ತಮ್ಮ ವೃತ್ತಿಯನ್ನಾಗಿ ಕೊಂಡರು ಕೂಡ. ಮನೆತನದ ಸುಸಂಸ್ಕೃತತೆಯ ಪ್ರಭಾವ ರಾಜೀವರ ಮೇಲೆ ಅವರ ಸೋದರನಿಗಿಂತಲೂ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಸಂಜಯ ಅಕಾಲಿಕ ಮರಣವನ್ನಪ್ಪದಿದ್ದರೆ ಪ್ರಾಯಶಃ ರಾಜೀವ ರಾಜಕೀಯದೆಡೆ ವಾಲುತ್ತಿರಲಿಲ್ಲವೇನೋ. ಮಹತ್ವಾಕಾಂಕ್ಷಿ ತಾಯಿಯ ಒತ್ತಡವಿಲ್ಲದಿದ್ದರೆ ಅವರು ತಮ್ಮನ ನಿಧನನಂತರ ಕೂಡ ರಾಜಕಾರಣ–ಕ್ಕಿಳಿಯುವುದು ಸಂಭವಾತೀತವೇ ಆಗಿತ್ತು. ಆದರೆ ಒಮ್ಮೆ ಈ ರಂಗವನ್ನು ಪ್ರವೇಶಿಸಿದ ನಂತರ

ಆರಂಭದಲ್ಲಿ ಎಲ್ಲರೂ ಮಾಡುವಂಥ ತಪ್ಪು ತಡೆಗಳನ್ನು ಅವರೂ ಮಾಡಿರಬೇಕು. ಇಂದಿರಾ ಜೀವಿತಕಾಲದಲ್ಲಿ ಅವರ ಪ್ರಭೆಯ ಹಿನ್ನೆಲೆಯಲ್ಲಿ ಇವರೂ ಹೆಜ್ಜೆ ಹಾಕಬೇಕಾಯಿತು. ತಾಯಿಯ ಕಗ್ಗೊಲೆಯ ನಂತರ ಪ್ರಧಾನಿ ಪಟ್ಟ ಅನಿವಾರ್ಯವೆಂಬ ತೆರದಲ್ಲಿ ಅವರನ್ನು ಅರಸಿಕೊಂಡು ಬಂತು. ಇಂದಿರಾರ ಅಮಾನುಷ ಹತ್ಯೆಯಿಂದಾಗಿ ದೇಶದಲ್ಲೆಲ್ಲ ಅವರ ಮತ್ತು ಅವರ ಪಕ್ಷದ ಬಗ್ಗೆ ಉಂಟಾದ ಸಹಾನುಭೂತಿಯ ಪ್ರಯೋಜನ ಪಡೆಯಲು ಶೀಘ್ರ ಚುನಾವಣೆ ನಡೆಸಲು ಅವರು ಕೈಕೊಂಡ ನಿರ್ಣಯ ಅವರಿಗೆ ವರವಾಗಿಯೇ ಪರಿಣಮಿಸಿತು.

ಈ ಸಲದ ಸಾರ್ವತ್ರಿಕ ಚುನಾವಣೆಯ ಪರಿಣಾಮ ಕಣ್ಣಿರಿಯುವಷ್ಟು ನಿಚ್ಚಳವಾಗಿ ನಮ್ಮೆದುರಿಗಿದೆ. ಈ ಅಪೂರ್ವ ವಿಜಯಕ್ಕೆ ಕಾಂಗ್ರೆಸ್ಸು ಇಂದಿರಾ ನೆನಪನ್ನು ಬಹು ಪರಿಣಾಮಕಾರಿಯಾಗಿ ಬಳಸಿಕೊಂಡಿತೆಂಬುದು ನಿಸ್ಸಂಶಯ. ಆದರೆ ಅದೆಲ್ಲಕ್ಕಿಂತ ಹೆಚ್ಚಾಗಿ ವಿರೋಧಿ ಪಕ್ಷಗಳಲ್ಲಿ ಒಮ್ಮತದ ಅಭಾವವೂ ತಕ್ಕಮಟ್ಟಿಗೆ ಕಾಂಗ್ರೆಸ್ಸಿಗೆ ಅನುಕೂಲವಾಗಿ ಪರಿಣಮಿಸಿತು. [illegible] ಕೈಗೆ ಬಂದ ಅಧಿಕಾರದ ಪ್ರಯೋಜನವನ್ನು ಸರಿಯಾಗಿ ಪಡೆಯಲಿಕ್ಕಾಗದೆ ವ್ಯಕ್ತಿಗತ ಮಹತ್ವಾಕಾಂಕ್ಷೆಯ ಅಡಿಯಲ್ಲಿ ಸಿಕ್ಕು ವಿರೋಧಿ ಶಕ್ತಿಗಳು ತತ್ತರಿಸಿಹೋದವು. ಅವರ [illegible] ಅವುಗಳು ಕಲಿಯಬೇಕಿದ್ದ ಪಾಠವನ್ನು ಕಲಿಯದೆ ಈಗ ಪರಿತಪಿಸಬೇಕಾಗಿದೆ. ಕರ್ನಾಟಕದಲ್ಲಿ ಜನತಾ ಸರಕಾರ ಹಿಂದಿನ ಯಾವುದೇ ಕಾಂಗ್ರೆಸ್ ಸರಕಾರಕ್ಕಿಂತಲೂ ಹೆಚ್ಚು ಜನಹಿತದ ಕಾರ್ಯ ಮಾಡಿರುವಾಗ ಅದು ತಾನು ಮಾಡಿದ್ದೇನೆನ್ನುವುದನ್ನು ಜನಸಾಮಾನ್ಯಕ್ಕೆ ಮನವರಿಕೆ ಮಾಡಿಕೊಡುವಲ್ಲಿ ವಿಫಲವಾಯಿತೆನ್ನುವುದು ಈ ಚುನಾವಣೆಯ ಪರಿಣಾಮಗಳಿಂದ ವ್ಯಕ್ತವಾಗುತ್ತದೆ. ಇಲ್ಲವಾದರೆ ನಜೀರಸಾಬರಂತಹ ವ್ಯಕ್ತಿ ಸೋಲಬೇಕಾಗಿ ಬಂದುದಕ್ಕೆ ಏನರ್ಥ?

ಚುನಾವಣೆಯ ನಂತರ ತಮ್ಮ ಮಂತ್ರಿಮಂಡಳವನ್ನು ರಾಜೀವ ಹೇಗೆ ಆಯ್ದುಕೊಳ್ಳುತ್ತಾರೆನ್ನುವದರ ಮೇಲೆ ಮತ್ತು ತಮ್ಮ ಸಲಹೆಗಾರರಾಗಿ ಯಾರನ್ನು ಆರಿಸಿಕೊಳ್ಳುತ್ತಾರೆಂಬುದರ ಮೇಲೆ ಅವರ ಸರಕಾರ ಹೇಗೆ ಕಾರ್ಯ ಮಾಡಬಹುದೆಂಬುದನ್ನು ರಾಜಕೀಯ ನಿರೀಕ್ಷಕರು ಲೆಕ್ಕಹಾಕಬಯಸಿದ್ದರು. ತಮ್ಮ ತಾಯಿಯ ನಿಕಟ ವಿಶ್ವಾಸ ಪಾತ್ರರಾಗಿದ್ದ ಕೆಲವು ಮಂತ್ರಿಗಳನ್ನು ಕೈಬಿಟ್ಟುದಲ್ಲದೆ ಇಂದಿರಾರ ಉಸಿರೇ ಎಂಬಷ್ಟು ಅವರಿಗೆ ಹತ್ತಿರದವರಾಗಿದ್ದ ಆರ್. ಕೆ. ಧವನರನ್ನು ದೂರಕ್ಕೆ ಕಳಿಸಿದ್ದು ಒಂದು ಸಾಧನೆಯೆ ಎಂಬಂತಿದೆ. ಅಲ್ಲದೆ ಪಂಜಾಬ ಮತ್ತು ಆಸಾಮ ಸಮಸ್ಯೆಗಳ ಪರಿಹಾರಕ್ಕಾಗಿ ತಾವು ಪ್ರಯತ್ನಿಸುವದಾಗಿ ಸಾರಿ ಅದರ ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿರುವದು ಸ್ವಾಗತಾರ್ಹ ಹೆಜ್ಜೆ. ಅಲ್ಲದೆ ಸರಕಾರವು ಎದುರಿಸುತ್ತಿರುವ ಬೇರೆ ಸಮಸ್ಯೆಗಳ ಅಧ್ಯಯನ ಮತ್ತು ಪರಿಹಾರಕ್ಕಾಗಿ ರಾಜಕಾರಣಿಗಳಿಗಿಂತ ಹೆಚ್ಚಾಗಿ ಆಯಾ ರಂಗಗಳಲ್ಲಿ ಪರಿಣತರ ನೆರವನ್ನೆ ನೆಚ್ಚುವದಾಗಿ ಮತ್ತು ರಾಷ್ಟ್ರದ ಹಿತಕ್ಕಾಗಿ [illegible]. ಲೋಕಸಭಾ ಚುನಾವಣೆಯ ಪರಿಣಾಮವಾಗಿ ತಾವು ಕರ್ನಾಟಕದಲ್ಲಿಯ ಜನತಾ ಸರಕಾರವನ್ನು ವಜಾ ಮಾಡುವ ಹವ್ಯಾಸಕ್ಕಿಳಿಯುವದಿಲ್ಲವೆಂದು ಸಾರಿ, ಕಾಂಗ್ರೆಸ್ಸೇತರ ಸರಕಾರಗಳಿರುವ ರಾಜ್ಯಗಳ ವ್ಯವಹಾರಗಳಲ್ಲಿ ಕೈ ಹಾಕುವದಿಲ್ಲವಾಗಿ ಹೇಳಿ, ರಾಜಕೀಯ ವಾತಾವರಣ ತಿಳಿಯಾಗುವದಕ್ಕೆ ನೆರವಾಗಿದ್ದಾರೆ ಹೊಸ ಪ್ರಧಾನಿ. ಇಂಥ ಕಾರಣಗಳಿಂದಾಗಿ ಈ ಯುವ ಪ್ರಧಾನಿಯಿಂದ ನಾವು ಒಳ್ಳೆಯದನ್ನು ನಿರೀಕ್ಷಿಸಬಹುದೆಂದು ಭರವಸೆ ಮೂಡುತ್ತಿದೆ.

ಆದರೆ ೧೯೭೧ ರ ಚುನಾವಣೆಗಳ ನಂತರ ಇಂದಿರಾ ಕೂಡ ಇದೇ ತರಹದ ಭರವಸೆ ಮೂಡಿಸಿದ್ದವರು ಮೂರೇ ವರ್ಷಗಳ ಆಪತ್ ಸ್ಥಿತಿ ಸಾರಿದರು. ರಾಜೀವ ಗಾಂಧಿಯವರು ಅಂಥ ಪರಿಸ್ಥಿತಿಯನ್ನು ತಂದುಕೊಳ್ಳಲಿಕ್ಕಿಲ್ಲವೆಂದು ಆಶಿಸಬೇಕು. ಅಷ್ಟೆ. ಸಂಸತ್ತಿನಲ್ಲಿ ವಿಧಾಯಕ ಟೀಕೆ ಮಾಡಬಹುದಾದಂತಹ ಸಮರ್ಥ ನಾಯಕರು ಉಳಿಯದಿದ್ದುದು ದೇಶದ ಭವಿತ್ಯದ ದೃಷ್ಟಿಯಿಂದ, ಪ್ರಜಾಸತ್ತೆಯ ಬೆಳವಣಿಗೆಯ ದೃಷ್ಟಿಯಿಂದ ಅಷ್ಟೇನೂ ಹಿತಕರ ಸಂಗತಿಯಲ್ಲ.

ನಮ್ಮ ನಾಡಿಗೆ ಯಾವ ಹೆಸರಿರ ಬೇಕು ಎಂದು ನಲವತ್ತೈದು ವರ್ಷಗಳ ಹಿಂದಿನಿಂದಲೂ ವಾದವಿವಾದಗಳು ನಡೆಯುತ್ತ ಬಂದಿವೆ. ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಡಾ. ಶಂ. ಬಾ. ಜೋಶಿಯವರು 'ಕಂನಾಡು' ಎಂಬ ಹೆಸರನ್ನಿಡುವುದು ಸೂಕ್ತ ಎಂದು ಮಂಡಿಸಿದ್ದರು. ಆದರೆ ಆದರೆ ಅದು ಒಪ್ಪಿತವಾಗದೆ ಉಳಿಯಿತು.

ಕರ್ನಾಟಕವೋ? ಕರ್ಣಾಟಕವೋ? ಕನ್ನಾಡೋ??

ಡಾ. ಗುಂಡ್ಮಿ ಚಂದ್ರಶೇಖರ ಐತಾಳ

"ಕರ್ನಾಟಕ" ಎಂಬ ಹೆಸರೇನೋ ನಮ್ಮ ರಾಜ್ಯಕ್ಕೆ ಇದೆ. ಆದರೆ ಇದು ಸರಿಯೆ? ಎಂದು ನಮ್ಮ ಹಿರಿಯರೂ ಸರ್ಕಾರವೂ ವಿಚಾರ ಮಾಡಲಿಲ್ಲ. 'ಕರ್ನಾಟಕ' ಇರಬೇಕೆ? 'ಕರ್ಣಾಟಕ' ಇರಬೇಕೆ? ಎಂದು ಹಿಂದೊಮ್ಮೆ ನ-ಣ ಜಗಳ ವಾಯಿತು. ಇದನ್ನು "ನೊಣ ಜಗಳ" ಎಂದು ಹಾಸ್ಯ ಮಾಡಿದರು. ಈ 'ನ-ಣ' ಸಮಸ್ಯೆಯನ್ನು ಆಚಾರ್ಯ ತೀ. ನಂ. ಶ್ರೀಕಂಠಯ್ಯನವರು ತಮ್ಮೊಂದು ಲೇಖನದಲ್ಲಿ 'ರಷಾಭ್ಯಾಂ ನೋಣಃ ಸಮಾನ ಪದೇ' ಎಂಬ ಪಾಣಿನಿಯ ಸೂತ್ರವನ್ನು ಉಲ್ಲೇಖಿಸಿ ಸಂಸ್ಕೃತದ ವ್ಯಾಕರಣ ಪ್ರಕಾರ ಕರ್ಣಾಟಕ ಎಂಬುದು ಸರಿ, ಕನ್ನಡಿಗರು ಅದನ್ನು "ಕರ್ನಾಟಕ" ಎಂದು ಉಚ್ಚರಿಸುತ್ತಾರೆ ಎಂದು ಬರೆದರು. ಕೊನೆಗೆ ಯಾವುದು ನಿಲ್ಲಬೇಕೆಂಬು-ದನ್ನು ಕಾಲಪುರುಷನು ನಿರ್ಣಯಿಸಲಿ ಎಂದು ಕೊನೆಯ ತೀರ್ಮಾನವನ್ನು ಹೇಳಿದರು. ಕಾಲ ಪುರುಷನು ಸದ್ಯ "ಕರ್ನಾಟಕ" ಎಂದು ತೀರ್ಮಾನಿಸಿದ್ದಾನೆ. ಆದರೆ ಆ ರೂಪ ಸರಿಯೆ? ಒಂದು ಪದದಲ್ಲಿ ಷ, ರ ಕಾರಗಳು ಬಂದರೆ ಆ ಪದದಲ್ಲಿರುವ 'ನ'ಕಾರವು 'ಣ'ಕಾರವಾಗುವುದು:

ನಿರ್ಣಯ	ಉತ್ತರಾಯಣ
ಪರಿಣಯ	ಸುಷೇಣ
ಪರಿಣಾಮ	ಶೂರ್ಪಣಖಿ
ಪ್ರಣಯ	ಅಭಿಷವಣ
ಅಪರಾಹ್ಣ	ಸಂಕರ್ಷಣ
ಪೂರ್ವಾಹ್ಣ	ಆಕರ್ಷಣ
ರಾಮಾಯಣ	ಇತ್ಯಾದಿ

ಷ, ರ-ಕಾರಗಳು ಇಲ್ಲದಿರುವುದರಿಂದ ಈ ಕೆಳಗೆ ಕಾಣಿಸಿದ ಶಬ್ದಗಳಲ್ಲಿ ನ-ಕಾರವೇ ಸರಿ.

ಪಸ್ತ್ಯಾಯನ
ದಕ್ಷಿಣಾಯನ
ಸೀತಾಯನ
ಮಧ್ಯಾಹ್ನ
ವಾತಾಯನ
ವಾತ್ಸ್ಯಾಯನ ಇತ್ಯಾದಿ

"ಕರ್ನಾಟಕ" ಎಂಬ ಹೆಸರನ್ನು ಸರಿಯಾಗಿ ಇಡುವುದಾದಲ್ಲಿ "ಕರ್ಣಾಟಕ" ಎಂದೇ ಇಡಬೇಕು. ಹಾಗಿಟ್ಟಲ್ಲಿ ಇನ್ನೊಂದು ತೊಂದರೆ ಇದೆ. ಅದು ಸಂಸ್ಕೃತ ಶಬ್ದವಾಯಿತು! ಕನ್ನಡದ ರಾಜ್ಯಕ್ಕೆ ಸಂಸ್ಕೃತದಲ್ಲಿ ಹೆಸರಿಟ್ಟರೆ ಕನ್ನಡಿಗರು ಅಭಿಮಾನ ಶೂನ್ಯರೆಂದಾಗುವುದಿಲ್ಲವೇ?

ಇದಕ್ಕೊಂದು ಪರಿಹಾರವುಂಟು. "ಕನ್ನಡ" ಶಬ್ದದ ನಿಷ್ಪತ್ತಿಯನ್ನು ಕುರಿತು ಚರ್ಚಿಸುತ್ತ ಆಚಾರ್ಯ ಬಿ. ಎಂ. ಶ್ರೀ ಯವರೂ ರೆವರೆಂಡ್ ಎಫ್. ಆರ್. ಕಿಟ್ಟೆಲ್ ಅವರೂ ಕಾಲ್ಡ್‌ವೆಲ್ ಅವರೂ "ಕನ್ನಡ" ಎಂಬ ಶಬ್ದ ಕರ್ + ನಾಡು > ಕರ್ನಾಡು > ಕನ್ನಾಡು > ಕನ್ನಡ ಎಂಬುದರಿಂದ ಬಂದಿದೆ ಎಂಬುದನ್ನು ಒಪ್ಪಿದ್ದಾರೆ. ಕರ್ + ನಾಡು = ಕರಿ ಮಣ್ಣಿನ ಭೂಮಿ, ಫಲವತ್ತಾದ ಭೂಮಿ ಎಂದು ಅರ್ಥ. "ಕನ್ನಡ" ಎಂಬ ಮಾತು ದೇಶ, ಭಾಷೆ ಎರಡನ್ನೂ ನಿರ್ದೇಶಿಸುತ್ತವೆ. ಕನ್ನಾಡನ್ನು ಹೋಲುವ ಇನ್ನೊಂದು ಪದ 'ಪುನ್ನಾಡು.'

ಹಾಗಾದರೆ "ಕನ್ನಡ ನಾಡು" ಎಂದು ಕರೆಯಬಹುದಲ್ಲವೆ? ಎಂದರೆ ಅಲ್ಲಿಯೂ ಒಂದು ತೊಡಕುಂಟು. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಲ್ಲ ಸರಿಯೇ—ಆದರೆ ಕನ್ನಡ ನಾಡು ಎಂಬ ರೂಪವೇ ಸರಿಯಲ್ಲ; ಕನ್ನಡ ಎಂಬ ರೂಪದಲ್ಲಿಯೇ ನಾಡು ಎಂಬ ಶಬ್ದ ಅಂತರ್ಗತವಾಗಿದೆ ಎಂಬುದನ್ನು ಮೇಲೆ ನೋಡಿದ್ದೇವೆ. ಕನ್ನಡ ನಾಡು ಎಂದರೆ ಹೈಸ್ಕೂಲ್ ಶಾಲೆ, ಗೇಟ್ ಬಾಗಿಲು ಹೈರೋಡ್ ರಸ್ತೆ, ಕೂಡಲ ಸಂಗಮ, ಕಲ್ಲು ಬಂಡೆ, ತಲೆಶಿರೋಭಾರ—ಎಂದ ಹಾಗೆ ಆಗುತ್ತದೆ ಎಂಬುದನ್ನು ನಮ್ಮ ಹಿರಿಯರೂ ವಿದ್ವಾಂಸರೂ ಸರಕಾರವೂ ಗಮನಿಸಲಿಲ್ಲ. ನಮ್ಮಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಕರ್ಣಾಟಕ ಬ್ಯಾಂಕ್ ಇವೆ. ಇನ್ನೂ ಅನೇಕ ಕರ್ನಾಟಕ ಎಂಬ ಹೆಸರಿನ ಸಂಸ್ಥೆಗಳಿರಬಹುದು. ಅವರೆಲ್ಲ ಹೆಸರಿನ ಬಗೆಗೆ ತಲೆ ಕೆಡಿಸಿಕೊಳ್ಳುವ ಕಾಲ ಈಗ ಬಂದಿದೆ.

ಈ ಸಮಸ್ಯೆಯನ್ನು ಬಗೆಹರಿಸಲು ಒಂದು ಸುಲಭವಾದ ಮಾರ್ಗ ಇದೆ. "ಕರ್ನಾಟಕ" ಎಂಬ ಹೆಸರಿನಲ್ಲಿ ನಾಲ್ಕು ಅಕ್ಷರಗಳಿವೆ. ಆ ಹೆಸರು ಕೇಳಲಿಕ್ಕೂ ಶ್ರುತಿಸುಭಗವಲ್ಲ. "ಕನ್ನಡ" ಶಬ್ದದ ನಿಷ್ಪತ್ತಿಯಲ್ಲಿ "ಕನ್ನಾಡು" ಎಂಬ ರೂಪ ಯಾಕೋ ಏನೋ ಕಾಲಗರ್ಭದಲ್ಲಿ ಅಡಗಿ ಹೋಗಿದೆ. ಆ ಹೆಸರನ್ನು ಪುನಃ ಸ್ಥಾಪಿಸಿದರೆ ಕೇಳಲಿಕ್ಕೂ ಹಿತ. ಒಂದು ಅಕ್ಷರ ಕಡಮೆಯೂ ಆಗಿ ಹಿತವೂ ಆಯಿತು. ಹೀಗೆ ಹಿತಮಿತವಾದ ಹೆಸರು ನಮ್ಮ ರಾಜ್ಯಕ್ಕೆ ಯಾವುದಾದರೂ ಇದ್ದರೆ "ಕನ್ನಾಡು" ಎಂಬುದು.

ನಮ್ಮ ನೆರೆಯ ರಾಜ್ಯಗಳು ಕೇರಳ, ತಮಿಳು ನಾಡು, ತೆಲುಗು ದೇಶಮು ಎಂಬ ಈ ಹೆಸರುಗಳನ್ನೂ ವಿಚಾರ ಮಾಡಿದರೆ ಅಲ್ಲಿ ದೇಸಿ ನುಡಿಯ ಪ್ರೀತಿಯನ್ನು ಕಾಣಬಹುದು. ಕನ್ನಡಿಗರು ದೇಶ ಭಾಷೆಗಳ ಬಗೆಗೆ ಅಭಿಮಾನ ಶೂನ್ಯರೆ?

ನಮ್ಮ ಸರ್ಕಾರವೂ ಮಂತ್ರಿಗಳೂ ಶಾಸಕರೂ ಸೇರಿ ನಮ್ಮ ನಾಡಿಗೆ "ಕನ್ನಾಡು" ಎಂಬ ದೇಸಿಯ ಸರಿಯಾದ ಹೆಸರನ್ನಿಟ್ಟು ತಮ್ಮ ನಾಡಿನ ಅಭಿಮಾನವನ್ನು ಮೆರೆಯುವರೇ ಅಥವಾ ಮರೆಯುವರೇ ಎಂಬುದನ್ನು ಕಾದು ನೋಡೋಣ. ನಮ್ಮ ನಾಡಿಗೆ ಕನ್ನಾಡು ಎಂಬುದಕ್ಕಿಂತ ಒಳ್ಳೆಯ ಸರಿಯಾದ ಹೆಸರು ಬೇರೆ ದೊರೆಯದು ಅಲ್ಲವೆ.

ಸಿರಿಗನ್ನಡಂ ಗೆಲ್ಗೆ; ಕನ್ನಾಡು ಬಾಳ್ಗೆ!

ಮುಸ್ಲಿಂ ಬಾಂಧವರಿಗೆ ಕಿವಿಮಾತು

ಪಾ. ನೆ. ದೇಸಾಯಿ

ಶ್ರೀ ಎಂ. ಸಆದತ್ ಉಲ್ಲಾರವರು ಮುಸ್ಲಿಂ ಬಾಂಧವರಿಗಾಗಿ, ಡಿಸೆಂಬರ್ ೮೪ರ 'ಕಸ್ತೂರಿ'ಯಲ್ಲಿ ಬರೆದ ಲೇಖನ, ನಮ್ಮ ರಾಷ್ಟ್ರದಲ್ಲಿ ಅಲ್ಲಲ್ಲಿ ನಡೆಯುತ್ತಿರುವ ಮತೀಯ ಗಲಭೆಗಳ ಈಗಿನ ಅಶಾಂತಿಯುತ ಕಾಲದಲ್ಲಿ ಸೂಕ್ತವೂ ಅವಶ್ಯವೂ ಆಗಿದೆ. ಲೇಖಕರು ಬರೆದ ಸಂಗತಿಗಳು ಬಹುಮಟ್ಟಿಗೆ ನಿಜ. ಈ ಸಂಬಂಧದಲ್ಲಿ ನಾನು ನನ್ನ ಬಾಲ್ಯದ ಕೆಲವು ನೆನಹುಗಳನ್ನು ಓದುಗರೊಡನೆ ಹಂಚಿಕೊಳ್ಳಲಿಚ್ಛಿಸುವೆ.

ರಾಯಚೂರು ಜಿಲ್ಲೆಯ ಕೊಪ್ಪಳ ತಾಲೂಕು ಆಗ ನವಾಬ ಸಾಲಾರಜಂಗರವರ ಜಹಗೀರಿ ಜಿಲ್ಲೆ ಆಗಿತ್ತು. ಕೊಪ್ಪಳವು ತಾಲೂಕುದಾರ (ಕಲೆಕ್ಟರ್) ಅವರ ಕೇಂದ್ರ ಕಾರ್ಯಸ್ಥಾನವಾಗಿತ್ತು. ಪ್ರತಿ ವರ್ಷ ವಿಜಯದಶಮಿಯಂದು ಕೊಪ್ಪಳದಲ್ಲಿ ಇರುವ ಗೋವಿಂದರಾಯನ ಗುಡಿ ಎಂದು ಪ್ರಸಿದ್ಧವಾಗಿರುವ ಈಶ್ವರ ದೇವಾಲಯಕ್ಕೆ ಕಲೆಕ್ಟರರಿಂದೊಡಗೂಡಿ ಎಲ್ಲ ಹಿಂದು ಜನರು ಹೋಗಿ ಬರುವುದರೊಡನೆ ಬನ್ನಿ ಮುಡಿಯುವ ಕಾರ್ಯಕ್ರಮ ಪ್ರಾರಂಭವಾಗುತ್ತಿತ್ತು. ಆಮೇಲೆ ಎಲ್ಲ ಹಿಂದೂಗಳು ಕಲೆಕ್ಟರರ ಮನೆಗೆ ಹೋಗುತ್ತಿದ್ದರು. ಅಲ್ಲಿ– ಕಲೆಕ್ಟರರು ಎಲ್ಲರೊಡನೆ ಬನ್ನಿ ವಿನಿಮಯ ಮಾಡಿಕೊಂಡು ಹಿಂದು ಬಾಂಧವರಿಗೆ ಕಲ್ಲು ಸಕ್ಕರೆ, ದ್ರಾಕ್ಷಿ, ಗೋಡಂಬಿ ಮುಂತಾದವನ್ನು ಸ್ವೀಕರಿಸಲು ಹೇಳುತ್ತಿದ್ದರು. ಇದಾದ ಮೇಲೆಯೇ ಊರಲ್ಲಿ ಬನ್ನಿ ವಿನಿಮಯ ಕಾರ್ಯಕ್ರಮ ಸಾರ್ವತ್ರಿಕವಾಗಿ ನಡೆಯುತ್ತಿತ್ತು. ನಾನು ಇಂಥ ಸಂಗತಿಗಳನ್ನು ಆಗಾಗ ನನ್ನ ಮುಸ್ಲಿಂ ಸ್ನೇಹಿತರೊಡನೆ ಮೆಲುಕು ಹಾಕುತ್ತಿರುತ್ತೇನೆ.

ನಮ್ಮ ಗ್ರಾಮ(ಕಿನ್ನಾಳ)ದಲ್ಲಿ ಮುಸ್ಲಿಂ ಬಾಂಧವರು ತಮ್ಮ ಹಬ್ಬಗಳಲ್ಲಿ 'ಈದ ಮುಲಾಕಾತ್' ಕಾರ್ಯಕ್ರಮವನ್ನು ನಮ್ಮ ಮನೆಗೆ ಬಂದು ಎಲೆ ಅಡಿಕೆ, ಅತ್ತರ್ ಸ್ವೀಕರಿಸುವುದರೊಂದಿಗೆ ಆರಂಭಿಸುತ್ತಾರೆ, ಮೊದಲಿನಿಂದಲೂ ನಡೆದು ಬಂದ ಈ ಪದ್ಧತಿಯನ್ನು ತುಂಬಾ ಬದಲಿಸಿದಂತಿರುವ ಈ ಕಾಲದಲ್ಲಿಯೂ, ನಮ್ಮ ಮುಸ್ಲಿಂ ಬಾಂಧವರು ಮುಂದುವರೆಸಿಕೊಂಡು ಬಂದಿದ್ದಾರೆಂದು ಹೇಳಲು ಹರ್ಷವಾಗುತ್ತದೆ.

ಮುಸ್ಲಿಮರು ತಮ್ಮ ಮದುವೆ ಇತ್ಯಾದಿ ಶುಭ ಕಾರ್ಯಗಳಲ್ಲಿ ಹಿಂದುಗಳು ಮತ್ತು ಇತರರಿಗೆ ಅವರವರದೇ ಜನರಿಂದ ಅಡುಗೆ ಮಾಡಿಸಿ ಔತಣ ನೀಡುವ ಪದ್ಧತಿಯೂ ಇತ್ತು.

ಹಿಂದುಗಳು ಕೂಡ ತಮ್ಮ ಹಬ್ಬ ಹರಿದಿನ ಹಾಗೂ ಇತರ ಶುಭ ಸಮಾರಂಭಗಳಲ್ಲಿ ಮುಸ್ಲಿಂ ಬಾಂಧವರನ್ನು ಕರೆತಂದು ಆದರಾತಿಥ್ಯ ಮಾಡುತ್ತಿದ್ದರು. ಮುಸಲ್ಮಾನರ ಹಬ್ಬಗಳಲ್ಲಿಯೂ ಮುಸ್ಲಿಂ ಸಂಪ್ರದಾಯದಂತೆಯೇ 'ಈದ್ ಮುಲಾಕಾತ್' ಮಾಡುವ, ಮುಂತಾದ ಪದ್ಧ

ಗಳನ್ನು ಆಚರಿಸಿ ಮುಸ್ಲಿಮರಿಗೆ ಮಾನ ಮರ್ಯಾದೆ ಮಾಡುತ್ತಿದ್ದರು.

ಆಗಾಗ್ಗೆ ಅಕಸ್ಮಾತ್ತಾಗಿ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಹಿಂದು-ಮುಸ್ಲಿಂ ಘರ್ಷಣೆಗಳನ್ನು ಹೊರತುಪಡಿಸಿ ಹೈದರಾಬಾದ ರಾಜ್ಯದಲ್ಲಿ ಮತೀಯ ಸೌಹಾರ್ದವನ್ನು ಕಾಣುವುದು ವಿರಳವೇನಾಗಿದ್ದಿಲ್ಲ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗುವದಕ್ಕಿಂತ ಸ್ವಲ್ಪ ಮುಂಚೆಯಿಂದ ಹಿಡಿದು ಸ್ವಾತಂತ್ರ್ಯ ಸಿಕ್ಕ ಮೇಲೆ ಪೋಲೀಸ್ ಕಾರ್ಯಾಚರಣೆ ಆಗುವ ವರೆಗೆ, ಹೈದರಾಬಾದ ರಾಜ್ಯದಲ್ಲಿಯ ಹಿಂದುಗಳು ಅಸಹನೀಯ ಹಿಂಸೆಗೊಳಗಾದರು ಎಂಬುದು ಖೇದಕರವಾದರೂ ನಿಜ. ಇದಕ್ಕಿಂತ ಮೊದಲು ಇದ್ದ ಹಿಂದು-ಮುಸ್ಲಿಮರ ಸೌಹಾರ್ದಯುತ-ಬಾಂಧವ್ಯವನ್ನು ಹದಗೆಡಿಸುವಲ್ಲಿ, ೧೯೪೭ಕ್ಕಿಂತ ಸ್ವಲ್ಪ ಮೊದಲು ಉದಯಿಸಿದ 'ಮಜಲಿಸ್ಸೇ ಇತ್ತೆ ಹಾದುಲ್ ಮುಸಲ್ಮೀನ್' ಎಂಬ ಪಕ್ಷದ ಸ್ಥಾಪಕರಾದ ಕಾಶೀಮ ರಜವಿ ಮತ್ತು ರಜಾಕಾರರೆಂಬ ಸ್ವಯಂಸೇವಕರು ಬಹಳ ಮಟ್ಟಿಗೆ ಕಾರಣರಾದರು ಎಂಬುದು ಆಗಿನ ಕಾಲದ ಹೈದರಾಬಾದ ರಾಜ್ಯದಲ್ಲಿದ್ದವರಿಗೆ ಮಾತ್ರ ಅರಿವಾಗುವ ವಿಷಯ. ಇಂಥ ಸಂಕುಚಿತ ದೃಷ್ಟಿಯುಳ್ಳ ಜಾತೀಯ ಪಕ್ಷಕ್ಕೆ ಇಂದಿಗೂ ಹೈದರಾಬಾದದಲ್ಲಿ ಕೆಲವರು ಪ್ರೋತ್ಸಾಹ ನೀಡಿ, ಅದರ ಸದಸ್ಯರನ್ನೇ ಚುನಾಯಿಸುತ್ತಿರುವದು, ವಿಷಾದಕರ.

ಈ ಸಂದರ್ಭದಲ್ಲಿ ಕವಿ ಇಕಬಾಲರ ಒಂದು ಪದ್ಯದ "ಮಜಹಬ್ ನಹಿ ಸಿಖಾತಾ ಆಪಸ್ ಮೆ ಬೈರ ರಖನಾ (ಧರ್ಮವು ತಮ್ಮ ತಮ್ಮೊಳಗೆ ದ್ವೇಷ ಇಡಲು ಕಲಿಸುವದಿಲ್ಲ.)" ಎಂಬ ಸಾಲುಗಳನ್ನು ನಮ್ಮ ಹಿಂದು-ಮುಸ್ಲಿಂ ಬಾಂಧವರಿಗೆ ನೆನಪಿಸಲಿಚ್ಛಿಸುತ್ತೇನೆ. ಈ ಪದ್ಯವನ್ನು ಭಾರತೀಯ ಸೇನೆಯ ಕೂಚಿನ ಸಮಯದಲ್ಲಿ ಬ್ಯಾಂಡಿನವರು ನುಡಿಸುತ್ತಾರೆ.

ಲೇಖಕರು ಬರೆದ "ವಿಭಿನ್ನ ಸಮಾಜಗಳಲ್ಲಿ ಸೌಹಾರ್ದವನ್ನು ಕಾಯ್ದುಕೊಂಡು ಹೋಗುವ ......" "ಈ ಹೊಣೆ ಉಳಿದೆಲ್ಲರಿಗಿಂತಲೂ ಅಲ್ಪ ಸಂಖ್ಯಾತ ಧುರೀಣರ ಮೇಲೆ ಹೆಚ್ಚಾಗಿದೆ" ಎಂಬ ಮುಂತಾದ ಮಾತುಗಳು ಕಣ್ತೆರೆಸುವಂತಿವೆ.

ಕೋಮು ಸೌಹಾರ್ದವು ಎಂದಿಗಿಂತಲೂ ಹೆಚ್ಚು ಅವಶ್ಯವಾಗಿರುವ ಈಗಿನ ಸಮಯದಲ್ಲಿ ಇಂಥ ಲೇಖನಗಳು 'ಕಸ್ತೂರಿ' ಮತ್ತು ಇತರ ಪತ್ರಿಕೆಗಳಲ್ಲಿಯೂ ಮೇಲಿಂದ ಮೇಲೆ ಬರಬೇಕೆಂದು ಹಾರೈಸುತ್ತೇನೆ.



ಉಡುಗೊರೆ

ಐಸೆನ್‌ಹಾವರ್‌ರು ಅಮೇರಿಕದ ರಾಷ್ಟ್ರಪತಿಗಳೆಂದು ಆಯ್ಕೆಯಾದ ಮೇಲೆ ಅವರಿಗೆ ಕಾಣಿಕೆ ಕೊಡಲು ಸಾವಿರಾರು ಜನರು ಕೂಡಿದರು. ಆ ಎಲ್ಲ ಕಾಣಿಕೆಗಳಲ್ಲಿ ಒಂದು ಕಸಬರಿಗೆ ಕೂಡ ಇತ್ತು. ಐಸೆನ್‌ಹಾವರರಿಗೆ ಅದು ಎಲ್ಲಕ್ಕಿಂತ ಬಹು ಮೌಲ್ಯ ಉಡುಗೊರೆ ಎನಿಸಿತು.

ಆ ಕಾಣಿಕೆ ಕೊಟ್ಟವನು ಕಸಬರಿಗೆ ಮೇಲೆ ಒಂದು ಚೀಟಿಯನ್ನು ಅಂಟಿಸಿದ್ದನು. ಅದರ ಮೇಲೆ ಹೀಗೆ ಬರೆಯಲಾಗಿತ್ತು:

"ಚುನಾವಣೆಯ ಪ್ರಚಾರಕ್ಕಾಗಿ ತಾವು ಬಂದಾಗ ಹೇಳಿದ್ದಿರಿ ನೀವು ಚುನಾಯಿತರಾದ ಮೇಲೆ ಆಡಳಿತದಲ್ಲಿದ್ದ ಎಲ್ಲ ಹೊಲಸನ್ನು ದೂರ ಮಾಡುವೆನೆಂದು. ಅದಕ್ಕಾಗಿಯೇ ಇದರ ಉಪಯೋಗವಾಗಬೇಕು." —ಕಾಯಮಾನೆ ಎಸ್. ಬಿ.

ಕರಿಬೇವಿನ ಸಸಿ

ಬಸವರಾಜ ಗಣಪ್ಪನವರ

ಆ ಚಿಕ್ಕದಾದ ಮನೆಯಲ್ಲಿ ಒಂಟಿಯಾಗಿ ವಾಸಿಸುತ್ತಿರುವ ಅವನಿಗೆ ಆ ಕರಿಬೇವಿನ ಸಸಿಯಾದರೂ ಯಾಕೆ ಬೇಕಾಗಿತ್ತು? ಹೂವಿನ ಬಳ್ಳಿ, ಹಣ್ಣಿನಗಿಡ, ಕಾಯಿಪಲ್ಲೆ ಬೆಳೆಸಬೇಕೆಂಬ ಅಭಿಲಾಷೆಯಾದರೂ ಅವನಿಗೆಲ್ಲಿತ್ತು? ಜನನಿಬಿಡವಾದ ನಗರದಲ್ಲಿ ಹುಟ್ಟಿ ಬೆಳೆದು, ಕಲಿತು, ನೌಕರಿ ಹಿಡಿದು ಮೊದಲ ಸಲ ಪಟ್ಟಣ ಬಿಟ್ಟು ತಾಲೂಕಾದರೂ ಹಳ್ಳಿಯಂತಿರುವ ಇಂಥ ಊರಿಗೆ ಬಂದು ಹಾಜರಾಗಿದ್ದ.

ಟ್ರೇನಿಂಗ್ ಮುಗಿಸಿದಾಗ ಬೇರಾವ ಸಹ ಕೇಳದ ಈ ಊರಿಗೆ ಪೋಸ್ಟಿಂಗ್ ಮಾಡಿದಾಗ ಅನಿವಾರ್ಯವಾಗಿ ಬಂದು ಹಾಜರಾಗಿದ್ದ. ಮಹಾ ರಂಜಕವಾದ ನಗರದಲ್ಲೇ ಬೆಳೆದು ಬಂದ ಅವನಿಗೆ ಈ ಹಳ್ಳಿಯ ಹೊಸ ವಾತಾವರಣ ಭೂತ ಹಿಡಿದಂತೆ ಗೌ... ಗೌ... ಮಾಡತೊಡಗಿತು. ನಗರದ ಎಲ್ಲ ಅತಿರಂಜಿತ ಅವಕಾಶಗಳಿಂದ ವಂಚಿತವಾದ ಹಳ್ಳಿ ಅವನಿಗೆ ತೀರಾ ಬೇಸರ ತರತೊಡಗಿತು. ಇದನ್ನು ತಾಲೂಕೆನ್ನಾಗಿ ಹೇಗೆ ಮಾಡಿದರೋ? ಎಂದುಕೊಂಡ.

ಹಾಜರಾದ ಮೊದಲ ವಾರವೇ ರಾಜೀನಾಮೆ ಬರೆದು ಇಟ್ಟಿದ್ದನೆಂದರೆ ಅವನಿಗಾದ ಬೇಸರ ಎಷ್ಟೆಂಬುದನ್ನು ಲೆಕ್ಕ ಹಾಕಬಹುದಾಗಿದೆ. ಆದರೆ ಅವನ ಗೆಳೆಯನಿಂದಾಗಿಯೇ ತನ್ನ ಮನಃಸ್ಥಿತಿಯನ್ನು ಬದಲಿಸಿಕೊಳ್ಳಬೇಕಾಯಿತು.

ತನ್ನೊಂದಿಗೇ ಕಾಲೇಜು ಕಲಿತ ಮೋಟಿ ಅದೇ ಊರಿನಲ್ಲಿ ತೋಟಗಾರಿಕೆ ಇಲಾಖೆಯ ಅಧಿಕಾರಿಯಾಗಿರುವನೆಂದು ತಿಳಿದಾಗ ಅವನಿಗೆ ಸ್ವಲ್ಪ ಸಮಾಧಾನವಾಯಿತು. ಲವಲವಿಕೆಯಿಂದ ಕೆಲಸ ಮಾಡುವ ಮೋಟಿ ಅಂಥ ಬಿಗ್ರಾಸ ಊರಿನಲ್ಲೂ ನಂದನವನದಂತೆ ಬೆಳೆಸಿರುವ ಗಾರ್ಡನ್ನಿನಿಂದಾಗಿ ಅವನ ಬೇಸರ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುತ್ತಿತ್ತು. ನರ್ಸರಿಯಲ್ಲಿ ಬೆಳೆಯುತ್ತಿರುವ ಅನೇಕ ತರದ ಸಸಿಗಳು, ಹೂವಿನ ಕುಂಡಗಳು, ಮೆತ್ತನ್ನ ಹುಲ್ಲು ಹಾಸಿಗೆ ಕಂಡಾಗಲೆಲ್ಲ ಅವನಿಗೆ ತನ್ನೂರಿನ ನೆನಪಾಗುತ್ತಿತ್ತು.

ತೀವ್ರವಾಗಿ ಬೆಳೆಯುತ್ತಿರುವ ನಗರದಲ್ಲಿ ಸ್ವಲ್ಪ ಮನೆಯ ಹಿಂದೆ-ಮುಂದೆ ಹುಲ್ಲು ಜಾಗೆ ಇದೆಯೆಂದರೆ ಸಾಕು ಇಂಚು ಸ್ಥಳವನ್ನೂ ಬಿಡದೆ ಇಟ್ಟಿಗೆ ಮೇಲೆ ಇಟ್ಟಿಗೆ ಇಟ್ಟು ದಿನ ಬೆಳಗಾಗುವದರಲ್ಲೇ ಮನೆ ತಯಾರಿಸಿ ಬಾಡಿಗೆ ಕೊಡುತ್ತಿದ್ದರು. ಎಲ್ಲೆಲ್ಲೂ ತುಂಬಿರುವ ಸಿಮೆಂಟು ನೆಲದಿಂದಾಗಿ ಬಿದ್ದ ಮಳೆ ನೀರೂ ಉರುಳಿ ಡ್ರೈನೇಜ್ ಸೇರುತ್ತಿರುವಾಗ ಹಿಡಿ ಮಣ್ಣು ನೋಡೇನೆಂದರೂ ಸಿಗುತ್ತಿರಲಿಲ್ಲ. ಇನ್ನು ಸಸಿ ಎಲ್ಲಿಂದ ಬೆಳೆಯಬೇಕು? ಅದೇನೇ ಇದ್ದರೂ ಶ್ರೀಮಂತರ ಭವ್ಯ ಬಂಗಲೆಗಳ ಆವಾರಗಳು ಮಾತ್ರ ಸಸಿಗಳಿಗೆ ಮೀಸಲು. ಯಾರೂ ಮುಟ್ಟದ ಗುಲಾಬಿ ಹೂವು ಮಾಳ್ಯಗಳ ಮಧ್ಯ

ಅರಳಿ ಬಾಡಿ ಉದುರಿ ಹೋಗುವುದು ಅವರ ಶೋಕಿಗಾಗಿ ಮಾತ್ರ. ಚಿಕ್ಕು, ಮಾವು, ಪಪಾಯ್ ತಿನ್ನುವುದಕ್ಕಿಂತ ಹೆಚ್ಚಾಗಿ ನೋಡುವುದಕ್ಕೆಂದೇ ಬೆಳೆಸಿದವು.

ಅಂಥ ಸಿಮೆಂಟು ನಗರದ ಬಿಗಿ ವಾತಾವರಣದಲ್ಲಿ ಬೆಳೆದ ನಿರಂಜನನಿಗೆ ಆ ಹಳ್ಳಿಯ ತೋಟದಲ್ಲಿ ನೆಮ್ಮದಿ ಸಿಕ್ಕುತ್ತಿತ್ತು. ಥ್ರಿಲ್ ಎನಿಸದ ಹಳ್ಳಿಯ ಬದುಕಿನ ಬೇಸರವನ್ನು ತನ್ನ ಗೆಳೆಯನೊಂದಿಗೆ ತೋಟದಲ್ಲಿ ತಿರುಗಾಡುವುದರೊಂದಿಗೆ ಕಳೆದುಕೊಳ್ಳುತ್ತಿದ್ದ. "ಯಾಕೆ ಬೇಸರಪಟ್ಟುಕೊಳ್ಳುತ್ತೀ? ಬಿಟ್ಟು ಹೋದರೆ ಬೇಕೆಂದಾಗ ನೌಕರಿ ಸಿಗುವ ಕಾಲವೇನು ಇದು?" ಎಂಬ ಗೆಳೆಯನ ಧೈರ್ಯದೊಂದಿಗೆ ದಿನಗಳನ್ನು ಬದಲಿಸತೊಡಗಿದ.

ಒಂದು ದಿನ ಹೀಗೆಯೇ ತೋಟದಲ್ಲಿ ನಳನಳಿಸುತ್ತಿರುವ ಸಸಿಗಳನ್ನು ನೋಡುತ್ತ ನಿಂತಾಗ ಗೆಳೆಯರ ಗುಂಪೊಂದು ಬಂತು. ಮೋಟಿ ಎಲ್ಲರನ್ನೂ "ಬರ್ರಿ...ಬರ್ರಿ..." ಎಂದು ಕರೆದು ಇವನಿಗೂ ಪರಿಚಯಿಸಿದ್ದ. ಕಾಯಿಪಲ್ಲೆ ರೇಟುಗಳು ಏರುತ್ತಿರುವ ಈ ದಿನಗಳಲ್ಲಿ ಅಥವಾ ಸಿಗದೆ ಇರುವ ಈ ಹಳ್ಳಿಯಲ್ಲಿ, ಇದ್ದ ಸ್ವಲ್ಪ ಜಾಗದಲ್ಲೇ ತರಕಾರಿ ಬೆಳೆದು ಸ್ವಾವಲಂಬಿಯಾಗುವುದರೊಂದಿಗೆ ಉಳಿತಾಯ ಮಾಡೋಣ ಎಂಬ ಆಶೆ ಇಟ್ಟುಕೊಂಡವರು ಅವರು.

ಒಬ್ಬರು ಟೊಮ್ಯಾಟೋ ಸಸಿಗಳನ್ನು ಆರಿಸಿಕೊಂಡರೆ ಇನ್ನೊಬ್ಬರು ಬದನೆ ಸಸಿಗಳನ್ನು ಆಯ್ದರು. ಮೆಣಸಿನ ಅಗಿ, ಆಬಾಲಿ ಹೂವಿನ ಸಸಿ–ಹೀಗೆ ತಮಗೆ ಬೇಕು ಬೇಕಾದ ಅಗಿಗಳನ್ನು ಆಯ್ದುಕೊಂಡರು. ನಿರಂಜನ ನೋಡುತ್ತಲೇ ಇದ್ದ. ಒತ್ತಟ್ಟಿಗೆ ನಾಲ್ಕು ಉದ್ದ ಸಾಲುಗಳಲ್ಲಿ ಪಾಲಿಥೀನ್ ಚೀಲಗಳಲ್ಲಿ ನಳನಳಿಸುತ್ತ ಚಿಗಿಯುತ್ತಿರುವ ಕರಿ ಬೇವಿನ ಸಸಿಗಳು ಇವನ ಮನವನ್ನು ಬಹುವಾಗಿ ಆಕರ್ಷಿಸಿದವು. ಇವನ ಲಕ್ಷ್ಯವನ್ನು ಕಂಡವರೊಬ್ಬರು, "ಕರಿಬೇವಿನ ಸಸಿ ಹಚ್ಚ್ತೀರೇನ್ರಿ? ಒಯ್ರಲ. ಯಾಕೋ ಅದರ ಮ್ಯಾಲ ನಿಮ್ಮ ಮನಸ್ಸು ಭಾಳ ಇರೂವ್ಹಂಗ ಕಾಣಸ್ತದ..." ಎಂದಾಗ ಇವನು ಬೆಚ್ಚಿಬಿದ್ದ.

"ಒಯ್ದು ಹಚ್ಚರಿ. ಕರಿಬೇವಿನ ಖರ್ಚಾದರೂ ಕಡಿಮೆ ಆಗುತ್ತ," ಎಂದು ಇನ್ನೊಬ್ಬರು ದನಿಗೂಡಿಸಿದರು.

ಕರಿಬೇವಿನ ಸಸಿ ಹಚ್ಚಿ ಅವನೇನು ಮಾಡಬಲ್ಲ? ತನಗೇನು ಹೆಂಡತಿಯೇ! ಮಕ್ಕಳೇ! ಒಂದು ಮನೆಯೇ! ಹೋಟೆಲಿನಲ್ಲಿ ತಿಂದುಂಡು ದಿನ ದೂಡುತ್ತಿರುವ ತನಗೆ ಈ ಕರಿಬೇವು ಹೇಗೆ ಖರ್ಚು ಉಳಿಸಬಲ್ಲದು? ತನ್ನೊಳಗೇ ನಕ್ಕ.

"ಬೇಕಿದ್ರ ಒಯ್ಯೋ. ಹ್ಯಾಂಗೂ ರೂಮಿನ ಮುಂದ ಕಂಪೌಂಡ್ ಇದೆ" ಎಂದು ಮೋಟಿಯೂ ಹೇಳಿದಾಗ, "ಏನೋ? ನಿನಗೆ ಗೊತ್ತಿದ್ದೂ ಹೀಗೆ ಹೇಳ್ತೀಯಲ್ಲ! ಮಲಗಲಿಕ್ಕೊಂದು ಜಾಗ ಮಾಡಿಕೊಂಡಿರುವ ಈ ಬ್ರಹ್ಮಚಾರಿ ಕರಿಬೇವು ಬೆಳೆದು ಏನು ಮಾಡಬೇಕು?" ಎಂದು ನಕ್ಕ ನಿರಂಜನ.

"ಹಾಗಲ್ಲ. ಗಿಡದ ಫಲ ಉಣ್ಣುವುದರಲ್ಲಿರುವ ಸಂತೋಷಕ್ಕಿಂತ ಅದನ್ನು ಬೆಳೆಸುವುದರಲ್ಲಿರುವ ಖುಶಿ, ಸಂತೋಷ ಹೆಚ್ಚಿನದು." ಎಂದು ಹೇಳಿ ಸಸಿಯನ್ನು ಎತ್ತಿ ಅವನ ಕೈಯಲ್ಲಿಟ್ಟಾಗ ಅದರ ಎಲೆಗಳು ಮುಖಕ್ಕೆ ಬಡಿದು ಘಮಘಮ ವಾಸನೆ ಬಂತು.

ಹೀಗೆ ತನ್ನ ಬದುಕಿಗೆ ಇರದಿದ್ದರೂ ಒತ್ತಾಯದಿಂದ ತಂದ ಸಸಿಯನ್ನು ಕಂಪೌಂಡಿನ ಮೂಲೆಯಲ್ಲಿ ನೆಟ್ಟಿದ್ದ. ಮೊದ ಮೊದಲು ಅದರ ಬಗ್ಗೆ ಅಷ್ಟೇನೂ ಲಕ್ಷ್ಯ ವಹಿಸಿದ್ದಿಲ್ಲ. ಕಾಲು ಮುಖ ತೊಳೆದು ಬಂದ ನೀರಿನಿಂದಾಗಿಯೇ ಸಸಿ ಚಿಗುರುತ್ತಿತ್ತು. ಕೆಲವೇ ದೇಟುಗಳಲ್ಲಿ ಎಲೆಗಳನ್ನು ಹಿಡಿದುಕೊಂಡಿದ್ದ ಸಸಿ ದಿನಕ್ಕೊಂದು ಭೂಪನಂತೆ ಮೈತುಂಬ ಎದ್ದ ದೇಟುಗಳಲ್ಲಿ ಗುತ್ತನಾಗಿ ಎಲೆಗಳನ್ನು ಬಿಟ್ಟುಕೊಂಡು ಎತ್ತರವಾಗಿ ಬೆಳೆಯತೊಡಗಿದಾಗ ನಿರಂಜನ ಕುತೂಹಲಿಯಾದ.

ಸುತ್ತಲಿನ ನೆಲವನ್ನು ಎಬ್ಬಿ ದಂಡೆ ಅದಕ್ಕೆ ನೀರು ನಿಲ್ಲುವಂತೆ ಒಂಡು ಹಾಕಿದ. ಬಿದ್ದು ಹೋಗುತ್ತಿರುವ ಕಂಪೌಂಡ್ ಬೇಲಿಯನ್ನು ಎತ್ತರಿಸಿ ಕಟ್ಟಿ ಭದ್ರಪಡಿಸಿದ. ನಿಯಮಿತವಾಗಿ ಅದಕ್ಕೆ ನೀರು ಹಾಕತೊಡಗಿದ. ಗೆಳೆಯನ ಸಲಹೆಯಂತೆ ಕಾಲಕಾಲಕ್ಕೆ ಅದರ ಚೊಡನ್ನು ಕತ್ತರಿಸಿ ವ್ಯವಸ್ಥಿತ ರೀತಿಯಲ್ಲಿ ಭೂಪವಾಗಿ

ಬೆಳೆಸತೊಡಗಿದ. ಬೇಕಾದಷ್ಟು ರಸಗೊಬ್ಬರ ತಂದು ಅದರ ಸುತ್ತ ಹರಡಿ ನೀರು ಹೊಯ್ದ.

ನಿತ್ಯ ಅವನನ್ನು ಗಿಡದ ಹತ್ತಿರ ಬಂದ ಯಾರಾದರೂ ಕಾಣಬಹುದಾಗಿತ್ತು. ಹಳೆಯದಾದ ಎಲೆಯನ್ನು ಉದುರಿಸುವಲ್ಲಿ ನೆಲ ಅಗೆಯುವುದರಲ್ಲಿ ನೀರು ಹಾಕುವದರಲ್ಲಿ ಕಂಪೌಂಡ್ ಎತ್ತರಿಸಿ ಕಟ್ಟುವಲ್ಲಿ ಮಗ್ನನಾಗಿರುವ ನಿರಂಜನನನ್ನು ಮತ್ತೆ ಮತ್ತೆ ಕಾಣಬಹುದಿತ್ತು. ಎಲೆ ಚಿಗುರು ಚಿಗಿಯುವದರೊಂದಿಗೆ ಅವನ ಮನಸ್ಸೂ ಹರುಷಗೊಳ್ಳುತ್ತಿತ್ತು. ಅದಕ್ಕೇನಾದರೂ ಧಕ್ಕೆ ಆದರೆ ಅವನ ಮನ ಮುದುಡುತ್ತಿತ್ತು.

ಹೀಗೆಯೇ ಒಂದು ದಿನ ಗಿಡದ ಬಡ್ಡಿಯ ಸುತ್ತ ಅಗೆದು ಗೊಬ್ಬರ ಉಣಿಸುವುದರಲ್ಲಿ ಮಗ್ನನಾಗಿದ್ದ. "ಏನ್ ಮಾಡ್ತೀರಿ ದಾದಾ?" ಹತ್ತಿರದಲ್ಲೇ ಹಿಂದಿನಿಂದ ಧ್ವನಿ ಬಂದಾಗ ತಿರುಗಿ ನೋಡಿದ. ಏಳೆಂಟು ವರ್ಷದ ಗೋಧಿಯ ಬಣ್ಣದ ದುಂಡಗಿನ ಮುಖದ ಹುಡುಗಿ ಮಾಸಿದ ಸ್ಕರ್ಟಿನಲ್ಲಿ ನಗುತ್ತ ನಿಂತಿದ್ದಳು. ಈ ಸಣ್ಣ ಸಸಿಯೊಂದಿಗೆ ತಾನೆಷ್ಟು ಗುದ್ದಾಡುತ್ತಿರುವೆನೆಂದು ತಿಳಿದು ಅವಳೆದುರಿಗೆ ಅವನಿಗೆ ಮುಜುಗರವಾಯಿತು.

"ಈ ಗಿಡ ಯಾಕೆ ಬೆಳೆಸ್ತೀರಿ ದಾದಾ?" ಮತ್ತೆ



ಅವಳು ಪ್ರಶ್ನಿಸಿದಾಗ ಇವನು ನಿರುತ್ತರನಾದ. ಯಾಕೆ ಬೆಳೆಸುತ್ತಿರುವೆನೆಂಬುದು ಅವನಿಗೂ ತಿಳಿಯದು. ಅಷ್ಟೊಂದು ಸಣ್ಣ ಹುಡುಗಿಯು ಎದುರಿನಲ್ಲಿ ಮನಸ್ಸಿನ ಸಂತೋಷಕ್ಕೆ ಬೆಳೆಸುತ್ತಿರುವೆ ಎಂದು ಹೇಳಿದರೆ ಅವಳಿಗೇನು ಅರ್ಥವಾದೀತೆಂದು "ನಾಳೆ ನಿನ್ನ ಮದುವೆಯಲ್ಲಿ ಬಳುವಳಿ ಕೊಡಲಿಕ್ಕೆ" ಎಂದು ಹಾಸ್ಯ ಮಾಡಿದ. ಇವನ ಮಾತಿನಿಂದ ಅವಳು ಕಿಲ ಕಿಲ ನಗತೊಡಗಿದಳು. ನಗುವಾಗಿನ ಅವಳ ಕೆನ್ನೆಯಲ್ಲಿ ಗುಳಿ ಬಿದ್ದುದನ್ನು ಕಂಡು ಅವನಿಗೂ ಸಂತೋಷವೆನಿಸಿತು.

"ಏ ಯಾಕ ನಗ್ತೀದಿ?" ಎಂದ.

"ಮತ್ತೆ ನನಗೇ ಕೊಡ್ತೀನಿ ಅಂತ ಹೇಳ್ತಿರಿ! ನನ್ನ ಮದುವೆ ಇನ್ನೂ ಬ್ಹಾಳ ವರ್ಷ. ಈಗಲೇ ನನಗ ಬೇಕಾದಾಗ ಒಂದೊಂದು ಎಲೆ ಕಿತ್ತುಕೊಂಡು ಹೋಗಲಾ?" ಎಂದು ಕೇಳಿದಾಗ ಅವನು ಗಾಬರಿಯಾದ. ಈ ಗಿಡ ಇರುವುದು ತನಗಾಗಿ ಮಾತ್ರ ಎಂದುಕೊಂಡಿದ್ದ.

"ಎಲೆ ತೆಗೆದುಕೊಂಡು ಏನು ಮಾಡುತ್ತೀ?" ಎಂದ. "ಸಾರು ಮಾಡುತ್ತೇನೆ. ಘಮಘಮ ಎನ್ನುವ ಸಾರು" ಎಂದು ಪಟಕ್ಕನೆ ಉತ್ತರಿಸಿ "ಬೇಕಾದರೆ ನಿಮಗೂ ತಂದು ಕೊಡ್ತೀನಿ," ಎಂದಳು.

"ಸಾರು ಮಾಡಲಿಕ್ಕೆ ಬರುತ್ತಾ ನಿನಗೆ?"

"ಓ, ಸಾರಷ್ಟೇ ಏಕೆ, ಅನ್ನ ಪಲ್ಯೆ ಚಪಾತೀನೂ ಮಾಡ್ತೀನಿ. ರೊಟ್ಟಿ ಒಂದು ಬಡಿಯಲಿಕ್ಕೆ ಬರೂದಿಲ್ಲ" ಎಂದು ಅವಳು ಉತ್ಸುಕತೆಯಿಂದ ಉತ್ತರಿಸಿದಾಗ ಅವಳ ಬಗ್ಗೆ ಇವನಿಗೆ ಕುತೂಹಲ ಬೆಳೆಯಿತು. ಅವಳ ಚೈತನ್ಯಭರಿತ ಮುಖ ಇವನಲ್ಲಿ ಇನ್ನಷ್ಟು ಆತ್ಮೀಯತೆ ತುಂಬತೊಡಗಿತು.

"ನಿನ್ನ ಹೆಸರೇನು?"

"ಸಕ್ಕೂ. ಸಖೂಬಾಯಿ ನನ್ನ ಪೂರಾ ಹೆಸರು."

"ನಿಮ್ಮ ಮನೆಯಲ್ಲಿ ಯಾರ್ಯಾರು ಇರ್ತೀರಿ?"

ಅವನು ಗಿಡದ ಸುತ್ತ ಗೊಬ್ಬರ ಹರವಿ ಮುಗಿಸಿದ. ಸಕ್ಕೂ ಹತ್ತಿರ ಬಂದು ಕುಳಿತು "ನಮ್ಮ ದಾದಾ, ನಾನು ಇಬ್ಬರೇ ಇರ್ತೀವಿ. ನಮ್ಮ ದಾದಾಗೆ ನಾನೇ ಅಡಿಗೆ ಮಾಡ್ತೀನಿ" ಎಂದು ಅವಳು ತನ್ನ ಪಾಕಪ್ರಾವೀಣ್ಯವನ್ನು ಹೇಳಿಕೊಂಡಳು.

"ದಾದಾ ಅಂದರೆ ನಿನ್ನ ತಂದೆ ಏನು?"

"ಅಲ್ಲ. ನಾವು ಅಣ್ಣನಿಗೆ ದಾದಾ ಅಂತೀವಿ. ನಿಮ್ಮನ್ನ ದಾದಾ ಅಂತ ಕರೀಲಾ?" ಎಂದು ಮುಗ್ಧವಾಗಿ ಪ್ರಶ್ನಿಸಿದಳು.

"ಹಾಗೇ ಕರಿ. ನೀನು ಸಾಲಿಗೆ ಹೊಗ್ತೀಯಾ?" ಈ ಪ್ರಶ್ನೆಗೆ ಅವಳ ಮುಖ ಸಣ್ಣಗಾಯಿತು.

"ನನಗ ಸಾಲೀಗೆ ಹೋಗಬೇಕಂತ ಬ್ಹಾಳ ಮನಸ್ಸಿತ್ತು. ಆಯೀನೂ ಇಲ್ಲ, ಬಾಬಾನೂ ಇಲ್ಲ. ನಾ ಮಂದೀ ಮನಿ ಕಸಾ ಮುಸುರಿ ಮಾಡ್ತಿನಿ. ದಾದಾನೂ ಹೋಟೇಲಿನಾಗ ಸಪ್ಲಾಯರ್ ಅದಾನ. ಅಂವಾ ದಿನಾ ನನಗೆ ಬೋಂಡಾ ಚಕ್ಕುಲಿ ಖಾರಾ ವಡಿ ತಂದುಕೊಡ್ತಾನ."

ಅವಳ ಮಾತು ಕೇಳಿ ಅವನ ಜೀವ ಚುರುಕ್ ಎಂದಿತು. ಎದ್ದು ಹತ್ತಿರ ಬಂದು "ಸಕ್ಕೂ. ನಿನಗೆ ಬೇಕಾದಾಗ ಬಂದು ಎಲಿ ಒಯ್ಯು. ಆದರೆ ಗಿಡ ಮುರೀಬೇಡ. ಒಂದೊಂದು ದೇಟು ಕೆಳಗಿನಿಂದ ಕಿತ್ತುಕೊ" ಎಂದು ಹೇಳಿದಾಗ ಅವಳ ಮುಖ ಇಷ್ಟಗಲವಾಯಿತು. "ಆಗಲಿ ದಾದಾ" ಎಂದವಳು ಮರುಕ್ಷಣದಲ್ಲಿ ಉದ್ದ ಜಡೆಯನ್ನು ಓಲಾಡಿಸುತ್ತ ಮನೆಯತ್ತ ಓಡಿದಳು.

ಅಂದಿನಿಂದ ಸಕ್ಕೂ ಅವನಿಗೆ ಆತ್ಮೀಯಳಾಗತೊಡಗಿದಳು. ಯಾವಾಗಲಾದರೊಮ್ಮೆ ಬಂದು ಕರಿಬೇವಿನ ಎಲೆಗಳನ್ನು ಕಿತ್ತುಕೊಂಡು ಹೋಗುತ್ತಿದ್ದಳು. ಇವನು ಆಫೀಸಿಗೆ, ಊರಿಗೆ ಹೋದ ವೇಳೆಯಲ್ಲಿ ಅವಳ ಲಕ್ಷ್ಯ ಯಾವಾಗಲೂ ಮನೆಯ ಮುಂದಿನ ಕಂಪೌಂಡಿನತ್ತ, ಕಂಪೌಂಡಿನ ಮೂಲೆಯಲ್ಲಿರುವ ಆ ಗಿಡದತ್ತ ಇರುತ್ತಿತ್ತು. ದನಗಳು ಬೇಲಿಯನ್ನು ನುಗ್ಗುವುದು ಕಂಡರೆ ಅವು ಗಿಡದ ಎಲೆ ಕಡಿಯುವುದನ್ನು ಕಂಡರೆ ಓಡಿ ಹೋಗಿ ಅವುಗಳನ್ನು ಓಡಿಸಿ ಗೇಟು ಮುಚ್ಚಿ ಬರುತ್ತಿದ್ದಳು.

ಒಂದು ಸಲ ಬಟ್ಟಲಿನ ತುಂಬ ಸೊಗಸಾದ ಸಾರು ಮಾಡಿ ತಂದುಕೊಟ್ಟಳು. ಕರಿದ ಬೇವಿನ ಎಲೆಗಳು ಜೀರಿಗೆ, ಸಾಸಿವೆ, ಮಸಾಲೆಗಳೊಂದಿಗೆ

ತೇಲುತ್ತಿರುವ ಘಮ ಘಮಿಸುವ ಸಾರನ್ನು ಕಾಣುತ್ತಲೇ ರುಚಿ ನೋಡಬೇಕೆಂದು ಬಾಯಿಗ್ಹಚ್ಚಿದ ನಿರಂಜನ ಬಟ್ಟಲು ಸಾರನ್ನೂ ಕುಡಿದು ಬಿಟ್ಟಾಗ ಮುದುಗಿ ಕಿಲಿ ಕಿಲಿ ನಗತೊಡಗಿತು. "ಬರೀ ಸಾರೇ ಕುಡಿದು ಬಿಟ್ರಲ್ಲ ದಾದಾ?" ಎನ್ನುತ್ತ. "ಬರೀ ಸಾರು ತಂದೀಯಲ್ಲಾ? ಜೊತೆಗೆ ಅನ್ನಾನೂ ತಂದಿದ್ರೆ ಊಟಾನೂ ಮಾಡಿ ಬಿಡ್ತಿದ್ದೆ. ಒಂದು ದಿನವಾದರೂ ಬೇಸರದ ಹೋಟೆಲಿನ ಊಟ ತಪ್ಪಿದಂತಾಗುತ್ತಿತ್ತು." ಎಂದು ಅವನು ಬಾಯಿ ಚಪ್ಪರಿಸುತ್ತ ಹೇಳಿದಾಗ ಅವಳ ಮುಖ ಕುಗ್ಗಿ ಹೋಯಿತು.

"ನಾನಿನ್ನೂ ಅನ್ನಾನೇ ಮಾಡಿಲ್ಲ ದಾದಾ. ನಮ್ಮ ದಾದಾ ಹೋಟೆಲಿನಿಂದ ಬಂದ ಮೇಲೆ ಅಕ್ಕಿ ತರ್ತಾನೆ. ಆಮೇಲೆ ಅನ್ನಾ ಮಾಡಿ ತಿನ್ತೀನಿ" ಅವಳು ಕ್ಷೀಣವಾಗಿ ಹೇಳಿದಾಗ ಇವನ ಮನಸ್ಸಿಗೆ ವ್ಯಥೆ ಎನಿಸಿತು.

"ನೀನಿನ್ನೂ ಉಂಡಿಲ್ಲಾ?" ಎಂದು ಕೇಳಿದ. ಅವಳು ಮೌನವಾಗಿ ಗೋಣು ಅಲುಗಿಸಿದಳು. ಮಧ್ಯಾಹ್ನ ಮೂರುಗಂಟೆ ದಾಟಿ ಹೋಗಿದೆ. ಇಂಥ ವಯಸ್ಸಿನಲ್ಲೂ ಮುಗ್ಧವಾಗಿ ಹೇಗೆ ಹಸಿವನ್ನು ತಡೆದುಕೊಳ್ಳುವಳಲ್ಲ? ಎಂದುಕೊಂಡ.

ಅವಳಿಗೆ ತಿನ್ನಲು ಏನಾದರೂ ಕೊಡಬೇಕೆನಿಸಿತು. ಮನೆಯಲ್ಲಿ ಹುಡುಕಾಡಿದ. ಒಂದು ಕಪ್ ಚಹಾಕ್ಕಾಗಿಯೂ ಹೋಟೇಲನ್ನೇ ನಂಬಿರುವ ಬ್ರಹ್ಮಚಾರಿಯ ಮನೆಯಲ್ಲಿ ತಿನ್ನಲು ಏನು ಸಿಕ್ಕೀತು. "ತಗೊಂಡ್ಹೋಗೋ ಬರೀ ಹೋಟೇಲಿನ ಊಟದಿಂದ ನಿನಗೇನು ಶಕ್ತಿ ಬಂದೀತು." ಎಂದು ಹೇಳಿ ಮೋಟಿ ತೋಟದಲ್ಲಿ ಬಂದ ಚಿಕ್ಕ ಬಾಳೇಹಣ್ಣು ಪೇರಲ ಹಣ್ಣು ಪಪಾಯಿ. ಯಾವಾಗಲಾದರೊಮ್ಮೆ ಕೊಡುತ್ತಲೇ ಇದ್ದ. ಕೆಲವಷ್ಟು ತಿನ್ನುತ್ತಿದ್ದ, ಕೆಲವಷ್ಟು ತಿನ್ನದೇ ಇಟ್ಟಲ್ಲಿಯೇ ಕೆಟ್ಟು ಹೋಗುತ್ತಿದ್ದವು. ಮೂಲೆಯಲ್ಲಿ ನಿನ್ನೆ ತಂದಿಟ್ಟ ಪಪಾಯಿ ಹಣ್ಣುಗಳು ಹಾಗೆ ಇದ್ದವು. ಒಂದನ್ನು ಹೆಚ್ಚಿ ಅವಳ ಮುಂದಿಟ್ಟ. "ದಾದಾ ನೀವೂ ತಿನ್ನಿ" ಎಂದಳು. ಇವನು ಮುಗುಳ್ನಕ್ಕ. "ನಾನೇನು, ಸಾಕಷ್ಟು ತಿನ್ನುತ್ತೇನೆ, ನೀನು ತಿನ್ನಮ್ಮ" ಎಂದಾಗ ಅವಳು ಒಂದೊಂದೇ ಹೋಳನ್ನು ತಿಂದು ಮುಗಿಸಿ ಮತ್ತೊಂದು ಹಣ್ಣಿನತ್ತ ಕೈ ಮಾಡಿ ತೋರಿಸಿದಳು. ಅವಳ ಹಸಿವಿನ ತೀವ್ರತೆಯ ಅರಿವು ಅವನನ್ನು ತಟ್ಟಿದಾಗ ನಿಟ್ಟುಸಿರಿನಿಂದ ಮತ್ತೊಂದು ಹಣ್ಣನ್ನೂ ಹೆಚ್ಚಿ ಮುಂದಿಟ್ಟ. ಅವಳು ಮೆಲ್ಲಗೆ ಅದನ್ನೂ ತಿಂದು ಮುಗಿಸಿ ತೃಪ್ತಿಯಿಂದ ನಕ್ಕಳು. ಅವಳ ತೃಪ್ತಿ ಇವನನ್ನು ನಗಿಸಿತು.

●

ನಿರಂಜನ ಈ ಊರಿಗೆ ಬಂದಾಗ ಹೇಗಪ್ಪಾ ದಿನಗಳನ್ನು ಕಳೆಯುವದು ಎಂದುಕೊಂಡಿದ್ದ. ಆದರೆ ಚೆಲ್ಲುವರಿದು ಟೊಂಗೆ ಟೊಂಗೆಗೆ ಕಪ್ಪು ಹಸಿರು ಎಲೆಗಳನ್ನು ತುಂಬಿಕೊಂಡು ಮದುವಣಗಿತ್ತಿಯಂತೆ ಕಂಪೌಂಡಿನ ಗೋಡೆಯನ್ನೆಲ್ಲ ಆಕ್ರಮಿಸಿಕೊಂಡು ಬೆಳೆಯುತ್ತಿರುವ ಕರಿಬೇವಿನ ಗಿಡ ಅವನವಷ್ಟು ದಿನಗಳನ್ನು ಸದ್ದಿಲ್ಲದೆ ಉರುಳಿಸಿಬಿಟ್ಟಿತ್ತು. ಜೊತೆಗೆ ಮುಗ್ಧ ಮನಸ್ಸಿನ ಸಕ್ಕೂಳನ್ನು ಗೆಳತಿಯನ್ನಾಗಿ ದೊರಕಿಸಿ ಕೊಟ್ಟಿತ್ತು.

ಅಂದು ಅಳುವ ಮೊಗ ಹೊತ್ತು ಅಥವಾ ಈಗಾಗಲೇ ಸಾಕಷ್ಟು ಅತ್ತಿರುವ ಸಕ್ಕೂ ಮೆಲ್ಲನೆ ಹೆಜ್ಜೆ ಇಡುತ್ತ ಕಂಪೌಂಡ್ ದಾಟಿ ಒಳ ಬಂದಾಗ ನಿರಂಜನನಿಗೆ ಆಶ್ಚರ್ಯವಾಯ್ತು. ಯಾವಾಗಲೂ ಕಿಲಕಿಲ ನಗುತ್ತ, ಕುಣಿಯುತ್ತ ಬರುವ ಹುಡುಗಿಯ ಮುಖ ಇಂದೇಕೆ ಬಾಡಿದೆ!

"ಯಾಕೆ ಸಕ್ಕೂ ಆರಾಮಿಲ್ಲಾ? ಮುಖ ಸಪ್ಪಗೆ ಮಾಡಿದಿ," ಎಂದು ದಯೆಯಿಂದ ಕೇಳಿದ. ಕಾದಿಟ್ಟು ನಿಂತ ಕಣ್ಣೀರು ಕೆನ್ನೆಯುದ್ದಕ್ಕೂ ಹರಿಯತೊಡಗಿತು. ಇವನಿಗೆ ಅವಳು ಅಳುವುದನ್ನು ನೋಡಿ ಸಂಕಟವಾಗತೊಡಗಿತು. ಈ ವಯಸ್ಸಿನಲ್ಲಿ ಇವಳಿಗೆ ಎಂಥೆಂಥ ಕಷ್ಟಗಳೋ ದೇವರೆ ಎಂದು ಮರುಗಿದ. "ಏನಾಯ್ತು ಹೇಳು ಸಕ್ಕೂ ನಾನಿದೀನಿ" ಎಂದು ಮತ್ತೂ ರಮಿಸಿದ.

ಸಕ್ಕೂ ಅಂಗಿ ಎತ್ತಿ ಬೆನ್ನು ತೋರಿಸಿದಳು. ಬಿಳಿಯ ಬೆನ್ನಿನ ತುಂಬ ಉದ್ದ ಉದ್ದಗೆ ಹಸಿರುಗಟ್ಟಿದ ಬಾರುಗಳು. ಎಳೆಯ ಚರ್ಮ ಅಲ್ಲಲ್ಲಿ ಮಡಿಚಿ ಬಿದ್ದಿತ್ತು. ಅವಳು ಅನುಭವಿಸಿದ

ಸಂಕಟವನ್ನು ನೆನೆಯುತ್ತಲೇ ನಿರಂಜನ ತತ್ತರಿಸಿ ಹೋದ. ತಾನೊಂದು ಸಲ ಕರಿಬೇವಿನ ಸಸಿಯ ಸುತ್ತ ನೆಲ ಅಗೆಯುವಾಗ, ಕಬ್ಬಿಣದ ಚೂಪು ಕೈಗೆ ಬಿದ್ದು ಜಜ್ಜಿಹೋಗಿತ್ತು. ಅದು ಎಷ್ಟೊಂದು ಒದ್ದಾಡಿದ್ದ, ಚಡಪಡಿಸಿದ್ದ. ಅದಕ್ಕಿಂದೇ ತುಂಬ ನೋವು ಇನ್ನೂ ಇತ್ತು. ಟ್ಯೂಬು ತಂದು ಬೆನ್ನಿನ ತುಂಬ ಸವರತೊಡಗಿದಾಗ ಅವಳು ನರಳತೊಡಗಿದಳು.

"ಇದು ಹೇಗಾಯ್ತು ಸಕ್ಕೂ? ಯಾರು ನಿನಗೇ ರೀತಿ ಹೊಡೆದದ್ದು?" ಎಂದ. ಆ ಮುಗ್ಧಬಾಲೆ ಏನು ಹೇಳಬಲ್ಲಳು? ಕಸ ಮುಸುರೆ ಮಾಡುವಾಗ ಮನೆಯವರಿಂದ ಹಲವಾರು ಸಲ ಸಣ್ಣ ಪುಟ್ಟ ತಪ್ಪುಗಳಿಗೆ ಈ ರೀತಿ ಶಿಕ್ಷೆ ಅನುಭವಿಸುವದು ಅವಳಿಗೆ ರೂಢಿಯಾಗಿಬಿಟ್ಟಿತ್ತು. ಆದರೆ ಈ ಸಲದ ಶಿಕ್ಷೆ ಎಳೆಯ ದೇಹವನ್ನು ಹಣ್ಣು ಮಾಡಿತ್ತು.

ಅಂದು ಸಾಹೇಬರ ಮನೆ ಎಂದು ಆಕೆ ಕರೆಯುತ್ತಿದ್ದ ಮನೆಯಲ್ಲಿ ಕಾರಿನಲ್ಲಿಳಿದು ಬಂದ ಅತಿಥಿಗಳು ಆಗಮಿಸಿದ್ದರು. ಸಾಹೇಬನ ಹೆಂಡತಿಯ ತಂಗಿಯ ಬಳಗ ಎನ್ನುತ್ತಲೇ ಮನೆ ಸಂಭ್ರಮದಿಂದ ತುಂಬಿತ್ತು. ಇಂಥ ಸಂದರ್ಭದಲ್ಲಿ ಸಕ್ಕೂಗೆ ಕಸ ಮುಸುರೆಯ ಹೊರೆ ಕೆಲಸ ಕಾದಿರುತ್ತಿತ್ತು. ಜೊತೆಗೆ ಉಳಿದಿದ್ದಾದರೂ ಎಂದಿಗಿಂತ ರುಚಿಯಾದ ವಿಶೇಷ ಊಟ ಸಿಗುತ್ತದೆಯೆಂಬ ಖುಷಿಯೂ ಅವಳಲ್ಲಿತ್ತು.

ಉಂಡು ಬಿಟ್ಟ ತಾಟುಗಳನ್ನು ಒಂದೊಂದಾಗಿ ಮುಸುರೆ ಬಳಿದು ತಿಕ್ಕತೊಡಗಿದ್ದಳು. ಒಂದು ಬಟ್ಟಲಿನಲ್ಲಿ ಖೀರು ಹಾಗೆಯೇ ತುಂಬಿತ್ತು. ಅದರಲ್ಲಿ ಕಾಣುವ ಗೋಡಂಬಿ ದ್ರಾಕ್ಷಿ, ಕರಿದ ಏಲಕ್ಕಿ ಕಾಳುಗಳು ಇವಳ ಬಾಯಲ್ಲಿ ನೀರು ತರಿಸಿದವು.

ಬಟ್ಟಲನ್ನು ಒಂದು ಕಡೆ ತೆಗೆದಿಟ್ಟು ಇದನ್ನು ಮುಗಿಸಿ ತಿಂದರಾಯಿತೆಂದು ಬೇಗ ಬೇಗ ಗುಡ್ಡೆ ಬಿದ್ದ ಭಾಂಡಿಗಳನ್ನು ತಿಕ್ಕಿ ತೊಳೆಯುತೊಡಗಿದಳು.

ಬೆಳ್ಳಗೆ ಮೈತುಂಬ ಕೂದಲಿರುವ ಪುಟ್ಟ ಪ್ರಾಣಿಯೊಂದು ಹತ್ತಿರ ಬಂದು ಇವಳ ಲಂಗವನ್ನು ಮೂಸಿನೋಡತೊಡಗಿದಾಗ ಇವಳು ಗಾಬರಿಯಾಗಿ ಎದ್ದು ದೂರ ಸರಿದಳು. ಅದು ಇವಳನ್ನೇ ದುಂಡಗಿನ ಸಣ್ಣ ಕಣ್ಣುಗಳಿಂದ ಪಿಳಿ ಪಿಳಿ ನೋಡತೊಡಗಿದಾಗ ಇವಳಿಗೆ ಮಜಾ ಎನಿಸಿತು. ಇದೆಂಥಾ ಪ್ರಾಣಿ? ಬೆಕ್ಕೋ? ಮೊಲವೋ? ನಾಯಿಯೋ? ಏನೂ ತಿಳಿಯದೆ ಬಗ್ಗಿ ಮೆಲ್ಲಗೆ ಎತ್ತಿಕೊಳ್ಳಲು ಹೋದಳು. ಇವಳ ಕೈ ತಗಲುತ್ತಲೇ ಅದು ವಯ್... ವಯ್... ಎಂದು ಬೊಗಳತೊಡಗಿದಾಗ ಓ ಇದು ನಾಯಿಮರಿ ಎಂದುಕೊಂಡವಳು ನಗತೊಡಗಿದಳು. ಅದನ್ನು ಲೊಚ ಲೊಚ ಕರೆಯುತ್ತ ತೆಗೆದಿಟ್ಟ ಖೀರಿನ ಬಟ್ಟಲನ್ನು ಮುಂದಿಟ್ಟಳು.

ಅದು ನಾಲಿಗೆ ಚಾಚಿ ಪಚ ಪಚ ತಿನ್ನತೊಡಗಿದಾಗ ಒಳಗಿನಿಂದ ಬಂದ ಸಾಹೇಬನ ಹೆಂಡತಿಯ ತಂಗಿ ನೋಡಿಬಿಟ್ಟಳು. ಸರ್ವನಾಶವಾಗುತ್ತಿದೆಯೇನೋ ಎಂಬ ಕಲ್ಪನೆಯಲ್ಲಿ ಚೀರುತ್ತ ಬಂದಳು. "ಯಾರೇ ನೀನು ಹಾಳಾದವಳು? ನನ್ನ ಯುವರಾಜನಿಗೆ ಮುಸುರೆ ತಿನ್ನಿಸುತ್ತೀಯಲ್ಲಾ?" ಎಂದು ಹಿಂದೆ ಮುಂದೆ ವಿಚಾರಿಸದೆ ಬರಲಿನಿಂದ ಹುಡುಗಿಯ ಮೈತುಂಬ ಬಾರಿಸಿಬಿಟ್ಟಿದ್ದಳು.

ಅಪರೂಪದ ತಳಿಯೊಂದನ್ನು ಪರದೇಶದಲ್ಲಿರುವ ಅಳಿಯ ಇನ್ನೂ ಮದುವೆಯಾಗದ ತನ್ನ ಪ್ರಿಯತಮೆಗೆ ಕಾಣಿಕೆಯೆಂದು ನಾಯಿ ಮರಿಯೊಂದನ್ನು ತಂದುಕೊಟ್ಟಿದ್ದ. ಅಪರೂಪದ ತಳಿಗೆ ಅಪರೂಪದ ಹೆಸರೇ ಇಡೋಣ ಎಂದು ನಾಯಿಮರಿಗೆ 'ಯುವರಾಜ' ಎಂದು ಕರೆದಿದ್ದರು. ಅಂಥ ರಾಜವಂಶದ ಯುವರಾಜನಿಗೆ ಇವಳು ಮುಸುರೆ ತಿನ್ನಿಸುವುದೆಂದರೇನು? ಅವರ ದೃಷ್ಟಿಯಲ್ಲಿ ಮನುಷ್ಯರು ಗುಲಾಮರಾದರೆ ನಾಯಿಗಳು ದೊರೆಗಳಾಗಿದ್ದವು. ಎಲ್ಲ ಪಾತ್ರೆಗಳನ್ನೂ ತಿಕ್ಕಿ ತೊಳೆದು ಊಟವನ್ನು ಮಾಡದೆ ಆಕೆ ಮನೆಗೆ ಹೋಗದೆ ಸೀದಾ ನಿರಂಜನನಲ್ಲಿಗೆ ಬಂದಿದ್ದಳು.

ನರಳುತ್ತ ಮಂಚದ ಮೇಲೆ ಮಲಗಿದಳು. ಮೆಲ್ಲಗೆ ತನ್ನ ಕತೆ ಹೇಳಿದಾಗ ನಿರಂಜನ ಮೂಕನಾಗಿದ್ದ. ಜೊತೆಗೆ ಅಸಹಾಯಕನೂ ಆಗಿದ್ದ

ಅಂದು ಆಫೀಸಿನಲ್ಲಿ ಸಿಟಿಗೆ ಟ್ರಾನ್ಸ್‌ಫರ್ ಆದ ಆರ್ಡರ್ ಸಿಕ್ಕಾಗ ಇನ್ನು ಮೇಲಾದರೂ ಈ ಬರಡು ಊರಿನಿಂದ ಮುಕ್ತಿ ಸಿಕ್ಕೀತೆಂದು ಅವನು ಸಂತಸಗೊಂಡ. ಆದರೆ ತಾನು ಬೆಳೆಸಿದ ಕರಿಬೇವಿನ ಸಸಿ ಸಕ್ಕೂ ನೆನಪಾದಾಗ ಅವನ ಮನಸ್ಸು ಭಾರವಾಯಿತು. ಶುಷ್ಕವಾದ ಈ ಹಳ್ಳಿಯ ಬದುಕಿನಲ್ಲಿ ನಾಲ್ಕು ದಿನ ತಾನು ಭಾವನೆಗಳಿಗೆ ಒಳಗಾಗಿ ದಿನಗಳನ್ನು ರಂಜನೆಗೊಳಿಸಿದ ಆ ಎರಡು ಜೀವಗಳನ್ನು ಬಿಟ್ಟು ಹೋಗಬೇಕಲ್ಲ ಎಂದು ಮರುಗಿದ.

ಇನ್ನು ಆ ಸಸಿಯನ್ನು ಏನು ಮಾಡುವುದು? ಸಕ್ಕೂಗೆ ಬಳುವಳಿ ಕೊಡಲು ಅದೇನು ಹೊತ್ತುಕೊಂಡು ಹೋಗಬಲ್ಲ ವಸ್ತುವೇ? ಮಾಲೀಕರಿಗೆ ಹೇಳಿಬಿಡಬೇಕು, "ನಾನೇ ಬೆಳೆಸಿದ ಈ ಗಿಡದಲ್ಲಿ ಸಕ್ಕೂಗೂ ಹಕ್ಕಿದೆ. ಅವಳು ಯಾವಾಗ ಬೇಕಾದರೂ ಬಂದು ಎಲೆಗಳನ್ನು ತೆಗೆದುಕೊಂಡು ಹೋಗಲಿ," ಎಂದು.

ಸಕ್ಕು ಎಂಥ ಮುಗ್ಧ ಹುಡುಗಿ. ನಾನೇನೂ ಆಕೆಗೆ ಸಹಾಯ ಮಾಡಲಿಲ್ಲವಲ್ಲ ಎಂದುಕೊಂಡವನು ಕೆಲವಷ್ಟು ಸಿಹಿ ಹಣ್ಣುಗಳನ್ನು ಕೊಂಡು ಜೊತೆಗೆ ಪಾಕೀಟಿನಲ್ಲಿ ನೂರರ ನೋಟೊಂದನ್ನು ಇಟ್ಟು ಅವಳ ಮನೆಯತ್ತ ಹೆಜ್ಜೆ ಹಾಕಿದ.

ಮನೆಯೊಂದು ಕರೆಯುವ ಮುರುಕಲು ಜಾಗೆಯ ಬಾಗಿಲು ಮುಚ್ಚಿತ್ತು. ಇವನು ಮೆಲ್ಲಗೆ ದೂಡಿ ಒಳಗೆ ಹೋದಾಗ ಸಕ್ಕೂ ನರಳುತ್ತ ಹಾಸಿಗೆಯಲ್ಲಿ ಮಲಗಿದ್ದಳು. ಇವನನ್ನು ಕಾಣುತ್ತಲೇ "ಬರ್ರಿ ದಾದಾ" ಎಂದು ಮುಖದಲ್ಲಿ ಒತ್ತಾಯದ ನಗೆ ತರಿಸಿಕೊಂಡಳು. ಎದ್ದು ಕುಳಿತು ಹತ್ತಿರ ಕುಳಿತವನು ಹಣೆ ಮುಟ್ಟಿ ನೋಡಿದ. ಹಣೆ ಸುಡುತ್ತಿತ್ತು. "ನಿನ್ನೆ ರಾತ್ರಿಯಿಂದ ಜ್ವರ ಬಂದಿದೆ. ನಮ್ಮ ದಾದಾ ಮುಂಜಾನೆ ಸರಕಾರಿ ದವಾಖಾನೆಗೆ ಕರಕೊಂಡು ಹೋಗಿದ್ದ" ಎಂದು ನರಳುತ್ತಲೇ ಮಾತಾಡಿದಳು. ಇವನು ಹೇಳುವದೋ ಬೇಡವೊ ಎಂದುಕೊಳ್ಳುತ್ತ ಕೊನೆಗೆ "ನನಗೂ ಟ್ರಾನ್ಸ್‌ಫರ್ ಆಗಿದೆ. ಸಕ್ಕೂ. ನಾಳೆಯೇ ಶಹರಕ್ಕೆ ಹೋಗಬೇಕು!" ಎಂದು ಹೇಳಿದಾಗ ಅವಳೂ ಅಷ್ಟೇ ಖುಷಿಯಿಂದ "ಒಳ್ಳೆಯದಾಯ್ತು. ದಾದಾ, ನಿಮಗೂ ಈ ಹಳ್ಳಿಯಲ್ಲಿ ಬೇಸರವಾಗಿತ್ತೇನೋ" ಎಂದಳು. "ನಾನು ಮನೆಯ ಮಾಲಿಕನಿಗೆ ಹೇಳ್ತೀನಿ, ನಿನಗೆ ಬೇಕಾದಾಗ ಕರಿಬೇವಿನ ಎಲೆ ತಗೊಂಡು ಬಾ. ಅದು ನಿನ್ನದೇ ಅಂತ ತಿಳಿದುಕೊ" ಎಂದು ಹೇಳಿದಾಗ ಅವಳು ಮರೆತವಳಂತೆ,

"ದಾದಾ ಇನ್ನೊಂದು ವಿಷಯ. ನಮ್ಮ ದಾದಾ ನಿನ್ನ ಶಹರಕ್ಕೆ ಕರಕೊಂಡು ಹೋಗ್ತಾನಂತೆ, ಈ ಊರು ನಮಗೆ ಬೇಸರವಾಗಿದೆ. ಸ್ವಲ್ಪ ತಪ್ಪು ಮಾಡಿದರೂ ಹೊಡೀತಾರೆ. ಅಲ್ಲಿ ಶಹರದಲ್ಲಿ ಹಾಗಲ್ಲವಲ್ಲ. ಹೆಚ್ಚು ಪಗಾರನೂ ಕೊಡ್ತಾರಂತೆ" ಎಂದು ಅವಳು ಖುಷಿಯಲ್ಲಿಯೇ ಹೇಳಿದಾಗ ಅವನಿಗೆ ಏನು ಹೇಳಬೇಕೊ ತಿಳಿಯಲಿಲ್ಲ. ಎಲ್ಲವೂ ಬರಿದು ಬರಿದೆನಿಸಿತು. ಹಣ್ಣು ತಿಂಡಿಯೊಂದಿಗೆ ಪಾಕೀಟನ್ನು ಅವಳ ಕೈಯಲ್ಲಿಟ್ಟಾಗ ಅವಳ ಮುಖ ಹಿಗ್ಗಿನಿಂದ ತುಳುಕಿತು. ಸೌಜನ್ಯಕ್ಕಾಗಿಯೇ ಬೇಡ ಎನ್ನುವ ನಾಗರಿಕತೆ ಅರಿಯದ ಮುಗ್ಧ ಹುಡುಗಿ ಖುಷಿಯಿಂದ ತಿಂಡಿ ಬಿಚ್ಚಿದಳು.

"ದಾದಾ, ಇವತ್ತು ನೀವು ಆಫೀಸಿಗೆ ಹೋದಾಗಿನಿಂದ ನಿಮ್ಮ ರೂಮಿನ ಕಡೆ ಹೋಗಿಲ್ಲ. ಹೊರಗೆ ಹೋದರೆ ಥಂಡಿ ಹತ್ತಿ ಜ್ವರ ನಡಗುತ್ತದೆ ನೀವು ಬೇಗ ಹೋಗಿ ಕರಿಬೇವಿನ ಗಿಡ ನೋಡಿ" ಎಂದಾಗ ಭಾರವಾದ ಮನಸ್ಸಿನಿಂದ ಮೇಲೆದ್ದು ರೂಮಿಗೆ ಬರುತ್ತಲೇ ಕಂಡ ದೃಶ್ಯ ಅವನನ್ನು ಮತ್ತಷ್ಟು ಗಾಬರಿಗೊಳಿಸಿತು. ದನವೊಂದು ಕಂಪೌಂಡಿನಲ್ಲಿ ನುಗ್ಗಿ ತಿನ್ನಲಾರದೆ ಕರಿಬೇವಿನ ಗಿಡವನ್ನು ನುಗ್ಗು ಮಾಡಿತ್ತು. ಎಲೆ ಟೊಂಗೆಗಳನ್ನೆಲ್ಲ ಕಳೆದುಕೊಂಡು ಮುರಿದು ನಿಂತಿರುವ ಬೊಡ್ಡೆ ಬೋಳಾಗಿ ಕಾಣುತ್ತಿತ್ತು.

ಕೃಪೆ : ಆಕಾಶವಾಣಿ, ಧಾರವಾಡ

ಡಾ. ಕೃಷ್ಣ ಯು. ಕೆ.

ಮಧುಮೇಹಕ್ಕೆ ಆಯುರ್ವೇದ ಚಿಕಿತ್ಸೆ

ಮಧುಮೇಹವನ್ನು ಜನಸಾಮಾನ್ಯರು ಸಿಹಿಮೂತ್ರದ ಕಾಯಿಲೆ ಎಂದು ಕರೆಯುತ್ತಾರೆ. ಕೆಲವರು 'ಡಯಾಬಿಟಿಸ್' ಎಂಬ ಹೆಸರನ್ನೂ ಉಪಯೋಗಿಸುತ್ತಾರೆ. ಆಯುರ್ವೇದದಲ್ಲಿ ಮಧುಮೇಹ ಎಂದು ಹೇಳಿರುವ ರೋಗ ಪಾಶ್ಚಾತ್ಯ ವೈದ್ಯಕೀಯ ವಿಜ್ಞಾನದ diabetes mellitus ಎನ್ನುವ ವ್ಯಾಧಿಯನ್ನು ಬಹುವಾಗಿ ಹೋಲುತ್ತದೆ. ಈ ರೋಗಕ್ಕೆ ತುತ್ತಾದ ಜನರು ಜಗತ್ತಿನ ಎಲ್ಲಾ ಮೂಲೆಗಳಲ್ಲೂ ಇದ್ದಾರೆ. ನಮ್ಮ ದೇಶದಲ್ಲಿ ಶೇಕಡಾ ಹತ್ತಕ್ಕಿಂತಲೂ ಹೆಚ್ಚು ಜನ ಈ ರೋಗದಿಂದ ಬಳಲುತ್ತಿದ್ದಾರೆ. ಸಾಮಾನ್ಯವಾಗಿ ಮಧ್ಯ ವಯಸ್ಸಿನ ವ್ಯಕ್ತಿಗಳಲ್ಲಿ ಕಂಡುಬರುವ ಈ ರೋಗ ಜನರಿಗೆ ಬಹಳ ದೊಡ್ಡ ಸಮಸ್ಯೆಯನ್ನು ತಂದೊಡ್ಡುತ್ತದೆ. ಅದೇನೆಂದರೆ ಮಧುಮೇಹ ಪೀಡಿತರು ಆಹಾರ ಸೇವಿಸುವಾಗ ತುಂಬಾ ಜಾಗ್ರತೆಯಿಂದಿರಬೇಕಾಗುತ್ತದೆ. ಸಿಹಿ ವಸ್ತುಗಳನ್ನು ಸಿಕ್ಕಾಪಟ್ಟೆ ತಿನ್ನುವಂತಿಲ್ಲ. ನಾಲಗೆಯ ಮೇಲೆ ನಿಯಂತ್ರಣ ಸಾಧಿಸದೆ ಬೇರೆ ದಾರಿಯಿಲ್ಲ. ಇವನ್ನು ನಾವೆಲ್ಲಾ ವ್ಯವಹಾರದಲ್ಲಿ ನೋಡುತ್ತೇವೆ. ಆದರೆ ಮಧುಮೇಹ ಒಬ್ಬರಿಂದ ಒಬ್ಬರಿಗೆ ದೈಹಿಕ ಸಂಪರ್ಕದಿಂದ ಹರಡುವ ಅಂಟು ರೋಗವೇನೂ ಅಲ್ಲ.

ಆಯುರ್ವೇದ ಶಾಸ್ತ್ರಕ್ಕನುಸಾರವಾಗಿ ಈ ರೋಗದ ಕಾರಣ ಲಕ್ಷಣಗಳನ್ನು ವಿಚಾರಿಸೋಣ: ಮೂತ್ರ ಪ್ರವೃತ್ತಿಯಲ್ಲಿ ವ್ಯತ್ಯಾಸವು ಉಂಟಾಗಿ ಅದರ ಸ್ವರೂಪ ಮತ್ತು ಘಟಕಗಳಲ್ಲಿ ಬದಲಾವಣೆ ತೋರಿಬರುವ ಇಪ್ಪತ್ತು ವಿಧದ ಮೂತ್ರದೋಷಗಳನ್ನು ಆಯುರ್ವೇದದಲ್ಲಿ ಪ್ರಮೇಹ ಎಂದು ಹೆಸರಿಸಲಾಗಿದೆ. ಈ ಇಪ್ಪತ್ತು ವಿಧದ ಪ್ರಮೇಹಗಳಲ್ಲಿ ಕೊನೆಯದು ಮತ್ತು ಗಂಭೀರವಾದುದು ಮಧುಮೇಹ. ಮಧು ಅಂದರೆ ಜೇನು. ಸಿಹಿಯಾದ ಮೂತ್ರವನ್ನು ಪ್ರವರ್ತಿಸುವುದರಿಂದಲೇ ಮಧುಮೇಹ

ಎಂಬ ಹೆಸರು ಕೊಡಲಾಗಿದೆ. ವಂಶಪಾರಂಪರ್ಯವಾಗಿ ಬರುವ ರೋಗಗಳಲ್ಲಿ ಮತ್ತು ಪುನಃ ಪುನಃ ತೊಂದರೆ ಕೊಡುವವುಗಳಲ್ಲಿ ಮಧುಮೇಹವು ಮುಖ್ಯವಾದುದು. ಮೂರು ಸಾವಿರ ವರ್ಷಗಳ ಹಿಂದೆಯೂ ಈ ರೋಗ ಜನರನ್ನು ಪೀಡಿಸುತ್ತಿತ್ತು. ಆಯುರ್ವೇದದ ಅತ್ಯಂತ ಪುರಾತನ ಚಿಕಿತ್ಸಾ ಗ್ರಂಥವಾದ ಚರಕ ಸಂಹಿತೆಯಲ್ಲಿ ಈ ರೋಗದ ಸವಿಸ್ತಾರ ಉಲ್ಲೇಖವಿದೆ.

ಹೆಚ್ಚು ಜಿಡ್ಡುಳ್ಳ ಪದಾರ್ಥಗಳು, ಹೊಸ ಧಾನ್ಯಗಳು, ಸಿಹಿ ತಿಂಡಿ ತಿನಿಸುಗಳು, ಮಾಂಸರಸ, ಹೊಸತಾಗಿ ತಯಾರಿಸಿದ ಮದ್ಯ ಇವುಗಳನ್ನು ಅತಿಯಾಗಿ ಸೇವಿಸಿದರೆ ಮಧುಮೇಹ ಉಂಟಾಗಬಹುದು. ಇಂತಹ ಆಹಾರಗಳನ್ನು ಸೇವಿಸುವುದರ ಜೊತೆಗೆ ವ್ಯಾಯಾಮ ಮಾಡದಿರುವುದು, ದೈಹಿಕ ಪರಿಶ್ರಮಗಳಿಂದ ದೂರವಿರುವುದು, ಸುಖವಾದ ಆಸನ ಮತ್ತು ಹಾಸಿಗೆಗಳಲ್ಲಿ ಅತಿಯಾಗಿ ವಿಶ್ರಾಂತಿ ಪಡೆಯುವುದು ಮಧುಮೇಹದ ಉತ್ಪತ್ತಿಗೆ ಕಾರಣವಾಗುತ್ತದೆ.

ವಾತ, ಪಿತ್ತ, ಕಫಗಳೆಂಬ ಮೂರು ದೋಷಗಳು ನಮ್ಮ ಶರೀರದಲ್ಲಿದ್ದು ಇವು ಸಮನಾಗಿದ್ದಾಗ ಆರೋಗ್ಯವೂ ವಿಷಮವಾದಾಗ ರೋಗವೂ ಉಂಟಾಗುತ್ತದೆ ಎಂಬುದು ಆಯುರ್ವೇದದ ಮೂಲ ಸಿದ್ಧಾಂತವಾಗಿದೆ. ರೋಗಗಳು ಉಂಟಾಗುವಾಗ ಒಂದು, ಎರಡು ಅಥವಾ ಮೂರೂ ದೋಷಗಳು ವಿಷಮವಾಗಬಹುದು. ಮಧುಮೇಹವನ್ನುಂಟುಮಾಡುವಂಥ ಅವಸ್ಥೆಯಲ್ಲಿ ದೀರ್ಘಕಾಲ ಕಳೆಯುವ ವ್ಯಕ್ತಿಯ ಶರೀರದಲ್ಲಿ ಮೂರೂ ದೋಷಗಳು ವಿಷಮಾವಸ್ಥೆಯನ್ನು ತಲುಪುತ್ತವೆ. ಬಳಿಕ ಅವುಗಳು ಶರೀರದ ಆಹಾರರಸ, ರಕ್ತ, ಮಾಂಸ, ಮೇದಸ್ಸು ಈ ಧಾತುಗಳನ್ನು ದೋಷವುಂಟುಮಾಡುತ್ತವೆ. ಶರೀರದಲ್ಲಿ ಆಹಾರ ಘಟಕಗಳ ಪರಿವರ್ತನಾ ಕ್ರಿಯೆಯು ಬಾಧಿಸಲ್ಪಡುತ್ತದೆ. ರೋಗಿಯ ರಕ್ತ ಮತ್ತು ಮೂತ್ರಗಳಲ್ಲಿ ಸಕ್ಕರೆಯ ಅಂಶ ಅಧಿಕವಾಗಿ ಕಂಡುಬರುತ್ತದೆ. ಅಲ್ಲದೆ ಅಧಿಕ ಬಾಯಾರಿಕೆ, ಬಾಯಿ ಒಣಗುವುದು, ಕೈಕಾಲುಗಳಲ್ಲಿ ಉರಿ, ಶರೀರ ದೌರ್ಬಲ್ಯ, ಆಲಸ್ಯ, ಅತಿಯಾದ ಮೂತ್ರ ಪ್ರವೃತ್ತಿ ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಹಿಂದಿನ ಆಯುರ್ವೇದ ಆರೋಗ್ಯ ತಜ್ಞರು ಲಕ್ಷಣಗಳಿಂದಲೇ ಮಧುಮೇಹವನ್ನು ಗೊತ್ತುಹಿಡಿಯುತ್ತಿದ್ದರು. ಮೂತ್ರದಲ್ಲಿನ ಸಿಹಿಯನ್ನು ಕಂಡುಹಿಡಿಯಲು ಇನ್ನೊಂದು ವಿಶಿಷ್ಟ ವಿಧಾನವೂ ಬಳಕೆಯಲ್ಲಿತ್ತು. ಮಧುಮೇಹ ರೋಗಿಯು ಮೂತ್ರಿಸಿದ ಸ್ಥಳದಲ್ಲಿ ಇರುವೆಗಳು ಮುತ್ತುವುದನ್ನು ಅವಲೋಕಿಸಿ ಆತನ ಮೂತ್ರವು ಸಿಹಿಯಾಗಿದೆ ಎಂದು ನಿರ್ಧರಿಸಲಾಗುತ್ತಿತ್ತು. ಇಂದು ಈ ವಿಧಾನ ನಮಗೆ ವಿಚಿತ್ರವಾಗಿ ಕಂಡುಬರುತ್ತದೆ ಮತ್ತು ಅನುಸರಿಸಲು ಅಸಾಧ್ಯವೂ ಆಗಿದೆ. ಆದರೆ ೩೦೦೦ ವರ್ಷಗಳ ಹಿಂದೆ ಯಾವುದೇ ಪ್ರಯೋಗಶಾಲೆಯ ಪರೀಕ್ಷೆಗಳಿಲ್ಲದ ಸಮಯದಲ್ಲಿ ನಿಸರ್ಗದೊಡನೆಯೇ ಬೆರೆತು ಜೀವಿಸುತ್ತಿದ್ದ ಮಾನವನ ದಿನಚರಿಯಲ್ಲಿ ಈ ವಿಷಯವನ್ನು ಗೊತ್ತು ಹಚ್ಚುತ್ತಿದ್ದ ಆರೋಗ್ಯ ತಜ್ಞರ ಅವಲೋಕನಾಶಕ್ತಿಯನ್ನು ನಾವು ಮೆಚ್ಚಬೇಕು. ಆದರೆ ಆಧುನಿಕ ವಿಜ್ಞಾನಿಗಳ ಸಂಶೋಧನೆಯ ಫಲವಾಗಿ ಪ್ರಯೋಗಶಾಲೆಯಲ್ಲಿಯೇ ರಕ್ತ ಮತ್ತು ಮೂತ್ರಗಳನ್ನು ಪರೀಕ್ಷಿಸಿ ಸಕ್ಕರೆಯ ಪ್ರಮಾಣ ಗೊತ್ತುಹಿಡಿಯುವ ಸೌಲಭ್ಯ ಈಗ ನಮಗಿದೆ. ಇಂದಿನ ಆಯುರ್ವೇದೀಯರೂ ಪ್ರಯೋಗಶಾಲಾ ಪರೀಕ್ಷೆಗಳಿಂದಲೇ ಮಧುಮೇಹವನ್ನು ನಿಶ್ಚಯಪಡಿಸಿಕೊಳ್ಳುತ್ತಾರೆ.


ರೋಗಿ ಮಧುಮೇಹದ ಲಕ್ಷಣಗಳಿಂದಲೇ ತೊಂದರೆಗೆ ಒಳಗಾಗಿ ವೈದ್ಯರ ಬಳಿಗೆ ಬರುವ ಸಂದರ್ಭಗಳು ಕೆಲವಾದರೆ, ಇನ್ನು ಕೆಲವೊಮ್ಮೆ ಈ ಕಾಯಿಲೆಯ ಉಪದ್ರವಗಳಿಂದ ಪೀಡಿತನಾಗಿ ಆತ ಚಿಕಿತ್ಸಕನ ಮೊರೆಹೋಗುತ್ತಾನೆ. ದೃಷ್ಟಿಮಾಂದ್ಯ, ಮಾಯದಿರುವ ಹುಣ್ಣುಗಳು—ಇವನ್ನು ಆಯುರ್ವೇದದಲ್ಲಿ ಪ್ರಮೇಹ ಪಿಡಕಗಳೆನ್ನುತ್ತಾರೆ. ಕೈಕಾಲುಗಳಲ್ಲಿ ಜಗಿತ ಮತ್ತು ಆಯಾಸ, ಸ್ಪರ್ಶಜ್ಞಾನದಲ್ಲಿ ವ್ಯತ್ಯಾಸವಾಗುವುದು, ತಲೆ ತಿರುಗುವುದು, ಮೂರ್ಛೆ ಹೋಗುವುದು ಈ ಉಪದ್ರವಗಳು ಮಧುಮೇಹದಿಂದ ಉಂಟಾಗಬಹುದು. ಆಕಸ್ಮಿಕವಾಗಿ ವೈದ್ಯಕೀಯ ತಪಾಸಣೆಗೊಳಗಾಗುವಾಗ ಮಧುಮೇಹಿಗಳೆಂದು ಪತ್ತೆ

ಪಟ್ಟಿಲ್ಪಡುವ ರೋಗಿಗಳೂ ಇದ್ದಾರೆ.

ಆಯುರ್ವೇದವು ಸ್ವತಂತ್ರ ಮತ್ತು ಪರತಂತ್ರ ಮಧುಮೇಹಗಳೆಂದು ಎರಡು ಪ್ರಬೇಧಗಳನ್ನು ಸೂಚಿಸಿದೆ. ಸ್ವತಂತ್ರ ಮಧುಮೇಹವು ಅಹಿತವಾದ ಆಹಾರ ವಿಹಾರಗಳನ್ನು ಸೇವಿಸುವುದರಿಂದ ದೋಷಗಳು ಪ್ರಕೋಪಗೊಂಡು ಧಾತ್ವಗ್ನಿಯ ಶಕ್ತಿಯು ಮಂದವಾಗಿ ಉಂಟಾಗುತ್ತದೆ. ಧಾತ್ವಗ್ನಿ ಅಂದರೆ ನಮ್ಮ ಶರೀರದಲ್ಲಿ ಸದಾಕಾಲ ಪರಿವರ್ತನಶೀಲ ಘಟಕಗಳನ್ನು ಪರಿವರ್ತಿಸುವ ಅಥವಾ ಪಚಿಸುವ ಶಕ್ತಿ. ಇನ್ನೊಂದು ಕಾಯಿಲೆಯ ರೂಪದಲ್ಲಿ ಈ ಶಕ್ತಿಯು ಬಾಧಿತವಾಗಿ ಪರತಂತ್ರ ಮಧುಮೇಹವು ಉಂಟಾಗುತ್ತದೆ. ಅಂದರೆ ಮಧುಮೇಹವು ಬೇರೊಂದು ಕಾಹಿಲೆಯ ಉಪದ್ರವ ರೂಪದಲ್ಲಿಯೂ ಕಂಡುಬರಬಹುದು. ಕೆಲವು ನಿರ್ದಿಷ್ಟ ರೀತಿಯ ರಾಸಾಯನಿಕ ಔಷಧಗಳನ್ನು ಸೇವಿಸುವವರಲ್ಲಿ ಮಧುಮೇಹವು ಉಂಟಾಗಬಹುದೆಂದು ಆಧುನಿಕ ವಿಜ್ಞಾನಿಗಳು ಹೇಳುತ್ತಾರೆ. ಇದನ್ನು ಪರತಂತ್ರ ಮಧುಮೇಹವೆಂದೇ ಪರಿಗಣಿಸಬಹುದು.

ಈಗ ಆಯುರ್ವೇದ ದೃಷ್ಟಿಕೋಣದಿಂದ ಚಿಕಿತ್ಸೆಯನ್ನು ವಿಮರ್ಶಿಸೋಣ: ದೋಷಪ್ರತ್ಯನೀಕ ಮತ್ತು ವ್ಯಾಧಿಪ್ರತ್ಯನೀಕ ಎಂಬ ಎರಡು ವಿಧವಾದ ಚಿಕಿತ್ಸೆಯನ್ನು ಆಯುರ್ವೇದದಲ್ಲಿ ಉಪಯೋಗಿಸಲಾಗುತ್ತದೆ. ದೋಷಪ್ರತ್ಯನೀಕವೆಂದರೆ ರೋಗವನ್ನುಂಟುಮಾಡಲು ಯಾವ ದೋಷ ವಿಷಮಗೊಂಡಿದೆಯೋ ಅದಕ್ಕೆ ಚಿಕಿತ್ಸೆ ಮಾಡುವುದು. ಮೂರು ದೋಷಗಳೇ ಶರೀರದಲ್ಲಿ ಎಲ್ಲಾ ರೋಗಗಳನ್ನುಂಟು ಮಾಡುತ್ತವೆಯಾದರೂ ಅವು ಶರೀರದ ಬೇರೆ ಬೇರೆ ಧಾತುಗಳನ್ನು ಆಶ್ರಯಿಸಿ ಬೇರೆ ಬೇರೆ ವಿಧಾನಗಳಿಂದ ಶರೀರದಲ್ಲಿ ಮಾರ್ಪಾಟುಗಳನ್ನುಂಟು ಮಾಡಿ ಕೊನೆಗೆ ರೋಗವನ್ನು ಪ್ರಕಟಿಸುತ್ತವೆ. ದೋಷಪ್ರತ್ಯನೀಕ ಚಿಕಿತ್ಸೆ ಮಾಡುವಾಗ ಯಾವ ವಿಧವಾಗಿ ಶರೀರದಲ್ಲಿ ಮಾರ್ಪಾಟುಗಳಾಗಿವೆಯೋ ಅವನ್ನು ಹಾಗೆಯೇ ಹಿಮ್ಮುಖವಾಗಿ ಪರಿವರ್ತಿಸುತ್ತಾ, ಸಂಬಂಧಪಟ್ಟ ಧಾತುಗಳನ್ನು ಸರಿಪಡಿಸಿ ವಿಷಮವಾದ ದೋಷಗಳನ್ನು ಸಮಗೊಳಿಸಲಾಗುತ್ತದೆ. ಇಲ್ಲಿ ಕ್ರಿಯಾಕ್ರಮಕ್ಕೆ ಅಂದರೆ Line of treatment ಗೆ ಹೆಚ್ಚು ಮಹತ್ವ; ಕೇವಲ ಔಷಧಕ್ಕಲ್ಲ. ಶರೀರದೊಳಕ್ಕೆ ಹಿಮ್ಮುಖಿಗೊಳಿಸಲಸಾಧ್ಯವಾದಂತಹ ಮಾರ್ಪಾಟುಗಳಾಗಿದ್ದರೆ ಅಥವಾ ಹಿಮ್ಮುಖಿಗೊಳಿಸುವ ಕ್ರಿಯೆ ತಪ್ಪಾದಾಗ ಆಯುರ್ವೇದ ಚಿಕಿತ್ಸೆ ಅಸಫಲವಾಗುತ್ತದೆ.

ವ್ಯಾಧಿಪ್ರತ್ಯನೀಕ ಚಿಕಿತ್ಸೆಯಲ್ಲಿ ನಿರ್ದಿಷ್ಟ ರೋಗವನ್ನು ಹೋಗಲಾಡಿಸುವ ಶಕ್ತಿಯುಳ್ಳ ನಿರ್ದಿಷ್ಟ ಔಷಧವನ್ನು ಕೊಡಲಾಗುತ್ತದೆ. ಸತತ ನಿರೀಕ್ಷಣೆ, ಪರೀಕ್ಷೆಗಳ ಮೂಲಕ ಪ್ರಾಚೀನ ಆಯುರ್ವೇದ ಮಹರ್ಷಿಗಳು, ವೈದ್ಯರು, ಪ್ರತಿ ವ್ಯಾಧಿಯಲ್ಲೂ ಉಪಯುಕ್ತವಾಗಬಹುದಾದ



"ಮುತ್ತೊಂದು ವಿದ್ಯಾರ್ಥಿಗಳ ಗುಂಪು ತಮ್ಮನ್ನು ಕಾಣಲು ಬರುತ್ತಿದೆ ಸಾರ್..."

ಗಿಡ ಮೂಲಿಕೆಗಳನ್ನು ಹೆಸರಿಸಿದ್ದಾರೆ. ಇವುಗಳನ್ನೇ ವ್ಯಾಧಿಪ್ರತ್ಯನೀಕ ಚಿಕಿತ್ಸೆಗೆ ಉಪಯೋಗಿಸಲಾಗುತ್ತದೆ. ಇಲ್ಲಿ ಔಷಧ ದ್ರವ್ಯಕ್ಕೆ ಮಹತ್ವವಿದೆ. ಚಿಕಿತ್ಸೆಯ ಈ ಎರಡು ಮುಖ್ಯ ದೃಷ್ಟಿಕೋನಗಳನ್ನು ತಿಳಿದುಕೊಂಡು ಆ ಬಳಿಕ ರೋಗಿಯ ಶರೀರ ಪ್ರಕೃತಿ, ಮನಃಸ್ಥಿತಿ, ಆತನಿಗೆ ರೋಗ ಹಿಡಿದ ಭೌಗೋಲಿಕ ಪ್ರದೇಶ, ರೋಗದ ಅವಧಿ, ರೋಗದ ಅವಸ್ಥೆ, ಆತನ ದಿನಚರಿ, ಆಹಾರ ಪದ್ಧತಿ ಇವನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಬೇಕು. ಈ ಅಂಶಗಳಿಂದಾಗಿ ರೋಗವು ಒಂದೇ ಆಗಿದ್ದರೂ ಚಿಕಿತ್ಸೆ ಬೇರೆಯಾಗಬಹುದು.

ಮಧುಮೇಹ ಪೀಡಿತರಲ್ಲಿ ದಪ್ಪಗಾಗಿದ್ದು ಅಂದರೆ ಸ್ಥೂಲರಾಗಿದ್ದು ಬಲಿಷ್ಠರಾಗಿರುವವರಿಗೆ ಸಂಶೋಧನ ಚಿಕಿತ್ಸೆ ಮೊದಲು ಕೊಡಬೇಕು. ಆ ಬಳಿಕ ಅವರಿಗೆ ಮಧುಮೇಹವನ್ನು ಶಮನಗೊಳಿಸುವ ಚಿಕಿತ್ಸೆ ನೀಡಬೇಕು. ಮೊದಲೇ ಕೃಶರಾಗಿದ್ದು ಬಲಹೀನರಾಗಿರುವ ರೋಗಿಗಳಲ್ಲಿ ಶರೀರದ ಬಲವನ್ನು ಕಾಪಾಡುತ್ತಾ ಔಷಧ ಪ್ರಯೋಗ ನಡೆಸಬೇಕು. ಸ್ವತಂತ್ರ ಮಧುಮೇಹವನ್ನು ಈ ರೀತಿ ಚಿಕಿತ್ಸಿಸಿದರೆ ಪರತಂತ್ರ ಮಧುಮೇಹದಲ್ಲಾಗುವಾಗ ಮೂಲಕಾರಣಕ್ಕೆ ಮೊದಲು ಚಿಕಿತ್ಸೆ ನೀಡಿ ಬಳಿಕ ಮಧುಮೇಹವನ್ನು ನಿಯಂತ್ರಿಸಬೇಕು. ರಕ್ತವಹ ಸ್ರೋತಸ್ಸಿನ ಮೂಲಗಳಾದ ಪ್ಲೀಹ ಮತ್ತು ಯಕೃತ್ತುಗಳು ಅಧಿಕವಾಗಿ ಕೆಟ್ಟು ಹೋಗಿ ಮಧುಮೇಹ ಉಂಟಾಗಿದ್ದರೆ ಅದು ಕಷ್ಟಸಾಧ್ಯ ಅಥವಾ ಅಸಾಧ್ಯ ರೋಗವೆನಿಸುವುದು.

ಆಯುರ್ವೇದದಲ್ಲಿ ಉಪಯೋಗಿಸಲ್ಪಡುವ ಔಷಧಗಳನ್ನು ನೋಡೋಣ: ಸಸ್ಯೌಷಧಗಳು ಮತ್ತು ಖನಿಜ ಲವಣಗಳು ಮಧುಮೇಹ ಚಿಕಿತ್ಸೆಯಲ್ಲಿ ಉಪಯೋಗಿಸಲ್ಪಡುತ್ತವೆ. ಶಿಲಾಜಿತು ಎಂಬ ಖನಿಜದ್ರವ್ಯವು ಮಧುಮೇಹದಲ್ಲಿ ಉಪಯೋಗಿಸಲ್ಪಡುವ ಮುಖ್ಯ ಔಷಧಗಳಲ್ಲಿ ಒಂದು. ಇದರ ವೈಶಿಷ್ಟ್ಯವೆಂದರೆ ಮಧುಮೇಹದಲ್ಲಿ ಇದು ದೋಷಪ್ರತ್ಯನೀಕ ಮತ್ತು ವ್ಯಾಧಿಪ್ರತ್ಯನೀಕ ದೃಷ್ಟಿಗಳೆರಡರಿಂದಲೂ ಕಾರ್ಯ ಮಾಡುತ್ತದೆ. ಕುತೂಹಲಕರ ವಿಷಯವೆಂದರೆ ಪ್ರಯೋಗಶಾಲೆಯಲ್ಲಿ ಶಿಲಾಜಿತುವನ್ನು ವಿಶ್ಲೇಷಿಸಿದಾಗ ಇದರಲ್ಲಿ hypoglycemic ಕಾರ್ಯವೆಸಗುವ ಅಂದರೆ ರಕ್ತದ ಸಕ್ಕರೆಯ ಅಂಶವನ್ನು ನೇರವಾಗಿ ಕಡಿಮೆಗೊಳಿಸುವ ಸಕ್ರಿಯ ತತ್ವ ಯಾವುದೂ ಕಂಡುಬಂದಿಲ್ಲ. ಆದರೂ ಮಧುಮೇಹವನ್ನು ಗುಣ ಪಡಿಸುವಲ್ಲಿ ಇದು ಉಪಯುಕ್ತವಾಗಿರುವುದನ್ನು ಪ್ರತ್ಯಕ್ಷ ಪ್ರಯೋಗಗಳಿಂದ ನೋಡಬಹುದು. ಇದು ಏನನ್ನು ಸೂಚಿಸುತ್ತದೆಯೆಂದರೆ ಆಯುರ್ವೇದ ಔಷಧಗಳನ್ನು ಪ್ರಯೋಗ ಶಾಲಾ ಮಾಪದಂಡಗಳಿಂದಲೇ ಅಳೆದು ಅವುಗಳ ಗುಣ ಮಟ್ಟ ನಿರ್ಧರಿಸುವುದು ಎಲ್ಲಾ ಕಡೆಗಳಲ್ಲಿ ಸಾಧ್ಯವಾಗುವುದಿಲ್ಲ. ಅಂದ ಮಾತ್ರಕ್ಕೆ ರೋಗಿಗಳಲ್ಲಿ ಅಂತಹ ಔಷಧಗಳ ಪ್ರಯೋಜನವನ್ನು ಅಲ್ಲಗಳೆಯುವಂತೆಯೂ ಇಲ್ಲ. ಬಹುಶಃ ಮಾನವ ಶರೀರದ ಬಗ್ಗೆ ನಾವು ತಿಳಿಯಬೇಕಾದ ಅಂಶಗಳು ಇನ್ನೂ ಹಲವಾರು ಇವೆ. ಶಿಲಾಜಿತುವಿನ ಕಾರ್ಯವನ್ನು ಆಧುನಿಕ ವಿಜ್ಞಾನದ ತತ್ವಗಳಿಗೆ ಅನುಸಾರವಾಗಿ ವಿವರಿಸುವುದು ಈ ವರೆಗೆ ಸಾಧ್ಯವಾಗಿಲ್ಲ. ಶುದ್ಧಗೊಳಿಸಿದ ಶಿಲಾಜಿತುವನ್ನು ನೇರವಾಗಿ ಉಪಯೋಗಿಸಬಹುದು. ಅಥವಾ ಶಿಲಾಜಿತು ಅಧಿಕವಾಗಿ ಉಳ್ಳ ಸಂಯುಕ್ತ ಔಷಧಗಳನ್ನು ಪ್ರಯೋಗಿಸಬಹುದು. ಚಂದ್ರಪ್ರಭಾವಟಿಯು ಶಿಲಾಜಿತು ಪ್ರಧಾನವಾಗಿರುವ ಒಂದು ಉಪಯುಕ್ತ ಸಂಯುಕ್ತ ಔಷಧವಾಗಿದೆ.

ಅಭ್ರಕ, ವಂಗ, ಜಸದ, ಸುವರ್ಣ ಮಾಕ್ಷಿಕ ಇವು ಮಧುಮೇಹದಲ್ಲಿ ಉಪಯುಕ್ತವಾಗಿರುವ ಇತರ ಖನಿಜ ದ್ರವ್ಯಗಳು. ವಸಂತ ಕುಸುಮಾಕರ ರಸವೆಂಬ ಸಂಯುಕ್ತ ಔಷಧವನ್ನು ದೇಶದಾದ್ಯಂತ ಮಧುಮೇಹ ಚಿಕಿತ್ಸೆಯಲ್ಲಿ ಆಯುರ್ವೇದೀಯರು ಉಪಯೋಗಿಸುತ್ತಾರೆ. ನೂರಾರು ಸಸ್ಯೌಷಧಗಳನ್ನು ಆಯುರ್ವೇದ ಗ್ರಂಥಗಳಲ್ಲಿ ಕಾಣಬಹುದಾದರೂ ಹರಿದ್ರಾ, ತ್ರಿಫಲಾ, ದಾರುಹರಿದ್ರಾ, ದೇವದಾರು, ಮುಸ್ತಾ, ಸಪ್ತರಂಗ ಇವು ಹೆಚ್ಚು ಬಳಕೆಯಲ್ಲಿವೆ. ವಸ್ತುತಃ ಆಯುರ್ವೇದದಲ್ಲಿ ಔಷಧಗಳ ಕೊರತೆಯಿಲ್ಲ. ಯಾವ ರೋಗಿಗೆ ಯಾವಾಗ ಎಂತಹ ಔಷಧವು

ಹೇಗೆ ಕೊಡಬೇಕೆಂದು ನಿಶ್ಚಯಿಸುವ ಸಮರ್ಥ ಯೋಜಕನ ಕೊರತೆಯುಷ್ಟೇ ಇರುವುದು.

ಹಲವಾರು ವರ್ಷಗಳ ಸತತ ನಿರೀಕ್ಷಣೆಯ ಬಳಿಕ ಉಡುಪಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾದ ಡಾ. ಆರ್. ಆರ್. ಭಟ್ ಇವರು ಮಧುಮೇಹವನ್ನು ಚಿಕಿತ್ಸಿಸಲು 'ಅಸನಾದಿ ಕಷಾಯ' ಎಂಬ ಔಷಧವನ್ನು ಸಂಶೋಧಿಸಿ ಕಂಡು ಹಿಡಿದಿರುತ್ತಾರೆ. ಅಸನ, ಖದಿ, ಸಪ್ತರಂಗ ಹರಿದ್ರಾ, ಸಾರಿವಾ, ಪುನರ್ನವಾಗಳು ಮುಖ್ಯವಾಗಿರುವ ಆಸನಾದಿ ಕಷಾಯ ೮೦% ರಷ್ಟು ರೋಗಿಗಳಲ್ಲಿ, ಉಪಶಮನ ನೀಡುವುದನ್ನು ಪ್ರಯೋಗಗಳು ಸಿದ್ಧಪಡಿಸಿವೆ. ರೋಗಿಗೆ ಮಧುಮೇಹದ ಜೊತೆ ಬೇರೆ ತೊಂದರೆಗಳಿದ್ದಾಗ ಅಸನಾದಿ ಕಷಾಯದ ಜೊತೆಗೆ ಬೇರೆ ಔಷಧಗಳನ್ನು ಸಂಶೋಧಿಸಿ ಕೊಟ್ಟರೂ ಫಲಿತಾಂಶವು ಉತ್ತಮವಾಗಿಯೆ ದೊರಕಿದೆ. ಚಿಕಿತ್ಸೆಯ ಅವಧಿ ರೋಗಿಯ ವ್ಯಕ್ತಿತ್ವ ರೋಗದ ಅವಸ್ಥೆಗಳಿಗನು-ಸರಿಸಿ ೩ ತಿಂಗಳು, ೬ ತಿಂಗಳು ಅಥವಾ ಒಂದು ವರ್ಷ ಕಾಲ ನಡೆಸಲ್ಪಡಬೇಕಾದುದೂ ಇದೆ.

ಮಧುಮೇಹಪೀಡಿತರು, ಮುಖ್ಯವಾಗಿ ತಮ್ಮ ಕಾಯಾಗ್ನಿಯನ್ನು ಅಂದರೆ ಪಚನ ಶಕ್ತಿಯನ್ನು ರಕ್ಷಿಸಬೇಕು. ಹೆಸರು, ಗೋಧಿ, ಬಾರ್ಲಿ, ಸಾಸಿವೆ ಎಣ್ಣೆ, ನುಗ್ಗೆಗಳನ್ನು ಆಹಾರದಲ್ಲಿ ಉಪಯೋಗಿಸುವುದು ಹಿತಕರವಾಗಿರುತ್ತದೆ. ಅತಿಯಾದ ಜಿಡ್ಡಿನ ಪದಾರ್ಥಗಳು, ಬೆಲ್ಲ, ಕಬ್ಬಿನ ಹಾಲು, ಸಕ್ಕರೆಗಳನ್ನು ಹೊಸ ಧಾನ್ಯಗಳನ್ನು ವರ್ಜಿಸಬೇಕು. ಚೆನ್ನಾಗಿ ವ್ಯಾಯಾಮ ಮಾಡುವುದೂ ಮಧುಮೇಹಕ್ಕೆ ಚಿಕಿತ್ಸೆಯಾಗಿ ಹೇಳಲ್ಪ-ಟ್ಟಿದೆ. ಅನಿವಾರ್ಯವಾಗಿರುವಷ್ಟೇ ವಿಶ್ರಾಂತಿಯನ್ನು ಪಡೆಯಬೇಕಲ್ಲದೆ ಅತಿಯಾಗಿ ವಿರಾಮ ಪಡೆಯುವುದು ಒಳ್ಳೆಯದಲ್ಲವೆಂದು ಆಯುರ್ವೇದ ಹೇಳುತ್ತದೆ.

ಕಲ್ಕತ್ತಾದ ವೈದ್ಯಕೀಯ ಸಂಶೋಧನಾ ವರದಿ ತಿಳಿಸುವಂತೆ ಶೇಕಡಾ ೬೦ ಮಧುಮೇಹ ರೋಗಿಗಳಲ್ಲಿ ಇನ್ಸುಲಿನ್ ಸಾಕಷ್ಟು ಪ್ರಮಾಣದಲ್ಲಿ ಸ್ರಾವವಾಗುತ್ತಿದ್ದರೂ, ಇನ್ಸುಲಿನ್ನಿನ ಕಾರ್ಯವನ್ನು ತಡೆಗಟ್ಟುವ ಯಾವುದೋ ದ್ರವ್ಯದಿಂದಾಗಿ ರಕ್ತದಲ್ಲಿ ಸಕ್ಕರೆಯ ಅಂಶ ಏರುತ್ತದೆ ಎನ್ನಲಾಗಿದೆ. ಇಂತಹ ರೋಗಗಳಲ್ಲಿ ಆಯುರ್ವೇದ ಚಿಕಿತ್ಸೆ ಉತ್ತಮ ಲಾಭವನ್ನು ನೀಡಬಹುದು. ಇಲ್ಲಿ ಇನ್ಸುಲಿನ್ ಪ್ರಯೋಗ ಸರಿಯಾದ ಪ್ರಯೋಜನ ನೀಡಬಹುದು. ಯಾವ ರೋಗಿಯಲ್ಲಿ ಇನ್ಸುಲಿನ್ ಸ್ರಾವವೇ ಸಂಪೂರ್ಣ ನಿಂತು ಹೋಗಿದೆಯೋ ಅಂಥವರಿಗೆ ಆಯುರ್ವೇದದ ಚಿಕಿತ್ಸೆಯಿಂದ ಏನೂ ಲಾಭ ದೊರೆಯದು.

ಸಕ್ಕರೆಯ ಅಂಶವನ್ನು ಕಡಿಮೆಗೊಳಿಸುವ ರಾಸಾಯನಿಕ ದ್ರವ್ಯಗಳನ್ನು ಉಪಯೋಗಿಸಿದಾಗ ಬರಬಹುದಾದ ತೊಂದರೆಗಳು ಆಯುರ್ವೇದ ಚಿಕಿತ್ಸೆಯಲ್ಲಿ ಉಂಟಾಗುವುದಿಲ್ಲ. ಕಾಲ ಸರಿದಂತೆ hypoglycemic ಔಷಧಗಳ ಪ್ರಮಾಣವನ್ನು ಏರಿಸಬೇಕಾದ ಪ್ರಸಂಗಗಳೂ ಆಯುರ್ವೇದ ಚಿಕಿತ್ಸೆ ನಡೆಸುವಾಗ ತಲೆದೋರುವುದಿಲ್ಲ. ಮಧುಮೇಹವು ಸಾಮಾನ್ಯವಾಗಿ ಪ್ರಾಣಾಪಾಯವನ್ನು ತಂದೊಡ್ಡುವುದಿಲ್ಲ. ಸರಿಯಾದ ಔಷಧ, ಆಹಾರ ನಿಯಂತ್ರಣಗಳು ಮಾತ್ರ ಯೋಗ್ಯ ರೀತಿಯಲ್ಲಿ ನಡೆಯುತ್ತಿರಬೇಕು. ಆರಂಭದಲ್ಲಿಯೇ ವೈದ್ಯಕೀಯ ಸಲಹೆ ಪಡೆದು ಕ್ರಮಬದ್ಧ ಚಿಕಿತ್ಸೆಗೆ ಒಳಗಾಗುವ ವ್ಯಕ್ತಿ ಔಷಧಗಳಿಲ್ಲದೆಯೂ ದೀರ್ಘ ಕಾಲ ಬದುಕುವುದು ಸಾಧ್ಯವಿದೆ.

[ಈ ಲೇಖನಕ್ಕೆ ಪೂರಕ ಸಾಹಿತ್ಯ ಹತ್ತು ವರ್ಷಗಳ ಹಿಂದೆ 'ಕಸ್ತೂರಿ'ಯಲ್ಲಿ ಬಂದುದನ್ನು ಓದುಗರು ದಯವಿಟ್ಟು ಗಮನಿಸಬೇಕು. ಶ್ರೀ ಎಚ್. ಎಂ. ಮಲ್ಲಿಕಾರ್ಜುನಯ್ಯನವರ 'ನಾನು ಮಧುಮೇಹದಿಂದ ಮುಕ್ತನಾದೆ' ಮಾರ್ಚ್ ೧೯೭೪ (ಪುಟ ೩೭-೪೦), ಡಾ. ವಿ. ಜಿ. ಸಿದ್ಧನೂರರವರ 'ಆಯುರ್ವೇದೌಷಧಿ ಮತ್ತು ಮಧುಮೇಹ' ಜೂನ್ ೧೯೭೪ (ಪುಟ ೫೬-೫೮), ಹಾಗು ಸಂಪಾದಕರೇ ಬರೆದ 'ಮಧುಮೇಹ ಮತ್ತು ಆಯುರ್ವೇದ' ನವೆಂಬರ್ ೧೯೭೪ (ಪುಟ ೧೧-೧೫) ಈ ಮೂರೂ ಲೇಖನಗಳನ್ನು - ವಿಶೇಷತಃ ಕೊನೆಯದನ್ನು ನೋಡಿದರೆ ಒಂದು ತೂಕದ ನಿರ್ಣಯಕ್ಕೆ ಬರಲು ಸಾಧ್ಯವಾದೀತು. -ಸಂ.]

ಭೋಪಾಳ ದುರಂತ

ಶ್ರೀಕಾಂತ

ಕಳೆದ ಡಿಸೆಂಬರ್ ೨. ಸ್ಥಳ ಮಧ್ಯಪ್ರದೇಶದ ರಾಜಧಾನಿಯಾದ ಭೋಪಾಳ. ವೇಳೆ ರಾತ್ರಿ ೧-೩೦. ಹಿಂದುಸ್ತಾನ ಸಮಾಚಾರದ ವರದಿಗಾರನ ಮನೆಯಲ್ಲಿ ಟೆಲಿಫೋನು ಒಂದೇ ಸಮನೆ ಹೊಡೆದುಕೊಳ್ಳುತ್ತಿತ್ತು. "ಸರಿ ರಾತ್ರಿಯಲ್ಲಿ ಇದಾವುದಪ್ಪಾ ಗ್ರಹಚಾರ." ಎಂದುಕೊಳ್ಳುತ್ತಾ ಆತ ಟೆಲಿಫೋನು ತೆಗೆದುಕೊಂಡ. ಅಷ್ಟರಲ್ಲೇ ಅವನ ಮಗಳು ಭೋಪಾಳದ ಯೂನಿಯನ್ ಕಾರ್ಬೈಡ್ ಕಂಪನಿಯಲ್ಲಿ ಸಂಗ್ರಹಿಸಿಟ್ಟ ವಿಷಾನಿಲ ಹತೋಟಿ ಮೀರಿ ಹೊರಬರುತ್ತಿದೆ ಎಂಬ ಹಾಗೂ ಅದರಿಂದ ಪಾರಾಗಲು ಜನ ಸಿಕ್ಕಾಪಟ್ಟೆಯಾಗಿ ಓಡತೊಡಗಿದ್ದಾರೆಂಬ ಕೆಟ್ಟ ಸುದ್ದಿಯನ್ನು ತಂದಳು. ಸುದ್ದಿಯನ್ನು ಖಚಿತಪಡಿಸಿಕೊಳ್ಳಬೇಕೆಂದು ಆ ವರದಿಗಾರ ಪೋಲೀಸು ಖಾತೆಗೆ ಫೋನು ಮಾಡಿದಾಗ ಪೋಲೀಸ್ ಸೂಪರಿಂಟೆಂಡೆಂಟನೇ ಫೋನನ್ನು ತೆಗೆದುಕೊಂಡು, "ಈಗ ಯಾವ ಪ್ರಶ್ನೆಗಳನ್ನು ಕೇಳಬೇಡಿ. ಹೆಂಡತಿ-ಮಕ್ಕಳನ್ನು ಕರೆದುಕೊಂಡು ಉಟ್ಟ ಬಟ್ಟೆಯಲ್ಲಿಯೇ ಆದಷ್ಟು ಬೇಗ ದೂರ ಎಲ್ಲಿಯಾದರೂ ಓಡಿಹೋಗಿ. ಎಷ್ಟೂ ತಡಮಾಡಬೇಡಿ. ಹೂಂ ಹೊರಡಿ ಮತ್ತೆ," ಎಂದು ಅವಸರಿಸಿ ಟೆಲಿಫೋನನ್ನು ಕೆಳಗಿಟ್ಟ.

ಆತ ಹಾಗೆ ಮಾಡುವಷ್ಟರಲ್ಲೇ ಹೊರಗೆ ಕೆಟ್ಟ ವಾಸನೆ ಹಬ್ಬಿತ್ತು. ಉರಿಯುತ್ತಿರುವ ಬೆಂಕಿಯಲ್ಲಿ ಒಣ ಮೆಣಸಿನಕಾಯಿಯನ್ನು ಹಾಕಿದ ಹಾಗೆ ಆಗಿತ್ತು. ಜನರು ಸೀನುತ್ತಾ ಓಡುತ್ತಿದ್ದರು. ಎಲ್ಲರ ಕಣ್ಣುಗಳೂ ಭಗಭಗ ಉರಿಯುತ್ತಿದ್ದವು. ನಿಶ್ಶಕ್ತಿ ಕ್ರಮೇಣವಾಗಿ ಹೆಚ್ಚುತ್ತಿತ್ತು.

ಮುಂದೆ ಒಂದೇ ಒಂದು ಗಂಟೆಯಲ್ಲಿ ನಗರದ ತುಂಬಾ ಕೋಲಾಹಲ ಆವರಿಸಿತು. ಇದ್ದುಳ್ಳವರು ಸ್ವಂತ ವಾಹನದಲ್ಲಿ ಓಡಿಹೋದರೆ ಉಳಿದವರು ಕೇಳಿದಷ್ಟು ಹಣಕೊಟ್ಟು ಟ್ಯಾಕ್ಸಿಯಲ್ಲೋ ರಿಕ್ಷಾದಲ್ಲೋ ಓಡಿಹೋದರು. ಹಣ ಕೊಡುವಷ್ಟು ತ್ರಾಣವಿಲ್ಲದವರು ಬರಿಗಾಲಿನಿಂದಲೇ ಓಡತೊಡಗಿದರು. ಬರಿಗಾಲಿನಿಂದ ಓಡುವಷ್ಟೂ ಸಾಮರ್ಥ್ಯವಿಲ್ಲದವರು ಮನೆಯಲ್ಲೇ ಬಿದ್ದು ಸಾವಕಾಶವಾಗಿ ಸಾವಿಗೆ ಸೆರೆಯಾದರು.

ಪ್ರಾಣಭಯ ಯಾರಿಗೂ ತಪ್ಪಿದ್ದಲ್ಲವೆನ್ನುವುದಕ್ಕೆ ಸಾಕ್ಷಿಯಾಗಿಯೋ ಎನ್ನುವಂತೆ ನಗರವನ್ನು ರಕ್ಷಿಸುವ ಹಾಗೂ ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಬೇಕಾದ ಅಧಿಕಾರಗಳೇ ಎಲ್ಲರಿಗಿಂತ ಮೊದಲು ಓಡಿಹೋದರು. ಯೂನಿಯನ್ ಕಾರ್ಬೈಡಿನಿಂದ ವಿಷಾನಿಲ ಸೋರುತ್ತಿದೆಯೆಂದು ವಾರ್ತೆ ಬಂದಕೂಡಲೇ ರಾಜ್ಯ ಸರಕಾರವು ಮುಖ್ಯಮಂತ್ರಿಗಳಿಗಾಗಿ ಒದಗಿಸಿದ ವಿಶೇಷ ವಿಮಾನದಿಂದ ಮುಖ್ಯಮಂತ್ರಿಗಳು ಸುರಕ್ಷಿತ ಸ್ಥಳಕ್ಕೆ ಓಡಿಹೋದರೆನ್ನುವ ಮಾತು ಆಗ ಭೋಪಾಳದಲ್ಲೆಲ್ಲಾ ಇತ್ತು. ಆದರೆ ತಾವು ಹಾಗೆ ಮಾಡಲಿಲ್ಲವೆಂದು ಮುಖ್ಯಮಂತ್ರಿಗಳಾದ ಅರ್ಜುನಸಿಂಗ್ ಮುಂದೊಮ್ಮೆ ಹೇಳಿದರು. ಅವರು ಹಾಗೇ ಮಾಡಿದರೋ ಇಲ್ಲವೋ ಎಂಬ ಮಾತು ಬೇರೆ. ಆದರೆ ಅವರ ಮಂತ್ರಿಮಂಡಳದ ಸದಸ್ಯರು ಹಾಗೆ ಮಾಡಿದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಮಧ್ಯರಾತ್ರಿಯಾದ ಸ್ವಲ್ಪ ಹೊತ್ತಿನಲ್ಲೇ ಸ್ಟೋರೇಜ್ ಟ್ಯಾಂಕಿನಿಂದ ವಿಷಾನಿಲ ಸೋರ

ಲಾರಂಭಿಸಿತ್ತು. ಈ ವಿಷಯ ಯೂನಿಯನ್ ಕಾರ್ಬೈಡಿನವರಿಗೆ ಕೂಡಲೇ ಗೊತ್ತಾಗಿ ಅವರು ಕಾರ್ಯಪ್ರವೃತ್ತರಾದರೂ ವಿಷಾನಿಲ ಸೋರುವುದನ್ನು ತಪ್ಪಿಸಲು ಸಾಧ್ಯವಾದದ್ದು ಒಂದೂವರೆ ಗಂಟೆಯ ಹೊತ್ತಿಗೆನೇ. ಆದರೆ ಆಗಲೇ ಘಟಿಸಬಹುದಾದ ಪ್ರಮಾದ ಘಟಿಸಿಹೋಗಿತ್ತು. ಮೂರು ಸಾವಿರದಷ್ಟು ಜನರು ಆಗಲೇ ಗತಪ್ರಾಣರಾಗಿದ್ದರು. ಇದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರಗಳು ಸತ್ತುಬಿದ್ದಿದ್ದವು.

ವಿಷಾನಿಲದಿಂದ ಗ್ರಸ್ತರಾದವರು ಭೋಪಾಳದ ನಾಲ್ಕು ಮುಖ್ಯ ಸರಕಾರಿ ಆಸ್ಪತ್ರೆಗಳಿಗೆ ಧಾವಿಸಿ ಬರಲಾರಂಭಿಸಿದರು. ಇಂಥ ಪ್ರಕರಣ ಇಷ್ಟು ದೊಡ್ಡ ಪ್ರಮಾಣದಲ್ಲಿ ಸಂಭವಿಸಿದ್ದು ಇದೇ ಮೊದಲ ಸಲವಾಗಿದ್ದರಿಂದಲೂ ಮೆಥಿಲ್ ಐಸೋಸಿಯಾನೇಟ್ (ಎಂಐಸಿ)ನಿಂದ ತೊಂದರೆಗೀಡಾದವರನ್ನು ಉಪಚರಿಸುವುದು ಪ್ರಥಮ ಬಾರಿಯಾಗಿದ್ದರಿಂದಲೂ ಆಸ್ಪತ್ರೆಯ ವೈದ್ಯರು ಗಲಿಬಿಲಿಗೀಡಾದರು. ಅನಂತರ ಸುಧಾರಿಸಿಕೊಂಡು. ವೈದ್ಯಕೀಯದಲ್ಲಿ ಇದಕ್ಕೆ ಯಾವ ಚಿಕಿತ್ಸೆಯಿಲ್ಲದ್ದರಿಂದ ವ್ಯಾಧಿಯ ಲಕ್ಷಣಗಳಿಗೆ ತಕ್ಕುದಾದ ಚಿಕಿತ್ಸೆಯನ್ನು ನೀಡಲು ಪ್ರಾರಂಭಿಸಿದರು.

ಈ ವಿಷಾನಿಲದಿಂದಾಗುವ ದುಷ್ಪರಿಣಾಮಗಳಿಗೆ ತಕ್ಕುದಾದ ಚಿಕಿತ್ಸೆಯಿಲ್ಲದ್ದರಿಂದ ಗರ್ಭಿಣಿಯರು ಶಿಶುಗಳನ್ನು ಕಳೆದುಕೊಂಡರು. ಸಾವಿರಾರು ಜನರು ಕಣ್ಣುಗಳನ್ನೇ ಕಳೆದುಕೊಂಡರು. ಇನ್ನು ಅನೇಕ ಸಾವಿರ ಜನರು ದೃಷ್ಟಿದೋಷಕ್ಕೆ ಒಳಗಾದರು. ಸಾವು ಯಾವಾಗ, ಹೇಗೆ ಬರುವುದೆಂಬುದನ್ನು ಹೇಳುವುದೇ ಕಠಿಣವಾಗಿತ್ತು: ವಿಷಾನಿಲದಿಂದ ತೊಂದರೆಗೀಡಾದವಳೊಬ್ಬಳನ್ನು ಹಮೀದಿಯಾ ಆಸ್ಪತ್ರೆಯ ವೈದ್ಯರು ಪರೀಕ್ಷಿಸುತ್ತಿದ್ದರು. ಯಾವುದೇ ಕಷ್ಟವಿಲ್ಲದೆ ಸುಲಲಿತವಾಗಿ ಮಾತನಾಡುತ್ತಿದ್ದ ಆಕೆ ಒಮ್ಮಿಂದೊಮ್ಮೆಲೆ ಮಾತು ನಿಲ್ಲಿಸಿದಾಗ ಅವಳನ್ನು ಪರೀಕ್ಷಿಸುತ್ತಿದ್ದ ವೈದ್ಯರು ಸರಕ್ಕನೆ ತಲೆಯೆತ್ತಿ ಆಕೆಯ ಕಡೆಗೆ ನೋಡಿದರು. ಆದರೆ ಆ ವೇಳೆಗಾಗಲೇ ಅವಳ ಪ್ರಾಣಪಕ್ಷಿ ಹಾರಿಹೋಗಿತ್ತು. ಭೋಪಾಳದ ರೇಲ್ವೆ ಸ್ಟೇಶನ್ನು ಬಿಕೋ ಎನ್ನುತ್ತಿತ್ತು. ವಿಷಾನಿಲ ಹಬ್ಬಿದ ಅಲ್ಪಕಾಲದಲ್ಲೇ ಅಲ್ಲಿನ ಬಹುತೇಕ ರೇಲ್ವೆ ಸಿಬ್ಬಂದಿ ಸ್ಥಳದಲ್ಲಿಯೇ ಮರಣವನ್ನಪ್ಪಿತ್ತು.

ತ್ರಸ್ತರಾದವರ ಸಹಾಯಕ್ಕಾಗಿ ಮರುದಿನವೇ ಸ್ವಯಂಸೇವಕ ಸಂಸ್ಥೆಗಳು ಭೋಪಾಳದತ್ತ ಧಾವಿಸಿ ಬರತೊಡಗಿದವು. ಮುಂಬಯಿ–ದಿಲ್ಲಿಯಂತಹ ದೂರದ ಸ್ಥಳಗಳಿಂದಲೂ ವೈದ್ಯರು ಸ್ವಯಂಪ್ರೇರಣೆಯಿಂದ ಭೋಪಾಳಕ್ಕೆ ಬರಲಾರಂಭಿಸಿದರು. ಸ್ವಯಂಸೇವಕ ಸಂಸ್ಥೆಗಳು ಆಸ್ಪತ್ರೆಯ ಸುತ್ತಮುತ್ತಲೂ ಡೇರೆಗಳನ್ನು ನಿರ್ಮಿಸುವಲ್ಲಿ ಹಾಗೂ ಸತ್ತವರ ಶವಸಂಸ್ಕಾರದಲ್ಲಿ ನಿರತವಾದವು. ಒಂದೊಂದಾಗಿ ಶವಗಳನ್ನು ಸುಡುವುದಾಗಲಿ ಹುಗಿಯುವುದಾಗಲಿ ಅಶಕ್ಯವಾದ್ದರಿಂದ ಟ್ರಕ್ಕುಗಟ್ಟಳೆ ಹೆಣಗಳನ್ನು ನಗರದ ಹೊರಭಾಗಕ್ಕೆ ಸಾಗಿಸಿ ಹೆಣಗಳಿಗೆ ಸಾಮೂಹಿಕವಾಗಿ ಅಂತ್ಯಸಂಸ್ಕಾರ ನೀಡಲಾಯಿತು.

ಹೊರ ದೇಶಗಳ ವೈದ್ಯರಿಗೆ ಈ ದುರಂತದ ಸುದ್ದಿ ಗೊತ್ತಾದ ಕೂಡಲೆ ಅವರೂ ಭೋಪಾಳಕ್ಕೆ ಬಂದು ವಿಷಾನಿಲದಿಂದ ತೊಂದರೆಗೊಳಗಾದವರಿಗೆ ಚಿಕಿತ್ಸೆ ನೀಡಲಾರಂಭಿಸಿದರು. ಆದರೆ ವಾಸ್ತವವಾಗಿ ಅವರಲ್ಲನೇಕರು ವೈದ್ಯರಾಗಿರದೆ ವೈದ್ಯರ ಮುಖವಾಡ ಧರಿಸಿದ ಜೈವಿಕ ಅಸ್ತ್ರಗಳ ಸಮರತಜ್ಞರಾಗಿದ್ದರು. ಪಶ್ಚಿಮದ ಅನೇಕ ಸರಕಾರಗಳು ಯುದ್ಧ ಪ್ರಸಂಗದಲ್ಲಿ ಉಪಯೋಗಕ್ಕೆ ಬರಲೆಂದು ಈ ವಿಷಾನಿಲವನ್ನು ಸಂಗ್ರಹಿಸಿಟ್ಟುಕೊಂಡಿವೆ. ಇದನ್ನು ಪ್ರಯೋಗಪಶುಗಳಿಗೆ ಕೊಟ್ಟು ಅದರ ಪರಿಣಾಮ ದೇಹದ ಯಾವ ಯಾವ ಭಾಗಗಳ ಮೇಲೆ ಎಷ್ಟೆಷ್ಟು ಸಮಯದಲ್ಲಿ ಆಗುತ್ತದೆನ್ನುವುದನ್ನು ಸಮರತಜ್ಞರು ಖಚಿತಪಡಿಸಿಕೊಂಡಿದ್ದರು. ಆದರೆ ಮಾನವರ ಮೇಲೆ ಇದು ಹೇಗೆ ಪ್ರಭಾವ ಬೀರುವುದೆಂಬುದನ್ನು ಗಮನಿಸುವ ಅವಕಾಶ ಇದೀಗ ಅವರಿಗೆ ದೊರಕಿತ್ತು!

ದುರಂತದ ಸುದ್ದಿ ಗೊತ್ತಾಗುತ್ತಲೇ ಯೂನಿಯನ್ ಕಾರ್ಬೈಡಿನ ಮಾತೃಸಂಸ್ಥೆಯು ಬೇರ

ಮನ್ನರಾದ ವಾರೆನ್ ಆ್ಯಂಡರ್‌ಸನ್ನರು ಅಮೇರಿಕದಿಂದ ಭೋಪಾಳಕ್ಕೆ ಧಾವಿಸಿಬಂದರು. ಕೂಡಲೆ ಅವರನ್ನೊಳಗೊಂಡಂತೆ ಕಾರಖಾನೆಯ ಐವರು ಕಾರ್ಯನಿರ್ವಾಹಕರನ್ನು ಕಾರಖಾನೆಯ ಆವಾರದಲ್ಲಿಯೆ ಬಂಧಿಸಿ 'ಕಾರಖಾನೆಯು ನಡೆಯುವ ಹಾಗೆ ನೋಡಿಕೊಳ್ಳಲು' ಹಾಗೂ ಮತ್ತೆ ಅಕಸ್ಮಾತಾಗಿ ಆಪತ್ತು ಒದಗಿದರೆ ಉಪಯೋಗವಾಗಲೆಂದು (!) ಕಾರಖಾನೆಯ ಆವರಣದಲ್ಲಿಯೆ ಇರುವ ಹಾಗೆ ನಿರ್ಬಂಧವನ್ನು ವಿಧಿಸಲಾಗಿತು, ಆ್ಯಂಡರ್‌ಸನ್ನರ ಕೈ ಕೆಳಗೆ ಕೆಲಸ ಮಾಡುವ ಅಧಿಕಾರಿಗಳೊಬ್ಬರಿಂದ ಇಪತ್ತೈದು ಸಾವಿರ ರೂಪಾಯಿಗಳ ಜಾಮೀನು ಪಡೆದು ಅವರನ್ನು ಬಿಡುಗಡೆಗೊಳಿಸಲಾಯಿತಷ್ಟೆ ಅಲ್ಲ, ದಿಲ್ಲಿಗೆ ಹೋಗಲು ವಿಶೇಷವಾದ ವಿಮಾನವನ್ನೂ ಒದಗಿಸಲಾಯಿತು.' ತಮ್ಮ ದೇಶಕ್ಕೆ ಮರಳಲು ಅವರಿಗೆ ಯಾವ ಕಷ್ಟವೂ ಆಗಲಿಲ್ಲ.

ಮಧ್ಯಪ್ರದೇಶದ ಮುಖ್ಯ ಮಂತ್ರಿಗಳು ತಮ್ಮ ಬಗೆಗೆ ಹೆಚ್ಚಿನ ಒಲವು ಇರುವ ಹಿರಿಯ ಪತ್ರಕರ್ತರ ಸಭೆಯನ್ನು ಕರೆದು ದೇಶದ ತುಂಬ ಚುನಾವಣೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಭೋಪಾಳದ ದುರಂತವನ್ನು ದೊಡ್ಡದನ್ನಾಗಿ ಮಾಡದಂತೆ ಕೇಳಿಕೊಂಡರು. ಆದರೆ ಇತ್ತ ಹಮೀದಿಯಾ ಆಸ್ಪತ್ರೆಯಲ್ಲಿ ಸಾವಿರಾರು ಹೆಣಗಳು ಬಿದ್ದಿದ್ದವು. ಸತ್ತವರ ಗುರುತು ಹಿಡಿಯಲು ಒಂದು ದೊಡ್ಡ ಸಾಲೇ ಆಸ್ಪತ್ರೆಯ ಮುಂದೆ ನಿಂತಿತ್ತು. ಎಷ್ಟೋ ಜನ ಬಡವರು ತಮ್ಮ ಮಕ್ಕಳು ಮರಿಗಳ, ಸಂಬಂಧಿಕರ ಗುರುತು ಹಿಡಿದರೆನ್ನುವುದು ಮುಖಭಾವದಿಂದ ಸ್ಪಷ್ಟವಾಗುತ್ತಿದ್ದರೂ ಹಾಗೆ ಹೇಳಲು ಹಿಂಜರಿಯುತ್ತಿದ್ದರು. ಕಾರಣ ಅಂತ್ಯ ಸಂಸ್ಕಾರವನ್ನು ಮಾಡಲೂ ಅವರ ಬಳಿ ಹಣವಿರಲಿಲ್ಲ.

ದುರಂತದ ಸುದ್ದಿಯನ್ನು ಕೇಳಿದಕೂಡಲೆ ರಾಜೀವ ಗಾಂಧಿಯವರು ಭೋಪಾಳಕ್ಕೆ ಧಾವಿಸಿ ಬಂದು ಹಮೀದಿಯಾ ಆಸ್ಪತ್ರೆಗೆ ಭೇಟ್ಟಿ ನೀಡಿ ತ್ರಸ್ತರಾದವರಿಗೆ ಸಾಂತ್ವನ ಹೇಳಿದರಲ್ಲದೆ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ನಾಲ್ವತ್ತು ಲಕ್ಷ ರೂಪಾಯಿಗಳನ್ನೂ ಕಾಂಗ್ರೆಸ್ ಪಕ್ಷದ ನಿಧಿಯಿಂದ ಐದು ಲಕ್ಷ ರೂಪಾಯಿಗಳನ್ನೂ ಸಂತ್ರಸ್ತರಿಗೆ ಹಂಚಿದರು. ಅವರ ಭೇಟಿ ಸಂತ್ರಸ್ತರಾದವರಿಗೆ ಇನ್ನೂ ಒಂದು ರೀತಿಯಿಂದ ಲಾಭದಾಯಕವಾಗಿತ್ತು: ಹಿಂದಿನ ದಿನ ಅಲಭ್ಯವಿದ್ದ ಔಷಧಿಗಳು ಮರುದಿನವೇ ಪ್ರತ್ಯಕ್ಷವಾದವು.

ಸಾರ್ವಜನಿಕ ಸ್ವರೂಪದ ಇಂತಹ ದುರಂತಗಳು ನಡೆದಾಗ ಆ ಬಗ್ಗೆ ಕೇಸು ನಡೆಸುವುದರಲ್ಲಿ ನಿಷ್ಣಾತರಾದ ಅನೇಕ ವಕೀಲರು ಇಲ್ಲಿಗೆ ಬಂದು ೧೫೦೦ ಕೋಟಿ ಡಾಲರುಗಳ ಮೊಕದ್ದಮೆಯನ್ನು ಹೂಡುವಂತೆ ಭೋಪಾಳದ ಜನರನ್ನು ಮನವೊಲಿಸುವುದರಲ್ಲಿ ಸಫಲರಾದರು. ಅವರು ಭಾರತದ ವರೆಗೆ ಬರುವುದಕ್ಕೆ ಮಾನವೀಯ ಅನುಕಂಪವೇ ಮೂಲ ಕಾರಣವಾಗಿರಬಹುದು. ಆದರೆ ಕೇಸು ಗೆದ್ದರೆ ಶೇಕಡಾ ಮೂವತ್ತರಷ್ಟು ಅಂದರೆ ೩೦೦ ಕೋಟಿ ಡಾಲರುಗಳು ಫೀ ರೂಪದಲ್ಲಿ ಅವರಿಗೆ ಸಂದಾಯವಾಗುತ್ತದೆನ್ನುವುದೂ ಅಷ್ಟೇ ಸತ್ಯ.

ಉಳಿದ ಹದಿನೈದು ಟನ್ನುಗಳಷ್ಟು ವಿಷಾನಿಲವನ್ನು ಕ್ರಿಮಿನಾಶಕವಾಗಿ ಪರಿವರ್ತಿಸಬೇಕೆಂದು ಸರಕಾರದ ಹಾಗೂ ಯೂನಿಯನ್ ಕಾರ್ಬೈಡಿನ ಉಚ್ಚ ಮಟ್ಟಗಳಲ್ಲಿ ನಿರ್ಧರಿಸಲಾಯಿತಲ್ಲದೆ ಆ ಕಾರ್ಯಕ್ರಮವನ್ನು ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರೀಸರ್ಚಿನ (ಸಿ.ಎಸ್.ಐ.ಆರ್.) ವಿಜ್ಞಾನಿಗಳೂ ಯೂನಿಯನ್ ಕಾರ್ಬೈಡಿನ ವಿಜ್ಞಾನಿಗಳೂ ಸಿ ಎಸ್ ಐ ಆರ್‌ನ ಚೇರಮನ್ನರಾದ ಡಾ. ವರದರಾಜನ್ನರ ನೇತೃತ್ವದಲ್ಲಿ ನಡೆಯಬೇಕೆಂದು ಗೊತ್ತುಪಡಿಸಲಾಯಿತು. ಆದರೆ ಭಾರತೀಯ ವಿಜ್ಞಾನಿಗಳಿಂದ ಈ ಕಾರ್ಯ ಎಷ್ಟು ಮಟ್ಟಿಗೆ ಸಾಧ್ಯವಾದೀತೆಂಬ ಸಂಶಯ ಭೋಪಾಳದ ಜನರಿಗೆ ಇದ್ದೇ ಇತ್ತು. ಆದ್ದರಿಂದ ಆ ಕಾರ್ಯಕ್ರಮ ಪ್ರಾರಂಭವಾಗುವ ಮೊದಲೆ ಮುಖ್ಯಮಂತ್ರಿಗಳು ಸುರಕ್ಷಿತತೆಯ ಬಗೆಗೆ ಸಾಕಷ್ಟು ಭರವಸೆ ನೀಡಿದರೂ ಆ ಊರಿನ ಬಹುಜನರು ದೂರದ ಊರುಗಳಿಗೆ ಗುಳೆ ಕಟ್ಟಿಕೊಂಡು ಹೋದರು. ಕಾರ್ಯಕ್ರಮ ಸುರಕ್ಷಿತವಾಗಿ ನಡೆದರೂ ಆ

ಜನರ ಸಂಶಯು ಸಂಪೂರ್ಣವಾಗಿ ಸುಳ್ಳಾಗಲಿಲ್ಲ. ಬದಲು ಅಮೇರಿಕದ ವಿಜ್ಞಾನಿಗಳ ನೇತೃತ್ವದಲ್ಲೇ ಇದು ನಡೆಯುವುದೆಂಬ ಭಾವನೆ ಬರುವಂತಾಯಿತು. ವಿಷಾನಿಲವನ್ನು ಕ್ರಿಮಿನಾಶಕವಾಗಿ ಪರಿವರ್ತಿಸುವ ಕೆಲಸ ನಡೆದಾಗಲೆ ಡಾ. ವರದ ರಾಜನ್ನರು ಮೀಟಂಗಿನಲ್ಲಿ ಭಾಗವಹಿಸುವುದಕ್ಕಾಗಿ ದಿಲ್ಲಿಗೂ ಹೈದರಾಬಾದಿಗೂ ಹೋಗಿದ್ದರು. ನಿರ್ಲಕ್ಷದಿಂದಾಗಿ ಈ ದುರಂತಕ್ಕೆ ಕಾರಣರಾದವರಿಂದಲೆ ಈ ಕೆಲಸವನ್ನು ಮಾಡಿಸಲಾಗುತ್ತದೆಯೆಂಬ ಜನಸಾಮಾನ್ಯರ ಸಂಶಯುವನ್ನು ಪತ್ರಕರ್ತರು ವರದರಾಜನ್ನರ ಮುಂದೆ ವ್ಯಕ್ತಪಡಿಸದಾಗ ಅವರು, "ಹಾಗೇನೂ ಇಲ್ಲ. ಇದೆಲ್ಲವೂ ನಮ್ಮ ಉಸ್ತುವಾರಿಯಲ್ಲೇ ನಡೆಯುತ್ತಿದೆ," ಎಂದು ಹೇಳಿದರು. ಅದು ನಿಜವಿರಬಹುದಾದರೂ ಭೋಪಾಳದ ಯೂನಿಯನ್ ಕಾರ್ಬೈಡಿನ ಹಿಂದಿನ ವರ್ಕ್ಸ್ ಮ್ಯಾನೇಜರರಾದ ಮೂಮರ್ ಎಂಬ ಅಮೇರಿಕನ್ನನ ನೇತೃತ್ವದಲ್ಲಿಯೇ ಐದು ಜನ ಅಮೇರಿಕನ್ ತಜ್ಞರ ನೆರವಿನೊಂದಿಗೆ ಈ ಕೆಲಸ ನಡೆಯಿತು.

ಇದು ಪ್ರಾರಂಭವಾಗುವುದಕ್ಕೆ ಮುಂಚೆ ಪಕ್ಕದ ಬ್ಯಾಂಕಿನಿಂದ ವಿಷಾನಿಲವನ್ನು ಸಂಗ್ರಹಿಸಿಟ್ಟ ಟ್ಯಾಂಕಿಗೆ ಸೋಡಿಯಂ ಹೈಡ್ರೋಕ್ಸೈಡ್ ಸೇರುವ ಸಂಭವ ಅಮೇರಿಕದ ತಜ್ಞರಿಗೆ ಕಂಡುಬಂತು. ಇದನ್ನು ತಡೆಯದಿದ್ದರೆ ಇನ್ನೊಂದು ಮಹಾ ದುರಂತ ಸಂಭವಿಸಬಹುದೆಂಬ ಕಾರಣದಿಂದ ಅದನ್ನು ತಡೆಯಲು ಕೆಲವು ವಿಧಾನಗಳನ್ನು ಸೂಚಿಸಿದರು. ಅದು ತನಿಖೆಗೆ ಬಂದ ಸಿಬಿಐ ಅಧಿಕಾರಿಗಳಿಗೆ ಒಪ್ಪಿಗೆಯಾಗಲಿಲ್ಲ. ಕೂಡಲೆ ಅಮೇರಿಕನ್ ತಜ್ಞರು ಡಾ. ವರದರಾಜನ್ನರನ್ನು ಸಂಪರ್ಕಿಸಿದಾಗ ಅವರು ಅವಶ್ಯಬೇಕಾದ ತಕ್ಕ ಕ್ರಮಗಳನ್ನು ಕೈಕೊಳ್ಳುವಂತೆ ಹೇಳಿದ್ದರಿಂದ ಸಂಭವಿಸಬಹುದಾದ ಇನ್ನೊಂದು ದುರಂತ ತಪ್ಪಿತು.

ಭೋಪಾಳದ ಈ ಕಾರಖಾನೆಯಲ್ಲಿ ದುರಂತ ಸಂಭವಿಸಿದ್ದು ಇದೇ ಮೊದಲ ಸಲವಲ್ಲ. ೧೯೭೮ರ ಡಿಸೆಂಬರಿನಲ್ಲೊಮ್ಮೆ ಇಲ್ಲಿ ಬೆಂಕಿ ಬಿದ್ದು ಅದನ್ನು ಸಕಾಲದಲ್ಲಿ ನಂದಿಸಲಾಯಿತು. ೧೯೮೧ರ ಡಿಸೆಂಬರ್ ೨೬ರಂದು ಫಾಸ್‌ಜಿನ್ ವಿಷಾನಿಲ ಸೋರಿದ್ದರಿಂದ ಮಹಮ್ಮದ ಅಶ್ರಾಫ್ ಎಂಬ ಕಾರ್ಮಿಕ ಜೀವ ಕಳೆದುಕೊಂಡ. ೧೯೮೨ರ ಅಕ್ಟೋಬರ್ ೫ರಂದು ವಿಷಾನಿಲವನ್ನು ಸಾಗಿಸುವ ಪೈಪ್‌ಲೈನ್ ಒಡೆದು ಐದರು ಇದ್ದಲ್ಲಿಯೆ ಸತ್ತರಲ್ಲದೆ ಸುತ್ತಮುತ್ತಲಿನ ಪ್ರದೇಶಗಳ ಜನರಿಗೆ ಉಸಿರುಗಟ್ಟಿದ ಅನುಭವವಾಯಿತು. ಇದೆಲ್ಲವನ್ನೂ ನೋಡಿದ ಬೂಚ್ ಎಂಬ ಭೋಪಾಳ ಮುನಿಸಿಪಲ್ ಕಾರ್ಪೋರೇಶನ್ನಿನ ಆಡಳಿತಾಧಿಕಾರಿ ಈ ಕಾರಖಾನೆಯನ್ನು ಬೇರೆ ಯಾವುದಾದರೂ ನಿರ್ಜನ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ಹೇಳಿದಾಗ ಅವನನ್ನೇ ಬೇರೆಡೆಗೆ ಸ್ಥಳಾಂತರಿಸಲಾಯಿತು. ಕೊನೆಗೆ ಆತ ಸರಕಾರಿ ನೌಕರಿಗೇ ಶರಣು ಹೊಡೆಯಬೇಕಾಯಿತು. ವಾಸ್ತವವಾಗಿ ಆತ ಹೇಳಿದ್ದರಲ್ಲಿ ತಪ್ಪೇನೂ ಇರಲಿಲ್ಲ. ಭೋಪಾಳವನ್ನು ಬಿಟ್ಟರೆ ಈ ವಿಷಾನಿಲವನ್ನು ಸಂಗ್ರಹಿಸುವ ಇನ್ನು ಒಂದೇ ಒಂದು ಕಾರಖಾನೆ ಅಮೇರಿಕದ ಚಾರ್ಲ್ಸ್‌ಟನ್ನಿನಲ್ಲಿದ್ದು ಅದನ್ನು ನಿರ್ಜನ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ.

ಕಾರಖಾನೆಯನ್ನು ಹೆಚ್ಚು ಸುರಕ್ಷಿತ ಸ್ಥಳಕ್ಕೆ ಸಾಗಿಸಬೇಕೆಂಬ ಪ್ರಶ್ನೆ ಹಿಂದೆ ಮಧ್ಯಪ್ರದೇಶದ ವಿಧಾನಸಭೆಯಲ್ಲಿ ಬಂದಾಗ ಕಾರ್ಮಿಕ ಮಂತ್ರಿಗಳಾಗಿದ್ದ ತಾರಾಸಿಂಗ್ ವಿಯೋಗಿಯವರು, "ಒಂದು ಕಲ್ಲನ್ನು ಎತ್ತಿ ಇನ್ನೊಂದು ಕಡೆ ಇಟ್ಟ ಹಾಗೆ ಕಾರಖಾನೆಯ ಸ್ಥಳವನ್ನು ಬದಲಿಸಲಾಗುವುದಿಲ್ಲ. ಈ ಕಾರಖಾನೆಯಿಂದ ಯಾರಿಗೂ ಏನೂ ಅಪಾಯವಿಲ್ಲ," ಎಂದು ಹೇಳಿದ್ದರು.

ಅವರು ಹಾಗೆ ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ. ಹಿಂದೆ ಲೋಕಸಭೆಯಲ್ಲಿ ಈ ಪ್ರಶ್ನೆ ಬಂದಾಗ ಕೇಂದ್ರದಲ್ಲಿ ರಾಸಾಯನಿಕ ಹಾಗೂ ಪೆಟ್ರೋಲಿಯಂ ಖಾತೆಯ ಮಂತ್ರಿಗಳಾಗಿದ್ದ ವಸಂತ ಸಾಠೆಯವರು ಆ ಕಾರಖಾನೆ ಜನವಸತಿಯಿಂದ ದೂರವಿರುವುದಾಗಿ ಹೇಳಿದ್ದರು. ಆದರೆ ಈ ಹೇಳಿಕೆಯೇ ಸತ್ಯಕ್ಕೆ ದೂರವಾದದ್ದೆಂದು ಭೋಪಾಳವನ್ನು ನೋಡಿದ ಯಾರಿಗೂ ಗೊತ್ತಾಗುತ್ತಿತ್ತು.

★ ಗಂಡಸಿ ವಿಶ್ವೇಶ್ವರ

ಆಟೋರಿಕ್ಷಾ ಮತ್ತು ಸೀನಿ

ನಗರ್ತರ ಪೇಟೆ ಫುಟ್‌ಪಾತಿನ ಮೇಲೆ ಸಾಲಾಗಿ ನಿಂತ ಇಡ್ಲಿ–ದೋಸೆ ಗಾಡಿಗಳ ಹತ್ತಿರ ಸೀನಿ ನಿಂತಿದ್ದ. ಅದೇ ಮಾಮೂಲಿ ವೇಷ. ಕುರುಚಲು ಗಡ್ಡ, ಕೆದರಿದ ತಲೆ, ಗುರು ಅಂಗಿ, ಹೆಗಲಿಗೆ ಇಳಿಬಿದ್ದ ಬುದ್ಧಿಜೀವಿ ಬ್ಯಾಗು.

ಒಂದು ಕೈಲಿ ವಡೆ ತಿನ್ತಾ, ಇನ್ನೊಂದು ಕೈಲಿ ಉರಿತಿರೋ ಸಿಗರೇಟನ್ನ ಹಿಡಿದಿದ್ದ. ಭರ್ತಿ ಲಾರೀನ ಕಾಣ್ತಿದ್ದ ಹಾಗೇ ಅಟ್ಟಿಸ್ಕೊಂಡ್ ಬರೋ ಟ್ರಾಫಿಕ್ ಪೋಲೀಸರ ಥರ ವಾಪಸ್ ಬಂದ ನನ್ನ ಕಾಣ್ತಿದ್ದ ಹಾಗೇ.

"ಏನೋಪ್ಪಾ, ನೋಡಿದ್ರೂ ನೋಡ್ದವನ ಹಾಗೆ ಹೋಗ್ತಾ ಇದ್ದೀ?" ಅಂದ.

"ಸ್ವಲ್ಪ ಅರ್ಜೆಂಟ್ ಕೆಲ್ಸ ಇತ್ತು. ರಿಕ್ಷಾಗೇಂತ ಸರ್ಕಲ್ ಕಡೆಗೆ..." ಎಂದೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದಕ್ಕೆ ಸುಳ್ಳು ಹೇಳ್ತಾ. —

"ಆಟೋ ರಿಕ್ಷಾನಾ... ಅಯ್ಯೋ ಕಪಾಂಗಿ, ಅದು ಆಟೋರಿಕ್ಷಾ ಅಲ್ಲ, ವಟರಿಕ್ಷಾ ಕಣೋ."

"ವಟರಿಕ್ಷಾ...?" ಗಾಬರಿಯಿಂದ ಕೇಳಿದೆ.

"ಸದಾ ವಟ–ವಟಾಂತ ತಿರುಗಾಡೋದ್ರಿಂದ ಅದಕ್ಕೆ ವಟರಿಕ್ಷಾಂತ ಹೆಸರು. ಇದು ಅಸಲಿ ಹೆಸರು. ವ್ಯವಹಾರ ನಾಮ ಆಟೋ," ಎಂದ.

ನಾನು ತಬ್ಬಿಬ್ಬಾಗಿ– "ಇದೆಲ್ಲ ನಿಂಗೆ ಹೇಗೆ ಗೊತ್ತು?" ಅಂದೆ.

"ಸಾರೀ, ನಾನು ವಟರಿಕ್ಷಾ ಕುರಿತು ಸಂಶೋಧನೆ ಮಾಡ್ತಾ ಇದ್ದೀನಿ. ಅದರ ಬಗ್ಗೆ ಥೀಸಿಸ್ ಬರೀತಾ ಇದ್ದೀನಿ. ಬಾ. ಆ ಮೂಲೇಲಿ ಭೇಲ್ ಪುರಿ ಚೆನ್ನಾಗಿರುತ್ತೆ. ತಿನ್ತಾ ಹೇಳ್ತೀನಿ."

ನನ್ನ ಕುತೂಹಲ ಕೆರಳಿತು. ಕುರಿಯಂತೆ ಅನುಸರಿಸಿದೆ.

"ಸಾರೀ, ಈ ರಿಕ್ಷಾ ಇದೆಯಲ್ಲ. ಅದು ಸಮಾಜವಾದಿ ವಾಹನ. ಒಳಗೆ ಇಬ್ಬರು, ಡ್ರೈವರ್ ಒಬ್ಬ ಒಟ್ಟು ಮೂರು ಜನ. ಮೂರು ಚಕ್ರಗಳು. ಒಬ್ಬೊಬ್ಬರಿಗೆ ಒಂದೊಂದು ಚಕ್ರ. ಆದರೆ ಸಮಗ್ರ ರಿಕ್ಷಾದ ಜವಾಬ್ದಾರಿ ಮುಂದಿನ ಚಕ್ರದ್ದು. ಅಮಿತಾಭನ ಷೂಟಿಂಗ್ ಇರಲಿ, ಬೆಂಗಳೂರು ಕರಗ ಇರಲಿ, ಮುಂದಿನ ಚಕ್ರ ನುಗ್ಗಿತೆಂದರೆ ಇಡೀ ರಿಕ್ಷಾನೇ ಚಾಲಕ ಗುಂಪಿನಲ್ಲಿ ನುಗ್ಗಿಸಿ ಬಿಡ್ತಾನೆ. ಕಾಳಿಂಗ ಸರ್ಪದಂತೆ ಎಡ ಬಲಕ್ಕೆ ತಿರುಗಿಸುತ್ತಾ ಯಾರೇ ಕೂಗಾಡಲಿ, 'ಹೋ' ಎನ್ನಲಿ, ಜಗ್ಗದೆ ಕುಗ್ಗದೆ, ನಿಲ್ಲಲಾರದೆ ಸಾಗುತ್ತದೆ. ಸಮಾಜವಾದಿಗಳು ಯಾರ ಕೂಗಿಗೂ ಲಕ್ಷ್ಯ ಕೊಡಬಾರದು. ಅವರ ಲಕ್ಷ್ಯವೆಲ್ಲಾ ಗುರಿ ಮುಟ್ಟುವುದು ತಾನೇ?" ಎನ್ನುತ್ತಾ, ಭೇಲ್ ಪುರಿ ಮುಗಿಸಿ, "ಆ ಟೊಮೋಟೋಗೆ ಜಾಸ್ತಿ ಮಸಾಲೆ ಹಾಕಿ ಎರಡು ಪ್ಲೇಟು ಕೊಡು," ಅಂದ.

'ಹಾ...ಹಾ...' ಎಂದೆ. ಅವನ ವಾದಕ್ಕೋ ಅಥವಾ ಹೆಚ್ಚಾದ ಖಾರಕ್ಕೋ ತಿಳಿಯಲಿಲ್ಲ.

"ನೋಡು ಮರೀ, ರಿಕ್ಷಾದಲ್ಲಿ ಪ್ರಯಾಣಿಸಬೇಕಾದರೆ ಭಾರಿ ಅನುಭವವಿರಬೇಕು," ಅಂದ.

"ರಿಕ್ಷಾದಲ್ಲಿ ಹೋಗೋಕೆ ಅದೆಂಥಾ ಅನುಭವಾನೋ?" ಎಂದೆ ಅಚ್ಚರಿಯಿಂದ.

"ನೋಡು, ಇದು ಬೆಂಗಳೂರು. ಇಲ್ಲಿನವು ಸಮಾಜವಾದಿ ರಸ್ತೆಗಳು. ಕಂಟ್ರಾಕ್ಟರು, ಕೆ.ಇ.ಬಿ., ಜಲಮಂಡಲಿ, ಟೆಲಿಫೋನ್ ಕೇಬಲ್ ಇವರಿಗೆಲ್ಲಾ ಒಂಥರ ಅನ್ಯೋನ್ಯ ಸಂಬಂಧ. ಎಲ್ಲರೂ ಕರ್ತವ್ಯನಿಷ್ಠ ಸಮಾಜವಾದಿಗಳು. ಈ ಕಡೆಯಿಂದ ಕಾಮಗಾರಿಯವರು ಟಾರು ಹಾಕ್ಕೊಂಡ್ ಹೋಗ್ತಾರೆ. ಆ ಕಡೆಯಿಂದ ಜಲಮಂಡಲಿಯವರು ಬಂದು, ಟಾರು ಅಗೆದು-ಪೈಪು ಹಾಕಿ ಅಗೆದ-ಜಾಗದಲ್ಲಿ ಮಣ್ಣು ತುಂಬಿ ಹೋಗ್ತಾರೆ. ಅವರ ಡ್ಯೂಟಿ ಫಿನಿಶ್ಡ್. ಒಂದೆರಡು ವಾರದ ಬಳಿಕ ಪುನಃ ಟಾರು ರಿಪೇರಿ. ಅದಾದ ಕೂಡಲೇ ಕೇಬಲ್‌ನವರು ಬಂದು ಅಗೆದು ಗುಂಡಿ ತೆಗೆದು ಮಣ್ಣು ಮುಚ್ಚಿ ಹೋಗ್ತಾರೆ. ಎಲ್ಲಾರೂ ನಿಷ್ಠಾವಂತರೇ ಬಿಡು. ಅದ್ರಲ್ಲೇನೂ



ಸಂದೇಹವಿಲ್ಲ. ಒಟ್ನಲ್ಲಿ ನಮ್ಮ ಜಿ.ಪಿ. ಹೇಳೋ ಹಾಗೆ, 'ಎಲೆಲೆ ರಸ್ತೆ ಏನು ಅವ್ಯವಸ್ಥೆ...'ಹ್ಞಾಂ ನಿಂಗೆ ಜಾಮಿಟ್ರಿ- ಟ್ರಿಗ್ನಾಮಿಟ್ರಿ ಗೊತ್ತಾ?" ಎಂದ.

ಅನಿರೀಕ್ಷಿತವಾಗಿ ಬಂದ ಪ್ರಶ್ನೆಗೆ ತಬ್ಬಿಬ್ಬಾದೆ. "ಏಕೆ?" ಎಂದೆ. ಅವನೆಂದ, "ನಿಂಗೆ ಜಾಮಿಟ್ರಿ ಗೊತ್ತಿಲ್ಲಾಂದ್ರೆ ರಿಕ್ಷಾ ಪ್ರಯಾಣ ಅಪಾಯಕರ." ನಾನು ಹೌಹಾರಿ ನಿಂತು, "ವಿವರಿಸು," ಎಂದೆ.

"ರಿಕ್ಷಾದಲ್ಲಿ ಕೂಡ್ತಿದ್ದ ಹಾಗೇ ಉದ್ದಳತೆ ಅಳೆದು ೯೦ ಡಿಗ್ರೀಲಿ ಕೂಡಬೇಕು. ರಿಕ್ಷಾ ಎಡಕ್ಕೆ ಅಥವಾ ಬಲಕ್ಕೆ ತಿರುಗಿದರೆ ೪೫ ಡಿಗ್ರಿಗೆ ಬರಬೇಕು. ಲಂಬಕೋಣ, ತ್ರಿಭುಜ ಗೊತ್ತಿರಬೇಕು. ಸ್ಟೈಲಾಗಿ ಎಡಕೊನೆ ಅಥವಾ ಬಲಕೊನೆಯಲ್ಲಿ ಕೂತರೆ ನಿನ್ನ 'ಕೊನೆ' ಗ್ಯಾರಂಟಿ.

ನಂಗೆ ಭಯವಾಯಿತು. ಗಬಕ್ಕನೆ ಟೊಮೇಟೋ-ಮಸಾಲೆಯನ್ನು ನುಂಗಿದೆ. ಅವನೆಂದ:

"ನಿಂಗೆ ನಮ್ಮ ಫಾಲಾಕ್ಷ ಗೊತ್ತಲ್ಲ?"

ಅವನು ಯಾವನೋ ಗೊತ್ತಿರಲಿಲ್ಲ. ಆದರೂ ಗೊತ್ತೆಂದು ತಲೆಯಾಡಿಸಿದೆ.

"ಹಳ್ಳಿಯಿಂದ ಬಂದಿದ್ದ. ಕೆಲಸ ಸಿಕ್ಕಿತ್ತು. ಮೊದಲನೇ ದಿನ. ಬಸ್ಸಿಗೆ ಕಾದ್ರೆ ತಡ ಆಗುತ್ತೇಂತ ರಿಕ್ಷಾಗೆ ಕೈ ತೋರತೊಡಗಿದ. ಯಾವುದೂ ನಿಲ್ಲಲಿಲ್ಲ. ಖಾಲಿಯಿದ್ದರೂ ಭರ್ರನೆ ಓಡುತ್ತಿದ್ದವು. 'ಎಲಾ ಇವನ' ಎಂದುಕೊಂಡ. ಬಂದ-ಬಾದವುಗಳಿಗೆಲ್ಲ ವಿಧಾನ ಸೌಧ ಎಂದು ಕೂಗತೊಡಗಿದ. ಒಂದು ರಿಕ್ಷಾ ಇಪ್ಪತ್ತು ಗಜ ಹೋಗಿ ನಿಂತ್ಕೊಂಡ್ತು. ರನ್ನಿಂಗ್ ರೇಸ್‌ನಲ್ಲಿ ಫಸ್ಟ್ ಬಂದಿದ್ದ ಫಾಲಾಕ್ಷ ಓಡಿ ಹೋದ. ಒಳಗೆ ಇನ್ನೊಂದು ಆಸಾಮಿ ಕೂತಿತ್ತು. ಫಾಲಾಕ್ಷನೂ ಕೂತ. ಫಾಲಾಕ್ಷನಿಗೆ ಜಾಮಿಟ್ರಿ ನಿಯಮಗಳು ಗೊತ್ತಿರಲಿಲ್ಲ. ಇನ್ನೂ ಹೊಸ್ದು. ಮುಂದಿನ ತಿರುವಿನಲ್ಲೇ ಪಕ್ಕದವನ ತೊಡೇ ಮೇಲೆ ಬಿದ್ದು ಕೆನ್ನೆ ಊದಿಸ್ಕೊಂಡ. ಸಾರಿ ಅನ್ನೋವಷ್ಟರಲ್ಲಿ ರಿಕ್ಷಾ ಕುಕ್ಕಿತು. ತಲೆಗೆ ಪೈಪು ಒಡಿದು ಆಸಾಮಿ ಕಿರುಚುತ್ತಾ ಇವನ ಮೇಲೆ ಬಿದ್ದ. ಆ ಹೊಡೆತಕ್ಕೆ ಫಾಲಾಕ್ಷ ತತ್ತರಿಸಿದ. ದಬಾರ್ ಅಂತ ಸರ್ಕಾರೇತರ ಯಲ್ಲಿ ಹೊರಗೆ ಬಿದ್ದ. ಸದ್ಯ ವಿಧಾನ ಸೌಧದ

ಮುಂದಿರೋ ಕಾಬಾಳೆ ಗಿಡಗಳ ಮೇಲೆ ಬಿದ್ದ ಕಾರಣ ಮೂಳೆ ಮುರೀಲಿಲ್ಲ. ಹತ್ತು ಗಜ ಹೋದ್ಮೇಲೆ ಚಾಲಕನಿಗೆ ಏನೋ ಬಿತ್ತಲ್ಲಾಂತ ಅನುಮಾನ ಮಾಡಿ, ನಿಲ್ಲಿಸಿ ತಲೆ ಹಾಕಿದರೆ ಫಾಲಾಕ್ಷ ಲಬ-ಲಬೋಂತ ಇದ್ದ. ಇನ್ನೊಬ್ಬ ಅದೆಲ್ಲಿ ಉದುರಿ ಹೋದ್ನೋ ಗೊತ್ತಿಲ್ಲ.

ಡ್ರೈವರ್ ಬಂದು ಎತ್ತಿದ ಕೈ-ಪ್ಯಾಗಂಟಿದ್ದ ಕಾಂಬಾಳೆ ಹೂಗಳ್ನ ಕಿತ್ತೆಸೆದ. ಮೆಲ್ಲನೆ ಹೇಳಿದ;

"ಅಲ್ಲಾ ಸಾರ್, ವೈಫ್‌ಗೋಸ್ಕರ ಬರೀ ಲೈಫ್ ಇನ್ಷೂರೆನ್ಸ್ ಮಾಡ್ಸೀದ್ರೆ ಸಾಕಾ ? ರಿಕ್ಷಾದಲ್ಲಿ ಕೂಡೋಕೆ ಟ್ರೈನಿಂಗ್ ಲೈಸೆನ್ಸೂ ಇರ್ಬೇಕು, ನಂಗೆ ಡ್ರೈವಿಂಗ್ ಲೈಸೆನ್ಸ್ ಇದ್ದಾಗೆ. ಇದು ಕಸ್ಟೋಮರ್ಸ್‌ಗೆ ಕಂಪಲ್ಸರಿ, ಗೊತ್ತಿಲ್ಲವಾ?"

ಫಾಲಾಕ್ಷ ತೊದಲಿದ ದವಡೆ ಪೂರಿಯಾಗಿತ್ತು.

"ಎಲ್ಲಿ ಕೆಲ್ಸ ಮಾಡ್ತೀರಾ?" ಎಂದ.

"ಪ್ರೆಸ್ನಲ್ಲಿ ಮಾರಾಯ."

"ಅಂದ್ರೆ ಗೌರ್ಮೆಂಟು ಪ್ರೆಸ್ಸಾ?"

"ಅಲ್ಲಪ್ಪಾ ನ್ಯೂಸ್ ಪೇಪರ್ ಕಛೇರೀಲಿ."

"ಓ! ಹಂಗಾಂದ್ರೆ ನೀವು ಜರ್ನಲಿಶ್ಟು."

"ಹೌದು."

"ಇಂಥ ವಿಷಯಗಳನ್ನೆಲ್ಲಾ ಫ್ರಂಟ್ ಪೇಜ್ನಾಗಿ ಹಾಕಿ" ಎಂದು ಸಲಹೆ ಮಾಡಿದವನೇ ಗಾಡಿ ಸ್ಟಾರ್ಟ್ ಮಾಡಿದನಂತೆ.

ನಾನು ಬಾಯಾಡಿಸುತ್ತಲೇ ಕೇಳುತ್ತಿದ್ದೆ-ಸೀನಿ ಹೇಳಿದ್ದನ್ನ.

ಸೀನಿ, ಸ್ವಲ್ಪ ನಿಲ್ಲಿಸಿ, ಪೂರ್ತಿ ಸುಂಗಿ-ನೀರ್ಕುಡಿದು, ತೇಗಿ, ಒಂದು ಸಿಗರೇಟು ಹಚ್ಚಿ ಹೆಗಲಮೇಲೆ ಕೈಹಾಕಿ, "ಅವೆನ್ಯೂ ರಸ್ತೇಲಿ ಅರಳಿ ಮರದ ಎದುರಿಗೆ ಒಬ್ಬ ಶೆಟ್ರ ಹುಡುಗ ಬಿಸ್ಕಟ್ ಟಿನ್ನುಗಳಲ್ಲಿ ಖಾರದ ಅವಲಕ್ಕಿ, ಓಂಪುಡಿ, ನಿಪ್ಪಟ್ಟು, ಚಕ್ಕಲಿ, ಹೆಸರು ಬೇಳೆ, ಕೋಡ್ಬಳೆ ಇಟ್ಕೊಂಡಿರ್ತಾನೆ. ಚೆನ್ನಾಗಿರತ್ತೆ" ಎಂದು ಮುನ್ನಡೆದ. ನಾನು ಜೊಲ್ಲು ಸುರಿಸುತ್ತಾ ಹಿನ್ನಡೆದೆ.

ಜಿಮ್ನಾಸ್ಟಿಕ್ಸ್, ರೋಮನ್ ರಿಂಗ್ಸ್, ಹಗ್ಗ ಹಾಗೂ ತಂತೀ ಮೇಲೆ ನಡೆಯೋ ತರಬೇತಿ ಪಡೆದಿರೋರಿಗೆ ರಿಕ್ಷಾ ಒಂದು ವರ. ಏಕೆಂದ್ರೆ ಅವರಿಗೆ ಶರೀರದ ಸಮತೋಲನ ಕಾಪಾಡಿ ಕೊಳ್ಳೋದು ಗೊತ್ತಿರತ್ತೆ-" ಬೆಣ್ಣೆ ಮುರುಕನ್ನು ಕುರುಕುತ್ತಾ ಸೀನಿ ಅಂದ- "ಈ ಯುಗದ ಕ್ರಾಂತಿಕಾರಿ ವಾಹನ ಅಂದ್ರೆ ರಿಕ್ಷಾ ಒಂದೇ ನೋಡು..."

ನಾನು "ಕೊಕ್ಕರೆ ಕತ್ತು ಮಾಡುತ್ತಾ ಹೇಗೆ?" ಎಂದೆ.

"ನಮ್ಮ ಗುರೂ ಗೊತ್ತಾ ನಿಂಗೆ?" ಎಂದ.

"ಅದೇ ಲವ್ ಮ್ಯಾರೇಜ್ ಗುರು ತಾನೇ?"

"ಹ್ಞಾಂ, ಅವನೇ. ಅವನ ಮದ್ವೆ ಪುರೋಹಿತ ಯಾರು ಗೊತ್ತಾ?"

"ಯಾರು?"

"ಇನ್ನಾರು? ರಿಕ್ಷಾ," ಎಂದ ನಿಪ್ಪಟ್ಟು ಮುರಿಯುತ್ತಾ. ನಾನು ತಲೆ ಕೆರಿತಾ ನಿಂತೆ.


"ಅಯ್ಯೋ ಬೆಪ್ಪೇ, ಈ ಕೋಡುಬಳೆ ಮುಕ್ಕು, ಹೇಳ್ತೀನಿ" ಎನ್ನುತ್ತಾ ಆರಂಭಿಸಿದ.



"ಅವರಿಬ್ಬರು ಲವ್ ಮಾಡಿರಲಿಲ್ಲ, ಗವ್ ಮಾಡಿರಲಿಲ್ಲ. ಅಸಲು ಒಬ್ಬರನ್ನೊಬ್ಬರು ಹಿಂದೆ ನೋಡೇ ಇರಲಿಲ್ಲ. ಎಲ್ಲಾ ರಿಕ್ಷಾ ಲೀಲೆ," ಎನ್ನುತ್ತಾ ಚಕ್ಕುಲಿ ಮುರಿದ.

"ಗುರೂಗೆ ಇಂದಿರಾ ನಗರದಲ್ಲಿ ಇಂಟರ್‌ವ್ಯೂ ಇತ್ತಂತೆ. ಬಿವಿಕೆ ಅಯ್ಯಂಗಾರ್ ರಸ್ತೆ ಬಳಿ ರಿಕ್ಷಾಗೆ ಕಾದ. 'ಅಭಿನಯ್' ಮುಂದೆ ಒಂದು ರಿಕ್ಷಾ ಬಂತು. ಕೇಳಿದ. ಜಯನಗರಕ್ಕಾದ್ರೆ ಬರ್ತೀನೀಂದ. ಇನ್ನೊಬ್ಬ ಮಹಾಲಕ್ಷ್ಮಿ ಲೇಔಟ್ ಎಂದ. ಮಗದೊಬ್ಬ ದೊಮ್ಮಲೂರು ಅಂದ ಕೊನೆಗೊಬ್ಬ ಸಿಕ್ಕಿದ. ಮೀಟರ್ ಮೇಲೆ ಎರಡು ರೂಪಾಯಿ ಕೊಟ್ರೆ ಬರ್ತೀನೀಂದ. ಗುರು ಒಪ್ಪಿದ. ಕೂತ.

"ರಿಕ್ಷಾ ಆಸ್ಪತ್ರೆ ರಸ್ತೆ ಕಡೆ ತಿರುಗಿತು. ಮೂಲೇಲಿ, ಹೊಕ್ಕಳ ಕೆಳಗೆ ಸೀರೆಯುಟ್ಟ ಬೆಡಗಿ ಕೈ ತೋರಿ ಅಡ್ಡ ಬಂದಳು. ಡ್ರೈವರ್ 'ಎಂಗೇಜ್ ಆಗೈತೆ' ಎಂದ. ಹುಡುಗಿ ನೇರವಾಗಿ ಗುರೂಗೇ ಗೇರ್ ಹಾಕಿದ್ಲು. 'ಮಿಸ್ಟರ್ ಇವ್ರೇ, ಪ್ಲೀಸ್ ಸರ್... ನಂಗೆ ಲಿಡೋ ಹತ್ರ ಹೋಗಬೇಕಾಗಿದೆ. ಅಲ್ಲಿ ಇಂಟರ್‌ವ್ಯೂ ಇದೆ. ಜೀವನದ ಪ್ರಶ್ನೆ. ಅರ್ಧ ಗಂಟೆಯಿಂದ ಕಾದ್ರೂ ಸಿಕ್ಕಿಲ್ಲ. ಸ್ವಲ್ಪ 'ಅಡ್-ಜೆಸ್ಟ್' ಮಾಡಿಕೊಳ್ಳಿ ಪ್ಲೀಸ್...'



"ಅವಳ ಉಲಿತಕ್ಕೆ ಗುರು ಕರಗಿದ. "ನಿಮಗೆ ಅಭ್ಯಂತರ ಇಲ್ಲಾಂದ್ರೆ ಬರಬಹುದು. ಹೇಗಿದ್ರೂ ನಾನು ಇಂದಿರಾ ನಗರಕ್ಕೆ ಹೋಗ್ತಿದ್ದೀನಿ? ನಂಗೂ ಇಂಟರ್‌ವ್ಯೂ" ಎಂದ.

"ಥ್ಯಾಂಕ್ಯು ಸೋ ಮಚ್" ಎನ್ನುತ್ತಾ ಬೆಡಗಿ ಹತ್ತಿದಳು. ರಿಕ್ಷಾ ಹೊರಟಿತು. ಕೆ.ಆರ್. ಸರ್ಕಲ್ ಬಳಿ ಅಡ್ಡ ಬಂದವರನ್ನು ನಿವಾರಿಸಲೆಂದು ಸರಕ್ಕನೆ ಎಡ ಗಡೆಗೆ ತಿರುಗಿತು. ಹುಡುಗಿ ಸೀದಾ ಗುರುವಿನ ಹೆಗಲ ಮೇಲೆ ಬಿದ್ದಳು. 'ಸಾರಿ ಸರ್' ಅಂದಳು. 'ನೋ ವರಿ' ಎಂದ ಇವ. ರಿಕ್ಷಾ ಅದೇ ವೇಗದಲ್ಲಿ ಬಲಕ್ಕೆ ತಿರುಗಿತು. ಗುರುವಿನ ಎರಡೂ ಕೈಗಳು ಅವಳ ಕುತ್ತಿಗೆಗೆ ಜೋತು ಬಿದ್ದವು; ಮುಖಕ್ಕೆ ಮುಖ ಉಜ್ಜಿತು. 'ಹೆರಿ-ವೆರಿ ಸಾರಿ' ಎಂದ. ಅವಳು 'ನೋ ಪ್ರಾಬ್ಲಂ' ಎಂದಳು. ಎದುರಿಗೊಂದು ಸೈಕಲ್ ರಿಕ್ಷಾ ಅಡ್ಡ ಬಂತು. ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲೆಂದು ಬ್ರೇಕ್ ಹಾಕಿದ. ಸಡನ್ನಾಗಿ. ಹುಡುಗಿ ಗುರುವಿನ ತೊಡೆಯ ಮೇಲೆ ಬಂದಳು. ಕ್ವಿನೈನ್ ಕುಡಿದ ಮುಖ ಮಾಡಿಕೊಂಡಳು. ಅಷ್ಟರಲ್ಲಿ ರಿಕ್ಷಾ ಹಳ್ಳದೊಳಕ್ಕಿಳಿಯಿತು. ಧೊಪ್ಪನೆ ಇಬ್ಬರೂ ಏಕಕಾಲಕ್ಕೆ ಕಾಲಿಡುವ ಜಾಗದಲ್ಲಿ ಬಿದ್ದರು ಸ್ಲೀಪಿಂಗ್ ಪೋಸ್‌ಗಳಲ್ಲಿ, ಅವಳ ತೋಳಿನಲ್ಲಿ ಇವನು; ಇವನ ಎದೆಯ ಮೇಲೆ, ಅವಳು. ಇಬ್ಬರೂ ಮಿಕಿ ಮಿಕಿ ನೋಡಿದರು.

"ಕೇವಲ ಇಪ್ಪತ್ತೈದು ನಿಮಿಷಗಳಲ್ಲಿ ಇಬ್ಬರು ಪ್ರಣಯಿಗಳು ನಡೆಸುವ ಎಲ್ಲಾ ಸರಸ, ಚೆಲ್ಲಾಟ, ಚಕ್ಕಂದ ನಡೆದು ಅದೆಷ್ಟೋ ವರ್ಷದಿಂದ ಪರಸ್ಪರ ಅರಿತಿರುವ ಲವರ್ಸ್ ಎಂಬ ಭಾವನೆಯನ್ನು ಮೂಡಿಸಿತು ರಿಕ್ಷಾ.

ಇನ್ನೇನು ಲಿಡೋ ಬಂತು ಅನ್ನುವಾಗ ನಿಂತ ಸೀಮೆಯೆಣ್ಣೆ ಗಾಡಿಗೆ ರಿಕ್ಷಾ ಬಡಿದು ಹಿಂದಕ್ಕೆ ಹಾರಿ- ಗಕ್ಕನೆ ನಿಂತಾಗ, ಇಬ್ಬರೂ ಒಂದೇ ಏಟಿಗೆ ಹಾರಿ ಬಿದ್ದರು- ಥೇಟ್ ಮಲೆಯಾಳೀ ಚಿತ್ರದಲ್ಲಿ ಹುಡುಗ-ಹುಡುಗಿ ಪ್ರಥಮ ರಾತ್ರಿ

ಮೋಸು ಕೊಡುವ ರೀತಿ. ಒಬ್ಬರೂ ಮೇಲೆ ಇನ್ನೊಬ್ಬರು. ಕೆಳಗೆ. ಕೆಳಗಿದ್ದ ಮಾಡುಗಿರು ಬಟ್ಟೆ ಜೋತಿಲಕ್ಷ್ಮೀನ ಮೀರಿಸುವ ಹಾಗೆ ಮೇಲಕ್ಕೆ ಇತ್ತು... ಇಬ್ಬರೂ ಅದೆಷ್ಟು ಬೇಗ ನಿರ್ಣಯಿಸಿದ ರೆಂದರೆ ನೇರ ಸೋಮೇಶ್ವರನ ಗುಡಿಗೆ ಹೋದರು. ಹಾರಗಳ ವಿನಿಮಯ ನಡೆಯಿತು. ಸತಿ-ಪತಿ ಗಳಾದರು."

"ಅಲ್ಲಾ ಸೀನಿ, ಏನೂ ಅಘಾತವಾಗಲಿಲ್ಲ ತಾನೇ?" ನಾನು ತೊದಲುತ್ತಾ ಕೇಳಿದೆ.

"ಅಯ್ಯೋ ಪೆಂಗೇ, ಮದುವೆಗಿಂತ ಆಘಾತ ಬೇಕಾ? ಈ ಆಘಾತ ಭರಿಸಲು ಈಗ ಅವರಿಗೆ ಅವಳಿ ಜವಳಿಗಳಿದ್ದಾರೆ," ಎಂದ ಅವಲಕ್ಕಿ ಜಗಿಯುತ್ತಾ.

"ನನ್ನ ಸಂಶೋಧನೆ ಪ್ರಕಾರ ಗಡದ್ದಾಗಿ ಊಟ ಮಾಡಿದವರು ಡಾಬರ್ ಕಂಪನಿಯ ಹಜಮೋಲ್, ಅಥವ ಈನೋ ಫ್ರುಟ್‌ಸಾಲ್ಟ್ ಬಳಸಬೇಕಿಲ್ಲ. ಒಂದೇ ರೌಂಡ್ ರಿಕ್ಷಾದಲ್ಲಿ ಸಾಕು. ಜೀರ್ಣ ಶಕ್ತಿ ವೃದ್ಧಿಸುತ್ತೆ; ಅಗ್ನಿ ಪಾಟ ಚುರು ಕಾಗುತ್ತೆ; ಇನ್ನೊಂದು ಮುಖ್ಯ ವಿಷಯ ಹೇಳ್ಲಾ?" ಎಂದ ಇದ್ದ ಬಿದ್ದ ಅವಲಕ್ಕಿ ಖಾಲಿ ಮಾಡುತ್ತಾ.

"ಗೈನಕಾಲಜಿ ಇತಿಹಾಸದಲ್ಲಿ ವಿಶೇಷ ತಜ್ಞರ ಲೆಕ್ಕಾಚಾರಗಳನ್ನೆಲ್ಲಾ ತಲೆ ಕೆಳಗು ಮಾಡಿ ಹೊಸ ಸವಾಲು ಹಾಕಿದೆ. ಈ ಕ್ರಾಂತಿಕಾರಿ ವಾಹನ. ಜಪಾನ್, ಇಂಗ್ಲೆಂಡ್ ಹಾಗೂ ರಶಿಯಾದ ಯಂತ್ರಗಳ ಲೆಕ್ಕವನ್ನು ಉಲ್ಟಾ ಮಾಡಿ, ಕ್ರಾಂತಿ ಎಬ್ಬಿಸಿದೆ."

ನನಗೆ ತಲೆ ಗಿರ್ರೆನ್ನತೊಡಗಿತು. "ಸ್ವಲ್ಪ ಬಿಡಿಸಿ ಹೇಳು ಮಾರಾಯ," ಎಂದೆ.

"ನೋಡು ಮರೀ, ಬೆಂಗಳೂರಲ್ಲಿ ಗೈನಕಾಲಜಿ ಸ್ಪೆಷಲಿಸ್ಟ್ ಇರೋದು ಮೂರು ಜನವೋ- ನಾಲ್ಕು ಜನವೋ. ಅವರ ಬಳಿ ಲಕ್ಷಾಂತರ ರೂಪಾಯಿ ಬೆಲೆಯ ಅತ್ಯಾಧುನಿಕ ಯಂತ್ರ ಗಳಿವೆ. ಅವರು ಗರ್ಭಿಣಿಯನ್ನು ಪರೀಕ್ಷಿಸಿ ಇಂಥ ದಿನವೇ ಡೆಲಿವರಿ ಎಂದು ಡೇಟ್ಸ್ ಕೊಡ್ತಾರೆ. ಈ ಖಚಿತ ಕರಾರುವಾಕ್ಕಾದ ಲೆಕ್ಕವನ್ನು ರಿಕ್ಷಾ ತಲೆಕೆಳಗು ಮಾಡಿದೆ ಗೊತ್ತಾ?"


"ಹೇಗೆ?" ಎಂದೆ. ಕಡಲೇಕಾಯಿ ಬೀಜ ಅಗಿ ಯುತ್ತ.

"ನಮ್ಮ ಸೀತಮ್ಮ, ಅದೇ ಕೃಷ್ಣಶಾಸ್ತ್ರಿಗಳ ದೊಡ್ಡ ಮಗಳು, ಚೊಚ್ಚಿಲ ಬಸುರಿ. ಮೊನ್ನೆ ದಿನ ಹನ್ನೆರಡನೇ ತಾರೀಖು ನರ್ಸಿಂಗ್ ಹೋಂಗೆ ಹೋಗಿದ್ಲು. ಡಾಕ್ಟ್ರು ಪರೀಕ್ಷೆ ಮಾಡಿ ೧೫ ರಿಂದ ೧೮ರ ಒಳಗೆ ಡೆಲಿವರೀಂತ ಡೇಟ್ ಕೊಟ್ರು. ಹೇಗಿದ್ರೂ ವಾರ ಟೈಮಿದೆಯಲ್ಲಾಂತ ಸೀತಮ್ಮ, ತನ್ನ ಪ್ರಿಯವಾದ 'ಮಾವಿನ ಮಿಡಿ' ಕೊಳ್ಳಲು ಹೋದಳು. ಬಿಸಿಲು ಜಾಸ್ತಿಯಾದ ಕಾರಣ ಹೇಗಿದ್ರೂ ಮಿನಿಮಂ ಛಾರ್ಜ್ ತಾನೇ ಅಂತ ರಿಕ್ಷಾದಲ್ಲಿ ಕೂತ್ಲು. ಅಷ್ಟೇ. ಮನೇ ಮುಂದೆ ನಿಂತಾಗ್ಲೇ ಆಕೆಗೆ ಗೊತ್ತಾದದ್ದು ತನಗಾಗ್ಲೇ ಡೆಲಿವರಿ ಆಗಿದೇಂತ. ಉಪ್ಪಿನಕಾಯಿ ಬಾಟ್ಲು ಜಾರಿದಂತಾಗಿತ್ತು. ಇನ್ನು ಅಪ್ಪು ಜಾಗದಲ್ಲಿ ಗಂಡು ಮಗು ಕಿರಲ್ತಾ ಇತ್ತು..."

"ಹೇಗಿದೆ ಮರಿ ರಿಕ್ಷಾ ಕರಾಮತ್ತು? "ಎಂದ. ಕೇಳಿದ ನನಗೆ ಕ್ರಾಂತಿಕಾರಿ ವಾಹನ ಆಟೋ ರಿಕ್ಷಾ ಅಲ್ಲಲ್ಲ... ಏಟರಿಕ್ಷಾ ಬಗ್ಗೆ ಹೆಮ್ಮೆ ಎನಿಸಿತು...

ಆದರೆ ಅದನ್ನೇರುವ ಧೈರ್ಯ ಈ ತನಕ ಬಂದಿಲ್ಲ.

ನಿಮಗೆ...?



"ಬುದ್ಧಿವಂತಿಕೆ ಅಂದರೇನು ?"
"ಪರ್ಯಾಯವೊಂದನ್ನು ಶೋಧಿಸುವ ಸಾಮರ್ಥ್ಯ." - ಪಾಲ್ ಎಲ್ರಿಜ್

ಅದು ಅವರ ಸಾಮಾಜಿಕ ಸಂಪ್ರದಾಯ

ಬಹುಪತಿತ್ವ ಇಲ್ಲಿ ಇನ್ನೂ ಜೀವಂತವಾಗಿದೆ!

ಮೂಲ: ಎಸ್. ಮುಖ್ತರ್
ಕನ್ನಡಕ್ಕೆ: ಎಸ್. ವಿಶ್ವನಾಥ

ಅನೇಕ ವರ್ಷಗಳ ಹಿಂದೆ ನಡೆದಿದ್ದು ಈ ಘಟನೆ. ನಾವು ಪ್ರಾಣಿಶಾಸ್ತ್ರದ ಉಪನ್ಯಾಸಕಿಯ ಪಾಠವನ್ನು ಕೇಳುತ್ತಿದ್ದಾಗ ಜವಾನನೊಬ್ಬ ಕೊಠಡಿಯೊಳಕ್ಕೆ ಬಂದ.

"ನನಗೆ ಚೊಚ್ಚಲು ಮಗು ಹುಟ್ಟಿದೆ. ರಜೆ ಬೇಕು," ಎಂದು ನಮ್ಮ ಉಪನ್ಯಾಸಕಿಯನ್ನು ಆತ ಕೇಳಿ, ಊರಿನಿಂದ ಬಂದಿದ್ದ ಟೆಲಿಗ್ರಾಂ ಒಂದನ್ನು ತೋರಿಸಿದ.

ಸುಮಾರು ೪೫–೫೦ ವಯಸ್ಸಿನ, ಉಲ್ಲಾಸಶೀಲೆಯಾದ ನಮ್ಮ ಉಪನ್ಯಾಸಕಿ, "ನಿನಗೆ ಮಗು ಹುಟ್ಟಲು ಹೇಗೆ ಸಾಧ್ಯವಾಯಿತು?" ಎಂದು ಅಚ್ಚರಿಯಿಂದ ಆತನನ್ನು ಕೇಳಿದಳು.

ಆ ಜವಾನ ಶ್ರೀನಗರದಲ್ಲಿ ಎರಡು ವರ್ಷಗಳಿಗೂ ಮಿಕ್ಕಿ ಇದ್ದ; ಈ ಕಾಲದಲ್ಲಿ ಆತ ಒಮ್ಮೆಯೂ ಹೆಂಡತಿಯನ್ನು ನೋಡಲು ತನ್ನ ಊರಿಗೆ ಹೋಗಿರಲಿಲ್ಲ. ಆತನ ಹೆಂಡತಿ ಲಡಾಕಿನ ರಾಜಧಾನಿಯಾದ ಲೇಹ್‌ನಲ್ಲಿ ವಾಸವಾಗಿದ್ದಳು. ಶ್ರೀನಗರಕ್ಕೂ ಅಲ್ಲಿಗೂ ಸುಮಾರು ೪೦೦ ಕಿಲೋಮೀಟರುಗಳ ದೂರ. ಈ ಕಾಲದಲ್ಲಿ ಆಕೆಯಾದರೂ ಆತನನ್ನು ನೋಡಲು ಶ್ರೀನಗರಕ್ಕೆ ಬಂದಿರಲಿಲ್ಲ.

ಆ ತರುಣ ಜವಾನ ಪ್ರಾಮಾಣಿಕ ಉತ್ತರವನ್ನೇ ನೀಡಿದ್ದ– ತನ್ನ ಹೆಂಡತಿಯ ನಾಲ್ವರು ಗಂಡಂದಿರಲ್ಲಿ ತಾನು ಅತ್ಯಂತ ಹಿರಿಯನೆಂದೂ ತನ್ನ ಹೆಂಡತಿ ಹೆತ್ತಿರುವ ಮಗುವೂ ತನ್ನದೇ ಎಂದೂ ಹೇಳಿದ. ಕೆಲವು ಮುಖ್ಯವಾದ ಆಚಾರವಿಧಿಗಳನ್ನು ಈ ವಿಶೇಷ ಸಂದರ್ಭದಲ್ಲಿ ಆಚರಿಸಲೇಬೇಕಾಗಿರುವುದರಿಂದ ಈ ಮಂಗಲಕಾರ್ಯಕ್ಕೆ ತಾನು ಹೋಗಲೇಬೇಕಾಗಿದೆಯೆಂದೂ ಹೇಳಿದ. ಇದನ್ನು ಕೇಳಿ ನಮ್ಮ ಉಪನ್ಯಾಸಕಿ ಷಾಕ್ ಹೊಡೆದಂತೆ ಮೂಕವಿಸ್ಮಿತರಾದಳು.

ಆದರೆ ಆ ಬಡ ಅಮಾಯಕ ಜವಾನ ಸುಳ್ಳು ಹೇಳುತ್ತಿರಲಿಲ್ಲ. ಜಮ್ಮು–ಕಾಶ್ಮೀರ ರಾಜ್ಯದ ಲಢಾಕಿನಲ್ಲಿನ ಬೌದ್ಧಮತೀಯ ಹುಡುಗಿ

ಯೊಬ್ಬಳು ಇನ್ನೊಂದು ಬೌದ್ಧ ಕುಟುಂಬದ ಹುಡುಗನೊಬ್ಬನನ್ನು ಮದುವೆಯಾಗಿದ್ದಳು. ಆ ಹುಡುಗ ಆ ಕುಟುಂಬದ ಅತ್ಯಂತ ಹಿರಿಯ ವ್ಯಕ್ತಿ. ಆ ಕುಟುಂಬದ ಹಿರಿಯ ಮಗ ಅಶಕ್ತನಾದರೆ, ದೌರ್ಬಲ್ಯ ಹೊಂದಿದ್ದರೆ ಅಥವಾ ಬೌದ್ಧ ಭಿಕ್ಷುವಾಗಿ ತನ್ನನ್ನು ಅರ್ಪಿಸಿಕೊಂಡಿದ್ದರೆ, ಹುಡುಗಿ ಆ ಕುಟುಂಬದ ಎರಡನೇ ಮಗನನ್ನು ಮದುವೆಯಾಗಬೇಕಾಗುತ್ತದೆ. ಈ ಎರಡನೆಯ ಹುಡುಗ ಆ ಹುಡುಗಿಯ ನ್ಯಾಯಯುತ ಯಜಮಾನನಾಗುತ್ತಾನೆ.

ಆದರೆ ವಾಸ್ತವವಾಗಿ ಆ ಹುಡುಗಿ ತಾನು ಮದುವೆಯಾದ ಹುಡುಗನನ್ನೇ ಅಲ್ಲದೆ ತನ್ನ ಗಂಡನ ಎಲ್ಲ ಸಹೋದರರ ದೈಹಿಕ ತೃಷೆಯನ್ನೂ ಹಿಂಗಿಸಬೇಕು. ಬೌದ್ಧ ಭಿಕ್ಷು ಲೈಂಗಿಕ ಕ್ರಿಯೆಯಲ್ಲಿ ತೊಡಗಿರಬಾರದಾದ್ದರಿಂದ ಆತನನ್ನು ಹೊರತುಪಡಿಸಲಾಗಿತ್ತು.

ಇತಿಹಾಸತಜ್ಞರು ಒಂದು ಹೆಣ್ಣಿಗೆ ನಾಲ್ಕಾರು ಮಂದಿ (ಸಹೋದರರು) ಗಂಡಂದಿರಿದ್ದಾರೆ ಎಂದು ಬರೆದಿದ್ದರೂ ಇದೇ ಅತಿ ಹೆಚ್ಚಿನ ಸಂಖ್ಯೆ ಎಂಬ ಇತಿಮಿತಿಯನ್ನು ಎಲ್ಲೂ ಹೇಳಿಲ್ಲ. ಹೆಣ್ಣು ಇಷ್ಟಪಟ್ಟರೆ ಬೇರೆ ಗಂಡ ಅಥವಾ ಗಂಡಂದಿರನ್ನು ಆ ಊರಿನ ಬೇರೆ ಕುಟುಂಬದಿಂದಲೋ ಬೇರೆ ಊರಿನಿಂದಲೋ ಪಡೆಯಬಹುದು ಎಂಬ ವಿಚಾರವೂ ತಿಳಿದುಬಂದಿದೆ.

ಯಾರಿಂದ ಆಕೆ ಗರ್ಭವತಿಯಾಗುತ್ತಾಳೆ ಎಂಬುದಕ್ಕೆ ಮಹತ್ವವಿಲ್ಲ. ಅವಳ ಎಲ್ಲ ಮಕ್ಕಳೂ ಅತಿ ಹಿರಿಯ ಸಹೋದರನ ಸಂತಾನ ಎಂದು ತಿಳಿಯಲಾಗಿದ್ದು ಆತನೊಬ್ಬನೇ ಒಂಟಿಯಾಗಿ ತನ್ನ ಪೂರ್ವಜರ ಆಸ್ತಿಪಾಸ್ತಿಗಳಿಗೆ ಹಕ್ಕುದಾರನಾಗಿರುತ್ತಾನೆ. ಮುಂದೆ ಸಂತಾನವೆಲ್ಲಾ ಆಸ್ತಿಯ ಪಾಲಿಗಾಗಿ ಆತನಲ್ಲೇ ಬೇಡಿಕೆ ಸಲ್ಲಿಸಬೇಕಾಗುತ್ತದೆ.

ಮಕ್ಕಳೆಲ್ಲಾ ಸಂತೋಷದಿಂದ ಈ ಸಹೋದರರನ್ನು ತಮ್ಮ ತಂದೆಗಳೆಂದು ಪರಿಗಣಿಸುತ್ತಾ ಅವರನ್ನು ದೊಡ್ಡಪ್ಪ, ಚಿಕ್ಕಪ್ಪ ಎಂದಿತ್ಯಾದಿಯಾಗಿ ಗುರುತಿಸುತ್ತಾರೆ.

ಲಢಾಕ್ ಪ್ರದೇಶದಲ್ಲೆಲ್ಲಾ ಬೌದ್ಧ ಮತೀಯರು ಚೆದುರಿ ಹೋಗಿದ್ದಾರೆ. ಈ ಪ್ರದೇಶವನ್ನು ಆಡಳಿತದ ಅನುಕೂಲತೆಯ ದೃಷ್ಟಿಯಿಂದ ಕಾರ್ಗಿಲ್ ಮತ್ತು ಲೇಹ್ ಜಿಲ್ಲೆಗಳೆಂದು ವಿಭಾಗಿಸಲಾಗಿದೆ. ಕಾರ್ಗಿಲ್‌ನ ಸುಮಾರು ೧೦,೦೦೦ ಬೌದ್ಧ ಮತೀಯರು ದರ್ದ್ ವಂಶದವರಾಗಿದ್ದಾರೆ. ಲೇಹ್‌ನಲ್ಲಿನ ೪೪,೫೫೨ ಮಂದಿ ಟಿಬೆಟ್ ಮೂಲದ ಮಂಗಲ್ ವಂಶದವರಾಗಿದ್ದಾರೆ.

ಕಾರ್ಗಿಲ್‌ನ ದರ್ದ್ ಪಂಥೀಯರು 'ಶೀನಾ' ಎಂಬ ಪ್ರಾಂತ ಭಾಷೆಯನ್ನು (ಒಂದು ಪ್ರಾಂತಕ್ಕೆ, ಪಂಗಡಕ್ಕೆ ವೈಲಕ್ಷಣ್ಯವಾಗಿರುವ ಭಾಷಾರೂಪ, ಪದಗಳು, ಉಚ್ಚಾರ, ಪ್ರಾಂತ ಭಾಷಾ ಮರ್ಯಾದೆ–ಇವು ವ್ಯತ್ಯಾಸಗೊಂಡಿರುವ ಒಂದು ಭಾಷೆಯ ಒಳಭೇದ) ಮಾತಾಡಿದರೆ ಲೇಹ್‌ನ ಮಂಗೋಲ್ ಪಂಥೀಯರು ಬೋಧ್ಧಿ ಪ್ರಾಂತಭಾಷೆಯನ್ನು ಮಾತನಾಡುತ್ತಾರೆ. ಈ ಬೋಧ್ಧಿ ಭಾಷೆ ಟಿಬೆಟ್ ಭಾಷೆಗೆ ಸಮಾನ ಲಕ್ಷಣಗಳನ್ನುಳ್ಳದ್ದಾಗಿದೆ.

ಲಢಾಕ್‌ನಲ್ಲಿ ಬಹುಪತಿತ್ವ ಹೇಗೆ ಬಳಕೆಗೆ ಬಂತು ಎಂಬುದು ಸರಿಯಾಗಿ ತಿಳಿದುಬಂದಿಲ್ಲ. ಅನೇಕ ಶತಮಾನಗಳಿಂದ ಅದು ಆಚರಣೆಯಲ್ಲಿದ್ದು ಈ ಪದ್ಧತಿಯನ್ನು ಅನೇಕ ಅಂಶಗಳು ಜೀವಂತವಾಗಿರಿಸಿವೆ.

ಅನೇಕ ಪೀಳಿಗೆಗಳ ಹಿಂದಿನಿಂದಲೂ ಖಚಿತವಾಗಿಯೂ ಹೆಣ್ಣುಗಳಿಗಿಂತ ಗಂಡುಗಳ ಸಂಖ್ಯೆ ಹೆಚ್ಚಿರಬೇಕು. ಈ ಸಿದ್ಧಾಂತವನ್ನು ಸಾಧಿಸಿ ತೋರಿಸಲು ನಂಬಲರ್ಹವಾದ ಅಂಶಗಳು ದೊರೆಯುತ್ತಿಲ್ಲ.

ಈ ರೂಢಿಯನ್ನು ಸ್ಥಾಯಿಯಾಗಿಸಲು ಹಿಂದುಳಿದಿರುವಿಕೆ ಮತ್ತು ಬಡತನಗಳೂ ಕಾರಣವಾಗಿರಬಹುದು.

೧೯೪೮ರಲ್ಲಿ ಲಢಾಕ್‌ನಲ್ಲಿ ಐ.ಎ.ಎಫ್ ಡಕೋಟಾ ವಿಮಾನ ಮೊತ್ತಮೊದಲ ಬಾರಿಗೆ ಇಳಿದಾಗ ಹುಲ್ಲಿನ ಕಂತೆಗಳನ್ನು ಇಂಧನವಾಗಿ ಲಡಾಕಿಗಳು ಆ ವಿಮಾನಕ್ಕೆ ನೀಡಲು ಹೋಗಿದ್ದ

ರಂತೆ! ಅಷ್ಟು ಹಿಂದುಳಿದಿತ್ತು ಈ ಜನಾಂಗ. ೧೯೦೦ರ ಕೊನೆಯ ಭಾಗದಲ್ಲಿ ವಿದ್ಯುತ್ ಜನಕ ಪ್ರೋನು ಲಢಾಕ್‌ನ ಜನಸ್ಕಾರದಲ್ಲಿನ ವಿದ್ಯುತ್ ದೀಪಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸ ಲಾರಂಭಿಸಿದಾಗ ಅಲ್ಲಿನ ಜನ ಆಗ ಅಲ್ಲೇ ಉಪಸ್ಥಿತರಿದ್ದ ದಲಾಯಿ ಲಾಮಾರಿಂದಲೇ ದೀಪ ಬರುತ್ತಿದೆ ಎಂದು ನಂಬಿದ್ದರಂತೆ!

ಒಂದು ಕುಟುಂಬದ ಸಹೋದರರು, ಬೇರೆ ಬೇರೆ ಹೆಂಡಂದಿರನ್ನು ಮದುವೆಯಾಗುವುದ ಕ್ಕಿಂತ ಒಬ್ಬಳನ್ನೇ ಮದುವೆಯಾಗಿ ಆಕೆ ಯನ್ನು ಸಾಮಾನ್ಯ ಹೆಂಡತಿಯಾಗಿಟ್ಟುಕೊಂಡು ಕುಟುಂಬ ನಿರ್ವಹಣೆ ಮಾಡುವುದು ಕಡಿಮೆ ಖರ್ಚಿನದು ಎಂದು ನಂಬಿದ್ದಾರೆ. ಇಲ್ಲಿನ ಜನ ಸಾಕಷ್ಟು ಇಲ್ಲದ ಜಮೀನನ್ನು ತಮ್ಮ ಜೀವನ ನಿರ್ವಹಣೆಗಾಗಿ ಅವಲಂಬಿಸಬೇಕಾಗಿತ್ತು. ಬಾಹ್ಯ ಪ್ರಪಂಚದಿಂದ ಅವರು ಭಾಷೆ, ಮತ, ಆಚಾರವಿಚಾರ, ಭೂಲಕ್ಷಣಗಳು ಇತ್ಯಾದಿ ಗಳಿಂದ ಬೇರ್ಪಡಿಸಲ್ಪಟ್ಟಿದ್ದರು. ಈ ಬೇರ್ಪಡೆ ಇಲ್ಲದಿದ್ದರೆ ಬಹುತೇಕ ಅವರು ಬಾಹ್ಯ ಪ್ರಪಂಚ ದೊಡನೆ ಒಂದಾಗಿ ಬದುಕಬಹುದಾಗಿತ್ತೇನೋ. ಹಾಗಾಗಿ ಬಹುಪತಿತ್ವ ಪದ್ಧತಿಯೊಂದೇ ಲಢಾಕಿ ಗಳಿಗೆ ಕುಟುಂಬ ಯೋಜನೆಯಾಯಿತು! ಈಗಿನ ಅಭಿವೃದ್ಧಿ ಪ್ರಯತ್ನಗಳಿಂದಾಗಿ ತಮ್ಮ ಆಚಾರ ವಿಚಾರಗಳನ್ನು ಲಢಾಕಿಗಳು ಬದಲಾಯಿಸು ತ್ತಿದ್ದಾರೆ.

ಲೇಹ್ ಮತ್ತು ಕಾರ್ಗಿಲ್‌ನ ಪ್ರಮುಖ ಪಟ್ಟಣ ಪ್ರದೇಶಗಳಲ್ಲಿ ಬಹುಪತಿತ್ವ ಬಹು ಬೇಗ ಅಳಿಯುತ್ತದೆ. ಆದರೆ ೫೮೩.೨೧ ಚದುರ ಕಿಲೋಮೀಟರುಗಳಷ್ಟು ಪ್ರದೇಶದಲ್ಲಿ ಲಢಾ ಕಿನ ೨೩೮ ಚಿಕ್ಕ ಪುಟ್ಟ ಹಳ್ಳಿಗಳು ಚೆದುರಿ ಹೋಗಿವೆ. ಲಡಾಕಿನ ಭೂಪ್ರದೇಶ ಬಹಳ ದುರ್ಗಮವಾದದ್ದು. ಇನ್ನೊಂದು ಹಳ್ಳಿಗೆ ಹೋಗಬೇಕೆಂದರೂ ವಾರಗಟ್ಟಲೆ ಕಾಲ ಬೇಕಾ ಗುತ್ತದೆ. ಹಾಗಾಗಿ ಈ ಪ್ರದೇಶದ ಹೊರ ವಲಯದಲ್ಲಿನ ಹಳ್ಳಿಗಳಲ್ಲೆಲ್ಲಾ ಈಗಲೂ ಬಹು ಪತಿತ್ವ ಪದ್ಧತಿಯನ್ನು ಕಾಣಬಹುದಾಗಿದೆ.



ಪುಣ್ಯ

ಖ್ಯಾತ ಗುಜರಾತಿ ಲೇಖಕ ಶ್ರೀ ಕನ್ಹಯ್ಯಲಾಲ ಮುನ್ಶಿಯವರು ಮಹಿಳಾ ಮಂಡಳದವರು ಏರ್ಪಾಡು ಮಾಡಿದ್ದ ಸಭೆಯೊಂದರಲ್ಲಿ ಮಾತನಾಡುವಾಗ ಹೇಳಿದರು, "ಭಗಿನಿಯರೆ, ನನಗೆ ಮೂವತ್ತು ಮಕ್ಕಳು ಇದ್ದಾರೆ. ಇದನ್ನು ಕೇಳಿ ತಮಗೆ ಆಶ್ಚರ್ಯ ಎನಿಸಿರಬಹುದು!" ಶ್ರೋತೃಗಳು ಈ ಮಾತನ್ನು ಕೇಳಿ ಒಮ್ಮೆಲೇ ವಿಸ್ಮಯಪಟ್ಟರು. ಮುಂದೆ ಮುನ್ಶಿಯವರು ಹೇಳಿದರು, "ಒಂದು ಗಿಡ ನೆಟ್ಟರೆ ಹತ್ತು ಮಕ್ಕಳ ಪುಣ್ಯ ದೊರೆಯುತ್ತದೆ. ನಾನು ಮೂರು ಗಿಡಗಳನ್ನು ನೆಟ್ಟಿದ್ದೇನೆ. ನನಗೆ ಮೂವತ್ತು ಮಕ್ಕಳ ಪುಣ್ಯ ದೊರೆಯುತ್ತಿದೆ. ನಿಜವಾಗಿ ನನಗೆ ಮೂವತ್ತು ಮಕ್ಕಳು ಇರುತ್ತಿದ್ದರೆ ಅವರನ್ನು ಜೋಪಾನ ಮಾಡುವುದು ಕಷ್ಟಕರವಾಗುತ್ತಿತ್ತು. ಆದರೆ ನಾನು ಬೆಳೆಸಿದ ಆ ಮೂರು ಗಿಡಗಳು ಈಗ ಸ್ವಾವಲಂಬಿ ವೃಕ್ಷಗಳಾಗಿವೆ."

—ಸಂಗ್ರಹ : ರಾಯಮಾನೆ ಎಸ್. ಟಿ.

ಇಂಗ್ಲೀಷ್ ಮಾಧ್ಯಮದ ಕನ್ನಡ

ವಿಠ್ಠಲ ಕುಲಕರ್ಣಿ

೧೯೮೪ ರ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಧಾರವಾಡದ 'ಶರದ ಹೊಸೂರು' ಎಂಬ ವಿದ್ಯಾರ್ಥಿ ಒಳ್ಳೇ ಗುಣ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನವನ್ನು ಪಡೆದನು. ಆ ಹೆಸರು ಬೆಂಗಳೂರಿನ ಕನ್ನಡ ಪತ್ರಿಕೆಯೊಂದರಲ್ಲಿ 'ಶಾರದಾ ಹೊಸೂರ್' ಎಂಬ ರೂಪ ಪಡೆದಿತ್ತು. ವಿದ್ಯಾರ್ಥಿಯ ಹೆಸರು ವಿದ್ಯಾರ್ಥಿನಿಯ ರೂಪ ತಾಳಿತ್ತು. ವಿಧಾನ ಪರಿಷತ್ತಿನ ಚುನಾವಣೆಗೆ ಸ್ಪರ್ಧಿಸಿದವರ ಹೆಸರು 'ವಿ. ಬಿ. ಹೊಂಬಾಲ್' ಎಂದೂ ಪ್ರಕಟಿಸಲಾಗಿತ್ತು. ಹೊಂಬಳ ಎಂಬ ಹೆಸರು ಒಮ್ಮೊಮ್ಮೆ ಜಾಗ್ರತ ಪತ್ರಿಕಾ ವ್ಯವಸಾಯಿಗಳ ಕೈಯಲ್ಲಿ ಹೊಂಬಾಳ್ ಆಗುವದೂ ಆಶ್ಚರ್ಯವಲ್ಲ. ಇಂಗ್ಲೀಷ್ ಮಾಧ್ಯಮದಿಂದ ಹೆಸರುಗಳಲ್ಲಾಗುವ ವಿಕೃತ ರೂಪಗಳನ್ನು ಪತ್ರಿಕೆಗಳಲ್ಲಿ ನಿತ್ಯವೂ ನೋಡಬಹುದು. ಹೆಸರುಗಳ ತಪ್ಪು ಉಚ್ಚಾರಗಳನ್ನು ಆಕಾಶವಾಣಿಯಲ್ಲೂ ಕೇಳಬಹುದು. ಆಶ್ಚರ್ಯವೆಂದರೆ ಕನ್ನಡ ಸುದ್ದಿ ಓದುವ ಕನ್ನಡಿಗರೂ ಇಂತಹ ವಿಲಕ್ಷಣ ಉಚ್ಚಾರ ಮಾಡುತ್ತಾರೆ. ಇಂಗ್ಲಿಷ ಮಾಧ್ಯಮದ ಪ್ರಸಾದಗಳನ್ನು ಇನ್ನೂ ಎಷ್ಟೋ ಉದಾಹರಿಸಿರಬಹುದು. ಮೂಡಲಗಿ–ಮುಂಡರಗಿಗಳ ಭೇದವನ್ನು ತಿಳಿಯದವರು ಕನ್ನಡ ಪತ್ರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಶೇದಬಾಳ್, ಹೂಬ್ಲಿ ಎನ್ನುವವರೂ ಇದ್ದಾರೆ. ಪತ್ರಿಕಾ ವ್ಯವಸಾಯಕ್ಕೆ ಇಂಗ್ಲೀಷೇ ಪ್ರಮುಖ ಭಾಷೆಯಾದ್ದರಿಂದ ಕನ್ನಡ ಹೀಗೆ ವಿಕೃತವಾಗುತ್ತಿರುವದು ಒಮ್ಮೊಮ್ಮೆ ಅನಿವಾರ್ಯವೆಂದು ಕೆಲವರು ಸಮರ್ಥಿಸಬಹುದು.

ಅವಸರದ – ತತ್‌ಕ್ಷಣದ – ಶಬ್ದಬ್ರಹ್ಮರಾದ ಪತ್ರಿಕಾಕರ್ತರ ವಿಷಯ ಇರಲಿ. ಬೇರೆ ನಿಯತ ಕಾಲಿಕಗಳನ್ನು ಪರಿಶೀಲಿಸಿದರೂ ಇಂಗ್ಲೀಷ್ ಪ್ರಭಾವ ಎಷ್ಟು ಬಲವಾದುದು ಸ್ಪಷ್ಟವಾದೀತು. ಉದಾಹರಣೆಗೆ ಸಾಪ್ತಾಹಿಕ ಪತ್ರಿಕೆಯೊಂದರಲ್ಲಿ ಬಂದ ಕತೆಯಲ್ಲಿಯ ಇಂಗ್ಲೀಷ್ ಶಬ್ದಗಳನ್ನು ನೋಡಬಹುದು. 'ಕೇರ್ ಮಾಡುವುದಿಲ್ಲ' 'ನ್ಯಾಚುರಲ್' 'ಕ್ಲಾಸ್' 'ಕಂಟ್ರೋಲ್' 'ಪ್ರೊಫೆಸರ್' 'ಮೇಡಂ' 'ಕ್ಲಾಸ್ ರೋಲ್‌ಕಾಲ್' 'ಎಕ್ಸ್‌ಕ್ಯೂಸ್ ಮಿ ಮೇಡಂ'. 'ರಿಕ್ವೆಸ್ಟ್ ಮೇಡಂ' ಕ್ಲಾಸ್‌ಮೇಟ್, ಟೀಸ್ ಮಾಡುತ್ತಾರೆ. ಕರ್ಟನ್ಸ್, ಕ್ಲಾಫ್, ಸೀರಿಯಸ್ ಬಿಸ್ನೆಸ್, ಬರ್ನರ್, ಪೇಪರ್ ಸ್ಟಾಂಡ್, ಸ್ಪಿರಿಟ್ ಕರೆ ಮಾಡಿ, ಮಾರ್ನಿಂಗ್, ಫ್ರೆಂಡ್ ಯಂಗರ್ ಬಿಸಿನೆಸ್, ಗೋ ಸ್ಟಾಫ್ ರೂಂ, ಹ್ಯಾಂಡ್‌ಸಂ ಪರ್ಸನಾಲಿಟಿ, ಹಾಯ್ ಬೆಲ್ಸ್, ಬೌಲರ್. ಸೀರಿಯಸ್ಸಾಗಿ, ಇಟ್ ಈಸ್ ವೆರಿ ಪರ್ಸನಲ್ ಮ್ಯಾಟರ್, ಮಾರ್ನಿಂಗ್ ಮೀಟ್, ರಿಲೀಫ್ ಮಾಡುವಂತೆ, ಮೇಡಂಳ ಪ್ಲೀಸ್, ಅಕಾಡೆಮಿಕ್ ಇಯರ್, ಫೈನಲ್ ಇಯರ್, ಸ್ಟೇಜ್ ಶಾಕ್,

ಆಲ್‌ರೈಟ್, ಟೈಂ ಕೊಟ್ಟಿದ್ದೆ, ನೌ ಆಯ್ ವಿಲ್ ಅರೆಸ್ಟ್ ಯು ಎಂದರು ಇನ್ಸ್‌ಪೆಕ್ಟರು, ಇತ್ಯಾದಿ-ಶಬ್ದಗಳು ಒಂದೇ ಕತೆಯಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಕೆಲ ಶಬ್ದಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿವೆ. ಇಂತಹ ಶಬ್ದಗಳಲ್ಲಿ ಯಾವವು ಅನಿವಾರ್ಯ? ಅಥವಾ ಸಹಜವೆನಿಸಬಹುದಾದ ಭಾಷೆಯ ಓಟವೇ ಹೀಗೆ ಎನ್ನಬೇಕೆ? ಇವುಗಳ ಓದುವ ಕನ್ನಡಿಗರ 'ಕನ್ನಡ'ದಲ್ಲಿ ಇನ್ನು 'ಸಹಜತೆ' 'ವಾಸ್ತವತೆ'ಯನ್ನು ಲಘುತ್ವವನ್ನು ಸ್ವಚ್ಛಂದವನ್ನು ಹೆಚ್ಚಿಸಿ ಮೂಲ ಕನ್ನಡತನವನ್ನೇ ಅಳಿಸಿಬಿಡಬಹುದಲ್ಲವೇ?

ಪತ್ರಿಕೆಗಳಲ್ಲಿ ಪ್ರಕಟಣೆ(ಜಾಹೀರಾತು)ಗಳಿಂದಲೂ ಭಾಷೆ ಅನೇಕ ಸಲ ಕೆಡುತ್ತದೆಂಬ ದೂರನ್ನು ಇಂಗ್ಲೀಷ್ ಭಾಷೆಯವರೂ ಹೇಳುತ್ತಾರೆ. ಇಂಗ್ಲೀಷಿನ ವಿಶಾಲತೆ ಪ್ರಾಯಶಃ ಇಂತಹ ಆಘಾತಗಳನ್ನು ಲೆಕ್ಕಿಸದಷ್ಟು ದೊಡ್ಡದಾಗಿದೆ. ಆದರೆ ಕನ್ನಡದ್ದು ಹಾಗಲ್ಲ; ಕನ್ನಡವು ಬೆಳೆಯುವ ಭಾಷೆ, ಇತರ ಭಾಷೆಗಳ ಪ್ರಭಾವದಿಂದಲೂ ಬೆಳೆಯಬೇಕಾದದ್ದೆ. ಆದರೆ ಇಂಗ್ಲೀಷಿನಿಂದ ಕನ್ನಡ ಬೆಳೆಯುತ್ತಿದೆಯೆ? ಅಥವಾ ತನ್ನತನವನ್ನು ಕಳೆದುಕೊಳ್ಳುತ್ತಿದೆಯೋ ಎಂದು ಸಂದೇಹ ವುಂಟಾಗುತ್ತದೆ. ಜಾಹಿರಾತುಗಳ ಉದ್ದೇಶ ಜನರ ಮನಸ್ಸನ್ನು ಆಕರ್ಷಿಸುವುದೇ ಆದ್ದರಿಂದ ಭಾಷೆಯಲ್ಲಿಯ ಬಿಗುವು ಕಡಿಮೆ, ಸಡಿಲತೆ ಹೆಚ್ಚು. ಕನ್ನಡದ ಜಾಹೀರಾತುಗಳು ಅನುವಾದದ ದೋಷಗಳನ್ನೂ ಹೊಂದಿರುತ್ತವೆ. ಅನುವಾದದಲ್ಲಿಯೂ ಅವಾಂತರಗಳಿವೆ. 'ಕಾಲಿ ಕಾಗದದಲ್ಲಿ ನಿಮ್ಮ ಪ್ರವೇಶಗಳನ್ನು ಬರೆಯಬಹುದು.' (ಬಿಳಿಹಾಳೆಗಳಲ್ಲೇ ನಿಮ್ಮ ಅರ್ಜಿ ಕಳಿಸಬಹುದು) ಎಂದು ಹೇಳುತ್ತಾರೆ. 'ನಿಮ್ಮ ನೀರಿನ ಸಮಸ್ಯೆಯ ಅತ್ಯಂತ ತಳ ಭಾಗಕ್ಕೂ ನಾವು ಹೋಗಬಲ್ಲೆವು' ಎನ್ನುತ್ತಾರೆ ಒಂದು ಬೋರ್‌ವೆಲ್ ಕಂಪನಿಯವರು. ಅಲ್ಪಪ್ರಾಣ ಮಹಾಪ್ರಾಣಗಳ ದೋಷಗಳೂ ದೀರ್ಘ ಹ್ರಸ್ವಗಳ ದೋಷಗಳೂ ಕಾಣುವವಲ್ಲದೆ ಇಂಗ್ಲೀಷ್ ಮಾಧ್ಯಮದ ಪ್ರಭಾವವೂ ಸ್ಪಷ್ಟವಾಗಿ ಗೋಚರಿಸುವದು ಇದು ಇಂಗ್ಲೀಷಿನ ಹಿತವಾದ ಸುಳಿಗಾಳಿಯಲ್ಲ, ಬಿರುಗಾಳಿ. ನಮ್ಮದು ಭದ್ರವಾಗಿರದಿದ್ದರೆ ಕೊಚ್ಚಿಕೊಂಡು ಹೋಗುವಂತಹ ಆಘಾತವನ್ನುಂಟು ಮಾಡುವ ಬಿರುಗಾಳಿ.

'ಪ್ರತೀ ಊಟವಾದ ಮೇಲೆ' (ಪ್ರತಿ) 'ಶೀಷೀಲ ಪ್ಯಾಕ್' ಡೀಲರಗೆ ಕೊಡಿ ಸ್ಟೋರಿನಲ್ಲಿ 'ಫ್ಲಾಸ್ಕ್' 'ಸನ್‌ರೈಸ್' 'ಇನ್ಸ್ಟಂಟ್' 'ಸಂಪೂರ್ಣ ಹೊಸ ಸ್ನಾನದ ಸಾಬೂನು' 'ಶ್ರೀಮಂತ ಸುಗಂಧ ಸುವರ್ಣದಂತ ಪ್ರಶಸ್ತ' ಮನಮೋಹಕ ದೃಷ್ಯಗಳುಳ್ಳ, 'ಹೊಂ ವರ್ಕ್' 'ಮನಮೆಚ್ಚುವ ಅನೇಕ ಸೈಜಗಳು' ಇತ್ಯಾದಿ ಪ್ರಯೋಗಗಳು ಪ್ರಕಟಣೆಗಳಲ್ಲಿ ಪ್ರತಿ ದಿನ ಪತ್ರಿಕೆಗಳಲ್ಲಿ ಕಣ್ಣು ಕೊರೆಸುತ್ತ ಕನ್ನಡಿಗರ ಕನ್ನಡತನವನ್ನು ಪ್ರಶ್ನಿಸುತ್ತಿರುವುದು ಬೇಕೇ? ಕನ್ನಡದ ಭದ್ರ ಸಸಿಗಳೆಲ್ಲ ಕೊಚ್ಚಿ ಹೋಗಿ ಪರಿಸರ ಬದಲಾಗುತ್ತಿದೆ, ಮಾಲಿನ್ಯ ಹೆಚ್ಚುತ್ತಿದೆ ಎನ್ನುವದಕ್ಕೆ ಇನ್ನೂ ಉದಾಹರಣೆಗಳು ಬೇಕೆ?

ಇಂಗ್ಲಿಷಿನ ಪ್ರಭಾವದ ಪಡೆನುಡಿಗಳು



ಕನ್ನಡಕ್ಕೆ ಇಳಿಯುತ್ತಿರುವುದನ್ನೂ ನೋಡಬಹುದು. ಇಬ್ಬರೂ ಒಂದೇ ದೋಣಿಯವರೇ, ಈಗ ಚೆಂಡೂ ನಮ್ಮ ಅಂಗಳದಲ್ಲೇ ಇದೆ. ಟೀ ಕಪ್ಪಲ್ಲಿ ಬಿರುಗಾಳಿ, ಬೆಕ್ಕು ಹೊರಬರುವ ಕೈಗೆ ಪಾರಿವಾಳಗಳ ಸಂಖ್ಯೆ ತಿಳಿಯುವ ಬಲ್ಲ, ಅದೊಂದೇ ಕಾರ್ಮೋಡದ ಅಂಚಿನಲ್ಲಿರುವ ರಜತ ರೇಖೆ, ಅವರೆಲ್ಲ ಸುಳ್ಳರಲ್ಲ, ಕಳ್ಳರಲ್ಲ ಒಂದೆರಡು ಕಪ್ಪು ಕುರಿಗಳು ಇರಬಹುದು. ಇಂಥ ವಾಕ್ ಪ್ರಯೋಗಗಳು ಕನ್ನಡವನ್ನು ಶ್ರೀಮಂತಗೊಳಿಸುತ್ತಿಯೆಂದೇ ಹೇಳಬಹುದು. ಆದರೆ ಕನ್ನಡದ ಪ್ರಯೋಗಗಳನ್ನು ಪೂರ್ತಿ ಕಬಳಿಸಿ ಬೆಳೆಯುತ್ತಿರುವ ಕೆಲ ಶಬ್ದಗಳು ವಾಕ್ಯಗಳು ಅನಿವಾರ್ಯವೆನ್ನಬೇಕೇ? ಅವಶ್ಯವೇ? ಅಪೇಕ್ಷಣೀಯವೆ? ಅಂತಹ ಶ್ರೀಮಂತಿಕೆ ಈ ಬಡ ಕನ್ನಡಕ್ಕೆ ಅವಶ್ಯವೇ? ಗುಲಾಬಿ ಬಣ್ಣದ ಕನಸು (Rosy dreams) ದೇವರಿಗೆ ಧನ್ಯವಾದ (Thank God) ಎಂಬ ಮಾತುಗಳು ಕನ್ನಡಕ್ಕೆ ಹೊಂದಿಕೊಳ್ಳುವಂತಾಗುತ್ತವೆಯೇ? ದಕ್ಷಿಣೆ ಸಿಕ್ಕಿದ್ದ ಕುದುರೆ ಹಲ್ಲೆಣಿಸಬೇಡ ಎಂಬ ಇಂಗ್ಲಿಷ್ ಗಾದೆಯನ್ನು ಎತ್ತಿಹೇಳುವವರು 'ದಾನ ಕೊಟ್ಟ ಎತ್ತಿನ ಹಲ್ಲು ನೋಡಬೇಡ' ಎಂಬ ಕನ್ನಡ ನಾಣ್ಣುಡಿಯನ್ನು ಮರೆಯಬಾರದು. ಇಂಗ್ಲೀಷ್ ರೀತಿಯೇ ಪ್ರಮುಖವಾಗಿ ಕಾಣುವ ಬರಹವೇ ನಮಗೆ ಬೇಕೆ?

ಕನ್ನಡದ ಕುಮಾರವ್ಯಾಸ "ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ' ಎಂದು ಹೇಳಿಕೊಂಡ. ಆತನ ಕಾಲದ ಕನ್ನಡದ 'ಹಲಗೆ' ಇಂದು ಸ್ಲೇಟ್ ಆಗಿದೆ ಪ್ಯೂರ್ ಕನ್ನಡದಲ್ಲಿ. ಮರಾಠಿ ಪ್ರಭಾವದ ಕನ್ನಡದಲ್ಲಿ 'ಪಾಟಿ'ಯಾಗಿ ಮಾರ್ಪಾಟಾಗಿದೆ. ಹಲಗೆ ಎಂಬ ಪದಕ್ಕೆ ಬಾರಿಸುವ ಸಾಧನ ಎಂಬರ್ಥದ ಬಳಕೆಯಾದರೂ ಉಳಿದಿದೆ ಉತ್ತರ ಕರ್ನಾಟಕದಲ್ಲಿ! ಕೆಲವೆಡೆಗೆ ಅದೂ 'ಡ್ರಮ್' ಆಗಿದ್ದರೆ ಆಶ್ಚರ್ಯವಲ್ಲ!! ನಿತ್ಯ ವ್ಯವಹಾರದಲ್ಲಿ ಟೈಲರಿಂಗ್ ಹಾಲ್. ಹಾರ್ಡ್‌ವೇರ್, ಕ್ಲಾತ್ ಮರ್ಚೆಂಟ. 'ಜನರಲ್ ಸ್ಟೋರ್ಸ್, ಫ್ಲೋರ್ ಮಿಲ್, ಸ್ಟೀಲ್ ಸೆಂಟರ್, ಬೇಕರಿ, ಫುಟ್‌ವೇರ್ ಮೊದಲಾದ ಶಬ್ದಗಳೂ ಹೆಚ್ಚು ಬಳಕೆ ಪಡೆಯುತ್ತಿವೆ. ಕಾಫಿ ಕೇಂದ್ರ, ಪುಸ್ತಕ ಭಾಂಡಾರ, ರೊಟ್ಟಿ ಅಂಗಡಿ, ಹಿಟ್ಟಿನ ಗಿರಣಿ, ಮೊದಲಾದ ಪದಗಳ ಬಳಕೆ ಕಡಿಮೆಯಾಗುತ್ತಿದೆ. ಅಡಿಗೆ ಮನೆ, ಬಚ್ಚಲು ಮನೆಗಳು ಇಂದು ಕಿಚನ್, ಬಾಥ್‌ರೂಮುಗಳಾಗಿವೆ. ನಡುಮನೆ, ಪಡಸಾಲೆ, ಕಿರುಮನೆ. ರವಿಕೆ, ಕುಪ್ಪುಸ ಇತ್ಯಾದಿ ಕೆಲವೇ ದಿನಗಳ ಹಿಂದೆ ರೂಢವಾದ ಶಬ್ದಗಳು ಈಗ ಶಬ್ದಕೋಶಗಳಲ್ಲಿ ಹೋಗಿ ಕೂಡುವ ಶಬ್ದಗಳಾಗಿವೆ!


ಕೆಲ ಇಂಗ್ಲಿಷ್ ಶಬ್ದಗಳಿಗೆ ತೀರ ಸನಿಹದ ಉಚ್ಚಾರದ ಕನ್ನಡ ಪದಗಳೂ ರೂಪ ಪಡೆಯುತ್ತಿರುವುದನ್ನು ನೋಡಬಹುದು. ಉದಾಹರಣೆಗೆ ಪ್ರಿನ್ಸಿಪಾಲ್ ಪ್ರಾಂಶುಪಾಲ ಆಗುತ್ತಿದೆ. ಹಿಂದಿನ ಮುಖ್ಯ ಅಧ್ಯಾಪಕರು ಎನ್ನುವದು ಹೆಡ್‌ಮಾಸ್ತರ್ ಎಂಬ ಪದದ ಭಾಷಾಂತರವೆನಿಸುತ್ತದೆ. ಮಾರ್ಕೆಟ್ ಇಂದು ಮಾರುಕಟ್ಟೆಯಾಗಿದೆ, ಪೇಟೆಯಲ್ಲ. ವರಾಂಡ ಹೊರ ಅಂಗಳ, ಅಥವಾ ಹೊರಾಂಗಳ. ವೋರಾಂಡಾ ಎನ್ನುವರು ಇಲ್ಲಿ. ಕಾಲೇಜುಗಳಲ್ಲಿ ಕನ್ನಡವನ್ನು ಇಂಗ್ಲಿಷಿನಲ್ಲಿ ಕಲಿಸುವ ಕಾಲವೊಂದಿತ್ತಂತೆ. ಆ ಕಾಲದಲ್ಲಿಯೂ ಕನ್ನಡ ಇಷ್ಟು ಇಂಗ್ಲೀಷ್ ಮಯವಾಗಿರಲಿಲ್ಲ. ಬರೆಯುವ ಕನ್ನಡ ಹೆಚ್ಚು ಪರಿಶುದ್ಧವಾಗಿತ್ತೆಂದೇ ಹೇಳಬಹುದು.

ಕಾದಂಬರಿಗಳಲ್ಲೂ ಭಾಷೆ ಇಂಗ್ಲೀಷ್‌ಮಯವಾಗುತ್ತಿದೆ. ಅಲ್ಲಿಯ ಸಂಭಾಷಣೆಗಳಲ್ಲೂ ಇಂಗ್ಲೀಷ್ ಪ್ರಭಾವವನ್ನು ಕಾಣಬಹುದು. ಬಾಯ್ ಫ್ರೆಂಡ್. ಕ್ಲಾಸ್‌ವಿಜಿಟ್‌ಗೆ ತೆರಳಿದಾಗ, ನನ್ನ ಜೋಡಿಯವ ವಿಶಾಲ ಒನ್‌ವೇ, ಗಾಡಿ ಓಡಿಸ್ತಾನೆ. ಬ್ರೇಕ್ ಹಾಕದೆ ಪಬ್ಲಿಕ್‌ನಲ್ಲಿ ಮಾತು ಖರ್ಚು ಮಾಡೋದಿಲ್ಲ, ಡಬ್ಬಲ್ ಸ್ವೀಟ್ ನಮೂನಿ ಮಾತು ಆಡ್ತಾನೆ. ಮನೆಯೋರೆಲ್ಲ ಜಾಲಿಯಾಗಿದ್ದರೆ ತುಂಬ ಚೆನ್ನಾಗಿರುತ್ತೆ ಅಲ್ವೇನೇ? ಕ್ರೀಮ್ ಕಲರ್ ಸ್ಲೀವ್‌ಲೆಸ್, ಕರ್ಚಿಫ್ ಇನ್‌ಫ್ಲುಯೆನ್ಸ್, ಸ್ಪೆಷಲ್ ಪರ್ಮಿಶನ್ ಇತ್ಯಾದಿಗಳು ಕನ್ನಡದಲ್ಲಿ ಸಂಭಾಷಣೆ ಮಾಡಬೇಕೆಂಬ ಉತ್ಸಾಹವನ್ನೂ ಕಳೆದುಕೊಳ್ಳುತ್ತಿವೆಯೇನೊ? ಕನ್ನಡದಲ್ಲೂ ಸಂಭಾಷಣೆ ಮಾಡಬಲ್ಲೆವೆಂಬ ವಿಶ್ವಾಸವೇ ಶಿಥಿಲಗೊಳು

ತ್ತದೆ. ಕಾದಂಬರಿಗಳಿಗೆ ಸಹಜತೆ ವಾಸ್ತವತೆ ತರುವ ಉತ್ಸಾಹದಲ್ಲಿ ಕನ್ನಡದ ಸಂಭಾಷಣಾ ಶಕ್ತಿಯೇ ಕುಂಠಿತಗೊಳ್ಳುವಂತೆ ಪರಿಣಾಮ ಬೀರುತ್ತಿವೆಯಲ್ಲ ಎಂದೆನಿಸುತ್ತದೆ.

ಕನ್ನಡ ನಾಟಕದ ಭಾಷೆ ಕೇಳಬೇಕೇ? ಹಲ್ಲೊ, ಡ್ಯಾಮಿಟ್, ಥ್ಯಾಂಕ್ಯೂ, ಲೈಸನ್ಸ್, ಫ್ರೀಡಂ ಮೊದಲಾದ ಶಬ್ದಗಳಲ್ಲದೆ ಸಾಮಾಜಿಕ ನಾಟಕವೇ ಎನಿಸಲಾರದು. ಶುದ್ಧ ಕನ್ನಡದಲ್ಲಿ ಮಾತನಾಡುವ ಜನ ಹಿಂದಿನ ಕಾಲದಲ್ಲಿ ಜೀವಿಸಿದ್ದರೆ ಎಂದು ಸಂದೇಹಪಡುವಷ್ಟು ಇಂಗ್ಲೀಷ್ ಪದಗಳು ತುಂಬಿರುತ್ತವೆ. ಇತ್ತೀಚೆಗೆ ಹಳ್ಳಿಗರ ಮಾತುಗಳಲ್ಲೂ ಸ್ತ್ರೀಪಾತ್ರಗಳಲ್ಲೂ ಇಂಗ್ಲಿಷ್ ಪದಗಳು ಹೆಚ್ಚುತ್ತಿವೆಯಲ್ಲ. ಹೆಚ್ಚು ಮಹಿಳೆಯರೂ ಇಂಗ್ಲಿಷ್ ಕಲಿತಿದ್ದಾರಲ್ಲವೇ? ಅಡ್ರೆಸ್ ಟ್ರೇನ್ ಫ್ರೆಂಡ್ ಬರ್ತ್ ಯೂನಿಸಿಲ್ಲಿಗಳೂ ವಿಪುಲವಾಗಿ ಬಳಸಲ್ಪಡುತ್ತಿವೆ. ಟಿ. ಕೈಲಾಸಂ ೫೦ ವರ್ಷಗಳ ಹಿಂದೆಯೇ ಇಂತಹ ಭಾಷೆಯ ಅಪಹಾಸ್ಯ ಮಾಡಿದ್ದರಲ್ಲ. ಅವರ ಅಪಹಾಸ್ಯಗಳೂ ಅಂತಹ ಪ್ರಯೋಗಗಳನ್ನು ಕಡಿಮೆಮಾಡಿಲ್ಲ. ತದ್ವಿರುದ್ಧ ಅಂತಹ ಪ್ರಯೋಗಗಳು ಹೆಚ್ಚುತ್ತಿವೆ. ಅಂತಹ ಭಾಷೆಯೇ ಇಂದಿನ ಪ್ರಭಾವಿ ಭಾಷೆಯೆನಿಸಿದೆ, ಯುಗಧರ್ಮವಾಗಿದೆ. ಎಂತಲೆ ಬೀಚಿಯವರು ಇಂಗ್ಲೀಷಿನಲ್ಲಿ ಮಂತ್ರ ಹೇಳುವ ವಿಡಂಬನೆ ಮಾಡಿದ್ದಾರೆ. ನಾಟಕದ ವಿಮರ್ಶೆ ಮಾಡುವಾಗಲೂ ವೆಲ್‌ಮೇಡ್ ಪ್ಲೇ, ಇಲ್‌ಮೇಡ್ ಪ್ಲೇ ಎಂದು ಚರ್ಚಿಸುವ ಹವ್ಯಾಸವಿದೆ, ನಮ್ಮ ಸಮಿತಿಗಳಿಗೆ. ಲಾಸೇ ಜಾಸ್ತಿ ಎನ್ನುವ ಕನ್ನಡ ಚಿತ್ರ ನಿರ್ಮಾಪಕರೂ ಇದ್ದಾರೆ ನಮ್ಮಲ್ಲಿ.

ನವ್ಯ ಕವನಗಳ ಮಾತಂತೂ ಗೊತ್ತಿದ್ದೇ. ಕನ್ನಡದಲ್ಲಿ ಸಂಸ್ಕೃತ ಪದಗಳು ಸೇರಿದಂತೆ ಇಂಗ್ಲೀಷ್ ಪದಗಳು ಕವನಗಳಲ್ಲಿ ಪ್ರವೇಶಿಸಿವೆ. ಆ ಪದಗಳ ಮೇಲೆಯೇ ವಿನ್ಯಾಸಗಳು, ಅರ್ಥಶೋಧಗಳು, ಧ್ವನಿಗಳು, ಕನ್ನಡಾಂಗ್ಲ ಮಿಶ್ರ ಭಾವಭೇದಗಳನ್ನು ಹುಟ್ಟಿಸುವ ರೀತಿಯನ್ನು ನೋಡಿದರೆ ಇನ್ನು ಕೇವಲ ಕನ್ನಡ ಕಲಿತವರು ಕಾವ್ಯವನ್ನು ಅರ್ಥ ಮಾಡಿಕೊಳ್ಳಲಾರರೆಂದೇ ನನ



"ನಿಮ್ಮನ್ನ ಇವತ್ತು ಕೊಲ್ತೀನೇಂತ ಬೆದರಿಕೆ ಹಾಕಿದ್ದಾನೇನು? ನಾನು ಹೊರಗೇ ಕಾದಿದ್ದು, ಅವನು ಕೊಲೆ ಮಾಡ್ತಲೆ ರೆಡ್'ಹ್ಯಾಂಡಾಗಿ ಹಿಡೀತೀನಿ ಕಾಳಜಿ ಮಾಡಬೇಡಿ."

ಬಹುದು. ಕನ್ನಡ ಅರ್ಥ ಮಾಡಿಕೊಳ್ಳುವದಕ್ಕೆ ಇಂಗ್ಲೀಷ್ ಭಾಷೆಯ ಅಭ್ಯಾಸ ಅಗತ್ಯವೆಂದೆನಿಸುತ್ತದೆ. ಹಿಂದೊಮ್ಮೆ ಸಂಸ್ಕೃತ ತಿಳಿಯದವರು ಕನ್ನಡ ಕಲಿಯಲು ಅನರ್ಹರು ಎಂದೆನಿಸಿತ್ತಂತೆ. ಹೌದು ಇನ್ನೊಂದು ಭಾಷೆಯ ಅಭ್ಯಾಸವೇ ತಮ್ಮ ಭಾಷೆಯ ಬೆಡಗನ್ನೂ ಸತ್ವವನ್ನೂ ತಿಳಿದುಕೊಳ್ಳಲು ಅನುವು ಮಾಡಿಕೊಡುತ್ತದೆ. ಆದರೆ ಮನಿಆರ್ಡರ್ ಬಂದಾಗ ಫ್ರಂ ಅಡ್ರೆಸ್ ನೋಡಿದಳು ಎಂಬುದು ಎಂತಹ ಸುಂದರ ಕನ್ನಡ?

ಇತ್ತೀಚಿನ ಹರಟೆಗಳು ಲಘು ಬರೆಹಗಳಂತೂ ಇಂಗ್ಲೀಷ್ ಶಬ್ದಗಳಿಲ್ಲದೆ ಬರೆಯಲು ಸಾಧ್ಯವಿಲ್ಲವೆಂಬ ಸಾಹಿತ್ಯ ಪ್ರಕಾರಗಳೆನಿಸಿವೆ. ಇಂಗ್ಲೀಷ್ ಪದಗಳು ಸೂಚಿಸುವ - ಹಾಸ್ಯ ವಿಡಂಬನೆಗಳೇ ಇಂತಹ ಬರಹಗಳ ಜೀವಾಳ. ಆ ಪದಗಳೊಂದಿಗಿನ ಕನ್ನಡ ಪದಗಳ ಸೂಚ್ಯಾರ್ಥಗಳೇ ಇಂದು ಹೆಚ್ಚು ಅರ್ಥಗರ್ಭಿತ ಶ್ರೇಷ್ಠ ಮಟ್ಟದ ವಿಡಂಬನೆಗಳು. ಆಂಗ್ಲ ಸಾಹಿತಿಗಳ ಲೇಖನಗಳು ಉಕ್ತಿಗಳು ಇಂತಹ ಬರೆಹಗಳ ಸ್ಫೂರ್ತಿಯ ಸೆಲೆಗಳು. ಆಂಗ್ಲ ಸಾಹಿತ್ಯದ ಪ್ರಭಾವ ನಮ್ಮ ಸಾಹಿತ್ಯದ ಮೇಲೆ ಉಂಟಾಗುವದು ಅನಿವಾರ್ಯವೆನಿಸಿದಂತೆ ಯೋಗ್ಯವು ಆಗಿದೆ. ಆದರೆ ಕನ್ನಡವು ಅದರಲ್ಲಿ ಹುದುಗಿಹೋಗಿದೆಯೋ ಮರೆಯಲ್ಲಿ ನಿಂತು ನೋಡುವ ಭಾಷೆಯಾಗಬಾರದು. 'ಲಲಿತಪದ' ಕನ್ನಡದಲ್ಲಿ ಲಾಲಿತ್ಯಕ್ಕೆ ಸ್ವತಂತ್ರ ಸ್ಥಾನವಿಲ್ಲವೇ? ವೈಜ್ಞಾನಿಕ ವೈಚಾರಿಕ ಪ್ರಬಂಧಗಳಲ್ಲಿ ಇಂಗ್ಲೀಷ ಭಾಷೆ ಬಹುಮಟ್ಟಿಗೆ ಅನಿವಾರ್ಯವೆನ್ನಬಹುದು, ಆಡಳಿತದ ಪರಿಭಾಷೆಯಂತಹ ಪ್ರಾರಂಭದಲ್ಲಿ ಇಂತಹ ಪ್ರಭಾವ ತಪ್ಪಿದ್ದಲ್ಲಿ ಬೆಳೆಯುವ ಭಾಷೆ ಸುಸಂಬದ್ಧವಾಗಿ ವೈಜ್ಞಾನಿಕ, ಸ್ವತಂತ್ರವಾಗಿಯಲ್ಲ,

ವಿಮರ್ಶೆಯ ರೀತಿಗಳನ್ನು ಹೇಳಲೇ ಇಂಗ್ಲಿಷ್ ಕನ್ನಡಕಗಳನ್ನು ಹಾಕಿಕೊಂಡೇ ನಮ್ಮ ಕೃತಿಗಳನ್ನು ಪರೀಕ್ಷಿಸುತ್ತಾರೆ. ವಿಮರ್ಶಕರು. ಆ ಕೃತಿಗಳ ಪ್ರಯೋಗಶಾಲೆಯಲ್ಲಿಯೇ ಇಲ್ಲಿಯ ಸಾಹಿತ್ಯವನ್ನು ನೋಡುತ್ತಾರೆ. ಇಂಗ್ಲೀಷಿನ ಪ್ರಯೋಗಗಳೊಂದಿಗೆ ಹೋಲಿಸುತ್ತಾರೆ. ಇಂಗ್ಲೀಷಿನ ಸಾಹಿತ್ಯಾಭ್ಯಾಸಿಗಳೇ ಕನ್ನಡದ ವಿಮರ್ಶಕರಾಗುತ್ತಾರೆ. ಅವರಲ್ಲಿ ವಿಮರ್ಶಾ ಶಕ್ತಿ ಬೆಳೆದಿರಬಹುದು. ಅಭ್ಯಾಸ ದೃಷ್ಟಿ ಬೆಳೆದಿರಬಹುದು. ಅವರು 'ಅವಳ ತೊಡಿಗೆ ಇವಳಿಗಿಟ್ಟು' ನೋಡಬಯಸುತ್ತಾರೆ. ಗ್ರಿಲೆಟ್ ಹೀಗೆ ಮಾಡಿದ್ದಾನೆ. ಸಾರ್ತ್ರನ ರಿಪ್ರಿವ್ ಕಾದಂಬರಿ ಹೀಗಿದೆ. ಪ್ರಸ್ತುತ ಕಾದಂಬರಿ ಆ ರೀತಿಯನ್ನು ಸರಿಯಾಗಿ ಹಿಡಿಯುವಲ್ಲಿ ಯಶಸ್ವಿಯಾಗಿಲ್ಲವೆಂದು ವಾದಿಸುತ್ತಾರೆ. ನಾಟಕಗಳಿಗೆ ಬ್ರೆಕ್ಟನ ಕೃತಿಗಳನ್ನು ಎತ್ತಿ ತೋರಿಸುತ್ತಾರೆ. 'ಬದ್ಧ ಸಾಹಿತ್ಯ' ಬದ್ಧ ಲೇಖಕ 'ಅಮೂರ್ತವಾದ ದಂತಗೋಪುರ' ಸ್ಪಂದಿಸುವದು ಸಂಯೋಜನೆ ಸ್ವನಿಷ್ಠತಾವಾದ ಮೊದಲಾದ ಹೊಸ ಶಬ್ದಗಳ ಪ್ರಯೋಗ ಹೆಚ್ಚುತ್ತಿವೆ. 'ರೆಲೆವೆಂಟ್' 'ಅಂಥೆಟಿಕ್' 'ಗಾಡಿ' (Gaudy) ಎಂಬ ಶಬ್ದಗಳಂತೂ ವಿಮರ್ಶೆಗೆ ಅನಿವಾರ್ಯವೆನಿಸಿಬಿಟ್ಟಿವೆ. ಇವುಗಳಲ್ಲಿಯೂ ಇಂಗ್ಲೀಷ್ ಮಾಧ್ಯಮದ ಕನ್ನಡ ಕನ್ನಡವನ್ನೇ ಸ್ಪಷ್ಟವಾಗಿ ಕಾಣಬಹುದು. ಇವುಗಳ ಕನ್ನಡದ ರೀತಿಗಳನ್ನೇ ಮರೆಸುತ್ತಿವೆಯೋ ಇಲ್ಲವೆ ಹೊಸ ಹಾದಿಗಳನ್ನು ನಿರ್ಮಿಸುತ್ತಿವೆಯೋ? ಈ ವಿಮರ್ಶಕರು ಕನ್ನಡಕ್ಕೆ 'ಬದ್ಧ'ರಾಗಿದ್ದಾರೆಯೋ?

ಹೀಗೆ ಇಂಗ್ಲೀಷ್‌ಮಯ ಕನ್ನಡ ಸಾಹಿತ್ಯ ಕಳೆದ ಕೆಲ ದಶಕಗಳಿಂದ ನಡೆದು ಬಂದಿದೆಯೆನ್ನಬೇಕೆ? ಇದು ನಡೆದು ಬಂದ ದಾರಿಯಲ್ಲ. ಇತ್ತೀಚಿನ ದಶಕಗಳಲ್ಲಿ ನಾಗಾಲೋಟದಲ್ಲಿ ಧಾವಿಸುತ್ತಿರುವ ಕನ್ನಡ ಸಾಹಿತ್ಯ ಈ ರೀತಿ ಸಾಗಿದರೆ ಶತಮಾನದಂತ್ಯದೊಳಗಾಗಿ ಪೂರ್ತಿ ಇಂಗ್ಲೀಷ್ ಮಯವಾಗುವದರಲ್ಲಿ ಸಂದೇಹವಿಲ್ಲ. ಇಂಗ್ಲೀಷ್ ತಿಂಡಿಗಳೂ ನಮ್ಮ ಜೀವನದಲ್ಲಿ ಬಂದಿವೆಯಷ್ಟೇ ಅಲ್ಲ, ಕನ್ನಡ ತಿನಿಸುಗಳು ಇಂಗ್ಲೀಷ್ ದೀಕ್ಷೆ ಪಡೆದಿವೆ. ಬನಾನಾ ಶಿರಾ, ಸ್ವೀಟ್ ಬಾತ್, ಕರ್ಡ್ಸ್ ಬಾತ್‌ಗಳು ಕನ್ನಡವನ್ನು ಮರೆಸಿಲ್ಲವೆ? ನಮ್ಮ ವಿಶ್ವವಿದ್ಯಾಲಯಗಳು ಕನ್ನಡ ಪತ್ರಿಕೆಗಳಲ್ಲಿ ವಾರ್ಸಿಟಿ ಎಂಬ ರೂಪತಾಳುವದನ್ನು ನೋಡಿದರೆ ನನಗೆ ತುಂಬ ಬೇಸರ...ಬೇವಾರ್ಸಿ ತೀರ ಹತ್ತಿರವಾಗಿದೆಯಲ್ಲ ಎಂದು! ಕಿರಿದಾಗಿಯೇ ಹೇಳಬೇಕೆಂದರೆ 'ವಿ.ವಿ.' ಎಂದರಾಗದೆ.

ಇಂಗ್ಲೀಷ್ ಮಾಧ್ಯಮದ ಶಿಕ್ಷಣ ಮಾತ್ರ ನಮ್ಮ

ಕನ್ನಡವನ್ನು ಈ ದುಸ್ಥಿತಿಗೆ ತಂದಿದೆಯೇ? ಇಂಗ್ಲೀಷಿನ ಪ್ರಭಾವ ಭಾರತದ ಅನೇಕ ಭಾಷೆಗಳ ಮೇಲೆ ಆಗಿದೆ. ಆದರೆ ತನ್ನ ಸತ್ವವನ್ನು ಇಷ್ಟು ಬೇಗ ಕಳೆದುಕೊಳ್ಳುತ್ತಿರುವ ಭಾಷೆ ಭಾರತದಲ್ಲಿ ಪ್ರಾಯಶಃ ಕನ್ನಡವೊಂದೇ ಎಂದು ಕಾಣುತ್ತದೆ. ಭದ್ರ ತಳಹದಿಯ ಭಾಷೆಗೆ ಇದು ಶೋಭೆ ತರುವಂತಹದಲ್ಲ. ಭಾಷಾ ಜಾಗೃತಿಯಿಂದ ಇತರಲ್ಲಿ ಇಂಗ್ಲೀಷ್ ಬಳಕೆ ಕಡಿಮೆಯಾಗುತ್ತಿದೆ. ಕನ್ನಡದಲ್ಲಿಯ ಪ್ರಸಾರ ಮಾಧ್ಯಮಗಳೆಲ್ಲ ಸಾಹಿತ್ಯ ಪ್ರಕಾರಗಳೆಲ್ಲ ಇತ್ತ ಲಕ್ಷ್ಯ ಪೂರೈಸುತ್ತಿರುವುದು ತೀರ ಕಡಿಮೆ. ಭಾಷಾ ಶುದ್ಧತೆ, ಬರವಣಿಗೆಯ ಭಾಷೆಯ ಸ್ವೀಕೃತ ರೀತಿಯ ಬೆಳವಣಿಗೆಗಳು ವಾಸ್ತವತೆಯ ಲಘು ವಿಚಾರಗಳಿಂದ ಲಘು ಪ್ರಯೋಗಗಳಿಂದ ಕುಂಠಿತಗೊಳ್ಳುತ್ತಿವೆ. ಕನ್ನಡದ ಪ್ರಾದೇಶಿಕ ಭಾಷೆಯ ಚೆಲುವನ್ನು ಯಾರೂ ಅಲ್ಲಗಳೆಯಲಾರರು. ಆದರೂ ಅನಿರ್ಬಂಧ ಇಂಗ್ಲೀಷಿನ ಉಪಯೋಗ ಇಲ್ಲವೆ ಪರಭಾಷೆಯ ಪದಗಳ ಪ್ರಯೋಗಗಳು ಕನ್ನಡವನ್ನು ಎಂದೂ ನಾಶ ಮಾಡುವಂತಾಗಬಾರದು.

ಭಾಷಣಗಳಲ್ಲೂ ಇಂಗ್ಲೀಷ್ ಮಾಧ್ಯಮದ ಪ್ರಭಾವವನ್ನು ಕಾಣಬಹುದು. ಸಭೆಯಲ್ಲಿ ಒಬ್ಬ ಗಣ್ಯ ಕನ್ನಡಿಗರಲ್ಲದವರು ಉಪಸ್ಥಿತರಿದ್ದರಂತೂ ನಮ್ಮ ಭಾಷಣಕಾರರು ಇಂಗ್ಲಿಷಿನಲ್ಲಿಯೇ ನುಡಿಮುತ್ತುಗಳನ್ನುದುರಿಸುವರು. ಆ ಗಣ್ಯರಿಗೆ ಕನ್ನಡ ಕೇಳುವ ಆಸ್ಥೆಯಿದ್ದರೂ ಇಂತಹ ಗೌರವ ಆತಿಥ್ಯವನ್ನು ತೋರಿಸುವ ಕನ್ನಡ ಮಾನ್ಯರು ಇದ್ದಾರೆ. ಕನ್ನಡದಲ್ಲಿ ಮಾತನಾಡುವ ಆತ್ಮವಿಶ್ವಾಸವನ್ನೇ ಕಳೆದುಕೊಂಡವರಿಗಂತೂ ನಮ್ಮಲ್ಲಿ ಕೊರತೆ ಇಲ್ಲ. ಇಂಥವರಿಗೆ ಇಂಗ್ಲೀಷೇ ಊರುಗೋಲು.

ಗೋಕಾಕ ವರದಿಯು ನಮ್ಮ ಜನರಲ್ಲಿ ಒಂದು ಹೊಸ ಜಾಗೃತಿಯನ್ನು ಮೂಡಿಸಿದೆಯೆನ್ನುತ್ತಾರೆ. ಅದು ಕೇವಲ ಆಡಳಿತದ ಶಿಕ್ಷಣ ರಂಗದ ಮಾತಾಯಿತು. ನಿತ್ಯಜೀವನದ ಪ್ರತಿಬಿಂಬವೆನಿಸುವ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಆಕ್ರಮಣಕಾರಿ ರೀತಿಯಲ್ಲಿ ಬೆಳೆದಿರುವ ಬೆಳೆಯುತ್ತಿರುವ ಇಂಗ್ಲೀಷ್ ಮಾಧ್ಯಮದಿಂದ ಕನ್ನಡಕ್ಕೆ ಮುಕ್ತಿ ಇಲ್ಲವೇ? ಸಾಹಿತ್ಯ ಜೀವನದ ಪ್ರತಿಬಿಂಬವಾದರೂ ಅದರಲ್ಲಿಯ ಪ್ರಯೋಗಗಳು ಕಾಲಾನುಕ್ರಮದಲ್ಲಿ ಜೀವನದಲ್ಲಿಯ ಮಾರ್ಪಾಡುಗಳನ್ನು ಮೂಡಿಸುವ ಶಕ್ತಿ ಪಡೆದಿದೆಯೆಂಬುದನ್ನು ಮರೆಯಬಾರದು.

ಇಂದು ಪತ್ರಿಕೆಗಳಿಗೆ ಭೂಷಣವೆನಿಸಿದ ಅತ್ಯಂತ ಸ್ವಾರಸ್ಯಕರವೆನಿಸಿದ ಸಿನಿಮಾ ಸುದ್ದಿಗಳಲ್ಲಿಯ ಕನ್ನಡ ಭಾಷೆ ನೋಡಿದರೆ ರಿಹರ್ಸಲ್, ಟೇಕ್, ರೀಟೇಕ್, ಓಕೆ, ರೆಕಾರ್ಡ್ ಮೂಡ್, ಟ್ರಿಕ್, ಶಾಟ್, ರೀಮೇಕ್, ಶಬ್ದಗಳ ಸರಮಾಲೆಯೇ ಕಂಡುಬರುತ್ತದೆ. ರಾಷ್ಟ್ರೀಯ ಭಾವನೆ ದೇಶದಲ್ಲಿ ಬೆಳೆಯುತ್ತಿದ್ದಾಗ ರಾಷ್ಟ್ರೀಯ ಶಾಲೆಗಳು ವಿದ್ಯಾಲಯಗಳು ರೂಪ ತಳೆದವು. ಬೆಂಗಳೂರಿನಲ್ಲಿಯೂ ರಾಷ್ಟ್ರೀಯ ವಿದ್ಯಾಲಯ ಬಂತು. ಅದರ ಹೆಸರಿನ ಒಂದು ರಸ್ತೆಯೂ ಬಳಕೆಯಲ್ಲಿ ಬಂತು. ಆದರೆ ಅದು ಇಂದು ಆರ್. ವಿ. ರಸ್ತೆ ಎನಿಸಿ ರಾಷ್ಟ್ರೀಯತೆಯ ಮೇಲೂ ಕನ್ನಡದ ಮೇಲೂ ಇಂಗ್ಲೀಷ್ ಹೊದಿಕೆ ಹೊಚ್ಚಿದಂತಾಗಿದೆ.

ಕನ್ನಡವೇ ಇಂಗ್ಲೀಷ್‌ಮಯವಾದಾಗ ಕನ್ನಡಕ್ಕೆ ಬೇರೆ ಲಿಪಿಯಾದರೂ ಯಾಕೆ ಬೇಕು? ಎರಡು ಸಾವಿರ ವರ್ಷಗಳಿಗೂ ಮಿಕ್ಕಿದ ಪರಂಪರೆಯುಳ್ಳ ಕನ್ನಡ ಇಂಗ್ಲೀಷಿನ ಹೊಡೆತಕ್ಕೆ ಹೀಗೆ ತತ್ತರಿಸುವಂತಾಗಬಾರದು. ಜೀವಂತ ಭಾಷೆಗೆ ಬದಲಾವಣೆ ಸಾಮಾನ್ಯ ಧರ್ಮ, ಸಹಜ ಧರ್ಮವೂ ಸರಿ. ಆದರೆ ಸಹಜವಾಗಿ ಹಿತವಾಗಿ ತನ್ನ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ಹೊಸ ಹೊಸದನ್ನು ಬೆಳೆಸಿಕೊಳ್ಳಬೇಕು.



ಬಹೂಪಯೋಗಿ ಸಿಟ್ರಿಕ್ ಆಮ್ಲ

ಎಸ್. ವೆಂಕಟೇಶಮೂರ್ತಿ

ಸಿಟ್ರಿಕ್ ಆಮ್ಲ ಅಥವಾ ಸಿಟ್ರಿಕ್ ಆ್ಯಸಿಡ್ ಹೆಸರನ್ನು ಯಾರು ತಾನೆ ಕೇಳಿಲ್ಲ? ನಿಂಬೆ ಹಣ್ಣಿನ ಅಭಾವವಿದ್ದಾಗ ನಿಂಬೆ ರಸದ ಬದಲಿಗೆ ಸಿಟ್ರಿಕ್ ಆಮ್ಲದ ಪುಡಿಯನ್ನು ಉಪಯೋಗಿಸುವುದಿಲ್ಲವೆ? ಆಹಾರ ಪದಾರ್ಥಗಳಿಗೆ ಹುಳಿಯ ರುಚಿಯನ್ನು ಕೊಡಲು ಸಾಮಾನ್ಯವಾಗಿ ಸಿಟ್ರಿಕ್ ಆ್ಯಸಿಡ್ಡನ್ನು ಗೃಹಿಣಿಯರು ಬಳಸುತ್ತಾರೆ. ಆದರೆ ಸಿಟ್ರಿಕ್ ಆಮ್ಲವು ಬಹುತೇಕ ಎಲ್ಲ ಸಸ್ಯಜನ್ಯ ವಸ್ತುಗಳಲ್ಲಿಯೂ ಆಮ್ಲ ಅಥವಾ ಲವಣ ರೂಪದಲ್ಲಿ ಸ್ವಲ್ಪ ಪ್ರಮಾಣದಲ್ಲಾದರೂ ಇರುತ್ತದೆ (ಕೆಲವು ವಸ್ತುಗಳಲ್ಲಿ ಒಂದು ಕಿಲೋಗ್ರಾಮಿನಲ್ಲಿ ಕೆಲವು ಮಿಲಿಗ್ರಾಮುಗಳಷ್ಟು). ನಿಂಬೆ ಹಣ್ಣಿನ ವಿಶೇಷವೆಂದರೆ, ಅದರಲ್ಲಿ ಪ್ರತಿ ಕಿಲೋಗ್ರಾಮಿಗೆ ಸುಮಾರು ಐವತ್ತು ಗ್ರಾಮುಗಳಷ್ಟು ಸಿಟ್ರಿಕ್ ಆಮ್ಲವು ಸೇರಿರುತ್ತದೆ. ಪ್ರಾಣಿಗಳ ಅಂಗಾಂಶಗಳಲ್ಲಿ ಹಾಗೂ ದೇಹದಲ್ಲಿನ ದ್ರವಗಳಲ್ಲಿಯೂ ಸಿಟ್ರಿಕ್ ಆಮ್ಲವು ಅಡಗಿರುತ್ತದೆ. ಹಾಲಿನಲ್ಲಿ ಪ್ರತಿ ಲೀಟರಿಗೆ ಸುಮಾರು ೧.೨ ಗ್ರಾಂ, ಹಲ್ಲು ಮತ್ತು ಮೂಳೆಗಳಲ್ಲಿ ಕಿಲೋಗ್ರಾಮಿಗೆ ೩ ಗ್ರಾಂ, ರಕ್ತದ ಸೀರಂನಲ್ಲಿ ಪ್ರತಿ ಲೀಟರಿಗೆ ೨೫ ಮಿಲಿಗ್ರಾಂ ಹಾಗೂ ಮಾನವ ಮೂತ್ರದಲ್ಲಿ ಪ್ರತಿ ಲೀಟರಿಗೆ ೦.೫ ಗ್ರಾಂನಷ್ಟು ಸಿಟ್ರಿಕ್ ಆಮ್ಲವು ಕೂಡಿರುತ್ತದೆಂದು ಪ್ರಯೋಗಗಳಿಂದ ತಿಳಿದುಬಂದಿದೆ.

ಸಿಟ್ರಿಕ್ ಆಮ್ಲವನ್ನು ರಾಸಾಯನಿಕವಾಗಿ ಬೀಟಾ–ಹೈಡ್ರಾಕ್ಸಿ ಟ್ರೈಕಾರ್ಬಾಕ್ಸೈಲಿಕ್ ಆ್ಯಸಿಡ್ ಎಂದು ಕರೆಯುತ್ತಾರೆ. ಆಧುನಿಕ ಪ್ರಪಂಚದ ವಾಣಿಜ್ಯೋದ್ಯಮದಲ್ಲಿ ಬಹಳ ಹೆಚ್ಚಿನ ಬೇಡಿಕೆಯಲ್ಲಿರುವ ಜೈವಿಕ ಮೂಲದ ಉತ್ಪನ್ನಗಳಲ್ಲಿ ಸಿಟ್ರಿಕ್ ಆಮ್ಲವು ಪ್ರಮುಖವಾಗಿದೆ.

ಕ್ರಿಸ್ತಶಕ ೧೭೮೪ರಲ್ಲಿ ಕಾರ್ಲ್ ವಿಲ್‌ಹೆಲ್ಮ್ ಶೀಲೆವ್ ಎಂಬಾತ ನಿಂಬೆ ಹಣ್ಣಿನ ರಸದಿಂದ ಸಿಟ್ರಿಕ್ ಆಮ್ಲವನ್ನು ಪ್ರಪ್ರಥಮವಾಗಿ ಶುದ್ಧ ರೂಪದಲ್ಲಿ ತಯಾರಿಸಿದ. ಆದರೆ ವಾಣಿಜ್ಯ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದ ತಯಾರಿಕೆ ಪ್ರಾರಂಭವಾದದ್ದು ೧೮೬೦ರ ನಂತರವೇ. ಇಟಲಿಯಿಂದ ತಂದ ಕ್ಯಾಲ್ಸಿಯಂ ಸಿಟ್ರೇಟ್ ಎಂಬ ಲವಣದಿಂದ ಇಂಗ್ಲೆಂಡಿನಲ್ಲಿ ಸಿಟ್ರಿಕ್ ಆಮ್ಲವನ್ನು ವಾಣಿಜ್ಯ ಪ್ರಮಾಣದಲ್ಲಿ ತಯಾರಿಸಿದರು. ೧೯೨೩ರಲ್ಲಿ ಕ್ಯೂರಿಯು ಹುದುಗುವಿಕೆಯ ವಿಧಾನದಿಂದ ಸಿಟ್ರಿಕ್ ಆಮ್ಲವನ್ನು ತಯಾರಿಸಿದರು. ತೀವ್ರ ಹುದುಗುವಿಕೆಯ ವಿಧಾನವನ್ನೇ ಸಿಟ್ರಿಕ್ ಆಮ್ಲದ ತಯಾರಿಕೆಗೆ ಈಗಲೂ ಬಳಸಲಾಗುತ್ತದೆ. ಕಾಕಂಬಿಯನ್ನು ಹುದುಗುವಿಕೆಗೆ ಒಳಪಡಿಸಿ ಸಿಟ್ರಿಕ್ ಆಮ್ಲವನ್ನು ತಯಾರಿಸುತ್ತಾರೆ. ಬಿಳಿ ಪುಡಿಯಾದ ಇದು ನೀರಿನಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಕರಗುತ್ತದೆ.

ಕೈಗಾರಿಕೆಗಳಲ್ಲಿ ಬಳಸುವ ರಾಸಾಯನಿಕ ವಸ್ತುಗಳಲ್ಲಿ ಸಿಟ್ರಿಕ್ ಆಮ್ಲವು ಬಹಳ ಪ್ರಮುಖ ಸ್ಥಾನ ಪಡೆದಿದೆ. ಪಾನೀಯಗಳ ತಯಾರಿಕೆ ಆಹಾರ ಮತ್ತು ಔಷಧೋದ್ಯಮಗಳಲ್ಲಿ ಸಿಟ್ರಿಕ್ ಆಮ್ಲವು ಹೆಚ್ಚಿನ ಪ್ರಮಾಣದಲ್ಲಿ ಬಳಕೆಗೆ ಬಂದಿದೆ. ಇಷ್ಟೇ ಅಲ್ಲದೆ ಲೋಹ

ಗಳನ್ನು ಶುಭ್ರಗೊಳಿಸುವುದು, ವಿದ್ಯುಲ್ಲೇಪನ ಮುಂತಾದ ಕ್ಷೇತ್ರಗಳಲ್ಲಿಯೂ ಈ ಆಮ್ಲದ ಉಪಯುಕ್ತತೆ ಕಂಡುಬಂದಿದೆ. ನಮ್ಮ ದೇಶದಲ್ಲಿ ಮುಖ್ಯವಾಗಿ ಪಾನೀಯಗಳ ತಯಾರಿಕೆ ಹಾಗೂ ಆಹಾರ ಸಂಸ್ಕರಣಗಳಲ್ಲಿ ಸಂರಕ್ಷಕ ವಸ್ತುವಾಗಿ ಸಿಟ್ರಿಕ್ ಆಮ್ಲವನ್ನು ಬಳಸಲಾಗುತ್ತಿದೆ. ಔಷಧ ಉದ್ಯಮದಲ್ಲಿ ಈ ಆಮ್ಲದ ಬಳಕೆ ದಿನೇ ದಿನೇ ಹೆಚ್ಚುತ್ತಿದೆ.

ನೀರಿನಲ್ಲಿ ಅತಿ ಹೆಚ್ಚು ವಿಲೀನವಾಗುವ ಗುಣ ಅತ್ಯಲ್ಪ ದುಷ್ಪರಿಣಾಮ ಹಾಗೂ ಆಹ್ಲಾದಕರ ಹುಳಿಯು ರುಚಿ ಇತ್ಯಾದಿ ಗುಣಗಳನ್ನು ಹೊಂದಿರುವುದರಿಂದ ಸಿಟ್ರಿಕ್ ಆಮ್ಲವು ಸೋಡಾ ಮತ್ತಿತರ ಮೃದು ಪಾನೀಯಗಳು ಹಾಗೂ ಆಹಾರ ಕೈಗಾರಿಕೆಯಲ್ಲಿ ಬಹಳ ಉಪಯುಕ್ತವಾಗಿದೆ. ಸಿರಪ್‌ಗಳು, ಜೆಲ್ಲಿಗಳು, ಜಾಮ್‌ಗಳು, ಕ್ಯಾಂಡಿಗಳು, ಶೈತ್ಯೀಕರಿಸಿದ ಹಣ್ಣುಗಳು ಹಾಗೂ ಮೃದು ಪಾನೀಯಗಳಲ್ಲಿ ಆಮ್ಲಕಾರಿಯಂತೆ ಸಿಟ್ರಿಕ್ ಆಮ್ಲವು ಉಪಯೋಗಕ್ಕೆ ಬಂದಿದೆ. ಇಷ್ಟೇ ಅಲ್ಲದೆ ಇದು ಒಂದು ರೀತಿಯ ಆಹ್ಲಾದಕರ ಪರಿಮಳವನ್ನು ನೀಡುತ್ತದೆ.

ಸಿಟ್ರಿಕ್ ಆಮ್ಲದೊಂದಿಗೆ ಸೋಡಿಯಂ ಬೈಕಾರ್ಬೋನೇಟ್ (ಅಡುಗೆ ಸೋಡ) ಸಿಹಿಕಾರಿ ವಸ್ತು ಹಾಗೂ ಅನ್ಯ ಪರಿಮಳವನ್ನು ನೀಡುವ ವಸ್ತುಗಳನ್ನು ಬೆರೆಸಿ ಸಿಟ್ರಿಕ್ ಆಮ್ಲದ ಗುಳಿಗೆಗಳನ್ನು ತಯಾರಿಸುತ್ತಾರೆ.

ಈ ಗುಳಿಗೆಗಳು ನೀರಿನಲ್ಲಿ ವಿಲೀನಗೊಂಡಾಗ ಇಂಗಾಲಾಮ್ಲವನ್ನು ಉತ್ಪತ್ತಿ ಮಾಡುತ್ತವೆ. ಆದ್ದರಿಂದ ಈ ಗುಳಿಗೆಗಳನ್ನು ಮೃದು ಪಾನೀಯಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಇದು ಆಹಾರವಸ್ತುಗಳು ಪಚನವಾಗಲು ಸಹಾಯಕ. ಹಣ್ಣಿನ ರಸಗಳಲ್ಲಿ ಆಮ್ಲೀಯತೆಯನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿರುವಂತೆ ಮಾಡಿ ಹೆಚ್ಚು ಕಾಲ ಕೆಡದಂತೆ ಸಂರಕ್ಷಿಸುತ್ತದೆ. ಸಿಟ್ರಿಕ್ ಆಮ್ಲವು ಕ್ಯಾಂಡಿಗಳಲ್ಲಿ ಸಕ್ಕರೆಯು ಹರಳುಗಟ್ಟುವುದನ್ನು ತಪ್ಪಿಸುತ್ತದೆ. ಐಸ್‌ಕ್ರೀಮ್ ಬೇಗ ದ್ರವರೂಪ ತಾಳದಂತೆ ಮಾಡಲೂ ಸಿಟ್ರಿಕ್ ಆಮ್ಲದ ಉಪಯೋಗವಿದೆ.

ಸಿಟ್ರಿಕ್ ಆಮ್ಲದ ಲವಣವಾದ ಸೋಡಿಯಂ ಸಿಟ್ರೇಟ್. ಔಷಧ ತಯಾರಿಕೆಗಳಲ್ಲಿ ಬಳಕೆಗೆ ಬಂದಿದೆ. ರಕ್ತ ಮತ್ತು ಮೂತ್ರಗಳಲ್ಲಿ ಕ್ಷಾರ ಗುಣವುಂಟುಮಾಡಲು ಅಥವಾ ಹೆಚ್ಚಿನ ಆಮ್ಲೀಯತೆಯನ್ನು ನಿವಾರಿಸಲು ಸೋಡಿಯಂ ಸಿಟ್ರೇಟನ್ನು ಗುಳಿಗೆ ಅಥವಾ ಪುಡಿಯ ರೂಪದಲ್ಲಿ ನಿರ್ದೇಶಿಸುತ್ತಾರೆ. ಇದು ರಕ್ತ ಹೆಪ್ಪುಗಟ್ಟುವುದನ್ನು ತಡೆಯುವುದರಿಂದ ರಕ್ತ ಸಂಗ್ರಹ ಕೇಂದ್ರಗಳಲ್ಲಿ ಇದನ್ನು ಉಪಯೋಗಿಸುತ್ತಾರೆ. ಅನೇಕ ಔಷಧ ವಸ್ತುಗಳ ತಯಾರಿಕೆಯಲ್ಲಿ ನಿರ್ದಿಷ್ಟ ಆಮ್ಲೀಯತೆಯನ್ನುಂಟು ಮಾಡಲು ಸಿಟ್ರಿಕ್ ಆಮ್ಲದ ಬಳಕೆಯಾಗುತ್ತಿದೆ.

ಸಿಟ್ರಿಕ್ ಆಮ್ಲದ ಜಲೀಯ ದ್ರಾವಣವನ್ನು ಕೂದಲಿಗೆ ಹೊಳಪು ಕೊಡಲೂ ಬಳಸಬಹುದು. ಶುಭ್ರಕಾರಕ ದ್ರಾವಣಗಳಲ್ಲಿ ಸಿಟ್ರಿಕ್ ಆಮ್ಲ ಬಹು ಮುಖ್ಯವಾದ ಪೂರಕ ವಸ್ತುವೆನಿಸಿದೆ.

ಅನೇಕ ಕೈಗಾರಿಕೆಗಳಲ್ಲಿ ಸಿಟ್ರಿಕ್ ಆಮ್ಲದ ಉಪಯೋಗವಿದೆ. ಕಬ್ಬಿಣದ ತುಕ್ಕನ್ನು ನಿವಾರಿಸಲು ಸಿಟ್ರಿಕ್ ಆಮ್ಲವನ್ನು ಬಳಸಬಹುದು. ಬಹುತೇಕ ಎಲ್ಲಾ ಲೋಹ ಶುಭ್ರಕಾರಕಗಳಲ್ಲೂ ಸ್ವಲ್ಪ ಅಂಶ ಸಿಟ್ರಿಕ್ ಆಮ್ಲವನ್ನು ಬೆರೆಸುತ್ತಾರೆ. ತಾಮ್ರದ ವಿದ್ಯುಲ್ಲೇಪನದಲ್ಲಿ ಉತ್ತಮವಾದ ಹೊಳಪಿನ ಲೇಪನವುಂಟುಮಾಡಲು ಸಿಟ್ರಿಕ್ ಆಮ್ಲ ನೆರವು ನೀಡುತ್ತದೆ. ಮುದ್ರಣ ಉದ್ಯಮದಲ್ಲಿ ಶಾಯಿಗಳ ತಯಾರಿಕೆಯಲ್ಲಿ ಸಿಟ್ರಿಕ್ ಆಮ್ಲದ ಉಪಯೋಗವಿದೆ. ಇನ್ನೂ ಹಲವಾರು ಕೈಗಾರಿಕೆಗಳಲ್ಲಿ ಸಿಟ್ರಿಕ್ ಆಮ್ಲ ಅಥವಾ ಅದರ ಲವಣವನ್ನು ಪ್ರಯೋಜನಕರವಾಗಿ ಬಳಸಬಹುದಾಗಿದೆ. ಬಹು ಮುಖ ಉಪಯುಕ್ತತೆಯ ಕಾರಣ ಸಿಟ್ರಿಕ್ ಆಮ್ಲದ ಬೇಡಿಕೆ ದಿನೆ ದಿನೆ ಹೆಚ್ಚುತ್ತಿದೆ. ಹೆಚ್ಚುತ್ತಿರುವ ಬೇಡಿಕೆಗೆ ಅನುಸಾರವಾಗಿ ಹೆಚ್ಚಿನ ಉತ್ಪಾದನೆ ಆಗುತ್ತಿಲ್ಲ. ಹೀಗಾಗಿ ಬೆಲೆಯೂ ಜಾಸ್ತಿ.

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಅಂಜನ**
(ಅ) ಭಯಂಕರ (ಆ) ಪಲ್ಲಕಿ (ಇ) ಪೂಜೆ (ಈ) ಕಾಡಿಗೆ

೨. **ಪ್ರಾಕಾರ**
(ಅ) ಬಗೆ (ಆ) ಸುತ್ತುಗೋಡೆ (ಇ) ಪೆಟ್ಟು (ಈ) ಪ್ರತಾಪ

೩. **ದಿಗಂಬರ**
(ಅ) ಶಾಪ (ಆ) ಬತ್ತಲೆ (ಇ) ರೇಷ್ಮೆ ಬಟ್ಟೆ (ಈ) ಪೂರ್ವ ದಿಕ್ಕು

೪. **ಉತ್ಕಂಠ**
(ಅ) ಗಂಟಲು ಕಟ್ಟುವುದು (ಆ) ಗಲ್ಲಿಗೇರಿಸುವಿಕೆ (ಇ) ಆತುರ (ಈ) ಹಟ

೫. **ಪನ್ನಿ**
(ಅ) ನೀರು (ಆ) ಒಣ ಹೆಪ್ಪು (ಇ) ಕರ್ಪೂರ (ಈ) ತೊಟ್ಟಿಕ್ಕುವಿಕೆ

೬. **ತುಪ್ಪು**
(ಅ) ಹುಡುಕು (ಆ) ಉಗುಳು (ಇ) ಬೆಣ್ಣೆ (ಈ) ಗರಿ

೭. **ಹರವೆ**
(ಅ) ಎದುರಾಳಿ (ಆ) ಸೋಂತಿ (ಇ) ಆಚೆ ಪದ (ಈ) ಲಕ್ಷ್ಮಿ

೮. **ವೈಕಲ್ಯ**
(ಅ) ಕುಂದು (ಆ) ಶೈಲಿ (ಇ) ಒಂದು ರತ್ನ (ಈ) ಕುದುರೆ ಪಡೆ

೯. **ಅಸಂಗತ**
(ಅ) ಶತ್ರು (ಆ) ಲೆಕ್ಕವಿಲ್ಲದ (ಇ) ಹೊಂದಿಕೆ ಇಲ್ಲದ (ಈ) ಖಾಲಿ

೧೦. **ಭುಕ್ತಿ**
(ಅ) ಹಸಿವು (ಆ) ಬೂದಿ (ಇ) ಉಣ್ಣುವುದು (ಈ) ಕೊಂಕು

೧೧. **ಹಿಂಗೋಟು**
(ಅ) ದೋಣಿಯ ಹಿಂದಿನ ತುದಿ (ಆ) ಬೆನ್ನು ಬದಿಗಿರುವ ನೆಲ (ಇ) ಹೆಡಮುರಿಗೆ (ಈ) ತುಚ್ಛೀಕಾರ

೧೨. **ಧಾರಣೆ**
(ಅ) ನಂಬಿಕೆ (ಆ) ದರ (ಇ) ಕೊಯ್ಯುವುದು (ಈ) ಭೂಮಿ

'ಶಬ್ದ ಭಂಡಾರ'ದ ಸರಿಯಾದ ಅರ್ಥಗಳು

೧. **ಅಂಜನ** (ಈ) ಕಾಡಿಗೆ, ಮುಲಾಮು; ಅದೃಶ್ಯವಾಗಿರುವುದನ್ನು ಕಾಣಬಲ್ಲ ಶಕ್ತಿ ಕೊಡುವ ಕಣ್ಣಿನ ಮುಲಾಮು ಉದಾ–ಅಂಜನ ಹಾಕಿ ಹುಡುಕಿದರೂ ಸಿಗಲಿಲ್ಲ. [ಸಂ.]

೨. **ಪ್ರಕಾರ** (ಅ) ಬಗೆ, ವಿಧ, ರೀತಿ. ಉದಾ–ಮಲ್ಲಿಗೆಯಲ್ಲಿ ಹಲವು ಪ್ರಕಾರಗಳುಂಟು. [ಸಂ.]

೩. **ದಿಗಂಬರ** (ಅ) ದಿಕ್ಕುಗಳೇ ಬಟ್ಟೆಯಾಗುಳ್ಳ – ಅಂದರೆ ಬತ್ತಲೆ. ಉದಾ–ದಿಗಂಬರನಾಗಿ ತಿರುಗುತ್ತಾನೆ. [ಸಂ. ದಿಕ್ + ಅಂಬರ = ಬಟ್ಟೆ]

೪. **ಉತ್ಕಂಠೆ** (ಇ) ಆತುರ. ಉತ್ಸುಕತೆ, ತೀವ್ರವಾದ ಇಚ್ಛೆ. ಉದಾ–ಉತ್ಕಂಠೆಯಿಂದ ಫಲಿತಾಂಶ ನಿರೀಕ್ಷಿಸಿದ. [ಸಂ. ಉತ್ = ನೀಡಿದ + ಕಂಠ = ಕೊರಳು]

೫. **ಪನ್ನಿ** (ಅ) ಒಣ ಹೆಮ್ಮೆ, ಬಿಂಕ, ಹೆಗ್ಗಳಿಕೆ ಉದಾ–ಪನ್ನಿ ಕೊಚ್ಚುತ್ತ ತಿರುಗುತ್ತಾನೆ [ತುಳು]

೬. **ತುಪ್ಪು** (ಅ) ಉಗುಳು, ಉಗಿ, ಉದಾ–ಎಲೆ ಅಡಕೆ ಜಗಿದು ಅಂಗಳದಲ್ಲೇ ತುಪ್ಪುತ್ತಾರೆ. [ದೇಶ್ಯ]

೭. **ಪರವೆ** (ಈ) ಲಕ್ಷ್ಯ, ಪ್ರಜ್ಞೆ, ಅರಿವು. ಉದಾ – ಯಾತರ ಪರವೆಯೂ ಇಲ್ಲದ ಮನುಷ್ಯ. [ಫಾರಸಿ–ಪರವಾಹ್]

೮. **ವೈಕಲ್ಯ** (ಅ) ಕುಂದು, ಕೊರತೆ; ತಳಮಳ; ವಿಕಾರ, ಉದಾ – ಅಂಗವೈಕಲ್ಯ [ಸಂ.]

೯. **ಅಸಂಗತ** (ಇ) ಹೊಂದಿಕೆಯಿಲ್ಲದ; ಹಿಂದೆ ಮುಂದೆ ಸರಿಗೂಡದ; ಅಸಂಬದ್ಧ ಉದಾ – ನಿನ್ನ ವಾದಗಳು ಅಸಂಗತವಾಗಿವೆ. [ಸಂ. ಅ = ಇಲ್ಲ + ಸಂಗತ = ಸಂಬಂಧ]

೧೦. **ಭುಕ್ತಿ** (ಇ) ಉಣ್ಣುವುದು; ಅನುಭವಿಸುವುದು; ಉಪಭೋಗ. ಉದಾ–ಮುಕ್ತಿ ಸಿಗದಿದ್ದರೂ ಭುಕ್ತಿಗೆ ಕೊರತೆಯಿಲ್ಲ. [ಸಂ. ಭುಜ್ = ಉಣ್ಣು – ಇಂದ]

೧೧. **ಹಿಂಗೋಟು** (ಅ) ದೋಣಿಯ ಹಿಂದಣ ತುದಿ. [ದೇಶ್ಯ ಹಿಂ(= ಪಿನ್) = ಹಿಂದಣ + ಕೋಡು – ಕೋಟಿ = ತುದಿ]

೧೨. **ಧಾರಣೆ** (ಅ) ದರ, ಪದಾರ್ಥದ ಬೆಲೆಯ ಮಾನ. ಉದಾ–ಅಕ್ಕಿಯ ಧಾರಣೆ ಏರಿದೆ. [ಸಂ. ಧಾರಣೀ – ಶ್ರೇಣಿ, ಕ್ರಮ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ ... ಸಾಧಾರಣ
೯–೧೦ ,, ... ಉತ್ತಮ
೧೧–೧೨ ,, ... ಅತ್ಯುತ್ತಮ

ರಸಾಯನ

ಕ್ಯಾತ "ಶಕುಂತಲೋಪಾಖ್ಯಾನ" ಮಾಡಿದ್ದು

ಪ್ರೊ. ಬಿ. ಎನ್. ಸಂಪತ್

ನಮಸ್ಕಾರ ಸಾ..."

"... ... ..."

"ಗುರ್ತು ಸಿಗಲಿಲ್ವೆ ಸಾ..."

... ...

"ಅಲ್ಲಾ ಸಾ, ನಿಮ್ಮ ಹಳೇ ವಿದ್ಯಾರ್ಥಿ ಕ್ಯಾತನ್ನ ಇಷ್ಟು ಬೇಗ ಮರ್ತು ಬಿಡೋದೆ?" ಎಂದಾಗಲೇ ಶ್ಯಾಮಭಟ್ಟರಿಗೆ ಜ್ಞಾನೋದಯ ವಾಗಿದ್ದು. ಭಟ್ಟರು ಅನ್ಯಮನಸ್ಕರಾಗಿ ಸಿಟಿ ಬಸ್ಸು ಹತ್ತುವ ಯೋಚನೆ ಮಾಡುತ್ತಾ ರೈಲ್ವೆ ಸ್ಟೇಷನ್ ಬ್ರಿಡ್ಜ್ ಬಳಿ ಬರ್ತಿದ್ದಾಗ ಕ್ಯಾತ ವಿನಮ್ರರಾಗಿ ಗುರುಗಳನ್ನು ವಂದಿಸಿದ್ದ.

"ಸುಳ್ಳು ಯಾಕೆ ಹೇಳ್ಲಿ ಕ್ಯಾತ, ಮೊದಲು ನಿನ್ನ ಗುರ್ತು ಹತ್ತಲಿಲ್ಲಪ್ಪ. ಹೇಗಿದ್ದೀಯಾ?" ಎಂದು ಭಟ್ಟರು ಉಭಯ ಕುಶಲೋಪರಿ ಆರಂಭಿಸಿದರು.

"ಚೆನ್ನಾಗಿದ್ದೀನಿ ಸಾ, ನಿಮ್ಮಾಶೀರ್ವಾದದ ಬಲದ ಮೇಲೆ. ಗುರ್ತು ಸಿಗದಿದ್ದು ಹೆಚ್ಚಲ್ಲಾ ಈ ದಿರಸಿನಲ್ಲಿ. ಕುರ್ತಾ, ಪೈಜಾಮ ಹಾಕ್ತಿದ್ದ ಕ್ಯಾತನ್ನ ನೀವು ತಿರಿಪೀಸ್ ಸೂಟನಾಗೆ ನೋಡಿದ್ದು ಮೊದಲ್ನೆ ಸಲ ಅಲ್ವಾ ಸಾ," ಎಂದು ಕ್ಯಾತ ತನ್ನ ತಿರಿಪೀಸ್ ಸೂಟನಲ್ಲಿ ಇನ್ನೂ ಸ್ವಲ್ಪ ನೆಟ್ಟಗೆ ನಿಂತು ಭಟ್ಟರನ್ನು ತನ್ನ ಬಿಸಿಲಿಗೆ ಬಣ್ಣ ಬದಲಾಯಿಸುವ ಲೇಟೆಸ್ಟ್ ಗಾಜಿನ ಕನ್ನಡಕದಲ್ಲಿ ಅನುಕಂಪದ ದೃಷ್ಟಿಯಿಂದ ನೋಡ ಹತ್ತಿದ.

"ಏನ್ಮಾಡ್ತಿದ್ದೀಯಾ ಕ್ಯಾತ ಈಗ?" ಎಂದು ಕ್ಯಾತನ ಬ್ಯಾಕ್‌ಗ್ರೌಂಡ್ ಗೊತ್ತಿದ್ದ ಭಟ್ಟರು ಸ್ವಲ್ಪ ಸಂಕೋಚದಿಂದಲೇ ಕೇಳಿದರು. ದೇವರಿಗೆ ದಶಾವತಾರವಾದರೆ ಕ್ಯಾತನದು ಆ ಸಂಖ್ಯೆಯನ್ನೂ ಮೀರಿಸಿತ್ತು.

"ಹಾಗ್ಬನ್ನಿ ಸಾ ಮುಖ್ಯ ಪ್ರಶ್ನೆಗೆ; ಇಂಟರನೇಸನಲ್ ಅಸೋಸಿಯೇಟ್ಸ್ ಕಂಪನಿ ತೆಗೆದಿದ್ದೀನಿ ಸಾ," ಎಂದ ಕ್ಯಾತ ಹಲ್ಕಿರಿಯುತ್ತಾ.

"ಏನೇನು ಸಾಮಾನು ಮಾರ್ತೀಯಪ್ಪ ನಿನ್ನ ಕಂಪ್ನಿಲಿ," ಎಂದು ಪ್ರಶ್ನಿಸಿದರು ಭಟ್ಟರು.

"ಅಲ್ಲೇ ಸಾ ಇರೋದು ನನ್ನ ಬುದ್ಧಿ ಶಕ್ತಿ. ಸಾಮಾನು ಮಾರೊಲ್ಲಾ ಸಾ. ಬೇರೇವ್ರ ಸಾಮಾನು ಮಾರಿಸ್ತೀನಿ ಕುಂತ್ಕಂಡ ಕಡೇನೆ," ಕಣ್ಕಣ್ಣು ಬಿಡುತ್ತಾ ನಿಂತಿದ್ದ ಭಟ್ಟರನ್ನು

ನೋಡುತ್ತಾ, "ನಂಗೊತ್ತು ಸಾ ನಿಮಗರ್ತವಾಗ್ಲಿಲ್ಲ ಅಂತ–ಅಡ್ವರ್ಟೈಸಮೆಂಟ ಏಜನ್ಸಿ ಸಾ ನಾನು ತೆಗ್ದಿರೋದು. ಸಾಮಾನು ಮಾರೊವ್ರು ನಮ್ತಾವ ಬರ್ತಾರೆ. ಅವ್ರಿಗೆ ಎಕ್ಸಪರ್ಟ ಅಡ್ವೈಸ್ ಕೊಡ್ತೀನಿ. ಏನು ಸ್ಲೋಗನ್ ಉಪಯೋಗಿಸಿದ್ರೆ ಜನ ಹೀಗೆ ಬೇಸ್ತುಬೀಳ್ತಾರೆ... ಸಾರಿ... ರೀಯಾಕ್ಟ ಮಾಡ್ತಾರೆ ಅನ್ನೊದ್ನೆಲ್ಲಾ ಯೋಚಿಸ್ಬೇಕು ಸಾ," ಎಂದು ತನ್ನ ಕ್ರಿಯಾ ಕ್ಷೇತ್ರದ ಪರಿಚಯವನ್ನಾರಂಭಿಸಿದ.

"ಮಾಸ್ಕೆ ಹೇರಾಯಿಲ್ಲು ಮಾರ್ಬೇಕು ಅಂತ ಯಾವೋನೋ ಬರ್ತಾನೆ ಅನ್ನಿ, ನಾನು ಉಪಯೋಗಿಸೋದೆ ಈ ಹೇರಾಯಿಲ್ನ ಅಂತ ಯಾವೋನಾದ್ರು ಯಶಃಸ್ವಿತ ಫಿಲ್ಮಸ್ಟಾರ್ ಕೈಲಿ ಹೇಳಿಸ್ಬೇಕು ಸಾ. ಅವನ್ತಲೇಲಿ ವಿಗ್ ಇದ್ರೂ ಪರ್ವಾಗಿಲ್ಲ, ಬಕ್ರಾ ಪಬ್ಲಿಕ್ ಕೊಂಡ್ಕೊಳ್ತದೆ," ಎಂದು ಕ್ಯಾತ ತನ್ನ ಪ್ರೊಫೆಶನಲ್ ಸೀಕ್ರೆಟ್ಟನ್ನು ಭಟ್ಟರ ಮುಂದಿಟ್ಟ.

"ಅದಿರ್ಲಿ ನೀವು ಹೇಗಿದ್ದೀರಾ ಸಾ," ಎಂದು ಕ್ಯಾತ ಮರುಪ್ರಶ್ನೆಮಾಡಿದ. ಕೂಡಲೇ ಭಟ್ಟರ ಮುಖ ಜೋಲು ಬಿದ್ದಿತು.

"ಮನೇಲಿ ಯಾರ್ಗಾದ್ರು ಉಸಾರಿಲ್ವೆ ಸಾ?" ಎಂದು ಕ್ಯಾತ ಅವಸರವಾಗಿ ಸೇರಿಸಿದ.

"ಯಾರಿಗೂ ಏನಾಗಿಲ್ಲಪ್ಪಾ ಕ್ಯಾತ, ಎಲ್ಲಾ ಚೆನ್ನಾಗಿದ್ದಾರೆ. ಆದ್ರೆ ನನ್ನ ತಿಳಿಗೇಡಿತನದಿಂದ ನಾನೇವ್ರ ತಲೇಮೇಲೆ ಚಪ್ಪಡಿ ಎಳೆದಿದ್ದೇನೆ," ಎಂದಾಗ ಕ್ಯಾತನ ಕುತೂಹಲ ನಿಜವಾಗಿಯೂ ಕೆರಳಿಸಿತು.

"ಅದೇನ್ಸಾ ಅಂಗಂದ್ರೆ? ಸರಿಯಾಗಿ ಏಳಿದ್ರೆ ನನ್ ಕೈಲಾಗೋ ಸಾಯ ಮಾಡ್ತೀನಿ," ಎಂದು ಸೇರಿಸಿದ.

"ಎಲ್ಲಾ ನನ್ನ ಗ್ರಾಚಾರನಪ್ಪಾ ಕ್ಯಾತ. ಹೋದ ವರ್ಷ ನನಗೆ ರಿಟೈರಾಗಿದ್ದು ಗೊತ್ತಲ್ಲ ನಿನಗೆ. ಬಂದ ಪ್ರಾವಿಡೆಂಟ ಫಂಡನ್ನು ಗ್ರಾಚುಯಿಟೀನ ತೆಪ್ಪಗೆ ಯಾವ್ದಾದ್ರು ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಿದ್ರೆ ತಿಂಗ್ಳು ತಿಂಗ್ಳಿಗೆ ಬಡ್ಡೀನಾದ್ರೂ ಬರ್ತಿತ್ತು. ಹಾಳಾದ್ದು ಮಂಕು ದಿಣ್ಣೆ, ಕೆಲ್ಸ ಮಾಡ್ಕೊಂಡುಬಿಟ್ಟೆ," ಎಂದು ಭಟ್ಟರು ನಿಟ್ಟುಸಿರು ಬಿಟ್ಟರು.

"ಅದೇನ್ಸಾ, ಒಗಟಿನ ಹಾಗೆ ಮಾತಾಡ್ತೀರಲ್ಲ; ಸ್ವಲ್ಪ ಸ್ಪಷ್ಟವಾಗಿ ಏಳಿ," ಎಂದ ಕ್ಯಾತ ಇಂಪೇಶಂಟಾಗಿ.

"ಬಡ್ಡಾ, ನೀ ಮಡಗಿದಂಗಿರು ಅನ್ನೋ ಗಾದೆ ಹಾಗೆ ನಾನು ಸುಮ್ನಿರ್ಬೇಕಾಗಿತ್ತಪ್ಪ. ರಿಟೈರಾದ ಮೇಲೆ ಎಷ್ಟೋ ಜನ ಪುಸ್ತಕ ಬರೀತಾರೆ. ಸ್ವಂತ ಛಾಪಿಸಿ ಹಣ ಸಂಪಾದಿಸ್ತಾರೆ. ನಾನ್ಯಾಕೆ ಮಾಡ್ಬಾರ್ದು ಈ ಸಾಹಿತ್ಯ ಕೃಷೀನ ಅನ್ನೋ ಹುಳ ಬಹಳ ದಿನದಿಂದ ತಲೆ ಕೊರೀತಿತ್ತಪ್ಪ. ಕಷ್ಟಪಟ್ಟು ಕೊನೆಗೂ ಒಂದು ಒಳ್ಳೆ ಪುಸ್ತಕ "ಶಂಕುಂತಲೋಪಾಖ್ಯಾನ" ಬರೆದೆ. ಕೈಲಿದ್ದ ನಲವತ್ತು ಸಾವಿರ ರೂಪಾಯಿ ಹಾಕಿ ಪುಸ್ತಕ ಛಾಪಿಸಿಯೂ ಬಿಟ್ನಪ್ಪ ಕ್ಯಾತ," ಎಂದು ಕೊರಗಿದರು ಭಟ್ಟರು. ಕ್ಯಾತನಿಗೆ ಇನ್ನೂ ಭಟ್ಟರ ಸ್ಥಿತಿ ಅರ್ಥವಾಗ್ಲಿಲ್ಲ. "ಏನೋ ಮಾಡ್ಬೈರ್ನ ಮಾಡ್ದಾಗೆ ಏಳಿ ಬುಟ್ರಲ್ಲಾ ಸಾ," ಎಂದು ಸೇರಿಸಿದ.

"ಇದಕ್ಕಿಂತ ಮೂರ್ಖತನ ಇನ್ನೇನಾಗ್ಬೇಕು ಕ್ಯಾತ. ನಾಲ್ಕು ಸಾವಿರ ಪ್ರತಿ ಛಾಪಿಸಿ ಪ್ರತಿ ಒಂದಕ್ಕೆ ನಲವತ್ತು ರೂಪಾಯಿ ಬೆಲೆ ಇಟ್ಟೆ–ಈ ಲೆಕ್ಕಾಚಾರ ಹಾಕ್ಕೊಂಡು, ಕೊನೇ ಪಕ್ಷ ಎರಡುಸಾವಿರ ಪ್ರತಿ ಖರ್ಚಾದ್ರೂ ಸುಮಾರು ನಲವತ್ತು ಸಾವಿರ ಲಾಭ ಬರ್ತದೆ ಅಂತ."

"ಅಲ್ಲಾ ಸಾ, ಈ ಪ್ರಕಾಸ್ನ ಅನ್ನೋದು ಕೂಡಿ, ಕಳೆದು, ಗುಣಾಕಾರ ಹಾಕೋ ಲೆಕ್ಕ ಅಂದ್ಕಂಡ್ರ? ಈ ಯಾಪಾರ್ದಲ್ಲಿ ಮುಂದುವರೀ ಬೇಕಾದ್ರೆ ಬಾಳ ಪಾಕಡಾಗ್ಳು ಆಗಿರ್ಬೇಕು," ಎಂದು ಕ್ಯಾತ ಪ್ರಕಾಶನದ ವಿಚಾರವಾಗಿ ತನ್ನ ಜ್ಞಾನವನ್ನು ಪ್ರದರ್ಶಿಸಿದ.

"ನೀನು ಹೇಳೋದು ಸರೀನಪ್ಪ. ಕೈ ಸುಟ್ಕೊಂಡ ಮೇಲೆ ಬುದ್ಧಿ ಬಂತು, ಇರೋ ಹಣವೆಲ್ಲಾ ಕೈ ಬಿಟ್ಟು ಹೋಯಿತು. ಸದ್ಯ ಲಾಭ ಇರ್ಲಿ, ಹಾಕಿರೋ ಬಂಡವಾಳ ಬಂದ್ರೆ ಸಾಕು. ವಿಮರ್ಶೆಗೆ ಕಳುಹಿಸಿದ ಪ್ರತಿಗಳನ್ನು ಬಿಟ್ರೆ ನೂರು ಪುಸ್ತಕಾನೂ ಮಾರಿಲ್ಲಪ್ಪ. ಯಾವ ಮಾರಾಟಗಾರನ ಹತ್ತಿರ ತೋರಿಸ್ರೂ

ಐವತ್ತು ಪರ್ಸೆಂಟ ಕಮಿಶನ್ನು ಕೊಡಿ. ಅರವತ್ತು ಪರ್ಸೆಂಟು ಕೊಡಿ ಅಂತಾರಪ್ಪ," ಎಂದು ತೋಡಿಕೊಂಡರು. ಗುರುಗಳ ಶೋಚನೀಯ ಸ್ಥಿತಿಯನ್ನು ನೋಡಿ ಕ್ಯಾತನಿಗೆ ಕನಿಕರ ಉಕ್ಕಿ ಬಂತು.

ಇದ್ದಕ್ಕಿದ್ದಂತೆ ಏನೋ ಐಡಿಯಾ ಹೊಳೆದಂತಾಗಿ ಕ್ಯಾತ, "ಸಾ, ನಿಮ್ತಾವ ಇಲ್ಲಿ ಒಂದು ಪುಸ್ತಕ ಇದ್ರೆಕೊಡಿ," ಎಂದ. ಭಟ್ಟರು ಕೊಳೆ ಚೀಲದಿಂದ "ಶಕುಂತಲೋಪಾಖ್ಯಾನ"ದ ಒಂದು ಪ್ರತಿಯನ್ನು ಕ್ಯಾತನ ಕೈಯಲ್ಲಿಟ್ಟರು. ಕ್ಯಾತ ಪುಸ್ತಕವನ್ನು ಡಿಟೆಕ್ಟಿವ್ ಏಜನ್ಸಿ ಡೈರೆಕ್ಟರನಂತೆ ಸೂಕ್ಷ್ಮವಾಗಿ ಪರಿಶೀಲಿಸಿ, "ಪ್ರಿಂಟ್ ತುಂಬಾ ಚೆನ್ನಾಗಿದೆ ಸಾ. ನೀವು ಹಾಕ್ಸಿರೊ ಬಣ್ಣದ ಚಿತ್ರಗಳೆಲ್ಲಾ ಚೆನ್ನಾಗಿವೆ," ಎಂದು ಕ್ಯಾತ ತನ್ನ ಮೆಚ್ಚುಗೆ ವ್ಯಕ್ತಪಡಿಸಿದ.

"ವಿಮರ್ಶಕರೂ ಬಹಳ ಹೊಗಳಿದ್ದಾರಪ್ಪಾ, ಅಪರೂಪದ ಕೃತಿ ಎಂದಿದ್ದಾರೆ. ಇದೆಲ್ಲಾ ಏನು ಪ್ರಯೋಜನ ಪುಸ್ತಕ ಖರ್ಚಾಗದಿದ್ರೆ?"

ಕೆಲವು ನಿಮಿಷಗಳು ಕ್ಯಾತ ಯೋಚಿಸುತ್ತಾ ನಿಂತ. ಪ್ರೇರಣೆ ದೊರೆತ ಪ್ರವಾದಿಯಂತೆ ಒಮ್ಮೆಗೆ ಕ್ಯಾತ ಖುಷಿಯಾಗಿ, "ನಿಮ್ಮ ಪುಸ್ತಕಾನೆಲ್ಲಾ ಮಾರಿಸೀಕೊಡ್ಲಾ ಸಾ?" ಎಂದಾಗ ತಮ್ಮ ಕಿವಿಯನ್ನೇ ನಂಬದಂತಾಯಿತು ಭಟ್ಟರಿಗೆ. ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವವನಿಗೆ ಸೋರೆ ಬುರುಡೆ ಸಿಕ್ಕಂತಾಗಿತ್ತು ಭಟ್ಟರ ಸ್ಥಿತಿ. ಮತ್ತೆ ಭಟ್ಟರು, "ಏನಪ್ಪ ಕ್ಯಾತ, ಪುಸ್ತಕಗಳೆನ್ನೆಲ್ಲಾ ಮಾರಿಸಿಕೋಡ್ತೀನಿ ಅಂದ್ಯಾ?" ಎಂದರು.

"ನಿಮಗೆ ಕ್ಯಾತ ಅಂದ್ರೆ ಸರಿಯಾಗಿ ಗೊತ್ತಿಲ್ಲಾ ಸಾ. ಪುಸ್ತಕ ಮಾರಿಸಿಕೊಡೋ ಜವಾಬ್ದಾರಿ ನನ್ಮೇಲೀರ್ಲಿ," ಎಂದು ಪಾಂಡವರಿಗೆ ಆಶ್ವಾಸನೆ ಕೊಡುವ ಕೃಷ್ಣನಂತೆ ನುಡಿದ.

"ನೀನೂ ಏನಾದ್ರೂ ಕಮಿಶನ ತಗೋಬೇಕಪ್ಪ," ಎಂದು ಭಟ್ಟರು ಸಂಕೋಚದಿಂದಲೇ ಸೇರಿಸಿದರು.

"ಹಾಮಾಲಿ ಪ್ರಕಾಶಕ ನಲವತ್ತು



ಪರ್ಸೆಂಟು ಕಮೀಶನ್ ಹೊಡೀತಾನೆ ಸಾ. ನಿಮ್ಮ ಸಿಸ್ಯ ನನಗೆ ಇಪ್ಪತ್ತೈದು ಪರ್ಸೆಂಟು ಸಾಕು. ನಿಮ್ಮಾಸೀರ್ವಾದ ಇದ್ರೆ ಅಷ್ಟೇ ಸಾಕು ಸಾ," ಎಂದು ತನ್ನ ಕಮಿಶನ್ ವ್ಯವಹಾರ ಇತ್ಯರ್ಥ ಮಾಡಿಕೊಂಡು, "ನಮ್ಮ ಆಫೀಸ ಅಡ್ರೆಸ್ ಇಟ್ಕೊಂಡಿರಿ ಸಾ," ಎಂದು ಕ್ಯಾತ ತನ್ನ ಜಂಗಮ ಮೇಸ್ತ್ರೀ ರಸ್ತೆಯಲ್ಲಿರುವ ಆಫೀಸಿನ ವಿಳಾಸದ ವಿಸಿಟಿಂಗ್ ಕಾರ್ಡನ್ನು ಭಟ್ಟರ ಕೈಯಲ್ಲಿರಿಸಿ ಮುಂದಿನ ವಾರದಿಂದ ಆರ್ಡರುಗಳು ನಿಮ್ಮನ್ನೇ ಉಡುಕ್ಕೊಂಡು ಬರ್ತವೆ ಸಾ," ಎಂದು ಸಿಳ್ಳೆ ಹೊಡೆಯುತ್ತಾ ಕ್ಯಾತ ನಿರ್ಗಮಿಸಿದ. ಭಟ್ಟರಿಗೆ ಇದೇನು ಕನಸೋ ನನಸೋ ಅನ್ನುವ ಭ್ರಮೆಯುಂಟಾಗಿ ಮಲ್ಲೇಶ್ವರದ ಕಡೆಗೆ ಬಸ್ಸು ಹಿಡಿದರು.

ಹದಿನೈದು ದಿನ ಕಳೆದ ಮೇಲೆ ಭಟ್ಟರು ಸಡಗರದಿಂದ ಕ್ಯಾತನ ಆಫೀಸಿಗೆ ಬಂದು, "ಇಪ್ಪತ್ತು ಪುಸ್ತಕಕ್ಕೆ ಆರ್ಡರ ಬಂದಿದೆಯಪ್ಪ. ಆದರೆ ಈ ಘೋಷಣಾ ಪತ್ರ ನನಗೆ ಅರ್ಥ ವಾಗ್ತಿಲ್ಲ," ಎಂದು ಕೆಲವು ಘೋಷಣಾ ಪತ್ರ ಗಳನ್ನು ಕ್ಯಾತನ ಕೈಯಲ್ಲಿರಿಸಿದರು. ಒಂದು ಸಮೂನೆ ಘೋಷಣಾ ಪತ್ರ ಹೀಗಿತ್ತು: "ಹೆಸರು...ರಾಮಕೃಷ್ಣ ವಯಸ್ಸು...೨೭ ವೈವಾಹಿಕ ಸ್ಥಿತಿ... ಮದುವೆಯಾಗಿದೆ. ಈ ಪುಸ್ತಕವನ್ನು ಓದುವ ಅರ್ಹತೆ ಪಡೆದಿದ್ದೇನೆ. ಈ ಮೇಲ್ಕಂಡ ವಿವರ ಸತ್ಯವೆಂದು ಘೋಷಿಸುತ್ತೇನೆ."

"ಈ ವಿಚಾರ ಈಗ್ಲೆ ಕೇಳ್ಬೇಡಿ ಸಾರ್, ಪುಸ್ತಕ ಎಲ್ಲಾ ಮೊದ್ಲು ಖರ್ಚಾಗ್ಲಿ; ಆಮೇಲೆ ಏಳ್ತೀನಿ ನನ್ನ ಟ್ರೇಡ್ ಸೀಕ್ರೆಟ್ಸು," ಎಂದ ಕ್ಯಾತ ಮಂದಸ್ಮಿತನಾಗಿ. ಭಟ್ಟರು ಉತ್ತರದಿಂದ ತೃಪ್ತರಾಗದಿದ್ದರೂ ಸದ್ಯ ಮನೆಯ ಅಲಮಾರಿ ಗಳಲ್ಲಿ ಕೊಳೆಯುತ್ತಿರುವ ಪುಸ್ತಕಗಳು ಬಿಕರಿಯಾದರೆ ಸಾಕು ಎಂದುಕೊಂಡು ಶಾಂತರಾಗಿ ದ್ದರು.

ಮೂರು ತಿಂಗಳೊಳಗೆ ಭಟ್ಟರ ಬಳಿ ಉಳಿದಿದ್ದ ೩೯೦೦ ಪ್ರತಿ ಶಂಕುತಲೋಪಾಖ್ಯಾನ ಮಾರಲ್ಪಟ್ಟಿದ್ದವು. ಪ್ರತಿ ದಿನ ಭಟ್ಟರಿಗೆ ಪೋಸ್ಟ್ ಆಫೀಸಿಗೆ ಹೋಗಿ ಬರುವ ಸಂಭ್ರಮ. ವಿ. ಪಿ. ಪಿ. ಮಾಡುವುದು, ಮನಿಯಾರ್ಡರ್ ತೆಗೆದುಕೊಳ್ಳುವುದೇ ಭಟ್ಟರ ಕೆಲಸವಾಯಿತು. ಅಚ್ಚರಿಯ ವಿಷಯವೆಂದರೆ ಪುಸ್ತಕದ ಪ್ರತಿ ಗಳೆಲ್ಲಾ ಖರ್ಚಾದ ಮೇಲೂ ಮುನ್ನೂರು ನಾನ್ನೂರು ಪ್ರತಿಗಳಿಗೆ ಆರ್ಡರ ಬಂದಿತ್ತು. ಒಂದು ದಿನ ಭಟ್ಟರು ಕ್ಯಾತನಿಗೆ ಕೃತಜ್ಞತೆ ಸಮರ್ಪಿಸಿ ಅವನ ಕಮಿಶನ್ನ ಚುಕ್ತಾ ಮಾಡಲು ಜಂಗಮ ಮೇಸ್ತ್ರಿಗಲ್ಲಿಯ ಕ್ಯಾತನ ಆಫೀಸಿಗೆ ಬಂದರು. ಭಟ್ಟರನ್ನು ನೋಡಿದ ಕೂಡಲೇ ಎದ್ದು ನಿಂತ ಕ್ಯಾತ. "ಏನ್ಸಾ, ನಿಮ್ಮುಖ ನೋಡಿದ್ರೆ ಹತ್ತು ವರ್ಷ ಚಿಕ್ಕವ್ರಂಗೆ ಕಾಣ್ತಿದ್ದೀರಾ. ಪುಸ್ತಕ ಎಲ್ಲಾ ಖರ್ಚಾಗಿರಬೇಕು," ಎಂದು ಪಲ್ಕಿರಿದ. "ಹೌದಪ್ಪ ಕ್ಯಾತ, ನಿನ್ನ ದಯೆಯಿಂದ ನಾನೂ ಮನುಷ್ಯನಾದೆ," ಎಂದು ಭಟ್ಟರು ಭಾವುಕರಾಗಿ ಇನ್ನೇನನ್ನೋ ಹೇಳುವುದರಲ್ಲಿ ಕ್ಯಾತ ಬಾಯಿಹಾಕಿ, "ಅದೇನ್ಸ್ಬುಡಿ ಸಾ ಮಹಾ? ನಿಮ್ಮ ಸಿಸ್ಯ ಅನ್ನಸ್ಕೊಂಡು ಇಷ್ಟೂ ಮಾಡ ದಿದ್ರೆ," ಎಂದು ತನ್ನ ಔದಾರ್ಯ ಬೆಳೆಸಿಕೊಂಡ.

"ಪುಸ್ತಕ ಎಲ್ಲಾ ಖರ್ಚಾಗಿ ನನಗೂ ಎಪ್ಪತ್ತು ಸಾವಿರ ಲಾಭ ಬಂದಿದೆ ಕ್ಯಾತ, ನಿಂದೂ ನಲ ವತ್ತು ಸಾವಿರ ಕಮಿಶನ್ನ ತಗೋಪ್ಪ," ಎಂದು ಭಟ್ಟರು ನೂರು ರೂಪಾಯಿಗಳ ಕಂತೆ ಗಳನ್ನು ಕ್ಯಾತನ ಕೈಗಿಟ್ಟಾಗ ತನ್ನ ಕಣ್ಣನ್ನೇ ನಂಬದ ಸ್ಥಿತಿಯಲ್ಲಿದ್ದ ಕ್ಯಾತ.

ಖುಷಿಯಾಗಿದ್ದ ಭಟ್ಟರು ಇನ್ನೂ ಒಂದೇ ಸಮನೆ ಆರ್ಡರ ಬರುತ್ತಿರುವುದನ್ನು ತಿಳಿಸಿ, "ಎರಡನೇ ಮುದ್ರಣ ತರೋಣ್ವೆ ಅಂತ ಯೋಚಿಸ್ತಿದ್ದೀನಪ್ಪಾ ಕ್ಯಾತ," ಎಂದಾಗ ಕ್ಯಾತನಿಗೆ ನಿಜವಾಗಿಯೂ ಗಾಬರಿಯಾಯಿತು. "ಖಂಡಿತಾ ಬೇಡ ಸಾ ಆಯೋಸ್ನೆ ಬುಟ್ಬುಡಿ" ಎಂದಾಗ ಭಟ್ಟರಿಗೆ ಕ್ಯಾತನ ಮಾತು ಅರ್ಥವಾಗಲಿಲ್ಲ. ಮತ್ತು ಆಶ್ಚರ್ಯ ಕೂಡಾ ಆಯಿತು. ಆದರೂ ತಮ್ಮ ಆಶ್ಚರ್ಯವನ್ನು ತೋರಿಸದೆ," ಆದಿರ್ಲಪ್ಪ ಕ್ಯಾತ, ಅವತ್ತು ಹೇಳಿದ್ಯಲ್ಲಾ, ಅದೇನೋ ಘೋಷಣಾ ಪತ್ರದ ಟ್ರೇಡ್ ಸೀಕ್ರೆಟ್ಟು: ಪುಸ್ತಕ ಎಲ್ಲಾ ಖರ್ಚಾದ ಮೇಲೆ ತಿಳಿಸ್ತೀನಿ

ಅಂತ. ಈಗ್ಲಾದ್ರೂ ತಿಳಿಸ್ತೀರಾ?" ಎಂದರು.

"ಅದಾ ಸಾ? "ಎಂದು ಕ್ಯಾತ ದೊಡ್ಡದಾಗಿ ಹಲ್ಲು ಕಿರಿದರೂ ಮುಖದಲ್ಲಿ ಸ್ವಲ್ಪ ಸಂಕೋಚ ಕಾಣಿಸಿಕೊಂಡಿತ್ತು.

"ನೋಡಿ ಸಾ, ಆವತ್ತು ನಿಮ್ಮುಖ ನೋಡಿ ಬಾಳಾ ದುಃಖ ಆಗಿತ್ತು ನನ್ಗೆ. ನೀವು ನನ್ನನ್ನು ಸ್ಕೂಲಿನಲ್ಲಿ ಕೆಲಸಕ್ಕೆ ಬಾರ್ದೋನು ಅಂತ ಎಷ್ಟೋ ಸಲ ಹೇಳಿದ್ರೂ ನಿಮಗೆ ಸಾಧ್ಯ ಮಾಡ್ತೀನಿ ಅನಿಸ್ತು." ಪೀಠಿಕೆ ಆರಂಭಿಸಿದ ಕ್ಯಾತ.

"ಅದೆಲ್ಲಾ ಈಗ ಯಾಕಪ್ಪ, ಏನೋ ಆ ಕಾಲ ದಲ್ಲಿ ಹೇಳಿಬಿಟ್ಟೆ,? ಎಂದು ಭಟ್ಟರು ಕ್ಷಮಾಪಣೆ ಕೇಳುವ ಸ್ವರದಲ್ಲಿ ಮಧ್ಯೆ ಬಾಯಿ ಹಾಕಿದರು.

"ಏನಾದ್ರೂ ಮಾಡಿ, ನಿಮ್ಮ ಪುಸ್ತಕಗಳೆಲ್ಲಾ ಮಾರಿಸ್ಬೇಕು ಅಂತ ಆತ ಮಾಡ್ಕೊಂಡೆ. ಆಗ್ಲೆ ಈ ಪ್ಲಾನು ಯೋಚಿಸಿದ್ದು," ಎಂದು ಕ್ಯಾತ ಹೇಳಿದಾಗ ಕುತೂಹಲದಿಂದ ಭಟ್ಟರು "ಅದೇನಪ್ಪ ನಿನ್ನ ಪ್ಲಾನು?" ಎಂದರು.

"ನೋಡಿ ಸಾ, ನಿಮ್ಮನ್ನ ನೋಡಿದ ಮಾರ್ನೆ ದಿವಸದಿಂದ 'ಪ್ರಜಾಮಣಿ' ಪತ್ರಿಕೇಲಿ ಈ ಅಡ್ವರ್ಟೈಸ್‌ಮೆಂಟು ದಿನಾ ಹಾಕಿಸ್ತಿದ್ದೆ," ಎಂದು ಕ್ಯಾತ ತನ್ನ ಮೇಜಿನ ಡ್ರಾಯರ್‌ನಿಂದ ಒಂದು ಪೇಪರ ಕಟಿಂಗ್ ಭಟ್ಟರ ಕೈಗಿತ್ತ. ಜಾಹೀರಾತು ಹೀಗಿತ್ತು:

"ನವ ದಂಪತಿಗಳೆ, ನಿಮಗೆ ಸುಸಮಯ ಒದಗಿ ಬಂದಿದೆ. ಕೇವಲ ನಲವತ್ತು ರೂಪಾಯಿಗಳಿಗೆ ನಿಮ್ಮ ದಾಂಪತ್ಯ ಸುಖವನ್ನು ಹೆಚ್ಚಿಸಿಕೊಳ್ಳಿ. ಜೀವನದ ಸುಖ ಸಂತೋಷವನ್ನು ಹಾಳು ಮಾಡಿಕೊಳ್ಳಬೇಡಿ. ಒಬ್ಬ ಹಿರಿಯ ಸಾಹಿತಿಯಿಂದ ಬರೆಯಲ್ಪಟ್ಟ ಶೃಂಗಾರ ರಸಯುಕ್ತವಾದ ಈ ಪುಸ್ತಕವನ್ನು ಖಂಡಿತಾ ಓದಿ. ವಿವಿಧ ಭಂಗಿಗಳಲ್ಲಿ ಛಾಪಿಸಿರುವ ಬಣ್ಣ ಬಣ್ಣದ ಚಿತ್ರಗಳನ್ನು ನೋಡಿ ಆನಂದಿಸಿ. ನಿಮ್ಮ ಆರ್ಡರಿನೊಡನೆ ಈ ಕೆಳಕಂಡ ಘೋಷಣಾ ಪತ್ರವನ್ನು ಕಳುಹಿಸಿದರೆ ಮಾತ್ರ ನಿಮಗೆ ಪುಸ್ತಕ ದೊರೆಯುವುದು: 'ಹೆಸರು... ವಯಸ್ಸು... ವೈವಾಹಿಕ ಸ್ಥಿತಿ...ನನಗೆ ಮದುವೆಯಾಗಿದೆ ಮತ್ತು ಈ ಪುಸ್ತಕವನ್ನು ಓದುವ ಅರ್ಹತೆ ಪಡೆದಿದ್ದೇನೆ. ಈ ಮೇಲ್ಕಂಡ ವಿವರ ಸತ್ಯವೆಂದು ಘೋಷಿಸುತ್ತೇನೆ.' ನಿಮ್ಮ ಆರ್ಡರಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿ: ಪೋಸ್ಟ ಬಾಕ್ಸ ನಂ ೪೨೦ ಮಲ್ಲೇಶ್ವರ ಬೆಂಗಳೂರು."

ಭಟ್ಟರಿಗೆ ಜಾಹಿರಾತು ಓದುತ್ತಿರುವಂತೆ ತಲೆ ಸುತ್ತಿ ಬಂತು. ಈಗ ಅರ್ಥವಾಯಿತು ಅವರಿಗೆ ಆರ್ಡರ ಮೇಲೆ ಆರ್ಡರಿನ ಪ್ರವಾಹದ ಗುಟ್ಟು. ಸ್ವಲ್ಪ ಚೇತರಿಸಿಕೊಂಡ ಮೇಲೆ ಭಟ್ಟರು, "ಹೀಗೆ ಮಾಡಬಹುದಾ ಕ್ಯಾತ?" ಎಂದರು. ಕ್ಯಾತನ ಸ್ಪಿರಿಟೆಡ್ ಉತ್ತರ ತಯಾರಾಗಿತ್ತು: "ನಿಮ್ಮ ಸಿಸ್ಯ ಸುಳ್ಳು ಪೊಳ್ಳು ಏಳೋದ್ನಲ್ಲಾ ಸಾ. ಇವರಲ್ಲಿ ಒಂದು ಸುಳ್ಳಿದ್ರು ನನ್ನೆಸ್ರು ಬದಲಾಯಿಸಿಕೊಳ್ತೀನಿ ನೀವು ಹಿರಿಯರು ದೌದೋ ಅಲ್ವೋ ಸಾ. ನೀವು ಬರ್ದಿರೋ ಶಂಕುಂತಲೋಪಾಖ್ಯಾನ ಶೃಂಗಾರ ರಸಯುಕ್ತವಾದ ಪುಸ್ತಕ ಅಲ್ವೆ ಸಾ. ಕಣ್ವರು ಶಕುಂತಲೆಗೆ ಹೇಳುವ ಬುದ್ಧಿಮಾದ ಓದಿದ್ರೆ ನವದಂಪತಿಗಳ್ಗೆ ಸುಖಸಂತೋಷ ಉಂಟಾಗಲ್ವೆ ಸಾ? ಶಕುಂತಲೆ ಜಿಂಕೆಯನ್ನು ಸವರುತ್ತಿರುವುದು, ಇನ್ನೂ ಏನೇನೋ ಚಿತ್ರಗಳ್ನ ಬಣ್ಣದಲ್ಲಿ ಛಾಪಿಸಿರೋದು ಸುಳ್ಳೇ ಸಾ, "ಅಂದ ಕ್ಯಾತ ಗೆದ್ದವನಂತೆ ಹಲ್ಕಿರಿಯುತ್ತಾ. ಕ್ಯಾತನ ಲಾಜಿಕ್ಕು ಭಟ್ಟರನ್ನು ಇನ್ನಷ್ಟು ಬುದ್ಧಿಭ್ರಮಣೆಯ ದಿಕ್ಕಿಗೆ ಒಯ್ತಿತ್ತು. "ನೀ ಹೇಳೋದ್ರಲ್ಲಿ ಸುಳ್ಳೇನು ಕಾಣ್ತಿಲ್ಲಪ್ಪಾ... ಆದ್ರೂ ಜಾಹಿರಾತ್ನಲ್ಲಿ...ಇರ್ಲಿ ಬರ್ತಿನಪ್ಪಾ ಕ್ಯಾತ," ಎಂದು ಭಟ್ಟರು ತಮ್ಮ ಕೊಳೆ ಚೀಲವನ್ನು ಕೈಗೆ ಏರಿಸಿಕೊಳ್ಳುತ್ತಾ ಕ್ಯಾತನ ಆಫೀಸಿನಿಂದ ಹೊರಬಿದ್ದರು. "ನಿಮ್ಮ ಸಿಸ್ಯನ ಮೇಲೆ ದಯೆ ಹೀಗೇ ಇರ್ಲಿ ಸಾ," ಎಂದು ಕ್ಯಾತ ಕೈಮುಗಿದನು.

ಭಟ್ಟರು ಶಂಕುಂತಲೋಪಾಖ್ಯಾನದ ಎರಡನೇ ಮುದ್ರಣ ಕೈಬಿಟ್ಟದ್ದಲ್ಲದೇ ಬದುಕಿರುವವರೆಗೂ ಸಾಹಿತ್ಯ ಕೃಷಿಗೆ ಮತ್ತೊಮ್ಮೆ ಕೈ ಹಾಕಲಿಲ್ಲ.

ಪುಟ್ಟ ಕಥೆ

ಗೊತ್ತಿಲ್ವ ಅಜ್ಜಿ ?

ಇಲ್ಲಿ ನೋಡು, ನಾವು ಸಂಸಾರ ಹೂಡಿದ ಬಳಿಕ ಮೊದಲ ಬಾರಿಗೆ ಅಜ್ಜಿ ಬಂದಿದ್ದಾಳೆ. ಯಾವ ಕೊರತೆಯೂ ಆಗದಂತೆ ಪ್ರೀತಿಯಿಂದ ಅವಳನ್ನು ನೋಡಿಕೊಳ್ಳಬೇಕು," ಎಂದ ವಸಂತ.

"ಯೋಚನೆಯೇ ಮಾಡಬೇಡಿ," ಎಂದಳು ನೀಲಾ. "ಪಾಪ, ಹಳ್ಳಿ ಮುದುಕಿ. ಅವರನ್ನು ಹೇಗೆ ಸಂತೋಷಪಡಿಸಬೇಕೆಂದು ನನಗೆ ಗೊತ್ತು."

ಕಾಮಾಕ್ಷಿಯಜ್ಜಿಯನ್ನು ಸ್ವಲ್ಪ ಹೊತ್ತಿಗೆ ಮುಂಚೆ ತಾನೆ ಇಬ್ಬರೂ ಸೇರಿ 'ಎಗ್ಮೋರ್' ಸ್ಟೇಷನ್ನಿಗೆ ಹೋಗಿ ಎದುರುಗೊಂಡು ಟ್ಯಾಕ್ಸಿಯಲ್ಲಿ ಕರೆದುಕೊಂಡು ಬಂದಿದ್ದರು. ಅಂದು ಪೂರ್ತಿ ಬೇಕಾದಷ್ಟು ಉಪಚಾರ.

ಸಾಯಂಕಾಲ ಆರು ಗಂಟೆಯಾಯಿತು.

"ಹೀಗೆ ಕುಳಿತುಕೊಳ್ಳಿ ಅಜ್ಜಿ," ಎಂದು ಕುರ್ಚಿಯನ್ನು ಎಳೆದು ತೋರಿಸಿದ ವಸಂತ.

"ಈ ಪೆಟ್ಟಿಗೆಗೆ ಟಿ.ವಿ. ಎಂದು ಹೆಸರು ಅಜ್ಜಿ. ಸಿನಿಮಾದ ರೀತಿ ನೋಡಬಹುದು," ಎಂದು ವಿವರಿಸಿದಳು ನೀಲಾ.

ವಸಂತ ಟಿ.ವಿ.ಯನ್ನು ಆನ್ ಮಾಡಿ, "ಕುರ್ಚಿಯನ್ನು ಇನ್ನೂ ಸ್ವಲ್ಪ ಹಿಂದಕ್ಕೆ ಸರಿಸಿಕೋ ಅಜ್ಜಿ. ಇಲ್ಲದಿದ್ದರೆ ಕಣ್ಣಿಗೆ ಕೆಡುಕು," ಎಂದ.

"ಸರಿ ಕಣಪ್ಪಾ" ಎಂದಳು ಅಜ್ಜಿ.

"ಕೆಲವು ದಿನ ಕಲರ್ ಕಲರಾಗಿ ಚಿತ್ರಗಳು ಬರುವವು. ಕೆಲವು ದಿನ ಕಪ್ಪು ಬಿಳುಪಾಗಿರುವವು. ಇವತ್ತು ಕಪ್ಪು ಚಿತ್ರವೇ," ಎಂದಳು ನೀಲಾ.

ಅಜ್ಜಿ ಉತ್ಸಾಹ ತೋರದೆ, "ಯಾವುದೋ ಒಂದು," ಎಂದಳು.

ಒಂದು ಇಂಗ್ಲಿಷ್ ಚಿತ್ರ ಓಡಲಾರಂಭಿಸಿತು.

"ಅಯ್ಯಯ್ಯೋ! ಈ ಕೋಲಾಹಲವೆಲ್ಲ ಏಕೆ ? ಯಾವುದಾದರೂ ಒಳ್ಳೇ ತಮಿಳು ಸಿನಿಮಾ ಹಾಕು," ಎಂದಳು ಅಜ್ಜಿ.

ವಸಂತ, ನೀಲಾ ಒಬ್ಬರನ್ನೊಬ್ಬರು ಗುಟ್ಟಾಗಿ ನೋಡಿ, ಅಜ್ಜಿಯ ತಿಳಿಗೇಡಿತನವನ್ನು ತಿಳಿದು ನಕ್ಕರು. "ಅಜ್ಜಿ, ಅವರು ಏನು ತೋರಿಸುತ್ತಾರೋ ಅದನ್ನೇ ನಾವು ನೋಡಬೇಕು. ನಾವು ಇಷ್ಟಪಟ್ಟಂತೆ ಸಿನಿಮಾ ನೋಡಲು ಆಗದು," ಎಂದ ವಸಂತ.

"ಹಾಗಾದರೆ ನೀನೀಗ ಏನು ಮಾಡುತ್ತಿ, ಹಳ್ಳಿಯಲ್ಲಿ ಆ ಮುತ್ತಣ್ಣನ ಮನೇಲಿ ಮಾಡಿದಂತೆ ಮಾಡಿ ಬಿಡು," ಎಂದಳು ಅಜ್ಜಿ.

"ಏನು ಮಾಡಿದ್ದಾರೆ?"

"ವಿಡಿಯೋ ಡೆಕ್ ಇದೆಯಲ್ಲಾ ಅದನ್ನು ಕೊಂಡು ತಂದುಬಿಡು. ಅದರಲ್ಲಿ ವಿಡಿಯೋ ಕ್ಯಾಸೆಟ್ ಅಂತ ಬಂದಿದೆ. ಅದನ್ನು ಕೊಂಡುತಂದು ಅದರಲ್ಲಿ ಹಾಕಬಹುದು. ಯಾವ ಚಿತ್ರ ಇಷ್ಟವೊ ಆ ಕ್ಯಾಸೆಟ್ ಕೊಂಡು ತಂದು ನೋಡಬಹುದಲ್ಲಾ?" ಎಂದು ಅಜ್ಜಿ ಹೇಳಿದಾಗ-ವಸಂತ್ ನೀಲಾ ಬೇಸ್ತು ಬಿದ್ದವರು ಬಹಳ ಹೊತ್ತಿನವರೆಗೂ ಚೇತರಿಸಿಕೊಳ್ಳಲಿಲ್ಲ.

ತಮಿಳಿನಲ್ಲಿ : **ಕೆ. ಭಾರತಿ**

ಕನ್ನಡಕ್ಕೆ: **ಡಾ. ಅಶೋಕ ಕುಮಾರ್**

◆ ವಿಜಯ ವಿಠಲ

ಈ ಬ್ಯಾಂಕ್ ಮುಂದಿಗೆ ಏನಾಗಿದೆ ?

ಕಳೆದ ವರ್ಷದ ಫೆಬ್ರುವರಿಯ ಪತ್ರಿಕೆಗಳಲ್ಲಿ ಶ್ರೀ ಜನಾರ್ದನ ಪೂಜಾರಿಯವರ ಸಾಲಮೇಳಗಳನ್ನು ಕೇರಳದ ಬ್ಯಾಂಕ್ ಅಧಿಕಾರಿಗಳು ಬಹಿಷ್ಕರಿಸುವ ಸುದ್ದಿಯಿತ್ತು. ಕಾರಣ ತಮ್ಮ ಮಾತು ಕೇಳದ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರಿನ ಶಾಖೆಯೊಂದರ ಮೆನೇಜರರನ್ನು ಹಿಂದಿತ್ತಿಯೊಡನೆ ಒಂದೇ ರಾತ್ರಿಯಲ್ಲಿ ಬೇರೆಡೆ ವರ್ಗ ಮಾಡಿಸಿದ್ದು, ಜಾಮೀನು ಕೇಳಿದ್ದರೆಂದು ಕೆನರಾ ಬ್ಯಾಂಕ್ ಅಧಿಕಾರಿಯೊಬ್ಬರಿಗೆ ಛೀಮಾರಿ ಹಾಕಿ ಬಲವಂತವಾಗಿ ಸಾರ್ವಜನಿಕ ಸಭೆಯಲ್ಲಿ ಕ್ಷಮೆ ಕೇಳುವಂತೆ ಮಾಡಿದ್ದು. ಇಂಥ ಮೇಳಗಳಲ್ಲಿ ಒಂದೇ ರಾಜಕೀಯ ಪಕ್ಷದ ಮುಖಂಡರು ಭಾಗವಹಿಸುವದರ ಕುರಿತು ಟೀಕೆಗಳು ಬಂದರೂ ಪೂಜಾರಿಗಳು ಎದೆಗುಂದಲಿಲ್ಲ. ಬ್ಯಾಂಕ್ ನೌಕರರ ಜತೆ ಅಧಿಕಾರಿಗಳನ್ನು ಅವರು ತಮ್ಮ ಅಶಿಸ್ತಿನವರ ಪಟ್ಟಿಯಲ್ಲಿ ಸೇರಿಸಿದ್ದು ಕಳೆದ ವರ್ಷದ ವಿಶೇಷ. ಮೇಳ ನಡೆಸಿ ಬ್ಯಾಂಕಿನ ಆವರಣ, ಕಾಲಗಳಲ್ಲಿ ಮಾತ್ರ ವ್ಯವಹಾರ ನಡೆಸಬೇಕೆನ್ನುವ, ಸಾಲದ ವಿವರಗಳನ್ನು ಬಹಿರಂಗಗೊಳಿಸಬಾರದೆನ್ನುವ ಕಾನೂನುಗಳನ್ನು ಬದಿಗೊತ್ತಿದ ಶಿಸ್ತು ಅವರದ್ದು.

"ಬ್ಯಾಂಕ್ ನೌಕರರು ಅಶಿಸ್ತಿನ ಮಂದಿ. ಬ್ಯಾಂಕು ಸರಿಯಾಗಿ ನಡೆಯುವುದು ಅವರಿಗೆ ಬೇಡ. ಗಿರಾಕಿಗಳ ಸೇವೆ ಬೇಡ. ಈ ದೇಶ, ದೇಶದ ಜನರ ಬಗ್ಗೆ ಆಸ್ಥೆಯಿಲ್ಲ."

ವಿತ್ತ ಸಚಿವರುಗಳು ಪರಂಪರೆಯಿಂದ ಹೇಳುತ್ತ ಬಂದ ಈ ಮಾತನ್ನು ಮೊದಲು ಹೇಳಿದವರು ಸಿ. ಸುಬ್ರಮಣ್ಯಂ. 'ಬಡತನದ ಸಾಗರ'ದ ನಡುವಿನ ಉನ್ನತ ಪಗಾರದ ದ್ವೀಪನಿವಾಸಿಗಳು ಎಂಬ ರೂಪಕವೂ ಅವರದ್ದೆ. ಉನ್ನತ ವೇತನ ಪಡೆಯುವ ಮೊದಲ ಹತ್ತರ ಗುಂಪಿನಲ್ಲಿ ಆಗಲೂ ಬ್ಯಾಂಕ್ ನೌಕರರಿರಲಿಲ್ಲ, ನಂತರವೂ ಒಪ್ಪಂದಗಳ ಮೂಲಕ ಹೆಚ್ಚಳ ಪಡೆಯುತ್ತಲೇ ಬಂದರೂ ಈಗಲೂ ಇಲ್ಲ. ಆದರೆ ಎಲ್ಲ ರಾಜಕಾರಣಿಗಳಂತೆ ಸುಬ್ರಮಣ್ಯಂ ಅವರಿಗೂ ಘೋಷಣೆ ಬೇಕಿತ್ತೇ ವಿನಾ ನಿಜ ಬೇಕಿರಲಿಲ್ಲ. ಮಂತ್ರಿಗಳು, ಬ್ಯಾಂಕ್ ಉನ್ನತಾಧಿಕಾರಿಗಳ ಫ್ಯಾಷನ್ ಆಗಿ ಇಂತಹ ತೆಗಳಿಕೆ ಉಳಿದೇಬಿಟ್ಟಿತು.

ಅನಂತರ ಬಂದ ಮಗನ್‌ಭಾಯಿ ಬಾರೋಟ್ ತೆಗಳಿಕೆಗೆ ಹೊಸ ಕ್ಷೇತ್ರ ಹುಡುಕಿದರು. ಹೆಚ್ಚುವರಿ ಕೆಲಸಕ್ಕಾಗಿ ಕಾನೂನಿಗೆ ಅನುಗುಣವಾಗಿ ಪಡೆಯುವ ಓಟಿಯ ಮೇಲೆ ಅವರ ಭಾಷಣ. ಹೆಚ್ಚುವರಿ ಕೆಲಸ ಮಾಡಿಸಬೇಡಿ ಎಂದೇನೂ ಅವರು ಹೇಳಲಿಲ್ಲ, ಓಟಿ ಪಗಾರ ಕೊಡಬೇಡಿ.

ಎಂದರು. ಅದೇ ಹೆಜ್ಜೆಯಲ್ಲಿ ನಡೆದ ಪೂಜಾರಿಗಳ ಸಾಧನೆ ಕಳೆದ ವರ್ಷ ೧೮ ಕೋಟಿ ರೂ. ಓಟಿ ನಿಲ್ಲಿಸಿದ್ದಂತೆ (೨೫ ಲಕ್ಷ ಮಂದಿ ನೌಕರರಲ್ಲಿ ಈ ಮೊಬಲಗು ತಲಾ ೨೫–೩೦ ರೂ. ಅವೂ ವರ್ಷಕ್ಕೆ ಆಗುತ್ತದೆ!) ಅರ್ಧ ವರ್ಷಾಂತ್ಯಗಳ ಕೆಲಸ ಮಾಡಿಸಿದ್ದಕ್ಕೆ ಅಧಿಕಾರಿಗಳಿಗೆ ವಿಶೇಷ ಭತ್ಯೆ ನೀಡುವಾಗ ಅಂದಂದಿನ ಕೆಲಸ ಪೂರೈಸಲೇಬೇಕಾಗಿರುವ ಬ್ಯಾಂಕಿನಲ್ಲಿ ಒಂದೆರಡು ದಿನ ಹೆಚ್ಚು ಕಾಲ ಕೆಲಸ ಮಾಡಿಸಿದ್ದಕ್ಕೆ ಸ್ವಲ್ಪ ಓಟಿ ಕೊಟ್ಟರೆ ತಪ್ಪೆ? ಸರಕಾರಿ ಕಚೇರಿಗಳಂತೆ ಬ್ಯಾಂಕ್ ನೌಕರರ ಮೇಲೆ ಲಂಚ ಬರುವವರೆಗೂ ಸತಾಯಿಸುವ ಆರೋಪವೇನಾದರೂ ಇದೆಯೆ? ಶ್ರೀ ಪೂಜಾರಿಯವರು ಹಳೇ ರಾಜರುಗಳಂತೆ ಎಲ್ಲ ಶಾಖೆಗಳಿಗೂ ಭೇಟಿ ನೀಡುತ್ತ ಶಾಲಾ ಸಮಾರಂಭಗಳಲ್ಲೂ ಬ್ಯಾಂಕ್ ನೌಕರರನ್ನು ಅಶಿಸ್ತಿನ ಮಂದಿ ಎಂದು ಜರೆಯಲು ಕಾರಣವೇನು? ಅಶಿಸ್ತು ಯಾರಲ್ಲಿದೆ?

೪೦ ವರ್ಷಗಳ ಹಿಂದೆ ಮುಷ್ಕರ ಹೂಡಿದರೆ ಬ್ಯಾಂಕ್ ನೌಕರರನ್ನು ವಜಾ ಮಾಡಬಹುದಾಗಿತ್ತು. ಈಗ ಸುಪ್ರಿಂ ಕೋರ್ಟು ಕಾನೂನು ಬಾಹಿರ ಮುಷ್ಕರವೂ ವಜಾಕ್ಕೆ ಆಧಾರವಾಗಲಾರದೆನ್ನುತ್ತದೆ. ಅಂದ ಮಾತ್ರಕ್ಕೆ ಕೋರ್ಟು ಅಶಿಸ್ತನ್ನು ಒಪ್ಪುತ್ತದೆ ಎಂದಲ್ಲ. ಶಿಸ್ತು ಅಶಿಸ್ತು ಎರಡೂ ಸಾಪೇಕ್ಷ – ಕೆಲವು ಸ್ಥಿತಿಗತಿಗಳನ್ನು ಆಧರಿಸಿದ್ದು.

ಅಶಿಸ್ತು ಎಂದರೇನು?

ಒಂದನೆಯ ತಾರೀಖು ಉಪಾಧ್ಯಾಯರುಗಳಿಗೆಲ್ಲ ಬ್ಯಾಂಕ್ ಮೂಲಕವೇ ಸಂಬಳವಾಗಬೇಕಿದೆ. ಎಲ್ಲ ಜಮಾಯಿಸಿದಾರೆ, ಚೆಕ್ ಕೊಡಲೂ ಗುಂಪಿನಲ್ಲಿ ಸಾಧ್ಯವಾಗುತ್ತಿಲ್ಲ. ಕೌಂಟರಿನಲ್ಲಿ ಹೆಚ್ಚು ಜನವಿಲ್ಲ. ಓಟಿ ಕೊಡಬಾರದೆನ್ನುವ ನಿಯಮ ಇರುವುದರಿಂದ ಇನ್ನೂ ಸಂಬಳದ ಸ್ಲಿಪ್ಪುಗಳು ಜಮಾ ಆಗಿಲ್ಲ. ಹಿಂದಿನ ಎರಡು ದಿನ ರಜೆ. ಜನಜಂಗುಳಿ ಹೆಚ್ಚು. ಚೆಕ್ ಕ್ಯಾಷ್ ಆಗಲು ಒಂದು ಗಂಟೆಯಾಗುತ್ತದೆ. ಕೂಗಾಟ.

ಸಾಲ ಮೇಳದ ದಿನ ಹತ್ತಿರ ಬರುತ್ತಿದೆ. ಬಿ. ಡಿ. ಓ. ಕಳಿಸಿದ ಪಟ್ಟಿಯಲ್ಲಿಯ ಜನರನ್ನು

ಸಂಪ್ರದಾಯ ಹಾಗೂ ಕೊರತೆಗಳು

ಆಡಳಿತದಲ್ಲಿ ದಕ್ಷತೆಯಿದ್ದರೆ ಸಿಬ್ಬಂದಿಯ ಜವಾಬ್ದಾರಿ ಎಳೆತಗಳು ಕಡಿಮೆಯಾಗುತ್ತಿದ್ದವು. ಆದರೆ ವಿಕಾಸದಿಂದಾಗಿ ಈ ಪರಿಸ್ಥಿತಿ ಅಸಾಧ್ಯ. ಹೀಗಾಗಿ ಸಾಂಸ್ಥಿಕವಾದ ಅನೇಕ ತರಲೆ ತೊಂದರೆಗಳು ಬೆಳೆದಿವೆ. ಉನ್ನತಾಧಿಕಾರಿಗಳಿಂದ ಹಿಡಿದು ಕೆಳಗಿನವರವರೆಗೆ ಸಾಲದ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆಯೋ ವಿನಾ ವ್ಯವಸ್ಥೆ ನೋಡುವುದರಲ್ಲಿಲ್ಲ. ಹೇಗೋ ನಿಭಾಯಿಸಯಾರೆಂಬ ನಂಬಿಕೆ. ಮ್ಯಾನೇಜ್‌ಮೆಂಟ್ ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಪರಿಶ್ರಮ ಹೊಂದಿದವರನ್ನು ನೇಮಕ ಮಾಡುವುದೂ ಇಲ್ಲ, ಸಲಹೆ ಪಡೆಯುವುದೂ ಕಡಿಮೆ.

ಬೇರೆ ಉದ್ದಿಮೆಗಳಲ್ಲಿ ವ್ಯವಸ್ಥೆಯಲ್ಲಿನ ಅದಕ್ಷತೆ ಮತ್ತು ಆಡಳಿತ ನಿರ್ವಹಣಾ ವೆಚ್ಚ ಏರಿದೊಡನೆಯೇ ಬಳಕೆದಾರರಿಂದ ಪ್ರತಿಭಟನೆಯನ್ನೆದುರಿಸಬೇಕಾಗುತ್ತದೆ. ಆದರೆ ನಿಜವಾದ ವೆಚ್ಚ ಉತ್ಪಾದನೆಯ ಬೆಲೆಗಳಲ್ಲಿ ಸೇರಿ ತೋರದ ಬ್ಯಾಂಕುಗಳಂಥ ಉದ್ದಿಮೆಗೆ ಬಳಕೆದಾರರ ಭಯವಿಲ್ಲ. ಪರಿಣಾಮವಾಗಿ ಒಂದು ರೀತಿಯ ಜಡತೆ ಹಾಗೂ ನಿರ್ವಹಣಾ ವೆಚ್ಚ ವಿಪರೀತ. ಬೇರೆ ವ್ಯಾಪಾರ ಉದ್ಯಮಗಳಲ್ಲಿನ ಬೆಳವಣಿಗೆಗಳು, ಸಂಶೋಧನೆಗಳು ತಮ್ಮ ಬ್ಯಾಂಕ್ ವ್ಯವಸ್ಥೆಗೆ ಸಲ್ಲದು, ಬೇಕಾಗಿಯೂ ಇಲ್ಲ ಎಂಬಂಥ ಧೋರಣೆ. ಹೇಗೋ ಗಿರಾಕಿಗಳು ಬಂದೇ ಬರುತ್ತಾರೆಂಬ ದೃಷ್ಟಿಯಿಂದ ತಾವು ನಿಂತ ಜಾಗವೇ ಗುರಿ ಎನ್ನುವ ಸಾಂಪ್ರದಾಯಿಕ ಮನೋಭಾವ ಇಲ್ಲಿಯದು ಎನ್ನುತ್ತಾರೆ ಶ್ರೀ ಎನ್. ಸಿ. ಜೋಷಿ.

ಇದರಿಂದ ಬ್ಯಾಂಕ್ ಉದ್ದಿಮೆಯಲ್ಲಿ ಅನೇಕ ಕೊರತೆಗಳುಂಟಾಗಿವೆ. ಮುಖ್ಯವಾಗಿ,

- ಪಾರ್ಲಿಮೆಂಟಿನ ಎಸ್ಟಿಮೇಟ್ಸ್ ಸಮಿತಿ ಹೇಳುವಂತೆ ಈ ಬ್ಯಾಂಕುಗಳಲ್ಲಿನ್ನೂ

ಗ್ರಾಮಾಂತರ ಶಾಖೆಗಳಿಂದ ಠೇವಣಿ ಎತ್ತಿ ನಗರದ ವರ್ಗಗಳಿಗೆ ಸಾಲ ಕೊಡುವ ಚಾಳಿ ಹೋಗಿಲ್ಲ. (ಇದಕ್ಕೆ ವಿರುದ್ಧ ಕೋ-ಆಪರೇಟಿವ್ ಬ್ಯಾಂಕುಗಳು. ಅವು ಗ್ರಾಮಾಂತರದಲ್ಲಿ ಸಾಲ ನೀಡಿ ಮರುಪಾವತಿಯಾಗದೆ ಉಬ್ಬಸಕ್ಕೊಳಗಾಗಿವೆ.)

● ಸರಕಾರವೇ ಬ್ಯಾಂಕುಗಳನ್ನು ನಡೆಸುತ್ತಿರುವುದು ಠೇವಣಿದಾರನ ಅದೃಷ್ಟ. ಇಲ್ಲವಾದಲ್ಲಿ ಇಷ್ಟರ ಮಟ್ಟಿಗೆ ವಿಕಾಸ ಹೊಂದಿದರೂ ಬ್ಯಾಂಕುಗಳ ಬಂಡವಾಳದ ಮೊತ್ತ ತುಂಬ ನಿಧಾನವಾಗಿ ಏರುವುದನ್ನು ಗಮನಿಸಿ ಆತಂಕಗೊಳ್ಳಬೇಕಿತ್ತು. ಆದರೆ ಹೀಗೇ ಅತ್ಯಲ್ಪ ಬಂಡವಾಳದಲ್ಲಿ ಈ ಬ್ಯಾಂಕುಗಳನ್ನು ಕಾರ್ಯನಿರ್ವಹಿಸಲು ಬಿಡಬೇಕೆ? ಬಂಡವಾಳ ಹಾಗೂ ಠೇವಣಿಯ ನಡುವಣ ಸರಾಸರಿ ೩%ಗಿಂತಲೂ ಕಡಿಮೆ. (ರಿಸರ್ವ್ ಬ್ಯಾಂಕ್ ಸಲಹೆಯಂತೆ ೬% ಆದರೂ ಇರಬೇಕಿತ್ತು.)

● ಡಾ. ಆರ್. ಕೆ. ಹಜಾರಿ ಹೇಳುವಂತೆ ಬ್ಯಾಂಕ್ ಆಡಳಿತದಲ್ಲಿ ನೈತಿಕತೆ ಅಪಾಯಕಾರಿ ಎನಿಸುವಷ್ಟು ಕುಗ್ಗುತ್ತಾ ಇದೆ. ಕಾರಣ ಜೀವನ ಮಟ್ಟದ ಏರಿಕೆ, ಘೋಷಿತ ನೀತಿ ನಿರ್ದೇಶನಗಳಿಗೂ ಮತ್ತು ಆಚರಣೆಗೂ ನಡುವಿರುವ ಕಂದರ, ಮತ್ತು ತೀರ್ಮಾನಗಳನ್ನೆಲ್ಲ ಬೇರೆ ಯಾರೋ ತೆಗೆದುಕೊಳ್ಳುತ್ತಿರುವರೆಂಬ ನೋವು. ನಿಜವಾಗಿ ಒಂದು ವ್ಯವಸ್ಥೆ ಸಾರ್ವಜನಿಕ ಉದ್ದೇಶಗಳಿಗಾಗಿ ಬದುಕಬೇಕಿದ್ದರೆ ಈ ಪ್ರವೃತ್ತಿಗಳನ್ನು ಬಹಿರಂಗವಾಗಿ ಖಂಡಿಸಬೇಕು.

● ಈ ಬ್ಯಾಂಕುಗಳ ರಾಷ್ಟ್ರೀಯ ಸ್ವರೂಪದ ಬಗ್ಗೆ ಚಿಂತನೆ ಅಗತ್ಯ. ಇವು ಪ್ರಾದೇಶಿಕ ಸ್ವರೂಪದ್ದಾಗಿದ್ದರೆ ಇನ್ನಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದುವೆ? ಸ್ಟೇಟ್ ಬ್ಯಾಂಕ್ ಮಾತ್ರ ರಾಷ್ಟ್ರೀಯ ಸ್ವರೂಪದ್ದಾಗಿದ್ದರೆ ಸಾಲದಿತ್ತೆ? ಕನಿಷ್ಠ ಸ್ಟೇಟ್ ಬ್ಯಾಂಕಿನ ೭ ಉಪ ಬ್ಯಾಂಕುಗಳನ್ನಾದರೂ ಸ್ಟೇಟ್ ಬ್ಯಾಂಕಿನಂತಹ ಮತ್ತೇ ಬೃಹದಾಕಾರಕ್ಕೆ ಬೆಳೆಯಿಸುವುದಕ್ಕಿಂತ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಮೊದಲಾದ ಸಣ್ಣ ಮಧ್ಯಮ ವರ್ಗದ ಬ್ಯಾಂಕುಗಳನ್ನು ಬೆಳೆಯಿಸುವುದು ಒಳಿತಲ್ಲವೆ?

● ಕೋ-ಆಪರೇಟಿವ್ ಬ್ಯಾಂಕು ವ್ಯವಸ್ಥೆಯನ್ನು ಪೂರ್ಣ ಕಡೆಗಣಿಸುವುದಕ್ಕಿಂತ ಈಗಿರುವ ೩ ಸ್ತರಗಳನ್ನು ಅಪೆಕ್ಸ್ ಹಾಗೂ ಶಾಖೆಗಳು ಎಂಬ ಎರಡೇ ಸ್ತರಕ್ಕಿಳಿಸಿ ರಾಜಕೀಯ ಸ್ನಿಗ್ಧತೆ ಕಡಿಮೆಮಾಡಿ ಅವೂ ಸಾರ್ಥಕ ಸೇವೆ ಸಲ್ಲಿಸುವಂತೆ ಮಾಡುವುದು ಸಾಧ್ಯವಾಗದೆ?

● ರಾಷ್ಟ್ರೀಕರಣವಾದ ಮೇಲೆ ಬ್ಯಾಂಕುಗಳು ಲಾಭದ ದೃಷ್ಟಿಯನ್ನು ಬಿಟ್ಟಿರುವಂತಿದೆ ವ್ಯವಸ್ಥೆ. ಬಳಕೆದಾರರ ಸೇವೆ, ಆರ್ಥಿಕ ಅನುಷ್ಠಾನದ ಜತೆ ಲಾಭ ತಳಕುಹಾಕಿಕೊಂಡಿರುವುದರಿಂದ ಬರಿ ಪಡೆವ–ತೆರುವ ಬಡ್ಡಿಗಳ ಅಂತರ, ಸೇವಾ ಶುಲ್ಕಗಳ ಏರಿಕೆಯಿಂದ ಬರಬಹುದಾದ ಆದಾಯ ವ್ಯವಸ್ಥೆಗಳಲ್ಲೆ ಸೋರಿ ಹೋಗುತ್ತದೆ. ಕಂಪ್ಯೂಟರೀಕರಣ ಅಥವಾ ಯಾಂತ್ರಿಕರಣ ಅತಿ ವೆಚ್ಚದ್ದು. ಎಲ್ಲ ಬ್ಯಾಂಕುಗಳಲ್ಲೂ ಈಗಿರುವ ವೈವಿಧ್ಯಮಯ ಸಂಕೀರ್ಣ ವಿಧಾನಗಳನ್ನು ಸರಳಗೊಳಿಸಿ ಒಂದು ರೂಪದಲ್ಲಿ ಖಚಿತಪಡಿಸಿಕೊಳ್ಳದೆ ಅದು ಕಾರ್ಯಸಾಧ್ಯವೂ ಆಗದು. ಹೊರಗಿನಿಂದ ಬರುವ ವಿನಾಯಿತಿ DICGC ಮೊದಲಾದ ಸಂಸ್ಥೆಗಳ ಬೆಂಬಲ ಸಹಾಯಗಳ ಅವಲಂಬನೆಗಳಿಗಿಂತ ಖರ್ಚುಗಳನ್ನು ಮಿತಿಗೊಳಿಸಿ ಕಾರ್ಯಸಾಮರ್ಥ್ಯವನ್ನು ಉತ್ತಮಗೊಳಿಸುವುದು ಮುಖ್ಯವಾಗಬೇಕು. ಕೆಲಸಗಾರರ ನೇಮಕ ಕಾರ್ಯ ವಿಧಾನಗಳ ದೌರ್ಬಲ್ಯ ಫಂಡುಗಳು–ಧನವಿನಿಯೋಗ ವ್ಯವಸ್ಥೆಯ ಅಸಮರ್ಪಕತೆ, ವಿಸ್ತರಿಸಿದ ಸಾಲಗಳ ಕ್ರಮಬದ್ಧ ಮೇಲ್ತನಿಖೆಯು ಇಲ್ಲದಿರುವುದು, ವಿಧಾನಗಳು ಬ್ಯಾಂಕ್ ಪತ್ರಗಳ ಮಾದರಿಗಳು ವಿಪರೀತ ಸಂಕೀರ್ಣವಾಗಿ ವ್ಯರ್ಥ ಖರ್ಚುಗಳ ಗೋಜಲಿಗೆ ದಾರಿಯಾಗಿರುವುದೊಂದು ಮುಖ್ಯ ಕೊರತೆ. (ಮೊದಲು ಬರಿ ಇಂಗ್ಲಿಷಿನಲ್ಲಿ ಸರಳವಾಗಿದ್ದ ಚೆಕ್ಕುಗಳಿಗೂ ಈಗ ಹಿಂದಿ ತಲೆಹಾಕಿ ಇರುವ ಜಾಗೆ ತಿನ್ನುತ್ತಿದೆ. ಮುಂದೆ ಚಳುವಳಿಯಾದರೆ ಪ್ರಾದೇಶಿಕ ಭಾಷೆಯೂ ತಲೆಹಾಕಬಹುದು!)

ಬ್ಯಾಂಕಿನವರೂ ಅಜಮಾಯಿಷಿ ಮಾಡಬೇಕಾಗಿದೆ. ಸಾಧ್ಯವಾಗುತ್ತಿಲ್ಲ. ೫೦೦೦ ರೂ. ವರೆಗಿನ IR DP ಸಾಲಕ್ಕೆ ಜಾಮೀನಿಗಾಗಿ ಒತ್ತಾಯಿಸಬಾರದೆಂದು ರಿಸರ್ವ್ ಬ್ಯಾಂಕ್ ಹೇಳಿದರೂ ಬ್ಯಾಂಕಿನ ಸುತ್ತೋಲೆಗಳಲ್ಲಿ ಅದರ ಸುಳಿವಿಲ್ಲ. ಈ ಮಾಧ್ಯ ಯಾಕೆ ಕೊಡುವುದಿಲ್ಲ, ಹೇಗೆ ಕೊಡುವುದಿಲ್ಲ ಎಂದು ಕೂಗಾಡಿ ಮುಂದಾಳಾಗಬಯಸುವ ಪುಢಾರಿಗಳನ್ನು ನಿಯಂತ್ರಿಸಲಾಗುತ್ತಿಲ್ಲ. ಸಾಲ ಕೊಡುವುದಕ್ಕಿಂತ ಮುಂಚೆಯೇ ಕೆಲವು ಸಾಲಗಾರರ ಅಡ್ರೆಸ್ಸಿಗೆ ಬರೆದ ಕಾಗದಗಳು ವಿಳಾಸದಾರರಿಲ್ಲ ಎಂದು ವಾಪಸಾಗುತ್ತಿವೆ. ಸಾಲ ಕೊಂಡು ಹೋದ ಮೇಲೆ ಸಿಕ್ಕುವ ಭರವಸೆ ಏನು? ಕ್ರಮೇಣ

ರಾಷ್ಟ್ರೀಕರಣವಾದ ಮೇಲೆ ಅತಿವೇಗದಿಂದ ಬ್ಯಾಂಕುಗಳ ವಿಕಾಸ ನಡೆದಿದೆ; ವರ್ಗಗಳಿಗೆ ಸೀಮಿತವಾಗದೆ ಸಮೂಹದ ಬ್ಯಾಂಕಿಂಗ್ ಆಗಿ ಪರಿವರ್ತನೆ ಹೊಂದಿದೆ. ಸರಕಾರಿ ಬ್ಯಾಂಕುಗಳ ಕ್ಷೇತ್ರ ೨೯% ನಷ್ಟು ಇದ್ದು ಉಳಿದದ್ದನ್ನು ಖಾಸಗಿಯವರಿಗೆ ಬಿಡಲಾಗಿದೆ. ಹೀಗಾಗಿ ಸ್ಪರ್ಧೆ ಅಷ್ಟಾಗಿಲ್ಲ. ಇದೇ ರೀತಿ ಬೆಳೆದರೆ ೧೯೯೦ ರ ಹೊತ್ತಿಗೆ ಈ ಉದ್ಯಮ ೫೬,೦೦೦ ಬ್ರಾಂಚು, ೧೨೦೦೦೦ ಕೋಟಿ ರೂ. ಠೇವಣಿ ಹಾಗೂ ೭೫೦೦೦ ಕೋಟಿ ರೂ. ಸಾಲದ ಬೃಹತ್ ವ್ಯವಸ್ಥೆಯಾಗುತ್ತದೆ. ಈಗಲೇ ಇವುಗಳ ಕಾರ್ಯಕ್ಷಮತೆ, ಗುಣಮಟ್ಟ, ನಿಯಂತ್ರಣ ಬಹಳವಾಗಿ ಇಳಿದಿದೆ. ಹೊಸ ವಿಧಾನಗಳ ಆವಿಷ್ಕಾರ ಲಾಭ ನಷ್ಟ, ಹಾಗೂ ಕೆಲಸದ ಬೆಲೆಗಳನ್ನು ಪ್ರತಿ ಹಂತದಲ್ಲೂ ಲೆಕ್ಕ ಹಾಕಿ ಸಮಯ ಹಣ ಹಾಗೂ ಶ್ರಮಗಳನ್ನು ಪೋಲಾಗದಂತೆ ತಡೆಯುವ ಸಂಶೋಧನ ಪ್ರವೃತ್ತಿ, ವ್ಯವಸ್ಥೆ ಬಂದಿಲ್ಲ.

ಇದಕ್ಕೆ ಕೆಲವು ಮಾನಸಿಕ ತಡೆಗಳು ಕಾರಣ. ಎಲ್ಲಕ್ಕಿಂತ ಮುಖ್ಯವಾದ್ದೆಂದರೆ ಬ್ಯಾಂಕಿನ ಕೆಲಸ ಯಾಂತ್ರಿಕ ಎಂಬ ನಂಬಿಕೆ. ಇಲ್ಲಿನ ವ್ಯವಸ್ಥೆಗಳನ್ನು ನಡೆಸಲು ಪ್ರಜ್ಞಾಪೂರ್ವಕ ಕ್ರಿಯೆ ಬೇಡ, ಬರೀ ಸೀಲು ಒತ್ತಿದಂತೆ ಕೆಲಸ ಮಾಡಿದರೆ ಸಾಕು ಎನ್ನುವ ಅನಿಸಿಕೆಯಿಂದಾಗಿ ತೀರ ಮೇಲಿನಿಂದ ಕೆಳಗಿನವರೆಗೂ ಕೆಲಸ, ಮೇಲ್ವಿಚಾರಣೆ ಯಾಂತ್ರಿಕವಾಗಿಬಿಟ್ಟಿದೆ. ಮನುಷ್ಯರು ಯಂತ್ರಗಳಾದಾಗ ಭಾವನೆಗೆ ಕೊರತೆ. ಸೇವೆಯ ದೃಷ್ಟಿಕೋಣ ಬಾರದು. ಅತಿ ಸಣ್ಣ ಮನುಷ್ಯನಿಗೆ ಕೂಡ ತಮ್ಮ ಸೇವೆ ಸಮಾಧಾನ ನೀಡುವಂತಾದಾಗ ಮಾತ್ರ ಸಾರ್ವಜನಿಕರ ದೃಷ್ಟಿಯಲ್ಲಿ ತಮ್ಮ ಬೆಲೆ ಹೆಚ್ಚಾಗುತ್ತದೆ ಎಂಬ ನಂಬಿಕೆ ಬಾರದು. "ತಾಲೂಕಾಫೀಸಿನಲ್ಲಿ ಚಾಲ ಮಾಡಿಸಿ ಕಾಯೊದಿಲ್ವ ಇಲ್ಲೇಕೆ ಒಂದು ನಿಮಿಷಕ್ಕೆ ಜಗಳಾಡಬೇಕು ಇವರು?" ಎನ್ನುವ ಧೋರಣೆಗೆ ಇದೇ ಕಾರಣ. ಆಡಳಿತದವರು ಬ್ಯಾಂಕಿನಲ್ಲಿ ಏನಾದರೂ ಸುಧಾರಣೆಯಾಗಬೇಕಾದರೆ ಕಂಪ್ಯೂಟರಗಳೇ ಬರಬೇಕು ಎಂದು ಕಾಯ್ದು ಕೂರಲೂ ಇದೇ ಕಾರಣ.

ಜನಸಂಪರ್ಕವೇ ಜೀವವಾಗಿರುವ ಬ್ಯಾಂಕ್ ಉದ್ದಿಮೆಯಲ್ಲಿ ಮಾನವೀಯ ಸಂಬಂಧಗಳು ಅತಿ ಮುಖ್ಯ. ಆಡಳಿತ ನೌಕರರ ನಡುವೆ ಇಂಥ ಸಂಬಂಧ ಇಲ್ಲದಿದ್ದರೆ ತಾವು ಒಂದು ಕುಟುಂಬದವರೆಂಬ ಮನೋಭಾವ ಬಾರದಿದ್ದರೆ ಸೇವೆ ಹೇಗೆ ಸಾಧ್ಯ? ಸಂಸ್ಥೆಯ ಮಾನವ ಅಂಗದ ವ್ಯವಸ್ಥೆ ನೋಡುವದು ವಿಕಾಸದಿಂದಾಗಿ ದೊಡ್ಡ ಸಮಸ್ಯೆಯಾಗಿದೆ. ಪ್ರಬಲವಾಗಿರುವ ನೌಕರರ ಸಂಘಟನೆಗಳನ್ನು ಸಂಸ್ಥೆಯ ಅಭಿವೃದ್ಧಿ ಕ್ರಿಯೆಗಳಲ್ಲಿ ತೊಡಗಿಸಿ ಪರಸ್ಪರ ಲಾಭ ಹೊಂದುವ ಉತ್ತಮ ಪರಿಣಾಮ ಫಲಗಳಾಗಿ ಕೆಲಸ ಮಾಡಲು ಆ ಸಂಘಟನೆಗಳನ್ನು ಪ್ರದರ್ಶಿಸುವ ಮನಸ್ಸೇ ಆಡಳಿತಗಾರಿಗಿಲ್ಲ. ಎಂಥ ಪರಿಸ್ಥಿತಿಯಲ್ಲೂ ಠೇವಣಿ ಸಂಪಾದಿಸಬಲ್ಲ, ತುಂಬ ಬುದ್ಧಿವಂತಿಕೆಯಿಂದ ಸಾಲಕೊಡಬಲ್ಲ ವ್ಯವಸ್ಥಾಪಕರನ್ನು ಈ ವಿಕಾಸ ನಿರ್ಮಿಸಿದೆಯೇ ವಿನಾ ಮಾನವೀಯ ಸಂಬಂಧಗಳನ್ನು ಅಭಿವೃದ್ಧಿಗೊಳಿಸಬಲ್ಲ ಕಸಬುದಾರ ವ್ಯವಸ್ಥಾಪಕರನ್ನಲ್ಲ. ತನ್ನ ಕೆಳಗಿನವರನ್ನು ಬೆಳೆಸಿ ನಿಯಂತ್ರಿಸಬಲ್ಲ ಯೋಗ್ಯತೆಯ ಕೌಶ-

ಸಾಲ ಪಡೆಯುವುದು ಮೂಲಭೂತ ಹಕ್ಕು ಎಂಬಂತೆ ಸಮಾಜ ಪರಿವರ್ತನೆ ಆಗುತ್ತಿದೆ.

ಈ ದೃಶ್ಯಗಳನ್ನು ಕೌಂಟರಿನಿಂದ ಹೊರಗೆ ನೋಡಿದವರಿಗೆ ಅಶಿಸ್ತು ಎನಿಸಿದರೆ ಒಳಗಿನವರಿಗೆ ಅಸಹಾಯಕತೆ ಎನ್ನಿಸುತ್ತದೆ.

ದ್ವಿಪಕ್ಷೀಯ ಒಪ್ಪಂದಗಳು, ಶಾಸ್ತ್ರಿ ಹಾಗೂ ದೇಸಾಯಿಗಳ ಅವಾರ್ಡುಗಳು ಶಿಸ್ತು ಕ್ರಮದ ವಿವಿಧ ವಿಧಾನಗಳನ್ನು ವಿವರಿಸಿವೆ. ಅಶಿಸ್ತು ದುಷ್ಟ ವರ್ತನೆಗಳನ್ನು ಪಟ್ಟಿಮಾಡಿ ತೀವ್ರ ಕ್ರಮ ತೆಗೆದುಕೊಳ್ಳುವ ಹಕ್ಕನ್ನು ಅಧಿಕಾರಿಗಳಿಗೆ ನೀಡಿದೆ. ಬ್ಯಾಂಕ್ ಆಡಳಿತಗಳು ಅಶಿಸ್ತಿನ ವಿರುದ್ಧ ಕ್ರಮ ತೆಗೆದುಕೊಳ್ಳಲಾರದಷ್ಟು ದುರ್ಬಲವೆಂದು

ಲದ ತರಬೇತಿಯನ್ನು ಯಾವ ಅಧಿಕಾರಿಗೂ ನೀಡುವುದಿಲ್ಲ. ಮಾನವರ ಸಂಖ್ಯೆ ಹೆಚ್ಚಿದಂತೆ ಸಂಸ್ಥೆಯಲ್ಲಿ ನೌಕರರ ಬೆಲೆ ಗಣನೆಗೇ ಬಾರದಷ್ಟು ಕ್ಷುಲ್ಲಕವಾಗುತ್ತದೆ. ಸಾಂಸ್ಥಿಕವಾಗಿರುವ ಈ ದೂರ ಉದ್ದಿಮೆಯಲ್ಲಿನ ಮಾನವ ಸಂಬಂಧಗಳು ಅಮಾನವೀಯವಾಗುವಂತೆ ಮಾಡುತ್ತದೆ. ಇರುವ ನಾಲ್ಕೈದು ನೌಕರರ ಸಂಘಗಳು ನಡುವಿನ ಕಚ್ಚಾಟ ಆಡಳಿತದವರು ಒಡಕನ್ನು ಹೆಚ್ಚಿಸಿ ಒಂದೊಂದು ಸಂಘಗಳ ಪಕ್ಷ ವಹಿಸುವ ಅನಾರೋಗ್ಯಕರ ವಾತಾವರಣ ಕೊನೆಗಾಣಬೇಕು.

ನೌಕರರಿಗೆ ಕೆಲಸದ ಬಗ್ಗೆ ಮಾತ್ರ ತರಬೇತಿ ನೀಡಲಾಗುತ್ತಿದೆ. ವ್ಯವಸ್ಥೆ ನೋಡುವುದರಲ್ಲಲ್ಲ. ತರಬೇತಿಯೆಂದರೆ ಸಂಬಳ ಸಹಿತದ ರಜೆ ಎಂದು ಅವರು ತಿಳಿಯುವುದು ಅವರ ಉದ್ದೇಶ ಸಾಧನೆ ಆಗುತ್ತಿಲ್ಲ ಎಂಬುದರ ಸೂಚನೆ. ಸಂಸ್ಥೆಯ ಈ ಮಾನವ ಅಂಗದ ತರಬೇತಿ ನಿರಂತರವಾಗಿರಬೇಕು. ಅದೊಂದು ಪದ್ಧತಿ ಆಗದೆ ತತ್ವವಾಗಬೇಕು. ನೌಕರರ ಸಂಘಟನೆಗಳೂ ಅದನ್ನು ಬೆಂಬಲಿಸಿ ಮಾನವೀಯ ಸಂಬಂಧಗಳ ವಾತಾವರಣ ನಿರ್ಮಿಸಬೇಕು.

ಸರಕಾರ ತನ್ನ ಸಾಮಾಜಿಕ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಾಧನವಾಗಿ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ್ದರೂ ಅವುಗಳ ಕಾರ್ಯ ವಿಧಾನದ ಬಗ್ಗೆ ಹೆಚ್ಚು ಗಮನ ನೀಡಿಲ್ಲ. ರೇಲ್ವೆ ಅರಣ್ಯ ಸೇವೆ ಆಡಳಿತದ ಸೇವೆಗಳಂತೆ ಈ ರಂಗವೂ ಮುಖ್ಯ. ಅಲ್ಲಿರುವಂತೆ ಕೇಂದ್ರೀಯ ಸೇವಾ ಅಧಿಕಾರಿಗಳ ಒಂದು ಶ್ರೇಣಿಯ ನಿರ್ಮಾಣ ಸ್ವಾಗತಾರ್ಹ. ಬ್ಯಾಂಕ್ ಸೇವೆ ಅತಿ ಸಂಕೀರ್ಣವಾಗುತ್ತಿರುವ ಈ ದಿನಗಳಲ್ಲಿ ಅದಕ್ಕೆಂದೇ ತರಬೇತಿ ಪಡೆದ ಪ್ರತಿಭಾಶಾಲಿ ವ್ಯವಸ್ಥಾಪಕ ಅಧಿಕಾರಿಗಳ ಇಂಥ ಶ್ರೇಣಿ ಅತ್ಯವಶ್ಯ. ಈಗಿರುವಂತೆ ಆಡಳಿತದ ಮಾಧ್ಯಮ ಹಾಗೂ ಉನ್ನತ ಶ್ರೇಣಿಗಳಲ್ಲಿ ಹಿಂದೆ ಜಾತಿ ಗುಂಪುಗಳು ಬ್ಯಾಂಕುಗಳನ್ನು ನಡೆಸುತ್ತಿದ್ದ ಕಾಲದ ಹಳೇ ಜನರೇ ತುಂಬಿದ್ದಾರೆ. ಇವರ ಸಂಸ್ಕೃತಿ ದೃಷ್ಟಿಕೋನಗಳು ಬದಲಾವಣೆಗಳಿಗೆ ಸಹಾಯಕವಾಗುವದು. ವಶೀಲಿ, ಸೇವಾಬಲದಿಂದ ಮೇಲೇರಿದವರೆ ಇಲ್ಲಿ ತುಂಬಿಕೊಳ್ಳುವದಕ್ಕಿಂತ ಕಸಬುದಾರಿಕೆಯಲ್ಲಿನ ಪ್ರತಿಭೆಯಲ್ಲಿ ನುರಿತ ಕಿರಿಯ ಅಧಿಕಾರಿಗಳನ್ನು ಪರೀಕ್ಷಿ ಆಯ್ದು ಎಲ್ಲ ಬ್ಯಾಂಕುಗಳನ್ನು ತನ್ನ ಕಕ್ಷೆಯಲ್ಲಿ ಹೊಂದಿದ ಒಂದು ಕೇಂದ್ರ ಸೇವಾ ಶ್ರೇಣಿಯ ನಿರ್ಮಾಣ ಒಳಿತಲ್ಲವೆ? CAIIB ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಅಧಿಕಾರಿಗಳು ಮಾತ್ರ ಇದರ ಅಭ್ಯರ್ಥಿಗಳಾಗುವಂತಾದರೆ ಇಂಥ ಸ್ಪರ್ಧೆಯಿಂದಾಗಿ ಅವರಲ್ಲಿ ಕೆಲಸದ ಪ್ರವರ್ತನೆ ಹೆಚ್ಚುತ್ತದೆ. ಯೋಗ್ಯತೆ ಇಲ್ಲ ಎನಿಸಿದವರನ್ನು ಅವರವರ ಬ್ಯಾಂಕುಗಳಿಗೆ ಕಳಿಸುವ ವ್ಯವಸ್ಥೆಯೂ ಇರಬೇಕಾಗುತ್ತದೆ. ಅತಿ ವೆಚ್ಚದ ಯಾಂತ್ರೀಕರಣಕ್ಕಿಂತ ಆಡಳಿತ ಯಂತ್ರದ ಈ ಮಾನವೀಕರಣವೇ ಹೆಚ್ಚು ಸಮಂಜಸ. ಕೆಲಸ ಮಾಡಿಸಲು ಪ್ರವರ್ತನೆ ನೀಡಬಲ್ಲ ನಿಯಂತ್ರಕರೆ ಯಂತ್ರಗಳಿಗಿಂತ ಹೆಚ್ಚು ಸಮರ್ಥರಲ್ಲವೆ?

ಪೂಜಾರಿಯವರ ಅಭಿಪ್ರಾಯವೆ? ನಿಜವಾಗಿ ಅಶಿಸ್ತು ಎಂದರೇನು? ಬಹುಶಃ ಈ ನೌಕರರು ಪ್ರಬಲ ಸಂಘಟನೆಗಳನ್ನು ರೂಪಿಸಿಕೊಂಡಿರುವುದೇ ಇರಬಹುದು.

ಸಂಘಟನೆ ಹಾಗೂ ಚಳುವಳಿ

ದ್ವೇಷ ಸಾಧನೆಯು, ತಿರಸ್ಕಾರದ ಹೇಳಿಕೆ ಅಥವಾ ಘೋಷಣೆಗಳಿಂದ ತಾತ್ಕಾಲಿಕವಾಗಿ ಗುಂಪುಗೂಡಿಸುವುದು. ಚಳುವಳಿ ಆ 'ಘೋಷಣೆಯ ಗುರಿ' ನಿಜವಿರಬಹುದು ಅಥವಾ ಸುಳ್ಳಿರಬಹುದು: 'ಕನ್ನಡ ಅಪಾಯದಲ್ಲಿದೆ' 'ಹಿಂದೂ ಅಲ್ಪಸಂಖ್ಯಾತನಾಗುತ್ತಿದ್ದಾನೆ' ಇತ್ಯಾದಿ ಸಮಾಜ ದ್ರೋಹಿಗಳು, ಅಶಿಸ್ತಿನವರು, ಪ್ರಗತಿಪೀಡಕರು ಮೊದಲಾದ ತೀಕ್ಷ್ಣ ಬೈಗುಳನ್ನು ಆ ವಿರೋಧಿಗಳ ಮೇಲೆ ಪ್ರಯೋಗಿಸುವದು ಚಳುವಳಿ ನಡೆಸುವ ನಾಯಕರ ವಿಧಾನ. ಇದಕ್ಕೆ ವಿರುದ್ಧವಾಗಿ ಸಂಘಟನೆಯು ರಚನಾತ್ಮಕ ಗುರಿಗಳನ್ನು ಹೊಂದಿದ, ಹರಳುಗಟ್ಟುವಂತಹ ನಿಧಾನ ಕ್ರಿಯೆ. ಚಳುವಳಿಯಿಂದ ಆಸ್ತಿಪಾಸ್ತಿ ಹಾನಿಯಾಗಿ ಜನರಲ್ಲಿ ಒಡಕುಂಟಾಗಿ ಕೊನೆಗೆ ನಾಯಕರಿಗಲ್ಲದೆ ಬೇರೆಯವರಿಗೆ ಹೆಚ್ಚು ಲಾಭವಾಗದು. ದುರದೃಷ್ಟವಶಾತ್ ನಮ್ಮ ರಾಜಕಾರಣಿಗಳೆಲ್ಲ ಚಳುವಳಿಯ 'ನೇರ' ಹಾದಿಯಲ್ಲಿ ನಂಬಿಕೆಯನ್ನಿಟ್ಟವರೇ.

ಕೈಗಾರಿಕೆಗಳು ಉದ್ದಿಮೆಗಳು ಸಂಘಟನೆಗಳ ಉದಾಹರಣೆ. ಕೈಗಾರಿಕೆಗಳಲ್ಲಿ ಎರಡು ರೀತಿಯ ಮಾನವ ಸಂಘಟನೆಗಳು ಆಡಳಿತ ಹಾಗೂ ನೌಕರ ಸಂಘಗಳು ಕೆಲಸ ಮಾಡುತ್ತವೆ. ಇವುಗಳ ವರ್ತನೆ ಚಳುವಳಿಯ ಹಾದಿಯನ್ನು ಹಿಡಿದರೆ ಕಷ್ಟ. ಏಕೆಂದರೆ ಚಳುವಳಿಯ ನೇತಾರರು ತೇರು ಎಳೆದಂತೆ ಕ್ರಿಯೆ ಆರಂಭಿಬಸಲ್ಲರು. ನಿಲ್ಲಿಸಲಾರರು ಹಾನಿಯನ್ನು ಒಡಕನ್ನು ಉಂಟುಮಾಡಬಲ್ಲರು, ಒಂದಾಗಿಸಲಾರರು. ಆದರೆ ಸಂಘಟನೆ ರಚನಾತ್ಮಕಶಕ್ತಿ ಕೇಂದ್ರವಾಗಿ ಬೆಳೆಯಬಲ್ಲದು. ಸರ್ಕಾರ ಅಥವಾ ಆಡಳಿತ ಅದಕ್ಕೆ ಹೆದರಿ ಅದನ್ನು ತುಳಿದು ಒಡಕುಂಟುಮಾಡಿ ತಮ್ಮಲ್ಲೆ ಒಲವು ಸಿಕ್ಕುವಾತೆಯೋ ಮಾಡಿ ಅದನ್ನು ನಾಶ ಮಾಡಲು ಪ್ರಯತ್ನ ಪಡುತ್ತದೆ.

ನಮ್ಮ ದೇಶದಲ್ಲೆಲ್ಲೂ ನಿಜವಾದ ಕೈಗಾರಿಕಾ ವಾತಾವರಣವಿಲ್ಲ. ಆಡಳಿತವೆಂದರೆ ಅಧ್ಯಕ್ಷ, ನೌಕರ ಸಂಘವೆಂದರೆ ಅದರ ನಾಯಕ. ಉಳಿದವರು ಬಾಲಬಡುಕರು. ಹೀಗಾಗಿ ಹಿಂದಿನಿಂದಲೂ ಎರಡೂ ಕ್ಷೇತ್ರಗಳಲ್ಲಿನ ಕ್ರಿಯೆ ನಿಧಾನ, ಅಲ್ಪ. ಕರ್ತೃತ್ವಶಕ್ತಿ, ಜವಾಬ್ದಾರಿಯ ನಿರ್ವಹಣೆ ಸಂಘಟನೆಯ ಮನೋಭಾವ ಎರಡಕ್ಕೂ ಬೇಡ. ಎರಡು ಕಡೆಯವರೂ ತಮ್ಮ ವಿರೋಧಿಯು ಶಿಸ್ತಿನವ ಜವಾಬ್ದಾರಿಯ ಲೆಕ್ಕ ಸರಿಯಾಗಿ ತೋರಿಸಬಲ್ಲವನಾಗಬೇಕೆಂದು ಬಯಸುವರು; ತಮ್ಮ ಬಗ್ಗೆ ಮಾತ್ರ ಉದಾರರು. ಯಾವ ಲಗಾಮೂ ಬೇಕಿಲ್ಲ. ಒಂದು ತರಹದ ಅಡ್ ಹಾಕ್‌ತನವೇ ಮುಂದುವರೆಯಬೇಕೆಂಬುದು ಅವರ ಇಷ್ಟ, ಇವನ್ನು ಚಳುವಳಿ ಎಂದೇ ಕರೆಯಬೇಕಾದೀತು.

ನೌಕರರು ಗುಲಾಮರೆಂದು ತಿಳಿಯುವ ಪಾಳೆಗಾರಿಕೆಯ ಪ್ರವೃತ್ತಿಯು, ಆಡಳಿತಗಾರರು ಹಾಗೂ "ರಕ್ತ ಹೀರುವ ಕೊಲ್ಲುವ" ಆಡಳಿತದಿಂದ ಪಾರು ಮಾಡಲು ಯುದ್ಧವನ್ನೇ ಸಾರಿಬಿಡುವ ಅತ್ಯಂತ ಹೆಚ್ಚು ದ್ವೇಷದ ತಿರಸ್ಕಾರದ ಭಾಷೆಯನ್ನು ಬಳಸುವ ಕಾರ್ಮಿಕನಾಯಕರು ಬದಲಾಗಬೇಕು. ಆದರೆ ಹೇಗೆ? ಸಮರೋತ್ಸಾಹವೇ ನಾಯಕನ ವಿಶೇಷ ಲಕ್ಷಣ. ಬುದ್ಧಿವಂತಿಕೆಯಿಂದ ಒಪ್ಪಂದಗಳನ್ನು ಮಾಡಿಕೊಳ್ಳುವ ಮುತ್ಸದ್ದಿತನ ಇಲ್ಲದ್ದನ್ನು ಮುಚ್ಚಿಕೊಳ್ಳಲು ಈತ ಚಳುವಳಿಯ ಮಾರ್ಗವನ್ನೆ ಹಿಡಿಯುತ್ತಾನೆ. ತಮ್ಮ 'ಆಸ್ತಿ'ಯನ್ನು ರಕ್ಷಿಸಿಕೊಳ್ಳಲು ಆಡಳಿತಗಾರರೂ ಸೀಳುನಾಯಿಗಳಂಥ ಸಂಪ್ರದಾಯವಾದಿಗಳನ್ನೇ ತಮ್ಮ ಪ್ರತಿನಿಧಿಗಳನ್ನಾಗಿಸುತ್ತಾರೆ. ಪರಿಣಾಮವೆಂದರೆ ವಿಚಿತ್ರವಾದ ತುಂಬು ಸಮಯ ಹಣ ಪೋಲು ಮಾಡಿಸುವ ಕೈಗಾರಿಕಾ ಕಾನೂನು ಕ್ರಮಗಳ ಗೋಜಲುಗಳಲ್ಲಿ ಸಿಕ್ಕಿಕೊಳ್ಳುವುದು. ಇವರಲ್ಲಿ ನುರಿತ ನರಿಗಳೇ ನಾಯಕರ ಬದಲು ನಿಜವಾಗಿ

ಹೀಗಾಗಿ ನಾಯಕತ್ವ ತನ್ನ ಗುರಿ ಸಾಧಿಸಲಾಗದೆ ಅರ್ಥಹೀನ ಎನ್ನಿಸುತ್ತದೆ. ಇದಿರಿನವರನ್ನೇ ಗಮನಿಸುತ್ತ ಕ್ರಿಯೆಗೆತೊಡಗಿರುವ ತತ್ವ ಇಬ್ಬರದೂ.

ಅದೃಷ್ಟವಶಾತ್ ಬ್ಯಾಂಕ್ ಸಂಘಗಳಲ್ಲಿ 'ಸಂಘಟನೆ' ಹೆಚ್ಚಿದೆ. ಆದ್ದರಿಂದಲೇ ಬ್ಯಾಂಕ್ ನೌಕರರಲ್ಲಿ ಸ್ವಾತಂತ್ರ್ಯ ಗೌರವ ಹೆಚ್ಚು ಇದೆ. ಆದರೆ ತನ್ನ ಸದಸ್ಯರಿಗೆ ಬರೀ ಸಂಬಳ ಸವಲತ್ತು ಹೆಚ್ಚಿಸುವುದನ್ನು ಬಿಟ್ಟು ಬೇರೆ ವಿಧಾಯಕ ಕ್ರಮಗಳಿಂದ ಇಡೀ ಉದ್ದಿಮೆ ಆರೋಗ್ಯಕರವಾಗಿ ಬೆಳೆಯಲು ಅನುಕೂಲವಾಗುವಂತೆ ನೋಡಿ ಕೊಳ್ಳಲು ಇವಕ್ಕೆ ಸಾಧ್ಯವಾಗುತ್ತಿಲ್ಲ ಏಕೆ? ಕಾನೂನು ತೊಡಕುಗಳೆ?

ಬ್ಯಾಂಕ್ ನಿಯಂತ್ರಣ ಕಾಯಿದೆ ಹಾಗೂ ಆರ್ಥಿಕ ಅಶಿಸ್ತು

'ಬಡವರನ್ನು ಕಾನೂನು ನಿಯಂತ್ರಿಸಿದರೆ ಕಾನೂನನ್ನು ಸಿರಿವಂತರು ನಿಯಂತ್ರಿಸುತ್ತಾರೆ' ಎಂಬ ಸೂಕ್ತಿ ಒಂದುಂಟು. ಬ್ಯಾಂಕ್ ಆಡಳಿತ ಗಳಿಗಂತೂ ಒಂದು ಕಾಯಿದೆಯಿಂದ ವಿಶೇಷ ರಕ್ಷಣೆ. ತಿರುಗಿ ಬರದ ಕೆಟ್ಟ ಸಾಲಗಳನ್ನು ವಜಾ ಹಾಕುವುದನ್ನು ಅವು ಬ್ಯಾಲನ್ಸ್ ಶೀಟಿನಲ್ಲಾಗಲಿ ಅಥವಾ ಇನ್ನು ಹೇಗೇ ಆಗಲಿ ಬಹಿರಂಗಗೊಳಿಸ ಬೇಕಾಗಿಲ್ಲ ಎಂಬ ಒಂದು ಕಾನೂನಿದೆ. ನೈಜ ಲಾಭವನ್ನು ಕೂಡ ಅವು ತೋರಿಸದಿರಬಹುದು. ನಿಜವಾಗಿ ಖಾಸಗಿ ಬ್ಯಾಂಕುಗಳಿಗೆ ಮಾತ್ರ, ಅದೂ ಠೇವಣಿ ಸಂಗ್ರಹಣೆಗೆ ಸಹಾಯವಾಗ ಬೇಕಾದ ಈ ಕಾನೂನುಗಳನ್ನು ರಾಷ್ಟ್ರೀಕರಣವಾದ ೧೫ ವರ್ಷಗಳಾದ ಮೇಲೂ ಬದಲಾಯಿಸಿಲ್ಲ. ಇದರಿಂದ ವ್ಯವಸ್ಥೆಯ ಆಡಳಿತಾತ್ಮಕ ತಪ್ಪುಗಳನ್ನು ಕೊರತೆಗಳನ್ನು ಚೆನ್ನಾಗಿ ಮುಚ್ಚಿಹಾಕಿ, ನೌಕರ ಸಂಘಗಳಿಗೆ ನಿಜವಾದ ಆರ್ಥಿಕ ಚಿತ್ರ ಸಿಕ್ಕದೆ ತಮ್ಮ ಸಂಸ್ಥೆಯಲ್ಲಿನ ತಪ್ಪುಗಳ ವಿರುದ್ಧ ಹೋರಾಡಲು ಅವಕಾಶವೇ ಇಲ್ಲದಂತೆ ಮಾಡಲು ಆಗಿದೆ. ರಾಜಕಾರಣಿಗಳಿಗಂತೂ ಉತ್ತಮ ಅವಕಾಶ ಕೆಟ್ಟ ಸಾಲಗಳನ್ನು ವಜಾಹಾಕುವಲ್ಲಿ. ಸಾಲದ ಬಗೆಗಿನ ರಿಸರ್ವ್ ಬ್ಯಾಂಕ್ ನಿರ್ದೇಶನ ಗಳು ಆಡಳಿತಗಾರರ ಜಾಣಾಕ್ಷತನದ ಮುಂದೆ ವ್ಯರ್ಥ. ಅತಿ ದೊಡ್ಡ ಆಸ್ತಿವಂತ ಮನೆತನಗಳ ವಶ ದಲ್ಲಿರುವ ಕಂಪನಿಗಳ ಬ್ಯಾಂಕ್ ಸಾಲದ ಏರಿಕೆ ಯನ್ನು ಗಮನಿಸಿದರೆ ಸೀಕು ಸಂಸ್ಥೆಗಳಿಗೆ ಕೊಟ್ಟ ಸಾಲದ ಪ್ರಮಾಣವನ್ನು (೭೮ರಲ್ಲಿ ೧೧೦೦೦ ಕೋಟಿ ಇತ್ತು) ನೋಡಿದರೆ ಸಾಕು. ಒಂದು ನಿದರ್ಶನ ಕೊಡುವುದಾದರೆ ೬.೪೩ ಕೋಟಿ ಆಸ್ತಿ ೧೦ ಕೋಟಿಗೂ ಮೀರಿ ನಷ್ಟದ ಲೆಕ್ಕವಿದ್ದ ಕೋಹಿನೂರು ಮಿಲ್ಲಿಗೆ ಸೆಂಟ್ರಲ್ ಬ್ಯಾಂಕು ತನ್ನ ಸಾಲ ಮಿತಿಯನ್ನು ೨೫ ಕೋಟಿಗೆ ಏರಿಸಿದ್ದರ ಬಗ್ಗೆ ೭೮ರಲ್ಲಿ ರಾಜ್ಯಸಭೆಯಲ್ಲಿ ಚರ್ಚೆಯಾಗಿತ್ತು. ಮುಂದೆ ಆ ಹಣ ಏನಾಗಿದೆ? ಅದು ಬಡವರ ಠೇವಣಿ ಹಣವಲ್ಲವೆ? ಅರಬ್ ಎಮಿರೇಟ್ಸಿನ ಎಕ್ಸಚೇಂಜ್ ಕಂಪನಿಗಳು ಇದ್ದಕ್ಕಿದ್ದಂತೆ ಕೈಕೊಟ್ಟಾಗ ಕೆಲವು ಸರಕಾರಿ ಬ್ಯಾಂಕುಗಳು (ರಿಸರ್ವ್ ಬ್ಯಾಂಕ್ ಹಿಂದೆಯೇ ಎಚ್ಚರಿಸಿದ್ದರೂ ಕೇಳದೆ) ಕೋಟಿಗಟ್ಟಲೆ ಕೈಸುಟ್ಟು ಕೊಂಡವೆಂದು ಪತ್ರಿಕೆಗಳು ವರದಿ ಮಾಡಿದ್ದವು. ಕೆಲ ದಿನಗಳ ಕೆಳಗೆ ಮುಂಬಯಿ ವಜ್ರ ವ್ಯಾಪಾರಿ ಗಳಿಗೆ ಕೊಟ್ಟ ರಫ್ತು ಸಾಲದ ವಿಚಾರದಲ್ಲಿ ಹೀಗಾಯಿತಂತೆ. ಇಂಥ ಭಾರೀ ತಪ್ಪುಗಳ ನಷ್ಟ ಗಳ ವಿವರಗಳಿಗೂ ನಾವು ಪತ್ರಿಕೆಗಳ ತನಿಖಾ ವರದಿಗಳನ್ನು ಅವಲಂಬಿಸಬೇಕೆ? ಇವಕ್ಕೆಲ್ಲ ಜವಾ ಬ್ದಾರರು ಯಾರು? ಅವರಿಗೆ ಏನು ಶಿಕ್ಷೆಯಾ ಯಿತು? ಇವೆಲ್ಲವನ್ನು ಪಾರ್ಲಿಮೆಂಟಿನ ಲೆಕ್ಕ ಪತ್ರ ಸಮಿತಿ ಪರಿಶೀಲಿಸುವುದು ಅಸಾಧ್ಯ. ಅದರ ಪರಿಮಿತಿ ಬ್ಯಾಂಕುಗಳನ್ನು ಒಳಪಡಿಸಿಯೂ ಇಲ್ಲ ಅದರ ಬದಲು ಎಲ್ಲ ಲಾಭನಷ್ಟದ ಲೆಕ್ಕವನ್ನು ಸ್ವಲ್ಪವೂ ಮುಚ್ಚಿಡದೆ ಬಹಿರಂಗಗೊಳಿಸಬೇಕೆಂಬ ಕಾನೂನು ತರುವುದೇ ಒಳಿತಲ್ಲವೆ? ಅಕ್ರಮಗಳನ್ನು ಕ್ರಮವಾಗಿ ಸರಿಪಡಿಸುವ ಇಂಥ ವಿಚಾರಗಳ ಬಗ್ಗೆ ಪೂಜಾರಿಗಳು ಮಾತನಾಡುವುದೇ ಇಲ್ಲ! ಎಲ್ಲ ಸರಕಾರಿ ಉದ್ದಿಮೆಗಳೂ ತಮ್ಮ ಲೆಕ್ಕಪತ್ರಗಳನ್ನು ಬಹಿರಂಗಗೊಳಿಸುವಾಗ ಆರ್ಥಿಕ ಪ್ರಪಂಚದ ಜೀವನಾಡಿಗಳಂತಿರುವ ಬ್ಯಾಂಕುಗಳನ್ನು ಮಾತ್ರ ಹಾಗೆಯೇ ಬಿಡುವುದರಿಂದ ಕೆಲವರಿಗೆ ಲಾಭವಿರ ಲೇಬೇಕು. 'ಕೊಟ್ಟೇನು ಕೊಡಂಗಿ ಇಸಕೊಂಡೇನು ಈರಭದ್ರ' ಎಂಬ ಗಾದೆ ಬ್ಯಾಂಕಿನ ಅತಿ ದೊಡ್ಡ

ಹಾಗೂ ಅತಿ ಸಣ್ಣ ಸಾಲಗಳಿಗೆ ಅನ್ವಯುವಾಗುವಂತಿದೆ. ಅತಿ ದೊಡ್ಡ ಸಾಲಗಳ ಹಿಂದಿನ ರಾಜಕಾರಣ ಹಾಗೂ ಅವನ್ನು ಮರಳಿಸುವ ಕಾರಣಗಳು ಗುಪ್ತವಾಗಿದ್ದರೆ ಅವುಗಳ ಬಗೆಗಿನ ಬ್ಯಾಂಕಿನ ಸ್ವಂತ ಅಧಿಕಾರಿಗಳ ಹಾಗೂ ರಿಸರ್ವ್ ಬ್ಯಾಂಕಿನ ತನಿಖಾವರದಿಗಳೂ ಗುಪ್ತವೇ? ಅತಿ ಸಣ್ಣ ಸಾಲಗಳ ರಾಜಕಾರಣ ಬಹಿರಂಗವಾದ ಪ್ರಚಾರದೃಶ್ಯವಾಗಿ ಕಂಗೊಳಿಸುತ್ತಿರುತ್ತದೆ.

DRI ಮತ್ತು IRDP

ಸಾಲ ಮೇಳಗಳ ಬಗ್ಗೆ ಹಿಂದೆಯೇ ಹೇಳಿದೆ. ಅತಿ ದೊಡ್ಡ ಸಾಲಗಾರರಿಂದ ಹಣ ಮರಳುವುದು ಯಾವಾಗಲೂ ಕಷ್ಟವೇ. ಬ್ಯಾಂಕಿನ ಆಡಳಿತದಲ್ಲಿ ಅವರಿಗೆ ಹಾಕಲು ಅವಕಾಶವಿರುವುದರಿಂದ ಮತ್ತು ರಾಜಕೀಯ ಒತ್ತಡ ತರಬಲ್ಲರಾದ್ದರಿಂದ ಅವರ ಜತೆ ಗುದ್ದಾಡಲು ಪ್ರಬಲವಾದ ಶಕ್ತಿ ಬೇಕು. ಅದಕ್ಕೆ ಹೋಲಿಸಿದರೆ ಸಣ್ಣ ಸಾಲಗಳಿಂದ ಆಗುವ ನಷ್ಟ ಏನೂ ಅಲ್ಲ. (DICGC ಎಂಬ ಸಾಲಕ್ಕೆ ಗ್ಯಾರಂಟಿ ಕೊಡುವ ಸಂಸ್ಥೆಯಿಂದ ಮರುಪಾವತಿ ಆಗದೆ ಸಾಲ ಪ್ರತಿಶತ ೭೫ರಿಂದ ೯೦ರಷ್ಟು ಹಣವನ್ನು ಪಡೆಯಬಹುದು) ಆದರೆ ಸರಕಾರದ ಪರಿಹಾರ ಧನದಂತೆ ಇವನ್ನು ಪ್ರಚಾರದ ವಸ್ತುವಾಗಿಸಿದ್ದು ಒಳಗೊಳಗೇ ಹಿಂದಿರುಗಿಸುವುದೇನೂ ಬೇಡವೆಂಬ ಮುಖಂಡರ ಸೂಚನೆಗಳು, ಅವಸರ, ಬ್ಯಾಂಕ್ ಸಾಲದ ಗುಣಮಟ್ಟವನ್ನು ತಗ್ಗಿಸಿದೆ. ಸಾಲದ ಉಪಯೋಗ ಸರಿಯಾಗಿ ಆಯಿತೋ ಇಲ್ಲವೋ ಎಂಬುದರ ಬಗ್ಗೆ ಪ್ರಚಾರ ಇಲ್ಲ. ಸಾಲಗಾರರಿಗೆ ಅವರ ಬಗ್ಗೆ ತಿಳುವಳಿಕೆ ತಂತ್ರಜ್ಞಾನ, ನೀಡುವುದರ ಬಗೆಗೆ ಕ್ರಮವಿಲ್ಲ. ರಿಸರ್ವ್ ಬ್ಯಾಂಕ್ ವರದಿ DRIನ ಒಟ್ಟು ಸಾಲದ ೧% ಗುರಿ ಮುಟ್ಟಿ ೦.೧೭% ನಷ್ಟು ಸಾಧನೆ ನಡೆದಿದೆ ಎನ್ನುವಾಗ ಒಂದು ಕಡೆ ಮುಖಂಡರುಗಳೇ ಲೋಕಸಭೆಯಲ್ಲಿ IRDPಯ ಗುರಿಯಾದ ೬೦೦ ಕೋಟಿ ರೂ.ಗಳನ್ನು ಮೀರಿ ೭೧೮ ಕೋಟಿ ಸಾಲ ನೀಡಲಾಗಿದೆ ಎಂದು ಹೇಳಿಕೆ ನೀಡುವಾಗಲೇ ಇನ್ನೊಂದು ಕಡೆ ಬ್ಯಾಂಕ್ ನೌಕರರ ಅಧಿಕಾರಿಗಳ ತೇಜೋವಧೆ ಹಾಗೂ ಜನರನ್ನು ಅವರ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ಮಾಡುತ್ತಾರೆ. ಈಗಾಗಲೇ ಸಣ್ಣ ಮುಖಂಡರುಗಳ ಅವಾಚ್ಯ ಬೆದರಿಕೆಗಳಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕ ಕಾರ್ಯ ನಿರ್ವಹಿಸುವುದಿರಲಿ ಬ್ಯಾಂಕಿನ ಸಿಬ್ಬಂದಿ ತಿರುಗಾಡುವುದೂ ಕಷ್ಟವಾಗುತ್ತಿದೆ. ಈ ಹೆದರಿಕೆಯ ವಾತಾವರಣದಲ್ಲಿ ಏನು ಸಾಧನೆ ನಡೆದೀತು? ಗಡಿಯಾರಕ್ಕೆ ಅದರ ವ್ಯವಸ್ಥೆಯನ್ನು ಸರಿಪಡಿಸಿ ಮೇಲಿನಿಂದ ಕೀ ಕೊಡಬೇಕೇ ವಿನಾ ಮುಳ್ಳನ್ನು ಹಿಡಿದು ತಿರುಗಿಸಿ ಕಿತ್ತು ಹಾಕಿದರೆ ಪ್ರಯೋಜನವುಂಟೆ?

ಈಗ ಬೇಕಾಗಿದೆ: ಬ್ಯಾಂಕ್ ಉದ್ಯೋಗಗಳಿಗೆ ಆಯ್ಕೆ ಹೇಗೆ ಬಡ್ತಿ ಹೇಗೆ? ಅಧಿಕಾರಿಗಳ ನೌಕರ್ಯಗಳಲ್ಲಿ ತಾರತಮ್ಯ ಇದೆಯೇ? ಕೆಳಗಿನವರನ್ನು ನಡೆಸಿಕೊಳ್ಳುವಲ್ಲಿ ತಾರತಮ್ಯವಿದೆಯೆ? ಮೇಲಧಿಕಾರಿಗಳನ್ನು ತನಿಖೆಗೆ ಒಳಪಡಿಸಬಹುದೆ? ಸ್ವಜನ ಪಕ್ಷಪಾತ ಭ್ರಷ್ಟಾಚಾರ ಇಲ್ಲಿ ಯಾವ ಪ್ರಮಾಣದಲ್ಲಿ ಇದೆ? ಜಾತಿಯ ಸ್ವರೂಪ, ಗುಂಪುಗಾರಿಕೆ, ಇನ್ನೂ ಎಷ್ಟು ಪ್ರಮಾಣದಲ್ಲಿ ಇದೆ? (ಹಿಂದೆ ಒಂದೊಂದು ಜಾತಿಯವರೆ ಬ್ಯಾಂಕುಗಳಲ್ಲಿ ತುಂಬಿಕೊಂಡು, ನಿಯಂತ್ರಿಸುತ್ತಿದ್ದರು) ದೊಡ್ಡ ನಷ್ಟಗಳಿಗೆ ಕಾರಣರಾಗಿಯೂ ಭ್ರಷ್ಟಾಚಾರದ ಅಪಾದನೆಗಳು ಸ್ಥಿರಗೊಂಡ ಮೇಲೆಯೂ ಕೂದಲೂ ಕೊಂಕದೆ ಉನ್ನತಾಧಿಕಾರಿಗಳು ರಾಜಕೀಯ ಬಲದಿಂದ ಮುಂದುವರೆಯುತ್ತಿರುವುದು ಹೇಗೆ? ಚೆಕ್ ಮುರಿಸುವಾಗ, ಸಾಲಪತ್ರ ತುಂಬಿಸುವಾಗ ಶತಮಾನಗಳಷ್ಟು ಹಳೆಯ ಕ್ರಮಗಳನ್ನೆ ಅನುಸರಿಸಿ ವಿಳಂಬಕ್ಕೆ ಎಡೆಮಾಡಿಕೊಡುವ ಬದಲು ಹೊಸ ವಿಧಾನಗಳ ಆವಿಷ್ಕಾರ ಯಾಕೆ ಆಗಿಲ್ಲ? ಮುಂತಾದ ಕೆಲವು ಪ್ರಶ್ನೆಗಳಿಗೆ ಉತ್ತರಗಳು. ಆಗ ಆಶಿಸ್ತು ಎಲ್ಲಿದೆ ಎಂಬುದರ ವಿವರ ಹೊರಬಿದ್ದಿತು.

ಇಂಥವರೂ ಇದ್ದಾರೆ

ಶಾಂತಲಾ

ಕಳೆದ ಸಪ್ಟೆಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ "ಇಂಥವರೂ ಇದ್ದಾರೆ" ಲೇಖನ ವಿಚಾರಪ್ರಚೋದಕವಾಗಿತ್ತು. ನಮ್ಮ ಸುತ್ತಮುತ್ತಲೂ ಎಂತೆಂಥವರೂ ಇದ್ದಾರೆ ಎಂಬುದನ್ನು ಚೆನ್ನಾಗಿ ತಿಳಿಸಿ ಎಚ್ಚರಿಸಿದ್ದಾರೆ ಲೇಖಕರು. ಆದರೆ ಈ ಲೇಖನದಲ್ಲಿ ಇಂಥವರೂ ಇದ್ದಾರೆ ಎಂದು ಹೇಳಿದ್ದರಲ್ಲಿ ಕೇವಲ ಇಂಥವರೇ ಇದ್ದಾರೆ ಅಥವಾ ಜಗತ್ತಿನ ತುಂಬ ಬರೀ ಇಂಥ ಮೋಸಗಾರರೇ ತುಂಬಿದ್ದಾರೆ ಎಂದು ಹೇಳುವಲ್ಲಿ ಲೇಖಕರು ಹೆಚ್ಚು ಒತ್ತು ಕೊಟ್ಟಿದ್ದಾರೆಂದು ಎನಿಸುತ್ತದೆ. ಅಥವಾ ಆ ಅಭಿಪ್ರಾಯ ಇಲ್ಲಿ ಧ್ವನಿತವಾಗಿದೆ. ಅದಕ್ಕಾಗಿ ಬರೀ ಇಂಥವರೇ ಇಲ್ಲ, ಇಂಥವರೂ ಇದ್ದಾರೆ ಎಂಬ ಈ ಲೇಖನವನ್ನು ಬರೆಯ ಬೇಕೆನಿಸಿದೆ.

ನಮ್ಮ ಪರಿಚಯದ ತಹಸೀಲ್ದಾರರೊಬ್ಬರ ಮಗ ಚಿಕ್ಕವನಾಗಿದ್ದಾಗಿನಿಂದಲೂ, "ನೀನು ದೊಡ್ಡವನಾದ ಮೇಲೆ ಏನಾಗುತ್ತಿ?" ಎಂದು ಯಾರಾದರೂ ಕೇಳಿದರೆ, "ನಾನು ಯಾವುದೇ ಕೆಲಸಕ್ಕೆ ಹೋದೇನು; ತಹಸಿಲ್ದಾರ ಮಾತ್ರ ಆಗುವದಿಲ್ಲ," ಎಂದು ತಟ್ಟನೆ ಹೇಳಿಬಿಡುತ್ತಿದ್ದ. ಮನೆಯಲ್ಲಿಯ ಆಳು-ಹೋಳು, ವೈಭವ, ಬರ ಹೋಗುವ ಅಧಿಕಾರಿಗಳ ಮೇಲೆ ತಂದೆಯ ದರ್ಪ; ಇದಕ್ಕಿಂತ ತಂದೆಯ ಕೈಯವಾಸೆಯ ಬಗೆಗಿನ ಸುತ್ತಲಿನ ಒಡಕು ಮಾತು, ಹೀನಾಯಗಳು ಅವನ ಮೇಲೆ ಹೆಚ್ಚು ಪರಿಣಾಮ ಬೀರಿದ್ದುದೇ ಅವನ ಈ ಉತ್ತರಕ್ಕೆ ಕಾರಣ.

ಅನ್ಯಾಯದ ಹಣ

ಗಂಗಮ್ಮ ಬಾಲವಿಧವೆ. ಬಾಲವಿಧವೆಯಾಗಿ ತವರು ಸೇರಿ ಅಣ್ಣ-ತಮ್ಮಂದಿರ ಆಶ್ರಯದಲ್ಲಿ ಬಂದು ಇದ್ದರೂ ಯಾರಿಗೂ ಬೇಸರವಾಗುವಂತೆ ನಡೆದುಕೊಳ್ಳದೆ ಕಾದಂಬರಿಯ ಘಣೆಯಮ್ಮನಂತೆ ನೆರೆಹೊರೆಯವರ ಅನೇಕ ಆಪತ್ತುಗಳಲ್ಲಿ ಸಹಾಯಕಳಾಗುವದರಲ್ಲೇ ಸಾರ್ಥಕ್ಯವನ್ನು ಪಡೆದ ಜೀವ. ಅವರ ಅಣ್ಣತಮ್ಮಂದಿರೂ ಆ ತಮ್ಮ ಬಡತನದ ಮಧ್ಯದಲ್ಲೂ ಚೆನ್ನಾಗಿಯೇ ಇವರನ್ನು ನೋಡಿಕೊಂಡಿದ್ದಾರೆ. ಇತ್ತೀಚೆಗೆ ಸರಕಾರದವರು ಅರವತ್ತೈದು ಮಿಕ್ಕಿದ ನಿರ್ಗತಿಕ ಬಡಜನರಿಗೆ ಮಾಸಾಶನ ಕೊಡುವ ವಿಷಯ ತಿಳಿದ ಕೆಲವರು ಇವಳಿಗೂ ಕೊಡಿಸಬೇಕೆಂದು ಇವಳ ಬಳಿ ಪ್ರಸ್ತಾಪ ಮಾಡಿದಾಗ ಗಂಗಮ್ಮ ಹೇಳಿದ್ದೇನು ಗೊತ್ತೆ? "ನನಗೀಗ ಎಪ್ಪತ್ತಕ್ಕೂ ಮಿಕ್ಕಿ ವಯಸ್ಸಾಗಿದೆ. ಇಷ್ಟು ದಿನ ಹೇಗೋ ನೋಡಿಕೊಂಡ ಅಣ್ಣ ತಮ್ಮಂದಿರು, ಅವರ ಮಕ್ಕಳು, ಇನ್ನು ಕೆಲ

ವರ್ಷ ನೋಡಿಕೊಳ್ಳಲಾರರೆ? ನಾನು ಇನ್ನೆಷ್ಟು ವರ್ಷ ಬದುಕೇನು? ನನಗಂತೂ ಬೇರೆಯವರ ಹಣ ದುಡಿಯದೆ ದೊರೆಯುವುದು ಅನ್ಯಾಯದ ಹಣವೆಂದೇ ಭಾವನೆ"–ಎಂದು ಬಿಟ್ಟರು.

"ಅಲ್ಲಜ್ಜಿ, ಬೇರೆಯವರಿಂದ ಬಿಟ್ಟಿ ದೊರೆಯುವ ಹಣವಲ್ಲ ಸರ್ಕಾರದವರು, ಕೊಡುತ್ತಾರೆ," ಎಂದು ಬಂದವರು ಮತ್ತೆ ತಿಳಿ ಹೇಳಲು ಯತ್ನಿಸಿದಾಗ ಗಂಗಮ್ಮ ಕುಪಿತರಾಗಿ, "ಸರ್ಕಾರದವರು ಕೊಡುತ್ತಾರೆಂದರೆ ಅದು ಎಲ್ಲಿಂದ ಬರುತ್ತದೆಂದು ತಿಳಿದಿದ್ದೀರಿ? ನೀವೆಲ್ಲ ಕೊಟ್ಟಾಗಲ್ಲವೇ ಸರ್ಕಾರಕ್ಕೆ ದುಡ್ಡು? ಅದನ್ನೇನು ನೀವು ಸಂತೋಷದಿಂದ ಕೊಟ್ಟಿರುತ್ತೀರಾ? ಪ್ರಸಂಗ ಬಂದರೆ ಈ ಮುದುಕಿಗೆ ಒಪ್ಪೊತ್ತು ಅನ್ನ ಹಾಕಲಾರದಷ್ಟು ನಿರ್ದಯಿಗಳೇನಲ್ಲ ನನ್ನ ಊರವರು. ನನಗಿನ್ನೂ ಕೈಕಾಲು ಗಟ್ಟಿಯಿವೆ. ಅಲ್ಲದೆ ನನಗೀಗ ಹಣದ ಅವಶ್ಯಕತೆಯೇನೂ ಇಲ್ಲ," ಎಂದು ನಗುನಗುತ್ತ ಹೇಳಿದಾಗ ಬಂದವರು ಅಜ್ಜಿಯ ಸ್ವಾಭಿಮಾನಕ್ಕೆ ಬೆರಗಾಗಿರಬೇಕು.

ಎಲೆಮರೆಯ ಕಾಯಿ

ಹಳ್ಳಿಯೊಂದರ ಪ್ರಾಥಮಿಕ ಶಾಲೆಗೆ ಶಿಕ್ಷಕರಾಗಿ ಬಂದ ಶಿಕ್ಷಕರೊಬ್ಬರಿಗೆ ನಿವೃತ್ತರಾಗುವವರೆಗೂ ಅದೇ ಶಾಲೆಯಲ್ಲೆ ಇರಬೇಕಾದ ಪ್ರಸಂಗ ಬಂತು. ಏಕೆಂದರೆ ಆಧುನಿಕ ಸೌಕರ್ಯ ಹೋಗಲಿ ಕುಡಿಯುವ ನೀರು, ಸರಿಯಾದ ಆಹಾರ ಔಷಧಿಗಳೂ ದೊರೆಯದ ಕುಗ್ರಾಮವಾಗಿದ್ದರಿಂದ ಆ ಊರು ಶಾಲೆಗೆ ಬೇರೆ ಶಿಕ್ಷಕರು ಬರದಾಗಿದ್ದರು. ಬಂದರೂ ಏನಾದರೂ ನೆವ ಹೇಳಿಯೋ ಹಣ ಕೊಟ್ಟೋ ಬೇರೆ ಕಡೆಗೆ ವರ್ಗ ಮಾಡಿಸಿಕೊಂಡು ಬಿಡುತ್ತಿದ್ದರು. ಅಂಥದರಲ್ಲಿಯೂ ಈ ಶಿಕ್ಷಕರು ಆ ಹಳ್ಳಿಯ ಶಾಲೆ, ಶಾಲೆಯ ಮಕ್ಕಳ ಉದ್ಧಾರಕ್ಕಾಗಿ ಮಾತ್ರವಲ್ಲ, ಊರಿನ ಸಮಗ್ರ ಅಭಿವೃದ್ಧಿಗಾಗಿ ದುಡಿದು ಜನರನ್ನು ಹುರಿದುಂಬಿಸಿ ಇಂದು ಅದನ್ನೊಂದು ಮಾದರಿ ಗ್ರಾಮವಾಗಿಸಿಬಿಟ್ಟಿದ್ದಾರೆ. ಶಾಲೆಯಿಂದ ನಿವೃತ್ತರಾದರೂ ಗ್ರಾಮ ಸುಧಾರಣೆಗಾಗಿ ಶ್ರಮಿಸುತ್ತ ಅಲ್ಲಿಯೇ ತಮ್ಮ ಶೇಷಾಯುಷ್ಯ ಕಳೆಯುವ ನಿರ್ಧಾರ ಅವರದು.

ಇಂಥ ಪ್ರಾಮಾಣಿಕ ಸಮಾಜ ಸೇವಕರಿಗೆ ಊರ ಜನತೆಯೆಲ್ಲ ಸೇರಿ ಕೃತಜ್ಞತೆ ಸಲ್ಲಿಸುವ ನೆಪದಿಂದ ಅವರ ಷಷ್ಟ್ಯಬ್ದಿ ಸಮಾರಂಭ ಆಚರಿಸಬೇಕೆಂದು ನಿರ್ಧರಿಸಿದಾಗ ಅವರೂ ಖಡಾಖಂಡಿತವಾಗಿ ಬೇಡವೆಂದು ಹೇಳಿದರು. ಜನ ಅವರ ಮಾತಿಗೆ ಬಗ್ಗದಿದ್ದಾಗ, "ಅನ್ನವಿತ್ತು ಸಲಹಿದ ಊರಿನ ಋಣವನ್ನು ಕೊಂಚವಾದರೂ ತೀರಿಸಲು ಪ್ರಯತ್ನಿಸಿದ್ದೇನೆ ಹೊರತು ನಾನೇನು ಮಾಡಿದ್ದೇನೆಂದು ನನಗೆ ಸನ್ಮಾನ? ನೀವು ಸತ್ಕಾರ ಮಾಡಿದ ಮೇಲೆ ಮಾತ್ರ ನಾನು ಈ ಊರಲ್ಲಿ ನಿಲ್ಲುವುದಿಲ್ಲ. ಅದಕ್ಕೆ ನಿಮ್ಮ ಒಪ್ಪಿಗೆಯಿದ್ದರೆ ಸತ್ಕಾರ ಮಾಡಿ, ನಾನು ಮಾಡಿಸಿಕೊಳ್ಳುತ್ತೇನೆ." ಎಂದಾಗ ಈ ಎಲೆಮರೆಯ ಕಾಯಿ ತಮ್ಮಲ್ಲೆ ಉಳಿಯಲೆಂಬ ಉದ್ದೇಶದಿಂದ ಊರವರು ಸತ್ಕಾರ ಸಮಾರಂಭದ ವಿಚಾರವನ್ನು ಅಲ್ಲಿಗೆ ಕೈಬಿಡಬೇಕಾಯಿತು.

ಇದ್ದುದರಲ್ಲೆ ತೃಪ್ತಿ

ಕೆಲವು ಸರ್ಕಾರಿ ನೌಕರರಿಗೆ ಕೊಡುವ ಪೆನ್‌ಶನ್ ಹಣವನ್ನು ಒಂದು ವೇಳೆ ಅವರು ಮೊದಲು ಸತ್ತರೆ ನಂತರ ಅವರ ವಿಧವೆಯರಿಗೂ ಬದುಕಿರುವ ವರೆಗೆ ಕೊಡಲಾಗುತ್ತಿದೆ. ಇಂಥವರಲ್ಲಿ ಶಿಕ್ಷಕರೂ ಒಬ್ಬರು. ಇದರ ಪ್ರಯೋಜನ ಪಡೆಯುವುದಕ್ಕಾಗಿ ನಿವೃತ್ತಿ ವೇತನಕ್ಕೆ ಅರ್ಜಿಹಾಕುವಾಗ ಶಿಕ್ಷಕರು ಪತಿ–ಪತ್ನಿಯರಿಬ್ಬರೂ ಜೊತೆಗಿದ್ದ ಫೋಟೊ ಒಂದನ್ನು ಮೊದಲೇ ಲಗತ್ತಿಸಿರಬೇಕಾಗುತ್ತದೆ. ನಿವೃತ್ತರಾಗಲಿದ್ದ ನಮ್ಮ ರಾಮಯ್ಯ ಮಾಸ್ತರರು ಇಂಥ ಒಂದು ಇತ್ತೀಚೆ ಫೋಟೋಕ್ಕಾಗಿ ಸ್ಟುಡಿಯೋಗೆ ಹೋಗಲು ಸಿದ್ಧರಾಗಿ ಪತ್ನಿಯನ್ನು ಕರೆದಾಗ ಅವರು ಸುತರಾಂ ಒಪ್ಪಲಿಲ್ಲ.

"ನಾನು ನಿಮಗಿಂತ ಮೊದಲು ಹೋಗು(ಸಾಯು)ತ್ತೇನೆ. ನೀವು ಹೋದಮೇಲೂ ಬದುಕಿರಲು ನಾನು ಇಚ್ಛಿಸುವದಿಲ್ಲ," ಎಂದರು. ಮಾಸ್ತರರು ಎಷ್ಟೇ ತಿಳಿಹೇಳಿ ಒಪ್ಪಿಸಲು ಪ್ರಯತ್ನಿಸಿದರೂ ಅವರು ಒಪ್ಪದಿದ್ದಾಗ, "ನೀನು ಖಂಡಿತ ನನಗಿಂತ ಮೊದಲೇ

ಹೋಗು. ಆದರೆ ಸಾಯುವುದೇನು ನಮ್ಮ ಕೈಯಲ್ಲಿದೆಯೆ? ಒಂದು ವೇಳೆ ನಾನೇ ಮೊದಲು ಹೋದರೇನು ಮಾಡುತ್ತಿ? ನಮಗೇನು ಗಂಡು ಮಕ್ಕಳಿದ್ದಾರೆಯೇ ಮುಪ್ಪಿನಲ್ಲಾಗಲು. ಅದನ್ನು ವಿಚಾರಿಸು," ಎಂದಾಗ ಆ ತಾಯಿ ದುಃಖದಿಂದ ಹೇಳಿದರು.


"ಅಂಥ ದುರ್ದಿನ ನನಗೆ ಬಾರದಿರಲೆಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ. ಹಾಗೂ ಒಂದು ವೇಳೆ ನೀವು ಹೇಳಿದಂತೇ ಆದರೆ ಅದು ನನ್ನ ದುರ್ದೈವ. ಆದರೂ ನನಗೆ ನಿಮ್ಮ ನಂತರ ಆ ಹಣ ಬೇಡ. ಇದ್ದ ಇಬ್ಬರು ಹೆಣ್ಣು ಮಕ್ಕಳ ಮದುವೆ ಮಾಡಿಯಾಗಿದೆ. ಅವರೂ ನಮ್ಮನ್ನು ನೆನೆಸದಂತೆ ಸುಖವಾಗಿದ್ದಾರೆ. ನೀವು ಉಳಿಸಿಟ್ಟ ಇನ್ನುಳಿದ ಹಣದಲ್ಲಿಯೇ ನಾನು ತೃಪ್ತಳಾಗಿ ಜೀವನ ಕಳೆಯುತ್ತೇನೆ." ಇಂಥ ಎದೆಗಾರಿಕೆಯುಳ್ಳ ಇನ್ನೂ ಹಲವರು ಈಗಲೂ ಇದ್ದಾರೆ ಎಂಬುದೇ ಅಭಿಮಾನದ ಸಂಗತಿ.

ನಾನು ದೊಡ್ಡವನಲ್ಲ

"ನೀವು ಸ್ವಾತಂತ್ರ್ಯ ಯೋಧರಾಗಿದ್ದಿರೆಂದು ತಿಳಿದು ಬಂದಿದೆ. ನಾವು ಈಗ ಅಂಥವರ ಬಗೆಗೆ ವಿವರ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ದಯವಿಟ್ಟು ನಿಮ್ಮ ಪೂರ್ಣ ವಿವರಗಳೊಂದಿಗೆ ಕೆಳಗಿನ ಕೆಲವು ವಿಷಯಗಳ ಬಗೆಗೂ ಮಾಹಿತಿ ಕಳಿಸಬೇಕು," ಎಂದು ನಮ್ಮೂರಿನ ಹಿರಿಯರೊಬ್ಬರಿಗೆ ಸಂಸ್ಥೆಯೊಂದರಿಂದ ಪತ್ರ ಬಂತು. ಅದಕ್ಕೆ ಅವರು ಮರು ಟಪಾಲಿಗೆ ಕಳಿಸಿದ ಉತ್ತರ ಹೀಗಿತ್ತು:

"ನಾನು ಸ್ವಾತಂತ್ರ್ಯ ಯೋಧನೆಂದು ಯಾರೋ ತಮಗೆ ತಪ್ಪು ಮಾಹಿತಿಕೊಟ್ಟಿದ್ದಾರೆ. ನಿಜವಾಗಿ ನಾನೇನೂ ಸ್ವಾತಂತ್ರ್ಯಯೋಧನಲ್ಲ. ಎಲ್ಲೋ ಕೆಲವು ಯೋಧರಿಗೆ ಗುಪ್ತವಾಗಿ ನನ್ನ ಮನೆಯಲ್ಲಿರಲು ಅನುವು ಮಾಡಿಕೊಟ್ಟಿದ್ದೆ. ಕೈಲಾದ ಹಣಕಾಸಿನ ಸಹಾಯ ಮಾಡಿದ್ದೆ. ಕಾರ್ಯಕರ್ತರಿಗಾಗಿ ನಮ್ಮೂರಿನ ಗುಡ್ಡದ ಬದಿಯಲ್ಲಿ ರೊಟ್ಟಿಯ ಗಂಟು ಇಡಿಸುತ್ತಿದ್ದೆ. ದಯವಿಟ್ಟು ಆ ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸಬೇಡಿ. ನಾನು ಅಷ್ಟು ದೊಡ್ಡವನಲ್ಲ."

ಸ್ವಾತಂತ್ರ್ಯಯೋಧರಲ್ಲದಿದ್ದವರು ಕೂಡ ಸ್ವಾತಂತ್ರ್ಯ ಯೋಧರ ಪಿಂಚಣಿ ಗೌರವ ಮುಂತಾದವುಗಳಿಗೆ ಹಪಹಪಿಸುವವರಿದ್ದ ಕಾಲದಲ್ಲೇ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದರೂ ವಿನೀತ



ರಾದ ಈ ಹಿರಿಯ ರಂಥವರೂ ಇದ್ದಾರೆಂಬುದನ್ನು ಮರೆಯಲಿಕ್ಕಾಗದು.

ನಮ್ಮ ಮಕ್ಕಳಿಗೆ ಊಟ ಹಾಕುವುದು ದೊಡ್ಡದಲ್ಲ

ಸಾಕಷ್ಟು ಮಕ್ಕಳಿರುವ ಬಡ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಯಾವಾಗಲೂ ಇಬ್ಬರಾದರೂ ವಾರಾನ್ನದ ವಿದ್ಯಾರ್ಥಿ-ಗಳಿರುತ್ತಾರೆ. ಅಡಿಗೆ ಮಾಡಿ ಬಡಿಸುವ ಕೆಲಸದಿಂದ ಮನೆಯ ಗೃಹಿಣಿ ಒಮ್ಮೊಮ್ಮೆ ಕೈಲಾಗದೇ ಇದ್ದಾಗ, "ಸ್ವಂತ ಮಕ್ಕಳಿಗೆ ಊಟ ಬಟ್ಟೆ ಹೊಂದಿಸುವದರಲ್ಲೇ ಸಾಕು ಬೇಕಾಗುತ್ತದೆ. ಇಂಥದರಲ್ಲಿ ಈ ವಾರಾನ್ನದ ಹುಡುಗರನ್ನು ಬೇರೆ ತಂದುಬಿಡುತ್ತೀರಿ" ಎಂದು ಮೆಲ್ಲನೆ ಗೊಣಗಿದಾಗ ಯಜಮಾನರು ನಗುತ್ತ "ನಮ್ಮಮಕ್ಕಳ ಊಟ ಬಟ್ಟೆ ನೋಡಿಕೊಳ್ಳುವದೊಂದು ಹೆಚ್ಚುಗಾರಿಕೆಯಲ್ಲ. ಇದ್ದುದರಲ್ಲೆ ಒಂದಿಬ್ಬರು ಬಡಹುಡುಗರಿಗೆ ಇಷ್ಟಾದರೂ ಸಹಾಯ ಮಾಡದಿದ್ದರೆ ಹೇಗೆ? ನಾನೂ ಇದೇ ರೀತಿಯಾಗಿ ಓದಿಯೇ ದೊಡ್ಡವನಾಗಿದ್ದೇನೆ. ಎಂದ ಬಳಿಕ ಆ ಋಣವನ್ನಾದರೂ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿಕೊಳ್ಳಬೇಕೆಂದು ನನ್ನಾಸೆ. ಇದಕ್ಕೆ ನಿನ್ನ ಸಹಕಾರ, ಸಹಾಯ ಅತ್ಯವಶ್ಯ," ಎನ್ನುತ್ತಿದ್ದಂತೆ ಗೃಹಿಣಿ ತೆಪ್ಪಗಾಗಿ ಬಿಡುತ್ತಾಳೆ.

ಖಾನಾವಳಿಗೆ ಹೋಗು

ಹಳ್ಳಿಯಲ್ಲಿರುವ ನಮ್ಮಜ್ಜನ ಮನೆಗೆ ಪ್ರತಿನಿತ್ಯ ಮಧ್ಯಾಹ್ನದ ಊಟಕ್ಕೆ ಯಾರಾದರೂ ಅತಿಥಿಗಳು ಇದ್ದೇ ಇರುತ್ತಾರೆ. ಹಾಗೆ ಯಾರೂ ಬಾರದಿದ್ದ ದಿನ ನಮ್ಮಜ್ಜ ಊಟದ ಸಮಯವಾದಾಗ ಚಡಪಡಿಸುತ್ತ ಬಸ್ ಸ್ಟ್ಯಾಂಡಿಗೋ ಊರಿನ ಚಾವಡಿ ಕಟ್ಟೆಗೋ ಹೋಗಿ ಯಾರಾದರೂ ಬಸ್ ತಪ್ಪಿಸಿಕೊಂಡ ಅತಿಥಿಗಳಿದ್ದಾರೇನೋ ಎಂದು ನೋಡಿಬರುತ್ತಾರೆ. ಹೀಗೆ ಅವರಲ್ಲಿಗೆ ಬರುವ ಅನೇಕ ಅತಿಥಿಗಳಲ್ಲಿ ಆ ಹಳ್ಳಿಗೆ ತಿಂಗಳಿಗೆರಡು ದಿನ ರೇಶನ್ ಹಂಚಲು ಬರುವ ಅಧಿಕಾರಿಗಳೂ ಒಬ್ಬರು. ಅವರು ಮಡಿವಂತರಾಗಿದ್ದರಿಂದ ಹೊಟೆಲ್ಲು ಮುಂತಾದವುಗಳಿಗೆ ಹೋಗುತ್ತಿರಲಿಲ್ಲ. ತಿಂಗಳಿಗೆರಡು ದಿನ ತಪ್ಪದೆ ನಮ್ಮಜ್ಜನ ಮನೆಯಲ್ಲಿ ಠಾಣೆ ಹೂಡುತ್ತಿದ್ದರು.

ಈ ರೀತಿಯಾಗಿ ನಮ್ಮಜ್ಜನಲ್ಲಿ ಆಗಾಗ ಬಿಟ್ಟಿ ಊಟ ಮಾಡುವುದು ಅವರಿಗೆ ಸಂಕೋಚವೆನಿಸಿದ್ದರಿಂದಲೋ ಏನೋ ಒಂದು ಸಲ ಒಂದಿಷ್ಟು ಅಕ್ಕಿ, ಸಕ್ಕರೆಗಳನ್ನು ತಮ್ಮ ಆಳಿನ ಮೇಲೆ ಹೊರಿಸಿ ಅಜ್ಜನ ಮನೆಗೆ ಕಳಿಸಿ ತಾವು ಮಧ್ಯಾಹ್ನ ಊಟಕ್ಕೆ ಬರುವುದಾಗಿ ಹೇಳಿಕಳಿಸಿದರು. ಅದನ್ನು ನೋಡಿದ ಅಜ್ಜನ ಕೋಪ ಭುಗಿಲೆದ್ದು ಅದೆಲ್ಲ ಸಾಮಾನನ್ನೂ ಆಳಿಗೆ ತಿರುಗಿ ಒಯ್ಯಲು ಹೇಳಿದ್ದಲ್ಲದೆ ಅದೇ ಆಳಿನ ಕೈಯಲ್ಲಿ ಎರಡು ರೂಪಾಯಿ ಕೊಟ್ಟು, "ನಿಮ್ಮ ಸಾಹೇಬ್ರಿಗೆ ಇದನ್ನು ಕೊಟ್ಟು ಖಾನಾವಳಿಗೆ ಊಟಕ್ಕೆ ಹೋಗಂತ ಹೇಳು. ನಮ್ಮನಿ ಅಂದ್ರ ಖಾನಾವಳಿ ಅಲ್ಲ," ಎಂದು ಹೇಳಿ ಕಳಿಸಿಬಿಟ್ಟರು.

ಅಜ್ಜನ ಸ್ವಭಾವವನ್ನು ಚೆನ್ನಾಗಿ ಅರಿತಿದ್ದ ಆಳು ಹಾಗೇ ಹೋಗಿ ತನ್ನ ಸಾಹೇಬರಿಗೆ ವರದಿ ಒಪ್ಪಿಸಿದಾಗ ರೇಶನ್ ಆಫೀಸರರು ಓಡುತ್ತಲೇ ಮನೆಗೆ ಬಂದು ತಪ್ಪಾಯಿತು ಎಂದು ಪರಿಪರಿಯಾಗಿ ಬೇಡಿಕೊಂಡಾಗಲೇ ಅಜ್ಜನ ಕೋಪ ಶಮನವಾದದ್ದು.

ತಮ್ಮ ರಿಕ್ಷಾದಲ್ಲೊ ಬಸ್ಸಿನಲ್ಲೊ ಮರೆತು ಹೋದ ಹಣದ ಚೀಲ, ಬಂಗಾರದ ಒಡವೆ ಮುಂತಾದವುಗಳನ್ನು ಅದರದರ ಮಾಲಕರನ್ನು ಪತ್ತೆ ಹಚ್ಚಿ ಮುಟ್ಟಿಸಿಬಂದ ಚಾಲಕರ ಪ್ರಾಮಾಣಿಕತೆಯ ಬಗೆಗೆ ಆಗಾಗ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ.

ಈ ಮೇಲೆ ವಿವರಿಸಿದಂಥ ಪ್ರಾಮಾಣಿಕ ವ್ಯಕ್ತಿಗಳ ಸಂಖ್ಯೆ ಕಡಿಮೆ ಇರಬಹುದು; ಕೇವಲ ಬೆರಳೆಣಿಕೆಯ ಮೇಲೆ ಎಣಿಸಬಹುದಾದಷ್ಟೇ ಇದ್ದರೂ ಇರಬಹುದು. ಆದರೆ ಇಂಥವರೂ ಇದ್ದಾರೆಂಬುದಂತೂ ಸತ್ಯ. ✦

ಮುರಳೀಧರ ಖಜಾನೆ

ಈತ ಸಮೂಹ ಕಾಪಿಯ ವಿರುದ್ಧ ಸಮರವನ್ನೇ ಪ್ರಾರಂಭಿಸಿದ

೧೯೭೯ರ ಫೆಬ್ರುವರಿ ೧೫ರಂದು ದೇಶದ ಇತರ ವಿಶ್ವವಿದ್ಯಾಲಯಗಳಂತೆ ಮೀರತ್ ವಿಶ್ವ ...ನಿಲಯದ ವಾರ್ಷಿಕ ಪರೀಕ್ಷೆಗಳು ಆರಂಭ ...ತ ದಿನ. ಮೀರತ್ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಪರೀಕ್ಷೆಗಳು ನಡೆಯುವ ರೀತಿ ...ಮಾತ್ರ ಇತರ ವಿಶ್ವವಿದ್ಯಾಲಯದ ಮಾದರಿ ...ಗಳಿಗಿಂತ ತೀರಾ ಭಿನ್ನ. ಪರೀಕ್ಷೆಯ ಕೇಂದ್ರ ...ವನ್ನೇ ತಮ್ಮ ವಶಕ್ಕೆ ತೆಗೆದುಕೊಂಡು ಸಮೂಹ ಕಾಪಿ ಮಾಡುವ ದುಷ್ಟ ವಿದ್ಯಾರ್ಥಿಗಳದ್ದೇ ...ಲ್ಲಿ ಮೇಲುಗೈ. ಇಲ್ಲಿ ಪರ್ಯವೇಕ್ಷಕರು ...ಸಹಾಯಕ ವೀಕ್ಷಕರು. ಕಾರಣ ಮೀರತ್ ...ಶ್ವವಿದ್ಯಾನಿಲಯದ ಉಪಕುಲಪತಿ ದೀಪಚಂದ ...ವರ್ಮ, ಮೀರತ್ ಜಿಲ್ಲೆಯ ಮ್ಯಾಜಿಸ್ಟ್ರೇಟ್ ...ರ್. ಎಸ್. ಮಾಥುರ್ ಇಲ್ಲಿನ ಅಶಿಸ್ತಿನ ...ತಾವರಣಕ್ಕೆ ಕಾರಣಪುರುಷರು. ವಿದ್ಯಾರ್ಥಿ ... ಸಮೂಹ ಕಾಪಿಗೆ ಒತ್ತಾಸೆಯಾಗಿ ನಿಲ್ಲು ...ಂತಹ ಉಪಾಧ್ಯಾಯರುಗಳನ್ನು ಪರ್ಯವೇಕ್ಷ ...ರಾಗಿ ನೇಮಿಸಬೇಕೆಂದು ಅವರಿಗೆ ಉಪಕುಲ ...ತಿಗಳಿಂದ ಒತ್ತಾಯ.

ಅಲ್ಲಲ್ಲಿ ಬಿಳಿಗೂದಲು ಕಾಣಿಸಿಕೊಳ್ಳುತ್ತಿರುವ ...ಲಾಸಚಂದ್ರ ಗುಪ್ತ ಮೀರತ್ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ. ಫೆಬ್ರುವರಿ ೧೫ರಂದು ಹಾಸಿಗೆಯಿಂದೇಳುವಾಗಲೇ ಆತನ ಮುಖದ ಮೇಲೆ ತೀವ್ರವಾದ ಚಿಂತೆಯ ಗೆರೆಗಳು ಮೂಡಿದ್ದವು. ಮೀರತ್ ಕಾಲೇಜಿನಲ್ಲಿ ನಡೆಯುವ ಈ ಸಮೂಹ ಕಾಪಿಯಿಂದಾದ ಶೈಕ್ಷಣಿಕ ಮೌಲ್ಯಗಳ ಕುಸಿತದಿಂದ ಸಾಕಷ್ಟು ನೊಂದಿದ್ದ ಈತ ಈ ಅವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದರೂ ಅದು ಅರಣ್ಯರೋದನವಾಯಿತು.

ಹಿಂದಿನ ಸೆಮಿಸ್ಟರಿನ ಸಮಾರಂಭವೊಂದರಲ್ಲಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ "ನಕಲು ಮಾಡುವುದು ನಮ್ಮ ಆಜನ್ಮ ಸಿದ್ಧ ಹಕ್ಕು; ಯಾರೂ ಅದರಿಂದ ನಮ್ಮನ್ನು ತಪ್ಪಿಸಲಾರರು" ಎಂದು ವೀರಾವೇಶದ ಭಾಷಣ ಮಾಡಿದ. ವಿದ್ಯಾರ್ಥಿ ಸಮೂಹ ಮುಗಿಲ ಮುಟ್ಟುವಂತೆ ಹರ್ಷೋದ್ಗಾರ ಮಾಡಿದಾಗ ಉಪನ್ಯಾಸಕರ ಗುಂಪಿನಿಂದ ಒಂದು ವಿರೋಧದ ಧ್ವನಿಯೂ ಹೊರಡಲಿಲ್ಲ. ಗುಪ್ತ ಈ ವಿಷಯವನ್ನು ತನ್ನ ಸ್ನೇಹಿತರಲ್ಲಿ ಚರ್ಚಿಸಲು ಯತ್ನಿಸಿದಾಗ ಸಮೂಹ ಕಾಪಿ ಒಂದು ಸಾಮಾನ್ಯ ಸಂಗತಿ, ಅದನ್ನು ವಿರೋಧಿಸುವುದು ಮೂರ್ಖತನ, ನಾವು ಬದು–

ಕಲು ಕಲಿಯಬೇಕೆಂದು ಸಿನಿಕ ಉತ್ತರ ನೀಡಿದರು. ಈ ರೀತಿಯ ಪ್ರತಿಕ್ರಿಯೆಯಿಂದ ಗುಪ್ತ ಬಹುವಾಗಿ ನೊಂದುಕೊಂಡರು. ಗುಪ್ತ ದೃಢ ನಿಶ್ಚಯದ ವ್ಯಕ್ತಿ. ೧೯೭೪ರಲ್ಲಿ ಲೋಕನಾಯಕ ಜಯಪ್ರಕಾಶ ನಾರಾಯಣರ ಕರೆಗೆ ಓಗೊಟ್ಟು ಶ್ರಮಿಸಿ ಒಂದು ತಿಂಗಳ ಸೆರೆಮನೆಯವಾಸವನ್ನು ಅನುಭವಿಸಿದ್ದರು. ಆದರೆ ಈ ಸಮಸ್ಯೆ ತೀರ ಕ್ಲಿಷ್ಟವಾದ ಸಮಸ್ಯೆ: ವಿದ್ಯಾರ್ಥಿ ನಾಯಕರು ಹಣವಂತ ಭೂಮಾಲೀಕರ, ಜಮೀನ್ದಾರರ ಮಕ್ಕಳು. ಮೇಲಾಗಿ ಅವರಿಗಿರುವ ರಾಜಕೀಯ ವ್ಯಕ್ತಿಗಳ ಸತತ ಬೆಂಬಲದಿಂದಾಗಿ ಹೋರಾಟ ಅಷ್ಟು ಸುಲಭವಾಗಿರಲಿಲ್ಲ. ಈ ವ್ಯವಸ್ಥೆಯನ್ನು ವಿರೋಧಿಸುವ ಪರ್ಯವೇಕ್ಷಕರು ದೌರ್ಜನ್ಯಕ್ಕೆ ಒಳಗಾಗುವುದು ಇಲ್ಲಿ ಸಾಮಾನ್ಯ. ಈಗಾಗಲೇ ಒಬ್ಬ ಪರ್ಯವೇಕ್ಷಕ ತನ್ನ ಜೀವವನ್ನೇ ನೀಡಿ ಹುತಾತ್ಮನಾಗಿದ್ದರೂ ಗುಪ್ತ ಸಮೂಹ ಕಾಪಿಯನ್ನು ವಿರೋಧಿಸಲು ನಿರ್ಧರಿಸಿದರು. ವಿದ್ಯಾರ್ಥಿಗಳ ಗುಂಪೊಂದು ಗುಪ್ತರ ಮೇಲೆ ಹಲ್ಲೆ ನಡೆಸಿ ಅವರ ಎದೆಯ ಮೇಲೆ ಕಾಲಿಟ್ಟು, "ಕಾಪಿ ನಡೆಯುತ್ತದೆ; ಅದನ್ನು ಯಾರೂ ತಡೆಯಲಾರರು," ಎಂದು ಹೇಳಿದರು.

ಮಾನಸಿಕವಾಗಿ ನೊಂದ ಗುಪ್ತ, ಸಾಲು ಮರಗಳ ಆವರಣವಿರುವ ಮೀರತ್ ಕಾಲೇಜನ್ನು ಪ್ರವೇಶಿಸುತ್ತಿದ್ದಂತೆ ನಕಲು ಮಾಡುವ ಕ್ರಿಯೆ ಯಾವುದೇ ಅಡೆತಡೆ ಇಲ್ಲದೆ ನಡೆದಿತ್ತು. ವಿದ್ಯಾರ್ಥಿಗಳಲ್ಲದ ಅನೇಕರು, ಪರೀಕ್ಷೆಯ ಅಭ್ಯರ್ಥಿಗಳಿಗೆ ಚೀಟಿಗಳನ್ನು ಪುಸ್ತಕಗಳನ್ನು ತಲುಪಿಸುತ್ತಾ ಯಥಾಶಕ್ತಿ ಸಹಾಯ ಮಾಡುತ್ತಿದ್ದರೂ ಪರ್ಯವೇಕ್ಷಕರು ಅಸಹಾಯಕರಾಗಿ ಕೈಕಟ್ಟಿ ಕುಳಿತಿದ್ದರು.

ಇನ್ನೊಂದು ಕೊಠಡಿಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಕುರಿತು ವಿದ್ಯಾರ್ಥಿಗಳು ಗಟ್ಟಿಯಾಗಿ ಚರ್ಚಿಸುತ್ತಿದ್ದರು. ಗುಪ್ತರು ಪರ್ಯವೇಕ್ಷಕನನ್ನು "ನೀವೇಕೆ ಸುಮ್ಮನಿದ್ದೀರಿ?" ಎಂದು ಪ್ರಶ್ನಿಸಿದಾಗ, ಆತ ಕಿರುನಗೆಯೊಂದನ್ನು ಬೀರಿ ಸುಮ್ಮನಾದ. ಪ್ರಾಚಾರ್ಯರು ಗುಪ್ತರನ್ನು ಕರೆದು, "ಇದು ಅವಿರತವಾಗಿ ನಡೆಯುವ ಒಂದು ಕ್ರಿಯೆ. ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ? ಬದುಕುವ ಮಾರ್ಗ ನಿಮಗೆ ಗೊತ್ತಿಲ್ಲವೇ? ನೋಡಿ! ಕೆಲವು ವರ್ಷದ ಹಿಂದೆ ಈ ಅನಾಗರಿಕ ವ್ಯವಸ್ಥೆಯನ್ನು ಸಹಿಸದ ನಾವು ಮೂರು ಕಾಲೇಜಿನ ಪ್ರಾಚಾರ್ಯರು ಪರೀಕ್ಷೆಯನ್ನು ರದ್ದುಗೊಳಿಸಿದಾಗ–'ಸಮೂಹ ಕಾಪಿ ನಡೆದಿದೆ ಎಂಬ ಕಾರಣಕ್ಕಾಗಿ ಪರೀಕ್ಷೆಯನ್ನು ರದ್ದು ಮಾಡಕೂಡದು; ಪರೀಕ್ಷೆಯನ್ನು ಆರಂಭಿಸಿ,' ಎಂದು ಉಪಕುಲಪತಿಗಳಿಂದ ಲಿಖಿತ ಆಜ್ಞೆ ಬಂತು. ಇಂತಹ ವ್ಯವಸ್ಥೆಯನ್ನು ಪ್ರತಿಭಟಿಸಲು ಯತ್ನಿಸುವುದು ಮೂರ್ಖತನ," ಎಂದರು. ತನ್ನ ೧೭ ವರ್ಷದ ಸೇವೆಯಲ್ಲಿ ಗುಪ್ತ ಎಂದೂ ಇಷ್ಟು ಕ್ರೋಧಗೊಂಡಿರಲಿಲ್ಲ. ಇದನ್ನು ಹೀಗೆ ನಡೆಯಗೊಟ್ಟರೆ ಇದು ಸರಿಪಡಿಸಲಾಗದ ಹಂತಕ್ಕೆ ಮುಟ್ಟುವುದೆಂದು ಅವರಿಗೆ ಮನವರಿಕೆಯಾಯಿತು. ಈ ಕೆಟ್ಟ ವ್ಯವಸ್ಥೆಗೆ ಒಂದು ಅಂತ್ಯವನ್ನು ತೋರಿಸಬೇಕೆಂದು ನಿರ್ಧರಿಸಿದ ಗುಪ್ತ, ತನ್ನ ಗೆಳೆಯ ಎಸ್. ಕೆ. ರಾಯ್‌ನೊಂದಿಗೆ ಕೂಡಿ ಒಂದು ಯೋಜನೆಯನ್ನು ತಯಾರಿಸಿದರು. ವಿದ್ಯಾರ್ಥಿಗಳಲ್ಲಿನ ಈ ಅಶಿಸ್ತಿನ ನಡವಳಿಕೆ ನಿಲ್ಲಿಸಲು ಅವರು ಕಂಡುಕೊಂಡ ಮಾರ್ಗಗಳೆಂದರೆ – ಪತ್ರಿಕೆಗಳಲ್ಲಿ ಈ ಸಮೂಹ ಕಾಪಿಯನ್ನು ಕುರಿತಾದ ವರದಿಗಳನ್ನು ಪ್ರಕಟಿಸುವುದು ಹಾಗೂ ಮೀರತ್‌ನ ನಾಗರಿಕರನ್ನು ಸಂಘಟಿಸಿ ಅವರಿಗೆ ಈ ನಕಲಿನ ಪರಿಣಾಮದಿಂದ ಶಿಕ್ಷಣ ಕ್ರಮದ ಮೇಲಾಗುವ ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಿ, ತಮ್ಮೊಂದಿಗೆ ಸಹಕರಿಸುವಂತೆ ಪ್ರಾರ್ಥಿಸುವುದು.


ಈ ಯೋಜನೆಯಂತೆ ಮೀರತ್‌ನ ನಾಗರಿಕರ ಸಭೆಯೊಂದನ್ನು ಕರೆಯಲಾಯಿತು. ಫೆಬ್ರುವರಿ ೨೩ರಂದು ನಡೆದ ಈ ಸಭೆಯಲ್ಲಿ ಸುಮಾರು ೭೦ ನಾಗರಿಕ ಪ್ರತಿನಿಧಿಗಳು ಭಾಗವಹಿಸಿದ್ದರು. ಸಾಕಷ್ಟು ಚರ್ಚೆಯಾದ ನಂತರ ಏಳು ಜನರ ಸಮಿತಿಯೊಂದನ್ನು ರಚಿಸಿ, ಹಿರಿಯ ಗಾಂಧಿವಾದಿ ಸುಂದರಲಾಲರು ಚೇರ್ಮನ್ನರನ್ನಾಗಿಯೂ ಗುಪ್ತರು ಈ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಚುನಾಯಿಸಲ್ಪಟ್ಟರು.

ಈ ಮಧ್ಯೆ ಗುಪ್ತ ಹಾಗೂ ರಾಯ್ ದೆಹಲಿಗೆ ಹೋಗಿ, ಇಂಡಿಯನ್ ಎಕ್ಸ್‌ಪ್ರೆಸ್ಸಿನ – ಅರುಣ್ ಶೌರಿ, ಹಾಗೂ ಹಿಂದುಸ್ತಾನ್ ಟೈಮ್ಸ್‌ನ ಹಿರಣ್ಮಯಿ ಕಾರ್ಲೇಕರರನ್ನು ಭೇಟಿಯಾಗಿ ಅವರಿಗೆ ಮೀರತ್‌ನ ವಿದ್ಯಮಾನಗಳನ್ನು ವಿವರಿಸಿ ಈ ಸಮೂಹ ಕಾಪಿಯ ಪರಂಪರೆಯನ್ನು ಕೊನೆಗೊಳಿಸಲು ಸಹಕರಿಸಬೇಕೆಂದು ಪ್ರಾರ್ಥಿಸಿದರು.

ಫೆಬ್ರವರಿ ೨೪ರಿಂದ ದೆಹಲಿಯ ಪತ್ರಿಕೆಗಳಲ್ಲಿ ಮೀರತ್ ವಿಶ್ವವಿದ್ಯಾನಿಲಯಗಳನ್ನು ಕುರಿತು ವರದಿಗಳು ಪ್ರಕಟವಾಗಲು ಪ್ರಾರಂಭವಾಯಿತು. ಕೆಲವು ವರದಿಗಳಂತೂ ನಾಗರಿಕರು ಬೆಚ್ಚಿ ಬೀಳುವಂತಿದ್ದವು. ಒಂದು ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಲು ಅಭ್ಯರ್ಥಿಯ ಜೊತೆಗೆ, ವಿಷಯ ಚೆನ್ನಾಗಿ ಅರಿತ ಸ್ನೇಹಿತನಲ್ಲದೇ ಮುದ್ದಾಗಿ ಬರೆಯಬಲ್ಲ ಹುಡುಗನ ಸಹಕಾರದೊಂದಿಗೆ ಪ್ರಶ್ನೆ ಪತ್ರಿಕೆಗಳು ಉತ್ತರಿಸಲ್ಪಡುತ್ತಿದ್ದ ಪ್ರಕರಣವೊಂದಾದರೆ, ಪಠ್ಯ ಪುಸ್ತಕದ ಭಾಗಗಳನ್ನು ಕತ್ತರಿಸಿ ಉತ್ತರವೆಂದು ಅಂಟಿಸುತ್ತಿದ್ದ ಅಭ್ಯರ್ಥಿ. ಉತ್ತರದ ಹಾಳೆಯಲ್ಲಿ ಪಠ್ಯ ಪುಸ್ತಕದಿಂದ ನಕಲು ಮಾಡುವ ತನ್ನ ಸ್ನೇಹಿತರಿಗಿಂತ ಹೆಚ್ಚು ಅಂಕ ದೊರೆಯಬೇಕೆಂದು ಬರೆಯುತ್ತಿದ್ದ ಪ್ರಕರಣಗಳೂ ವರದಿಯಾದಾಗ ನಾಗರಿಕರು ದಿಗ್ಭ್ರಾಂತರಾದರು. ಪತ್ರಿಕೆಯ ಕಛೇರಿಗೆ ಪತ್ರಗಳ ಮಹಾಪೂರವೇ ಹರಿಯಿತು.

ವಿಶ್ವವಿದ್ಯಾನಿಲಯದ ಅನುದಾನ ಆಯೋಗದ ಅಧ್ಯಕ್ಷರು, ಉಪಕುಲಪತಿಗೆ ವಿಶ್ವವಿದ್ಯಾನಿಲಯಕ್ಕೆ ನೀಡುತ್ತಿರುವ ಧನ ಸಹಾಯವನ್ನೇಕೆ ನಿಲ್ಲಿಸಬಾರದೆಂದು ಪ್ರಶ್ನಿಸಿ ತಂತಿಯೊಂದನ್ನು ನೀಡಿದರು.

ಈ ವೇಳೆಗೆ ಮೀರತ್ ವಿಶ್ವವಿದ್ಯಾನಿಲಯದ ಪರೀಕ್ಷಣ ಸಮಿತಿ ಹಿಂದಿನ ಮೂರು ವಾರಗಳಲ್ಲಿ ನಡೆದ ಪರೀಕ್ಷೆಯ ಬಗ್ಗೆ ಚಿಂತಿಸಲಾರಂಭಿಸಿದರು. ಈ ಸಮಿತಿಯ ಸದಸ್ಯರಲ್ಲೊಬ್ಬ, "ಈ ಅನ್ಯಾಯಗಳನ್ನೆಲ್ಲಾ ಇದುವರೆಗೆ ಅವಿರತವಾಗಿ ನಡೆಸಿಕೊಂಡು ಬಂದವರು ನಾವು. ಇದರಲ್ಲಿ ನಾಗರಿಕರು ಹಾಗೂ ಉಪಕುಲಪತಿಗಳು ಸಮಭಾಗಿಗಳು," ಎಂದು ತಪ್ಪೊಪ್ಪಿಕೊಂಡರು. ನಾಗರಿಕ ಸಮಿತಿಯು ಪ್ರತಿಯೊಂದು ಕಾಲೇಜಿಗೂ ಭೇಟಿ ನೀಡಿ, ಅಲ್ಲಿ ನಡೆದ ಪ್ರಕರಣಗಳನ್ನೆಲ್ಲಾ ದಾಖಲು ಮಾಡಿಕೊಂಡರು. ಇಲ್ಲಿಯೂ ಉಪಕುಲಪತಿ ಶರ್ಮ



ಆ ತಮ್ಮ ಆಟವನ್ನು ಬಿಡಲಿಲ್ಲ. ಹದಿಮೂರು ಕಾಲೇಜುಗಳಲ್ಲಿ ಮಾತ್ರ ಸಮೂಹ ಕಾಪಿ ನಡೆದಿರುವುದರಿಂದ ಆ ಕಾಲೇಜುಗಳಲ್ಲಿ ಮಾತ್ರ ಪರೀಕ್ಷೆಯನ್ನು ರದ್ದುಗೊಳಿಸಲು ಸೂಚಿಸಿದರು. ಆದರೆ ನಾಗರಿಕ ಸಮಿತಿಯ ಸದಸ್ಯರು ಪ್ರತಿಯೊಂದು ಕಾಲೇಜಿನ ಪ್ರಾಚಾರ್ಯರಿಗೆ ಪರೀಕ್ಷೆ ನಡೆದ ವಾತಾವರಣವನ್ನು ಕುರಿತು ವರದಿ ಸಲ್ಲಿಸುವಂತೆ ಸೂಚಿಸಲು ಆಗ್ರಹಪಡಿಸಿದರು. ಉಪಕುಲಪತಿ ಪ್ರಾಚಾರ್ಯರಿಗೆ ಹತ್ತು ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದರು. ಈ ಹತ್ತು ದಿನಗಳಲ್ಲಿ ಗುಪ್ತ ಹಾಗೂ ಸಮಿತಿಯ ಸದಸ್ಯರು ಹೆದರಿದ ಪರ್ಯವೇಕ್ಷಕರಿಗೆ ಹಾಗೂ ಪ್ರಾಚಾರ್ಯರಿಗೆ ಧೈರ್ಯವಾಗಿ ವರದಿ ನೀಡಲು ಪ್ರಾರ್ಥಿಸಿದರು.

ಈ ಎಲ್ಲಾ ಕ್ರಮಗಳಿಂದ ಖಚಿತವಾದ ವರದಿಗಳು ಹೊರಬಂದು ವಿಶ್ವವಿದ್ಯಾನಿಲಯದ ಪರೀಕ್ಷಾ ಸಮಿತಿ ಸುಮಾರು ೨೩ ಕಾಲೇಜುಗಳಲ್ಲಿ ಪರೀಕ್ಷೆಗಳನ್ನು ರದ್ದುಪಡಿಸಿತು. ಇದರಿಂದ ಸುಮಾರು ಐವತ್ತು ಸಾವಿರದಿಂದ ಅರವತ್ತು ಸಾವಿರ ವಿದ್ಯಾರ್ಥಿಗಳು ಪುನಃ ಪರೀಕ್ಷೆಯನ್ನು ಎದುರಿಸಬೇಕಾಯಿತು. ಗುಪ್ತ ಹಾಗೂ ಆತನ ಸಂಗಡಿಗರಿಗೆ ದೊರೆತ ವಿಜಯವೆಂದು ನಾವು ಭಾವಿಸಿದರೂ ಮುಂದೆ ನಡೆಯುವ ಪರೀಕ್ಷೆ ಕ್ರಮಬದ್ಧವಾಗಿ ನಡೆಯುವುದು ಗುಪ್ತರ ಉದ್ದೇಶವಾಗಿತ್ತು. ಏರಿಯ ಈ ಸನ್ನಿವೇಶದಲ್ಲಿ ಉಪಾಧ್ಯಾಯರುಗಳೇ ವಿದ್ಯಾರ್ಥಿಗಳನ್ನು ನಿಯಂತ್ರಿಸುವುದು ಅಸಾಧ್ಯವೆಂದು ಗುಪ್ತರಿಗೆ ಮನವರಿಕೆಯಾಗಿತ್ತು. ಪೋಲೀಸರ ಸಹಾಯ ಈ ಸನ್ನಿವೇಶದಲ್ಲಿ ಅತ್ಯಗತ್ಯವಾದರೂ ರಾಜಕೀಯ ಪ್ರಭಾವಗಳಿಂದಾಗಿ ಅದು ದೊರೆಯುವುದು ಅಸಾಧ್ಯವೆಂದು ಗುಪ್ತರಿಗೆ ತಿಳಿದಿತ್ತು. ಏಕೆಂದರೆ, ರಾಜಕೀಯ ಪಕ್ಷಗಳ ಬೆನ್ನೆಲುಬು ಈ ವಿದ್ಯಾರ್ಥಿ ಶಕ್ತಿ. ಅದರ ಉಪಯೋಗ, ದುರುಪಯೋಗ, ಎರಡೂ ಅರಿತ ರಾಜಕಾರಣಿಗಳು ಅವರ ವಿರುದ್ಧ ಕ್ರಮಕ್ಕೆ ಸಮ್ಮತಿಸುವರೆ? ಎಂಬ ಭೀತಿ ಗುಪ್ತರನ್ನು ಕಾಡಿತು.

ಆದರೆ ರಾಜ್ಯ ಶಿಕ್ಷಣ ಸಚಿವ ಶಿವಾನಂದ ನೌತಿಯಾಲ್ ಮುಂದೆ ಬಂದು ತೊಂದರೆ ಮಾಡುವವರನ್ನು ಕೂಡಲೇ ಬಂಧಿಸಲು ಸೂಚಿಸಿ ಪರೀಕ್ಷೆ ಸುಗಮವಾಗಿ ಶಿಸ್ತಿನಿಂದ ಜರುಗಲು ಪೋಲೀಸ್ ದಳ ಸಹಕರಿಸಬೇಕೆಂದು ಆಜ್ಞೆ ಇತ್ತರು.

ಈ ಎಲ್ಲಾ ಕ್ರಮಗಳು ವಿದ್ಯಾರ್ಥಿಗಳನ್ನು ರೊಚ್ಚಿಗೆಬ್ಬಿಸಿತು. ಉದ್ರಿಕ್ತ ವಿದ್ಯಾರ್ಥಿಗಳ ಗುಂಪೊಂದು ಕಾಲೇಜಿನ ಆವರಣದ ಅಂಚೆ ಕಛೇರಿಯನ್ನು ಧ್ವಂಸ ಮಾಡಿ, ಪೋಸ್ಟ್ ಮಾಸ್ಟರ್ ಮೇಲೆ ಹಲ್ಲೆ ನಡೆಸಿತು. ಕಾಲೇಜಿನ ಪ್ರಾಚಾರ್ಯ ರತನ್‌ಚಂದ್ ಮಿತ್ತಲ್‌ರನ್ನು ಒಡನೆಗೆ ಅವರ ರಾಜೀನಾಮೆಗೆ ಆಗ್ರಹಪಡಿಸಿತು. ಈ ವೇಳೆಗೆ ಪೋಲೀಸರು ಆಗಮಿಸಿ ಆರು ವಿದ್ಯಾರ್ಥಿಗಳನ್ನು ಬಂಧಿಸಿದರು.

ಜುಲೈ ೧ ರಂದು ಮೀರತ್ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಪುನಃ ಪರೀಕ್ಷೆಗಳು ಆರಂಭವಾದವು. ಅಂದು ಮೀರತ್ ಕಾಲೇಜು ಕುದುರೆಯ ಮೇಲೆ ಕುಳಿತ ಪೋಲೀಸರುಗಳಿಂದ ಒಂದು ಮಿಲಿಟರಿ ಕ್ಯಾಂಪಿನಂತಾಗಿತ್ತು. ಅಭ್ಯರ್ಥಿಗಳು ಕಾಪಿ ಮಾಡದೇ ಬರೆಯಲು ಪೋಲೀಸರು ಪರ್ಯವೇಕ್ಷಕರಿಗೆ ಸಹಾಯ ಮಾಡಿದರು.

ನಕಲು ಮಾಡಲಾಗದ ವಿದ್ಯಾರ್ಥಿಗಳು ಕ್ರೋಧಗೊಂಡು ಪ್ರಶ್ನೆ ಪತ್ರಿಕೆಯನ್ನು ಹರಿದು ಹಾಕಿದ್ದಲ್ಲದೆ ಕಿಟಕಿಯನ್ನು ಒಡೆದು ಹಾಕಿದರು. ಪೋಲೀಸರು ಕೂಡಲೇ ಅವರನ್ನು ಬಂಧಿಸಿದಾಗ ಉಳಿದ ವಿದ್ಯಾರ್ಥಿಗಳು ಹಲ್ಲು ಕಿತ್ತ ಹಾವಿನಂತೆ ಸುಮ್ಮನಾದರು. ಜುಲೈ ೩ರಿಂದ ದೇಶದ ಇತರ ವಿಶ್ವವಿದ್ಯಾನಿಲಯಗಳ ಕಾಲೇಜುಗಳಂತೆ ಶಿಸ್ತಿನಿಂದ ಪರೀಕ್ಷೆಗಳು ನಡೆಯಲು ಆರಂಭವಾಯಿತು.

ಕೈಲಾಸ್ ಗುಪ್ತರ ಈ ಹೋರಾಟ, ಮೀರತ್ ವಿಶ್ವವಿದ್ಯಾನಿಲಯದ ಅಶಿಸ್ತಿನ ಸಮೂಹ ಕಾಪಿಯನ್ನು ನಿರ್ಮೂಲಗೊಳಿಸುವಲ್ಲಿ ಅಂತಿಮವಾಗಿ ಫಲಪ್ರದವಾಯಿತು. ಈಗ ಗುಪ್ತರು ವಿಶ್ವವಿದ್ಯಾನಿಲಯದಲ್ಲಿನ ಭ್ರಷ್ಟಾಚಾರಗಳ ವಿರುದ್ಧ ತಮ್ಮ ಹೋರಾಟವನ್ನು ಆರಂಭಿಸಿದ್ದಾರೆ.

ನಗುವಿನೊಳಗಿನ ನೋವು

ಚಾರ್ಲಿ ಚಾಪ್ಲಿನ್

ಎಸ್. ಆರ್. ವಿಜಯಶಂಕರ

ಮಹಾತ್ಮಾ ಗಾಂಧಿ ಇಂಗ್ಲೆಂಡಿಗೆ ಹೋಗಿದ್ದಾಗ "ನೀವು ಲಂಡನ್ನಿನಲ್ಲಿ ಕಾಣಬೇಕೆಂದಿರುವ ಪ್ರಮುಖ ವ್ಯಕ್ತಿಗಳಾರು?" ಎಂದು ಕೇಳಿದ್ದಕ್ಕೆ ಕೊಟ್ಟ ಉತ್ತರ: "ಜಾರ್ಜ್ ಬರ್ನಾರ್ಡ್ ಷಾ ಮತ್ತು ಚಾರ್ಲಿ ಚಾಪ್ಲಿನ್." ಮಹಾನಟನಾದ ಕಲಾವಿದನಾದ ಚಾರ್ಲಿ ಚಾಪ್ಲಿನ್ನನ ಹೆಸರು ಕೇಳಿದೊಡನೆ ನೆನಪಾಗುವುದು ಡರ್ಬಿ ಹ್ಯಾಟು, ಬಿಗಿಯಾದ ಫ್ರಾಕ್ ಕೋಟು, ದೊಗಳೆ ಪ್ಯಾಂಟು, ಹಾಗೂ ದೊಡ್ಡ ಸೈಜಿನ ಬೂಟುಗಳನ್ನು ಧರಿಸಿ ಕೈಯಲ್ಲೊಂದು ಕೋಲು ಹಿಡಿದ ಹಿಟ್ಲರ್ ಮೀಸೆಯ ಮಿಳಿಮಿಳಿ ಕಣ್ಣಿನ ಮಹಾನುಭಾವನಾಕೃತಿ. ನಮ್ಮ ಶ್ರೀ 'ಕೃಷ್ಣ' 'ಕಿಟ್ಟಿ' ಆಗುವಂತೆ ಇಂಗ್ಲೆಂಡಿನಲ್ಲಿ 'ಚಾರ್ಲ್ಸ್' 'ಚಾರ್ಲಿ' ಆಗುತ್ತಾನೆ. ಹೀಗಾಗಿ ಚಲನಚಿತ್ರ ಇತಿಹಾಸದ ಶ್ರೇಷ್ಠ ನಟನಾದ ಇಂಗ್ಲೆಂಡಿನ ಸರ್ ಚಾರ್ಲ್ಸ್ ಸ್ಪೆನ್ಸರ್ ಚಾಪ್ಲಿನ್ (೧೮೮೯–೧೯೭೭) ಜನರ ಪ್ರೀತಿಯ ಚಾರ್ಲಿ ಚಾಪ್ಲಿನ್ ಆದದ್ದು.

ಅಪ್ರಬುದ್ಧರಂತೆ ತೋರುವ ಕೃತಕ ನಡೆ ಚಾಪ್ಲಿನ್ನನ ಇಮೇಜಿನ ಆಕರ್ಷಣೆ. 'ಲಿಟಲ್ ಟ್ರಾಂಪ್' ಎಂದೇ ಪ್ರಖ್ಯಾತನಾಗಿರುವ ಈ ಕಲಾವಿದನ ನಟನೆಯು ಮೂಕಿ ಹಾಗೂ ನಂತರದ ಪೂರ್ಣ ವಾಕ್ಚಿತ್ರಗಳಲ್ಲಿ ಆತನ ಯಶಸ್ಸಿನ ಗುಟ್ಟು. ಹಿಂದಿಯ ರಾಜ್ ಕಪೂರ್‌ಗೆ 'ಆವಾರಾ'ದಲ್ಲಿ ಚಾಪ್ಲಿನ್ನನ ವಿಪರೀತ ಪ್ರಭಾವ. ನಾವೆಲ್ಲಾ ಒಂದಲ್ಲ ಒಂದು ಸಲ ಫಜೀತಿ ಪಟ್ಟವರೇ. ಆದರೆ ಇಂಗ್ಲೀಷಿನ ಈ ಹಾಸ್ಯ ನಟ ಮಾತ್ರ ಸದಾ ಫಜೀತಿ ಪಡುವ 'ಲಿಟಲ್ ಮ್ಯಾನ್'.

ಚಾಪ್ಲಿನ್‌ನ ತಂದೆ ಹಾಡು ಕಲಾವಿದ. ತಾಯಿ ಒಬ್ಬ ನಟಿ. ಅವರಿಬ್ಬರೂ ಮದುವೆಯಾಗದೆ ಜೊತೆಯಲ್ಲಿದ್ದವರು. ಹುಟ್ಟಿದ ಮಕ್ಕಳ ಉಳಿಕೆಗೆ ಗತಿ ಇಲ್ಲ. ಧೃತಿಗೆಟ್ಟ ತಾಯಿ ಆಗಾಗ ಹುಚ್ಚಿಯಾಗುತ್ತ ನರಳುತ್ತಿದ್ದಳು. ಚಾಪ್ಲಿನ್‌ಗೆ ಬಡತನದ ನಾಚಿಕೆ. ಹಸಿವಿನ ರೌರವ ನರಕ. ಮನೆ ಬಾಡಿಗೆ ಕೊಡಲಾಗದ್ದಕ್ಕೆ ಮಕ್ಕಳನ್ನು ಅಟ್ಟಿಕೊಂಡು ಒಂದು ಚಿಕ್ಕ ರೂಮಿನಲ್ಲಿ ವಾಸಿಸುತ್ತಿದ್ದ ತನ್ನ ತಾಯಿಯೆಂದರೆ ಚಾರ್ಲಿಗೆ ಅಪಾರ ಪ್ರೀತಿ. ಮಕ್ಕಳು ಹಸಿವು ಮರೆಯಲಿ ಎಂದು ತಾಯಿ ನಾನಾ ಕಥೆಗಳನ್ನೋ ವಿನೋದ ಪ್ರಸಂಗಗಳನ್ನೋ ಹೇಳುತ್ತಿದ್ದಳು. ತಾನು ನೋಡಿದ್ದರ ಮೂಕಾಭಿನಯ ಮಾಡಿ ಹಸಿವು ಮರೆಸಲು ನಗಿಸುತ್ತಿದ್ದಳು. ಚಾಪ್ಲಿನ್ ಈ ಪ್ರಭಾವದಲ್ಲಿ ಬೆಳೆದ. ಅದಕ್ಕೇ ಅವನ ಸಿನಿಮಾಗಳಲ್ಲಿ ಬಡ ಪ್ರೀತಿಯ ಚೇತೋಹಾರಿ ಹಲವು ಪ್ರಸಂಗಗಳು ಸದಾ ಅಭಿನಯದ ಸಂಕೇತವಾಗಿರುತ್ತವೆ.



ಶೋಷಣೆಗೊಳಗಾದ ಬಡವರು ಆತ್ಮಾಭಿಮಾನ ಉಳ್ಳವರಾಗಿರುತ್ತಾರೆ.

ಇಂಗ್ಲೆಂಡಿನಲ್ಲಿ ರಂಗಭೂಮಿಯ ಬಡ ನಟನಾಗಿ ನರಳುತ್ತಿದ್ದ ಚಾಪ್ಲಿನ್ ಹೊಟ್ಟೆಪಾಡಿಗಾಗಿ ಅಮೇರಿಕ ಸೇರಿದ. ಅಲ್ಲಿ ಅಕಸ್ಮಾತ್ ಸಿನಿಮಾ ಪ್ರವೇಶಿಸಿದ. ಬಳಿಕ ಮೂಕಿ ಚಿತ್ರಗಳಲ್ಲಿ ಪಟಪಟನೆ ಹೆಜ್ಜೆಯಿಕ್ಕುತ್ತಾ ಬಿರುಗಾಳಿಯಂತೆ ಬೀಸತೊಡಗಿದ, ೧೯೧೩ರಲ್ಲಿ ವಾರಕ್ಕೆ ೧೫೦ ಡಾಲರುಗಳ ಸಂಪಾದನೆಗೇರಿದವನಿಗೆ ೧೯೧೭ರಲ್ಲಿ ವಾರದ ಸಂಬಳ ಹತ್ತು ಲಕ್ಷ ಡಾಲರುಗಳಾದವು. ಬಳಿಕ ಚಾಪ್ಲಿನ್ ಇನ್ನೊಬ್ಬರಲ್ಲಿ ಕೆಲಸ ಮಾಡು ವುದನ್ನು ಬಿಟ್ಟು ತಾನೇ ಸ್ವಂತ ಸ್ಟುಡಿಯೋ ತೆಗೆದ. ಆ ನಂತರದ ಆತನ ಸಿನಿಮಾಗಳ ನಾಯಕ, ನಿರ್ದೇಶಕ, ಸಂಗೀತ ನಿರ್ದೇಶಕ ಎಲ್ಲವೂ ಚಾರ್ಲಿಯೆ. ಇಂದಿಗೂ ಅವು ಸಿನಿಮಾ ಯಂತ್ರ ಭಾಷೆಯ ಉನ್ನತ ಸಾಧನೆಗಳೆ.

ಒಂದೊಮ್ಮೆ ಇಂಗ್ಲೆಂಡಿನ ಚಿಲ್ಲರೆ ಹೋಟೆಲು ಗಳಲ್ಲಿ ಪುಡಿಗಾಸಿಗಾಗಿ ಕುಣಿಯುತ್ತಿದ್ದ ಚಾಪ್ಲಿನ್, ಮುಂದೆ ಆತನ 'ಸಿಟಿ ಲೈಟ್ಸ್' ಸಿನಿಮಾ ಲಂಡನ್ನಿನ ಡೊಮಿನಿಯನ್ ಥಿಯೇಟರ್‌ನಲ್ಲಿ ಬಿಡುಗಡೆ ಯಾದಾಗ ಆತನ ಎಡಕ್ಕೆ ಲೇಡಿ ಆಸ್ಟರ್, ಬಲಕ್ಕೆ ಬರ್ನಾರ್ಡ್ ಷಾ, ಮುಂದೆ ಸಾಮರ್‌ಸೆಟ್ ಮಾಮ್, ವಿನ್‌ಸ್ಟನ್ ಚರ್ಚಿಲ್ ಮುಂತಾದ ಖ್ಯಾತ ವೇತ್ತರು ಕುಳಿತಿದ್ದರು. ಜೀವನೋಪಾಯಕ್ಕಾಗಿ ಇಂಗ್ಲೆಂಡ್ ಬಿಟ್ಟು ಹೊರನಡೆದಿದ್ದ ಚಾಪ್ಲಿನ್ ನನ್ನು ೧೯೭೫ರಲ್ಲಿ ಎರಡನೆ ಎಲಿಜಬೆತ್ ರಾಣಿ ಪುನಃ ಕರೆದು ಬ್ರಿಟನ್‌ನ ಅತ್ಯುಚ್ಚ ರಾಜ ಮರ್ಯಾದೆಯಾದ 'ನೈಟ್‌ಹುಡ್ 'ಇತ್ತು ಗೌರವಿ ಸಿದಳು.

'ದ ಕಿಡ್', 'ಗೋಲ್ಡ್‌ರಷ್', ಮಾಡರ್ನ್ ಟೈಮ್ಸ್', 'ದ ಗ್ರೇಟ್ ಡಿಕ್ಟೇಟರ್,' ಚಾರ್ಲಿ ಚಾಪ್ಲಿನ್‌ನ ಪ್ರಖ್ಯಾತ ಚಿತ್ರಗಳಲ್ಲಿ ಕೆಲವು. 'ಶೋಲ್ಡರ್ ಆರ್ಮ್ಸ್' ಮಹಾ ಯುದ್ಧದ ಕತೆ 'ಎ ಕೌಂಟೆಸ್ ಫ್ರಮ್ ಹಾಂಗ್‌ಕಾಂಗ್' ಆತ ನಟಿಸಿದ ಕೊನೆಯ ಚಿತ್ರ.


ದ ಕಿಡ್ (೧೯೨೧) ಅನಾಥ ಮಗುವೊಂದರ ಕತೆ ಹೇಳುತ್ತದೆ. ಅನಾಥ ಮಗುವಾಗಿ ಬೆಳೆದು

ದೊಡ್ಡವನಾದ ಹೀರೋ (ಚಾಪ್ಲಿನ್) ಇನ್ನೊಂದು ತಬ್ಬಲಿ ಮಗುವನ್ನು ಸಾಕುತ್ತಾನೆ. ಇಬ್ಬರಿಗೂ ಅನ್ನಕ್ಕೆ ಗತಿ ಇಲ್ಲ. ವಸತಿ ಮೊದಲೇ ಇಲ್ಲ. ಅವರಲ್ಲೊಂದು ದೃಶ್ಯ ಹೀಗಿದೆ: ಚಾಪ್ಲಿನ್ನನ ಸೂಚನೆಯಂತೆ ಮಗು ಕಿಟಕಿಗಳಿಗೆ ಕಲ್ಲು ಹೊಡೆಯುತ್ತಾ ಹೋಗುತ್ತದೆ. ಹಿಂದಿನಿಂದ ಚಾಪ್ಲಿನ್ ಒಡೆದ ಕಿಟಕಿಗಳಿಗೆ ಗಾಜು ಹಾಕುವ ಕೆಲಸಗಾರನಾಗಿ ಬಂದು ಸ್ವಲ್ಪ ದುಡ್ಡು ಸಂಪಾದಿಸುತ್ತಾನೆ. ಚಾಪ್ಲಿನ್ನನ ಕುಣಿತ, ಓಟ, ಫಜೀತಿಗಳ ಹಾಸ್ಯ ನಟನೆ ನೋಡಿ ಜನ ಬಿದ್ದು ಬಿದ್ದು ನಗುತ್ತಿರುತ್ತಾರೆ. ಆದರೆ ಈ ದೃಶ್ಯ ಮುಗಿದೊಡನೆಯೇ ನಿರ್ಗತಿಕರ ಬಾಳಿನ ಅನಾಥ ಸ್ಥಿತಿಯ ಅರಿವಾಗಿ ವಿಷಾದ ಪ್ರೇಕ್ಷಕರನ್ನು ಆವರಿಸುತ್ತದೆ. ಚಾಪ್ಲಿನ್ ಗೇಲಿ ಮಾಡಿದ್ದು ನಮ್ಮ ಸ್ಥಿತಿಯನ್ನು, ಅಂದರೆ ಈ ಸಮಾಜ ವ್ಯವಸ್ಥೆಯನ್ನು ಹಾಗೂ ಅದರ ಕಾನೂನಿನ ರೀತಿ ನೀತಿಗಳನ್ನು.

'ಮಾಡರ್ನ್ ಟೈಮ್ಸ್' ಯಂತ್ರ ನಾಗರಿಕತೆಯಲ್ಲಿ ಬಳಲುವ ಮನುಷ್ಯನ ಸ್ಥಿತಿಯನ್ನು ಹೇಳುವುದರ ಜೊತೆಗೇ ಬಂಡವಳಶಾಹಿ ಆರ್ಥಿಕ ವ್ಯವಸ್ಥೆಯನ್ನೂ ಕೆಲವೊಮ್ಮೆ ಹಾಸ್ಯಾಸ್ಪದವಾಗುತ್ತಿರುವ ಕಾರ್ಮಿಕ ಚಳವಳಿಗಳನ್ನೂ ವಿಡಂಬನೆಗೆ ಒಳಪಡಿಸುತ್ತದೆ. 'ಗೋಲ್ಡ್ ರಷ್', ಮತ್ತೊಬ್ಬ ಬಡವನ ಕತೆ. ಇದರಲ್ಲಿ ಸದಾ ಹೆಣ್ಣೊಬ್ಬಳು ಜೀವದ ತೀವ್ರ ತುಡಿತದ, ಬದುಕಿನ ನಿರಂತರ ಆಶಾವಾದದ ಅರ್ಥಪೂರ್ಣ ಸಂಕೇತವಾಗಿ ಇರುತ್ತಾಳೆ. ಚಾಪ್ಲಿನ್ನನಿಗೆ ಯಾವತ್ತೂ ಹೆಣ್ಣು ಫಲಪ್ರದ ಬದುಕಿನ ಸಾಧ್ಯತೆ.

'ದ ಗ್ರೇಟ್ ಡಿಕ್ಟೇಟರ್' ಹಿಟ್ಲರ್‌ನನ್ನು ಅರಿತುಕೊಂಡು ಗೇಲಿ ಮಾಡುವುದರ ಜೊತೆಗೆ ಮನುಷ್ಯನ ಮೇಲೆ ಅತಿಕ್ರಮಣ ಮಾಡಿ, ಬದುಕಿನ ಪ್ರೇಮವನ್ನು ನಾಶಮಾಡಬಲ್ಲ ಎಲ್ಲಾ ರೀತಿಯ ಸರ್ವಾಧಿಕಾರವನ್ನೂ ವಿರೋಧಿಸುತ್ತದೆ. ಈ ಸಿನಿಮಾದ ಕೊನೆಯಲ್ಲಿ ಚಾಪ್ಲಿನ್ ಮಾಡಿದ ಭಾಷಣ ಅಬ್ರಹಾಂ ಲಿಂಕನ್‌ನ ಗೆಟ್ಟೀಸ್‌ಬರ್ಗ್ ಭಾಷಣದಷ್ಟೇ ಮಹತ್ವದ್ದು.

'ದ ಡಿಕ್ಟೇಟರ್' ಫ್ಯಾಸಿಸಂ ಮನೋಭಾವವನ್ನು ಸೂಕ್ಷ್ಮಪ್ರಜ್ಞತೆಯಲ್ಲಿ ಅರ್ಥಮಾಡಿಕೊಂಡ ಚಿತ್ರ. ಇಲ್ಲಿ ಚಾಪ್ಲಿನ್ ಸರ್ವಾಧಿಕಾರಿಯ ಸೈನಿಕ ಶಾಹಿಯ ಮೋಸವನ್ನೂ ಸಾಮಾನ್ಯ ಜನರ ಅರ್ಥ



ಪೂರ್ಣ ಪ್ರೇಮಮಯ ಜೀವನವನ್ನು ಎದುರು ಬದುರಾಗಿಟ್ಟು ತೋರಿಸುತ್ತಾನೆ. ಸಿನಿಮಾ ಭಾಷೆಯ ಮತ್ತು ಕಲಾತ್ಮಕತೆಯ ಪೂರ್ಣ ಅರಿವಿನಿಂದ, ವಿಡಂಬನೆಯಿಂದ ನೋಡುಗನನ್ನು ಬೇಕಾದಲ್ಲಿ ಚಿಂತನೆಗೆ ಹಚ್ಚುತ್ತಾನೆ. ಮೂಕಿ ಸಿನಿಮಾಗಳು ಹೋಗಿ ಮಾತನಾಡುವ ಸಿನಿಮಾಗಳು ಬಂದಾಗ ಈ ಬೆಳವಣಿಗೆಯನ್ನು ವಿರೋಧಿಸಿದ್ದ ಚಾಪ್ಲಿನ್ ಮಾತ್ರ ಸ್ಪರ್ಧೆಯನ್ನೆದುರಿಸಿ ಟಾಕಿ ಸಿನಿಮಾಗಳಲ್ಲೂ ಅಸಾಧಾರಣನಾಗಿದ್ದುದನ್ನು ತೋರಿಸುವ ಚಿತ್ರ ಇದು. ೧೯೪೦ರಲ್ಲಿ ತಯಾರಾದ ಈ ಸಿನಿಮಾ ಎರಡನೇ ಮಹಾಯುದ್ಧದಿಂದ ತತ್ತರಿಸುತ್ತಿದ್ದ ಇಂಗ್ಲೆಂಡ್, ಅಮೇರಿಕಗಳಲ್ಲಿ ದೊಡ್ಡ ಕೋಲಾಹಲವನ್ನೇ ಉಂಟುಮಾಡಿತು. ಹಿಟ್ಲರ್‌ನ ಆತ್ಮಹತ್ಯೆಗೂ ಮುನ್ನ ಆತನ ಭವಿಷ್ಯವನ್ನು ಸೂಚಿಸಿದ ಈ ಸಿನಿಮಾವನ್ನು ಸ್ವತಃ ಹಿಟ್ಲರ್‌ನೇ ಖಾಸಗಿಯಾಗಿ ನೋಡಿದ್ದನಂತೆ.

'ದ ಡಿಕ್ಟೇಟರ್' ಮತ್ತು 'ದ ಮಾಡರ್ನ್ ಟೈಮ್ಸ್' ಮೊದಲಾದ ಚಿತ್ರಗಳಲ್ಲಿ ಚಾಪ್ಲಿನ್ ತಳೆದ ನಿಲುವಿಗಾಗಿ ಆತನನ್ನು ಕಮ್ಯುನಿಸ್ಟ್ ಎಂದು ಅನೇಕರು ದೂರಿದರು. ಕಮ್ಯುನಿಸ್ಟ್ ರಾಷ್ಟ್ರದ ವಿಶ್ವಶಾಂತಿ ಪ್ರಶಸ್ತಿ ಪಡೆದ ಚಾಪ್ಲಿನ್ ಆ ಹಣವನ್ನು ದಲಿತರಿಗೆ ದಾನ ಮಾಡಿದ. ತನ್ನ ಸ್ಪಷ್ಟ ನಿಲುವುಗಳಿಂದಾಗಿ ಚಾರ್ಲಿ ತನ್ನ ಕೊನೆಗಾಲದಲ್ಲಿ ತನ್ನನ್ನು ಬೆಳೆಸಿದ ಅಮೇರಿಕವನ್ನು ತ್ಯಜಿಸಿ ಸ್ವಿಜರ್‌ಲ್ಯಾಂಡಿನಲ್ಲಿ ನೆಲಸಬೇಕಾಯಿತು.

ಹಾಸ್ಯ ನಟನೆಯಲ್ಲಿ ಚಾಪ್ಲಿನ್ ಬೆಪ್ಪು ತಕ್ಕಡಿಯ ಹಾಗೆ ಪೆದ್ದನ ಹಾಗೆ ಸದಾ ಫಜೀತಿ ಪಟ್ಟರೂ ಮನುಷ್ಯತ್ವದ ಮೂಲ ಸೆಲೆಯ ಒಳ್ಳೆ ಸಂಕೇತವಾಗಿ ನೋಡುಗರ ಭಾವನೆಯನ್ನು ಮಿಡಿದು ಬುದ್ಧಿಯನ್ನು ಹರಿತಗೊಳಿಸಬಲ್ಲ. ಆತನ ಸಿನಿಮಾಗಳನ್ನು ಎಷ್ಟು ಬಾರಿ ನೋಡಿದರೂ, ಇನ್ನೊಮ್ಮೆ ನೋಡಿದಾಗ ಪಕ್ಕೆ ಹಿಡಿದು ನಗುವುದು ಅನಿವಾರ್ಯ. ಅದರ ಮರುಕ್ಷಣದಲ್ಲಿ ಈ ಸಮಾಜದಲ್ಲಿ ನರಳುವ ಜನರ ದಾರುಣ ನೋವು ಇರುತ್ತದೆ. ಈ ದಾರುಣತೆಯ ನಡುವಿನ ನಾಯಕನಾಗಿ ಚಾಪ್ಲಿನ್ನನನ್ನು ನೋಡಿಯೂ ಪ್ರೇಕ್ಷಕ ನಗುತ್ತಿರುತ್ತಾನೆ. ಆದರೆ ಸಿನಿಮಾ ಮುಗಿಯುತ್ತಾ ಬಂದ ಹಾಗೆ ನಗುತ್ತಾ ನಗುತ್ತಾ ನಗಬಾರದಿತ್ತು ಎಂದು ನಾವು ಯೋಚಿಸಲು ತೊಡಗುತ್ತೇವೆ. ಥಿಯೇಟರ್‌ನಿಂದ ಹೊರ ಬರುತ್ತಾ ನಕ್ಕದ್ದು ತಪ್ಪಾಯಿತು ಎಂಬ ಭಾವ ಬೆಳೆಸಿಕೊಟ್ಟು ಅನುಭವವನ್ನು ಬಹು ಗಂಭೀರವಾಗಿ ಅರಿಯುವ ಆಶಯವನ್ನು ಚಾಪ್ಲಿನ್ ನಮ್ಮಲ್ಲಿ ಮೂಡಿಸುತ್ತಾನೆ. ಏಕೆಂದರೆ ವಿಡಂಬನೆಯ ಹಾಸ್ಯದಲ್ಲಿ ಅತಿಶಯೋಕ್ತಿಯ ಗರಿಷ್ಠತೆಗೆ ತಲಪಿಸಿ ಗೇಲಿಯ ಮೂಲಕ ತೋರಿಸುವ ಶೈಲಿ ಚಾರ್ಲಿಯದ್ದು.

ಬಡತನದಲ್ಲಿ ನವೆದು ಶ್ರೀಮಂತನಾದರೂ ಈ ಅಸಾಧಾರಣ ಮೇಧಾವಿ ತನ್ನ ಸ್ವಂತದ ಬಾಳಿನಲ್ಲಿ ಸದಾ ಒಂಟಿಯಾಗಿ ನೋವನ್ನನುಭವಿಸುತ್ತಿದ್ದ. ಆತ ನಾಲ್ಕು ಬಾರಿ ಮದುವೆಯಾಗಿದ್ದ. ಮೊದಲ ಮೂವರೂ ಆತನನ್ನರಿಯದಾದರು. ವಿಚ್ಛೇದನದ ಬಳಿಕ ಚಾರ್ಲಿಯ ೫೪ನೇ ವಯಸ್ಸಿನಲ್ಲಿ ನಾಲ್ಕನೇ ಮದುವೆಯಾಯಿತು. ಅಮೇರಿಕದ ಪ್ರಖ್ಯಾತ ನಾಟಕಕಾರ ಯೂಜಿನ್ ಓನೀಲ್‌ನ ಮಗಳಾದ ಊನಾ ಓನೀಲ್ ಚಾಪ್ಲಿನ್‌ಗೆ ನಾಲ್ಕನೇ ಹೆಂಡತಿಯಾದಾಗ ಆಕೆಗೆ ಕೇವಲ ೧೮ ವರ್ಷ ಪ್ರಾಯ. ಕುಟುಂಬ ನೆಮ್ಮದಿಯಿಂದ ವಂಚಿತನಾಗಿದ್ದ ಚಾಪ್ಲಿನ್ ಈ ಮದುವೆಯ ಬಳಿಕ ಊನಾಳನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದ. "ನನ್ನ ಒಂಟಿತನದ ನೋವಿಗೆ ಮರುಗಿ ದೇವರು ಕೊಟ್ಟ ಕಾಣಿಕೆ ಊನಾ" ಎನ್ನುತ್ತಿದ್ದ ಚಾಪ್ಲಿನ್.

ಚಾಪ್ಲಿನ್ ತೀರಿಹೋಗಿ ಬಹು ದಿನಗಳೇ ಸಂದವು. ಆದರೆ ಇಂದಿಗೂ ಚಾರ್ಲಿ ನಟಿಸಿದ ಯಾವುದೇ ಸಿನಿಮಾ ಎಲ್ಲಿಯೇ ನಡೆಯಲಿ ಟಾಕೀಸಿನ ಹೊರಗೆ "ಚಿತ್ರಮಂದಿರ ತುಂಬಿದೆ" ಎಂಬ ಫಲಕ ಸರ್ವೇಸಾಮಾನ್ಯ. [illegible] ಷೇಕ್ಸ್‌ಪಿಯರನ ಬಳಿಕ ಇಂಗ್ಲೆಂಡ್ ಜಗತ್ತಿಗೆ ಕೊಟ್ಟ ಅತಿ [illegible] ಕಾಣಿಕೆಯಾದ ಚಾಪ್ಲಿನ್ ಅಜರಾಮರ.



ಮಣ್ಣು

ಯಾವುದೋ ಒಂದು ದೇಶದ ಯಾವುದೋ ಒಂದು ಪಟ್ಟಣದಲ್ಲಿ ಒಬ್ಬ ಮನುಷ್ಯ ಮಣ್ಣನ್ನು ಮಾರಿ ತನ್ನ ಜೀವನ ಸಾಗಿಸಿಕೊಳ್ಳುತ್ತಿದ್ದ. ಆ ಪಟ್ಟಣ ವಾಸ್ತವವಾಗಿ ಇಟ್ಟಿಗೆ ಕಲ್ಲು-ಸಿಮೆಂಟು ಕಾಂಕ್ರಿಟುಗಳಾಗಿ ಪರಿವರ್ತಿತವಾಗುತ್ತಿತ್ತಾದರೂ ಅವರಲ್ಲಿನ ಕೆಲ ಮನೆಗಳು ಮಣ್ಣಿನವೇ ಆಗಿದ್ದವು. ಆ ಮನೆಗಳಲ್ಲಿ ಒಲೆಗಳೂ ಮಣ್ಣಿನವಾಗಿದ್ದವು. ಪ್ರಸ್ತುತ ಆ ದೇಶದಲ್ಲಿ ವಿಜ್ಞಾನ ಸಾಕಷ್ಟು ಉನ್ನತಿಯನ್ನು ಮುಟ್ಟಿತ್ತು. ಅಲ್ಲದೆ ಗ್ಯಾಸ್ ಮತ್ತು ವಿದ್ಯುತ್ತಿನ ಆಧುನಿಕ ಒಲೆಗಳ ಚಾಲ್ತಿಯೂ ಆ ಪಟ್ಟಣದಲ್ಲಿ ಸಾಕಷ್ಟಿತ್ತು. ಹಾಗಾಗಿ ಆ ಮಣ್ಣಿನ ಮನೆಗಳಲ್ಲಿ ವಾಸಿಸುವವರಿಗೆ ತಮ್ಮ ಮನೆಗಳನ್ನು ಸಾರಿಸಲಿಕ್ಕೆ ಹಾಗೂ ಒಲೆಗಳ ರಿಪೇರಿ ಮಾಡಲಿಕ್ಕೆ ಮಣ್ಣಿನ ಆವಶ್ಯಕತೆ ಬೀಳುತ್ತಿತ್ತು. ಹಾಗಾಗಿ ಆ ವ್ಯಕ್ತಿ ಮಣ್ಣನ್ನು ಮಾರಿ ತನ್ನ ಪರಿವಾರದ ಹೊಟ್ಟೆ ತುಂಬಿಸುತ್ತಿದ್ದ.

ಮಣ್ಣನ್ನು ಮಾರಾಟ ಮಾಡುವುದು ಆ ವ್ಯಕ್ತಿಯ ಕುಲಕಸಬಾಗಿತ್ತು. ಅವನ ಅಪ್ಪ, ಆಸ್ತಿಯಾಗಿ ಆತನಿಗೆ ಒಂದು ಕತ್ತೆ, ಒಂದು ಗುದ್ದಲಿ ಮತ್ತು ಒಂದು ಬಾಣಲೆಯನ್ನು ಬಿಟ್ಟು ಹೋಗಿದ್ದನು. ಆತನೂ ತಂದೆ ತಾಯಂದಿರಂತೆ ಇದೇ ವೃತ್ತಿಯನ್ನು ನಡೆಸುವನೆಂದು ಆತನ ಅಪ್ಪನ ಆಶಯವಾಗಿತ್ತು. ಅಲ್ಲದೆ ತನ್ನ ಮಕ್ಕಳಿಗಾಗಿ ಅದೇ ಆಸ್ತಿಯನ್ನು ಬಿಟ್ಟು ಹೋಗುವುದೆಂದೂ ಆಶಿಸಿದ್ದ. ಆದರೆ ಆ ವ್ಯಕ್ತಿಯ ತಂದೆ ತಾತಂದಿರ ಕಾಲದಲ್ಲಿ ಮಣ್ಣು ಪಟ್ಟಣದಿಂದ

ಮೂಲ: **ರಮೇಶ ಉಪಾಧ್ಯಾಯ**

ಅನು: **ಕಲ್ಯಾಣಿ ಮೂರ್ತಿ ರಾಮನಾಥಪುರ**

ಬಹಳ ದೂರವೇನೂ ಇರುತ್ತಿರಲಿಲ್ಲ. ಈಗಲೋ ಪಟ್ಟಣ ಹರಡಿಹೋಗುತ್ತಿರುವುದರಿಂದ ಮಣ್ಣು ದಿನೇ ದಿನೇ ದೂರ ಸಾಗುತ್ತಾ ಇತ್ತು.

ಆ ವ್ಯಕ್ತಿ ಬೆಳಿಗ್ಗೆ [illegible]. ರಾತ್ರಿ ಉಳಿದಿದ್ದ ರೊಟ್ಟಿಯನ್ನು ಚಿಂದಿ ಬಟ್ಟೆಯಲ್ಲಿ ಕಟ್ಟಿಕೊಂಡು ಹೆಗಲಿಗೆ ಏರಿಸಿ ಗುದ್ದಲಿ ಹೊತ್ತು ಕತ್ತೆಯನ್ನು ಜತೆಯಲ್ಲಿ ಕರೆದುಕೊಂಡು ಮನೆಯಿಂದ ಹೊರಡುತ್ತಿದ್ದ. ಗಂಟೆಗಟ್ಟಲೆ

ನಡೆದ ನಂತರವಷ್ಟೇ ಅವನು ಪಟ್ಟಣವನ್ನು ದಾಟಲು ಸಾಧ್ಯವಾಗುತ್ತಿತ್ತು. ಯಾವುದಾದರೂ ಬಂಜರು ಭೂಮಿಗೆ ಹೋಗಿ ಅವನು ಕತ್ತೆಯನ್ನು ಮೇಯಲಿಕ್ಕೆ ಬಿಡುತ್ತಿದ್ದ. ನಂತರ ತಾನು ಮಣ್ಣು ಅಗೆಯಲು ತೊಡಗುತ್ತಿದ್ದ. ಮಣ್ಣನ್ನು ಅಗೆದು ಕತ್ತೆಯ ಮೇಲೆ ಹೊರೆಸುತ್ತಿದ್ದ. ಅಲ್ಲಿಂದ ಹೊರಗಿನವರೆಗೆ ತಲುಪಲು ಗಂಟೆಗಳ ಮಾರು ಪ್ರಯಾಣ ಸಾಗಿಸುತ್ತಿದ್ದ. ಅಷ್ಟರಲ್ಲಿ ಮಧ್ಯಾಹ್ನವಾಗಿ ಬಿಡುತ್ತಿತ್ತು. ಮತ್ತು ಆ ಮನುಷ್ಯನಿಗೆ ಬಹಳ ಹೆಚ್ಚಾಗಿ ಹಸಿವು ನೀರಡಿಕೆಯಾಗುತ್ತಿತ್ತು. ಎಲ್ಲಾದರೂ ನೀರಿನ ವ್ಯವಸ್ಥೆ ನೋಡಿ ಅತ ನಿಲ್ಲುತ್ತಿದ್ದ. ತನ್ನ ಒಣಗಿದ ಹಳಸಿದ ರೊಟ್ಟಿಯನ್ನು ಜಗಿದು ನೀರು ಕುಡಿದು ಕತ್ತೆಗೂ ನೀರು ಕುಡಿಸುತ್ತಿದ್ದ.

ಅವನಿಗೆ ಹಲವಾರು ಗಿರಾಕಿಗಳು ಸಿಗುತ್ತಿದ್ದರೇನೋ ಹೌದು. ಆದರೆ ಮಣ್ಣಿಗೆ ಸೂಕ್ತ ಬೆಲೆ ಕೊಡುವವರು ಬಹಳ ಕಡಿಮೆ. ಯಾವುದಾದರೂ ದೊಡ್ಡ ಹಬ್ಬದ ದಿನ ಮಣ್ಣಿನ ಮನೆಯವರೆಲ್ಲರಿಗೂ ತಮ್ಮ ಮನೆಯ ಅಂಗಳವನ್ನು ಸಾರಿಸಬೇಕಾದಾಗ ಅವನ ಮಣ್ಣು ಕೇಳಿದ ಬೆಲೆಯಲ್ಲಿ ಮಾರಾಟವಾಗುತ್ತಿತ್ತು. ಆದರೆ ವರ್ಷದ ಉಳಿದ ದಿನಗಳಲ್ಲಿ ಗಿರಾಕಿಗಳು ಅವನೊಡನೆ ನೇರವಾಗಿ ಮಾತನಾಡುತ್ತಿರಲಿಲ್ಲ. ಅವರು ಬಹಳ ಚೌಕಾಸಿ ಮಾಡುತ್ತಾ ಕಿರಿಕಿರಿ ಮಾಡುತ್ತಿದ್ದರು. ಆ ವ್ಯಕ್ತಿಗೆ ಎಷ್ಟು ಹಣ ಕೊಡುತ್ತಿದ್ದರೆಂದರೆ ಅವನ ಶ್ರಮದ ಬೆಲೆಗಿಂತಲೂ ಮಣ್ಣಿನ ಬೆಲೆ ಯಾವಾಗಲೂ ಕಡಿಮೆಯೇ ಇರುತ್ತಿತ್ತು. ಗಿರಾಕಿಗಳೊಂದಿಗೆ ಅವನ ಸಂಭಾಷಣೆ ಕೆಲವಾರಿ ಹೀಗಿರುತ್ತಿತ್ತು. "ಏ ಮಿಯಾ ಮಣ್ಣು ಖುದಾನ ಕೊಡುಗೆ... ಬರೇ ಅಗೆಯಲಿಕ್ಕಾಗಿ ಇಷ್ಟು ಬೆಲೆಯೇ...

"ಯಜಮಾನರೇ ಈಚೆಗೆ ಮಣ್ಣು ಎಲ್ಲಿ ಸಿಗುತ್ತೆ? ಇರೋ ಸ್ವಲ್ಪ ಭೂಮಿ ಮೇಲೂ ಜನ ಆಕ್ರಮಣ ಮಾಡಿದಾರೆ. ಎಲ್ಲಿ ನೋಡಿದರೂ ಮನೆ, ಮಳಿಗೆಗಳು ತೋಟಗಳು, ಗದ್ದೆ ಭೂಮಿಗಳು ಕಣಜಗಳು ತುಂಬಿವೆ. ನಿಮ್ಮೆಲ್ಲರಿಂದ ಮಣ್ಣು ದಿನೇದಿನೇ ದೂರವಾಗುತ್ತಿದೆ. ರಾತ್ರಿ ಹಗಲು ನಡೆದು ಹೋಗ್ತೀನೆ. ಆಗಷ್ಟೇ ಒಂದು ಕತ್ತೆ ಹೊರೆಯ ಮಣ್ಣು ತರಲಿಕ್ಕಾಗುತ್ತೆ.

"ನೀನೇನು ತರೋದು? ನಿನ್ನ ಕತ್ತೆ ಹೊತ್ತು ತರುತ್ತೆ...

"ಕತ್ತೆ ಏನು ಬಿಟ್ಟಿ ಬರೋದಿಲ್ಲ ಯಜಮಾನರೇ ಅಲ್ಲದೆ ಕತ್ತೆಯೂ ಏನಾದ್ರೂ ತಿನ್ನುತ್ತಲ್ಲವೇ!"

"ನೀನು ತಿನ್ನುತ್ತೀ ನಿನ್ನ ಪರಿವಾರ ತಿನ್ನುತ್ತದೆಂಬುದನ್ನೇಕೆ ನೀನು ಒಪ್ಕೊಳ್ಳೋದಿಲ್ಲ? ಈ ಬಿಟ್ಟಿ ಮಣ್ಣಿನಿಂದ ನೀನು ಪೇರಿಸಿಡುವ ಅರ್ಜಿತವನ್ನು ಬರಲಿರುವ ನಿನ್ನ ಏಳು ಸಂತತಿಗಳೂ ತಿನ್ನುತ್ತವೆ!"

"ಎಂಥಾ ಮಾತಾಡ್ತೀರಿ ಯಜಮಾನರೇ! ಮಣ್ಣನ್ನು ಮಾರಿ ಸಿಗುವುದಾದರೂ ಏನು? ಖುದಾನ ಆಣೆ, ಒಂದು ಹೊತ್ತಿನ ರೊಟ್ಟಿ ಹೊಂದಿಸೋದೂ ಬಹಳ ಕಷ್ಟವಾಗುತ್ತಿದೆ."

"ಆದರೆ ನಾವು ಹೇಳಿದ ಬೆಲೆಯನ್ನಷ್ಟೇ ನಾವು ಕೊಡೋದು. ಇಷ್ಟವಿದ್ದಲ್ಲಿ ನಾಲ್ಕಾರು ಅಳತೆ ಮಣ್ಣು ಹಾಕು. ಇಲ್ಲದಿದ್ದಲ್ಲಿ ನಿನ್ನ ಕತ್ತೆಯನ್ನು ಮುಂದೆ ಹೊಡೆದುಕೊಂಡು ಹೋಗು."

ಅಸಹಾಯಕನಾಗಿ ಆ ವ್ಯಕ್ತಿ ಬಹಳ ಕಡಿಮೆ ಬೆಲೆಗೆ ಮಣ್ಣನ್ನು ಮಾರಿಬಿಡುತ್ತಿದ್ದ. ಮುಂದೆಯೂ ಇಂತಹ ಗಿರಾಕಿಗಳೇ ಸಿಗುವುದೆಂದು ಅವನಿಗೆ ತಿಳಿದಿತ್ತು. ಅಲ್ಲದೆ ತನ್ನಂತೆಯೇ ತನ್ನ ಗಿರಾಕಿಗಳೂ ಬಡವರೆಂಬುದೂ ಅವನಿಗೆ ಗೊತ್ತಿತ್ತು. ಅಲ್ಲದಿದ್ದಲ್ಲಿ ಅವರ ಮನೆ ಮಣ್ಣಿನದೇಕೆ ಆಗಿರುತ್ತಿತ್ತು? ಅವರ ಮನೆಗಳಲ್ಲಿ ಮಣ್ಣಿನ ಒಲೆಗಳೇಕೆ ಇರುತ್ತಿದ್ದವು?

ಆದರೆ ಆ ಬಡವ ಬಜಾರಿನಲ್ಲಿ ಗೋದಿ ಹಿಟ್ಟು, ಬೆಳೆಯನ್ನು ಕೊಂಡುಕೊಳ್ಳಲು ಹೋದಾಗ ಅವನಿಗೆ ಅಳುವೇ ಬಂದು ಬಿಡುತ್ತಿತ್ತು. ಗೋದಿ ಹಿಟ್ಟು, ಬೇಳೆ ಬೆಲೆಗಳು ಪ್ರತಿದಿನ ಮೇಲೇರಿ ಹೋಗುತ್ತಿದ್ದವು. ತನ್ನ ಕಠಿಣ ಪರಿಶ್ರಮದ ಆದಾಯದಿಂದ, ತನ್ನ ಮಕ್ಕಳಿಗೆ ಒಂದು ಹೊತ್ತಿನ ಹೊಟ್ಟೆ ತುಂಬುವಷ್ಟು ಗೋದಿ, ಬೇಳೆಗಳನ್ನು ಸಹ ಖರೀದಿಸಲು ಆ ವ್ಯಕ್ತಿಗೆ ಸಾಧ್ಯವಾಗುತ್ತಿರಲಿಲ್ಲ.

ಆದರೂ ಆ ವ್ಯಕ್ತಿ ಹೇಗೋ ತಾಳ್ಮೆಯಿಂದ

ಬದುಕುತ್ತಿದ್ದ. ತನ್ನ ಬದುಕು ಹೀಗೇ ಸಾಗಿ ಹೋಗುತ್ತದೆಂಬ ಸೂಕ್ತ ನಂಬಿಕೆಯೂ ಅವನಿಗೆ ಬಂದು ಬಿಟ್ಟಿತ್ತು. ಆದರೆ ಒಂದು ದಿನ ಅವನು ಪಟ್ಟಣದ ಹೊರಗ ಬಂದು ನಿರ್ಜನ ಯುಕ್ತ ಸ್ಥಳದಲ್ಲಿ ಮಣ್ಣು ಅಗೆಯುತ್ತಿದ್ದಾಗ ಆ ಭೂಮಿಯ ಮಾಲಿಕ ಬಂದೆರಗಿ, "ಓಹೋ ಇಷ್ಟು ದಿನ ನನ್ನ ಜಮೀನಿನಲ್ಲಿ ಮಣ್ಣು ಅಗೆಯುತ್ತಿದ್ದವ ನೀನೇ! ನಾನಿಲ್ಲಿ ಮನೆ ಕಟ್ಟಿಸಬೇಕೆಂದಿದ್ದೇನೆ. ಆದರೆ ನೀನು ಇಲ್ಲಿ ಇಷ್ಟು ಆಳವಾದ ಹಳ್ಳಗಳನ್ನು ತೋಡಿ ಇಟ್ಟಿದ್ದೀಯೆ. ನಾನು ಬಹಳ ದಿನಗಳಿಂದ ನಿನ್ನನ್ನು ಹುಡುಕುತ್ತಿದ್ದೆ. ಮಗನೆ! ಕಡೆಗೆ ಸಿಕ್ಕಿಬಿದ್ದೆ" ಎಂದ.

ಆ ವ್ಯಕ್ತಿ ಬಹಳ ಹೆದರಿ ನಡುಗತೊಡಗಿದ. "ಒಡೆಯರೇ ಈ ಜಮೀನು ನಿಮ್ಮದೆಂದು ನನಗೆ ತಿಳಿದಿರಲಿಲ್ಲ. ನಾನು ಈ ಜಾಗ ಖಾಲಿ ಬಿದ್ದಿದೆಯೆಂದೇ ತಿಳಿದಿದ್ದೆ. ಇನ್ನು ಮೇಲೆ ಇಲ್ಲಿಗೆ ಬರೋದಿಲ್ಲ. ಈ ಸಾರಿ ಕ್ಷಮಿಸಿಬಿಡಿ."

ಜಮೀನಿನ ಮಾಲಕ, "ಪ್ಹಾ ಪ್ಹಾ ಪ್ರತಿದಿನ ನನ್ನ ಮಣ್ಣು ಕದಿಯುತ್ತಿದ್ದೆ. ಇವತ್ತು ಏನೂ ತಿಳಿಯದವನಂತೆ ನಟಿಸುತ್ತಿಯಾ?" ಎಂದ.

"ನಾನು ಕಳ್ಳನಲ್ಲ ಒಡೆಯರೇ ನಾನು ಬಹಳ ಬಡವ. ಮಣ್ಣು ಮಾರಿ ಜೀವನ ನಡೆಸ್ತೇನೆ."

"ನನಗೇನೂ ಗೊತ್ತಿಲ್ಲ. ನಾನು ನಿನ್ನನ್ನು ಪೋಲೀಸರಿಗೆ ಒಪ್ಪಿಸುತ್ತೇನೆ."

"ಸತ್ತು ಹೋಗ್ತೇನೆ ಒಡೆಯರೇ ನನ್ನ ಮಕ್ಕಳು ನಾಶವಾಗಿಬಿಡ್ತಾರೆ. ನನ್ನನ್ನು ಬಿಟ್ಟು ಬಿಡಿ."

"ನಾನು ನಿನ್ನನ್ನು ಒಂದೇ ಶರತ್ತಿನ ಮೇಲೆ ಬಿಡ್ತೇನೆ. ನೀನು ಇಲ್ಲಿಂದ ಎಷ್ಟು ಮಣ್ಣನ್ನು ತೆಗೆದುಕೊಂಡು ಒಯ್ದಿದ್ದೆಯೋ ಅಷ್ಟನ್ನೂ ತಂದು ಈ ಹಳ್ಳಗಳನ್ನು ತುಂಬಿಬಿಡು."

ಆ ಮಣ್ಣನ್ನೆಲ್ಲಾ ಮಾರಿ ತಿಂದು ಬಿಟ್ಟಿದ್ದೇನೆ. ಒಡೆಯರೇ! ಈಗ ಎಲ್ಲಿಂದ ಮತ್ತೆ ತರಲಿ?

"ನನಗೇನು ಗೊತ್ತು? ಆದರೆ ಈ ಹಳ್ಳಗಳನ್ನು ನೀನು ಮುಚ್ಚಲೇಬೇಕು. ಮನೆ ಕಟ್ಟುವ ಮುಂಚೆ. ಈ ಜಾಗಗಳನ್ನು ಸಮತಲ ಮಾಡಬೇಕು. ನೀನು ಮಾಡದಿದ್ದಲ್ಲಿ ನಾನು ಇದಕ್ಕಾಗಿ ಹಣ ಖರ್ಚು ಮಾಡಬೇಕಾಗುತ್ತೆ."

"ಸ್ವಾಮಿ, ನೀವು ಒಡೆಯರು, ಹಣ ಉಳ್ಳವರು ಲಕ್ಷ ಲಕ್ಷಗಳ ಮನೆ ಕಟ್ಟುತ್ತೀರಿ. ಅಲ್ಲಾನ ದಯೆ ಇರಲಿ, ಈ ಜಮೀನನ್ನು ಸಮಮಾಡಲು ನಾಲ್ಕಾರು ಕತ್ತೆಯಷ್ಟು ಮಣ್ಣನ್ನು ಹಾಕಿಸುವುದು ನಿಮಗೆ ಕಷ್ಟವಾಗಲಿಕ್ಕಿಲ್ಲ. ನಾನು ಈ ಹಳ್ಳಗಳನ್ನು ಮುಚ್ಚಲು ತೊಡಗಿದೆನೆಂದರೆ ಮಣ್ಣು ತರಲಿಕ್ಕೆ ಬಹಳ ದಿನಗಳಾಗುತ್ತವೆ. ಅಷ್ಟರೊಳಗೆ ನನ್ನ ಮಕ್ಕಳು ಹಸಿವಿನಿಂದ ಸಾಯುತ್ತವೆ. ಅಷ್ಟೆ..."

"ನಾನು ಏನನ್ನೂ ಕೇಳಲು ತಯಾರಿಲ್ಲ. ಮಣ್ಣು ತರಲಾಗದಿದ್ದರೆ ಹಳ್ಳ ಮುಚ್ಚಲು ಆಗುವಷ್ಟು ಹಣ ಕೊಟ್ಟುಬಿಡು."

"ಹಣ ಎಲ್ಲಿಂದ ತರಲಿ ಸಾಹುಕಾರರೇ? ನನ್ನ ಹತ್ರ ಒಂದು ಒಡಕಲು ಕವಡೆಯೂ ಇಲ್ಲ."

"ಈ ಕತ್ತೆ ಇದೆಯಲ್ಲ, ಅದನ್ನು ಮಾರಿಬಿಡು."

"ಈ ಕತ್ತೆಯೇ ನನ್ನ ದುಡಿಮೆಯ ಆಧಾರ ಸಾಹುಕಾರರೇ, ಇದಿಲ್ಲದೆ ನನ್ನ ದಂಧೆಯನ್ನು ಹೇಗೆ ಮಾಡಲಿ?"

ಆದರೆ ಆ ಜಮೀನಿನ ಮಾಲೀಕ ಆ ವ್ಯಕ್ತಿಯ ಒಂದು ಮಾತನ್ನೂ ಕೇಳಲಿಲ್ಲ. ಅವನ ಮೇಲೆ ದಯೆ ತೋರಿಸುವ ಬದಲಾಗಿ ಕೋಪಗೊಂಡು ಕಳ್ಳತನದ ಆರೋಪ ಹೊರಿಸಿ ಅಪರಾಧಕ್ಕೆ ದಂಡ ಹಾಕಿಸುವುದಾಗಿ ಬೆದರಿಸಲಾರಂಭಿಸಿದ. ಕೊನೆಗೂ ಆ ವ್ಯಕ್ತಿ ತನ್ನ ಕತ್ತೆ ಮಾರಿ ಆ ಜಮೀನಿನ ಹಳ್ಳ ಮುಚ್ಚಲು ಹಣ ತೆತ್ತ.

ಈಗವನು ಗುದ್ದಲಿ ಬಾಣಲೆನ್ನಷ್ಟೇ ಹಿಡಿದು ಮಣ್ಣು ಅಗೆಯಲು ಹೋಗುತ್ತಾನೆ. ಪಟ್ಟಣದಿಂದ ಬಲು ದೂರ ಹೋಗಿ ನಿರ್ಜನಯುಕ್ತ ಸ್ಥಳವನ್ನು ಹುಡುಕಿ ಯಾರೂ ನೋಡದ ಸ್ಥಳಗಳನ್ನು ಮಾತ್ರ ಆಯ್ದುಕೊಳ್ಳುತ್ತಾನೆ. ಈಗ ಅವನು ನಿಜವಾಗಿಯೂ ಕಳ್ಳನಂತೆ ಹೆದರುತ್ತಾ ಬೇಗ ಬೇಗ ಮಣ್ಣು ಅಗೆದು ಬಾಣಲೆಯ ತುಂಬಾ ಮಣ್ಣು ತುಂಬಿ ತಲೆಯ ಮೇಲಿಟ್ಟುಕೊಂಡು ಪಟ್ಟಣಕ್ಕೆ ತಂದು ಮಾರುತ್ತಾನೆ. ಇದರಲ್ಲಿ ಅವನಿಗೆ ಬಹಳ ಕಷ್ಟವಾಗುತ್ತಿತ್ತು. ಏಕೆಂದರೆ ಬಾಣಲೆಯಲ್ಲಿ ಮಣ್ಣು ಹೆಚ್ಚು ಇರು

ತ್ತಿತ್ತು. ಘಾಟಿನಿಂದ ಅವನ ಗೋಣು ಹುಣ್ಣುಮಯವಾಗುತ್ತಿತ್ತು. ಅಷ್ಟಲ್ಲದೆ ಕಡಿಮೆ ಮಣ್ಣು ತಂದರೆ ಅವನಿಗೆ ಒಂದು ತುತ್ತು ಕವಳ ಯನ್ನು ಕೊಳ್ಳುವುದೂ ಕಷ್ಟವಾಗುತ್ತಿತ್ತು. ಆದರೆ ಆ ಮನುಷ್ಯ ಧೈರ್ಯಗುಂದದೆ ಹೇಗೋ ಜೀವನ ನಿಭಾಯಿಸುತ್ತಿದ್ದ.

ಕೆಲ ದಿನಗಳ ನಂತರ ಅವನಿಗೆ ಮತ್ತೊಬ್ಬ ಸಾಹುಕಾರ ಸಿಕ್ಕಿದ. ಅವನು ಹೋಟೆಲಿ ನವನಂತ ಪಕ್ಕ ನಿಲ್ಲುವನೇ ಆಗಿದ್ದ. ಅವನು ಅನಿರೀಕ್ಷಿತವಾಗಿ ಬಂದು ಆ ವ್ಯಕ್ತಿಯ ಬೆನ್ನ ಮೇಲೆ ಕೋಲಿನಿಂದ ಹೊಡೆದು ಅವನ ಗುದ್ದಲಿ ಬಾಣಲೆಗಳನ್ನು ಕಿತ್ತುಕೊಂಡ. ಆ ವ್ಯಕ್ತಿ ಬಹಳ ಅತ್ತು ಹಲುಬಿದ. ಆ ಜಾಗದ ಮಾಲೀಕನ ಸೈನಿಕರೊಂದಿಗೆ ಅವನಿಗೆ ಮತ್ತೆರಡು ಛಡಿ ಏಟು ಕೊಡುವ ಬೆದರಿಕೆ ಹಾಕಿದ. "ಮತ್ತೊಂದಾದರೂ ನಿನ್ನನ್ನು ಇಲ್ಲಿ ಕಂಡರೆ ನಿನ್ನ ಕಾಲು ಮುರಿದು ಬಿಡುತ್ತೇನೆ."

ಆ ವ್ಯಕ್ತಿ ಅಳುತ್ತಾ ಖಾಲಿ ಕೈಯಲ್ಲಿ ಪಟ್ಟಣಕ್ಕೆ ಹಿಂದಿರುಗಿ ಬಂದ. ಉಳಿದದ್ದಾದರೂ — ಬರೀ ಉಗುರಿನಿಂದಲಾದರೂ ಸರಿ — ಸ್ವಲ್ಪ ಮಣ್ಣು ಕೆರೆದು ಎರಡೂ ಕೈಗಳಲ್ಲಿ ಎಷ್ಟು ತರಲು ಸಾಧ್ಯವೋ ಅಷ್ಟನ್ನೇ ತಂದು ಪಟ್ಟಣದಲ್ಲಿ ಮಾರುವ ಯೋಚನೆಯೂ ಆ ವ್ಯಕ್ತಿಯ ಮನಸ್ಸಿನಲ್ಲಿ ಮೂಡಿತು. ಆದರೆ ಅವನಿಗೆ ತನ್ನ ಆಲೋಚನೆ ಮೂರ್ಖತನದ್ದೆನಿಸಿತು. ಅಷ್ಟಕ್ಕೂ ಇಷ್ಟು ಕಡಿಮೆ ಮಣ್ಣು ಮಾರಾಟವಾಗುವುದಾದರೂ ಎಲ್ಲಿ? ಮಾರಾಟವಾದರೂ ಅದಕ್ಕೆ ಸಿಗುವುದಾದರೂ ಎಷ್ಟು ಬೆಲೆ?

ದಿನ ಕಳೆದಿದ್ದವು. ಹಬ್ಬ ಹತ್ತಿರವಿತ್ತು. ಒಂದು ದಿನ ಆ ವ್ಯಕ್ತಿ ಪಟ್ಟಣಕ್ಕೆ ಬಂದು ನಾಲ್ಕು ಬೀದಿಗಳಲ್ಲಿ ಮೌನವಾಗಿ ತಲೆ ತಗ್ಗಿಸಿ ನಡೆಯುತ್ತಿದ್ದ. ದಾರಿಯಲ್ಲಿ ಗಿರಾಕಿಗಳು ಅವನನ್ನು ಕೇಳುತ್ತ, "ಏಕೆ ಮಿಯಾ? ಮಣ್ಣು ಎಲ್ಲಿ? ಇವತ್ತು ಹಬ್ಬದ ದಿನ. ಮನೆ ಅಂಗಳವನ್ನು ಸಾರಿಸಬೇಕು. ಬೆಳಗಿನಿಂದ ನಿನ್ನನ್ನೇ ನಿರೀಕ್ಷಿಸುತ್ತಿದ್ದೇವೆ. ನೀನು ಈಗ ಬರುತ್ತಿದ್ದೀ, ಅದೂ ಬರಿಗೈಯಲ್ಲಿ" ಎಂದರು. ಅವನಿಗೆ ಅಂದು ಹಬ್ಬ ಎಂಬುದೂ ನೆನಪಿರಲಿಲ್ಲ. ಆದರೆ ಹಬ್ಬದ ಮಾತು ಕೇಳಿ ಅವನ ಮನಸ್ಸಿನಲ್ಲಿ ವೇದನೆಯುಂಟಾಯಿತು. ಹಬ್ಬದ ದಿನ ಅವನ ಮಣ್ಣು ಚಿಟಿಕೆ ಹೊಡೆಯುವಷ್ಟರಲ್ಲಿ ಬಿಕರಿಯಾಗುತ್ತಿತ್ತು. ಹಣವೂ ಬಹಳ ಸಿಗುತ್ತಿತ್ತು. ಆದರೆ ಅಂದು ಹಬ್ಬದ ದಿನವಾಗಿತ್ತು. ಗಿರಾಕಿಗಳೂ ಕೇಳಿದಷ್ಟು ಬೆಲೆ ಕೊಡಲು ತಯಾರಿದ್ದರು. ಈಗ ಆತನ ಬಳಿ ಮಣ್ಣು ಇಲ್ಲ! ಕಣ್ಣು ಮಿಟುಕಿಸುತ್ತಾ ಅವನು ಗಿರಾಕಿಗಳತ್ತ ನೋಡುತ್ತಿದ್ದ.

ಒಬ್ಬ ಗಿರಾಕಿ ಕೇಳಿದ, "ಮಾತೇಕೆ ಆಡುತ್ತಿಲ್ಲ ಮಿಯಾ? ಮಣ್ಣನ್ನೇಕೆ ತಂದಿಲ್ಲ?"

"ನನ್ನನ್ನೇ ಖರೀದಿಸಿಕೊಳ್ಳಿ ಒಡೆಯರೇ! ನಾನೇ ಸ್ವತಃ ಮಣ್ಣಾಗಿಬಿಟ್ಟಿದ್ದೇನೆ" ಎಂದು ಆತ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ಜನರಿಗೆ ಅವನ ಮೇಲೆ ಅನುಕಂಪ ಮೂಡಿತು. ಅವನು ಮಣ್ಣಾಗಿ ಹೋದ ಕಥೆ ಕೇಳಿ ಎಲ್ಲರೂ ಮೌನಿಗಳಾದರು. ಹೇಳುವುದಾದರೂ ಏನನ್ನು? ಮಾಡುವುದಾದರೂ ಏನನ್ನು?

ಒಬ್ಬ ಮಹಿಳೆಗೆ ಅವನ ಮೇಲೆ ಬಹಳ ದಯೆ ಮೂಡಿತು. ಅವಳು ಸುಮ್ಮನೆ ಮನೆಗೆ ಹೋಗಿ ಹಬ್ಬಕ್ಕಾಗಿ ತಯಾರಿಸಿದ್ದರಲ್ಲಿ ಸ್ವಲ್ಪ ಪಕ್ವಾನ್ನ ಎಲೆಯಲ್ಲಿ ಸುರಿದುಕೊಂಡು ತಂದಳು. ಊಟವೇನೋ ಚೆನ್ನಾಗಿತ್ತು. ಆದರೆ ಅವನು ಅದಕ್ಕಾಗಿ ಚಾಚಿದ ಕೈಯನ್ನು ಹಿಂದೆಳೆದುಕೊಂಡು "ಮನೆಯಲ್ಲಿ ಮಕ್ಕಳು ಹಸಿವಿನಿಂದ ನರಳುತ್ತಿದ್ದಾರೆ. ನಾನಿಲ್ಲಿ ಊಟ ಮಾಡುವುದು ನನ್ನಿಂದ ಸಾಧ್ಯವಿಲ್ಲ ತಂಗೀ. ಸಾಧ್ಯವಾದಲ್ಲಿ ಇದನ್ನು ಕಟ್ಟಿಕೊಟ್ಟುಬಿಡು. ಮನೆಗೆ ತೆಗೆದುಕೊಂಡು ಹೋಗುತ್ತೇನೆ."

ಇದನ್ನು ಕೇಳಿ ಉಳಿದ ಹೆಂಗಸರಿಗೂ ಅನುಕಂಪ ಮೂಡಿತು. ಅವರೂ ತಮ್ಮ ತಮ್ಮ ಮನೆಗಳಿಂದ ಅಲ್ಪ ಸ್ವಲ್ಪ ಖಾದ್ಯಗಳನ್ನು ತಂದು ಎಲ್ಲವನ್ನೂ ಒಂದು ದೊಡ್ಡ ಪೊಟ್ಟಣದಲ್ಲಿ ಕಟ್ಟಿ ಆ ವ್ಯಕ್ತಿಯ ಕೈಗಿತ್ತರು. ಆತ ಅವರೆಲ್ಲರಿಗೂ ಧನ್ಯವಾದ ಅರ್ಪಿಸಿ ತನ್ನ ಮನೆಗೆ ಹೋದ.

ಇಷ್ಟೊಂದು ರುಚಿಯಾದ ಊಟವನ್ನು ಆತನ ಪರಿವಾರ ಅನೇಕ ವರ್ಷಗಳಿಂದ ಮಾಡಿರ

ಲಿಲ್ಲ. ಪ್ರಸನ್ನರಾಗಿ ಎಲ್ಲರೂ ಆತನನ್ನು ಪ್ರಶ್ನಿಸ ತೊಡಗಿದರು. "ಇವತ್ತು ಅದೆಂಥ ಮಣ್ಣನ್ನು ಮಾರಿದಿರಿ? ಇಷ್ಟು ಒಳ್ಳೆಯ ಊಟ ತಿಂಡಿ ಹೇಗೆ ದೊರೆಯಿತು?" ಅವನು ನಡೆದುದ್ದೆಲ್ಲವನ್ನೂ ಹೇಳಿದ. "ಹಾಗಾದರೆ ನೀವು ದಿನಾಲೂ ನಿಮ್ಮನ್ನೇ ಮಾರಿ ಕೊಳ್ಳಿ ಹೊಟ್ಟೆ ತುಂಬ ಊಟ ಸಿಗುವುದಾದರೆ ಅದೃಷ್ಟವೇ ಸರಿ". ಅವನ ಪತ್ನಿ ತೃಪ್ತಳಾಗಿ ಬೆರಳು ನೆಕ್ಕುತ್ತಾ ನುಡಿದಳು.

ಮಾರನೇ ದಿನ ಆ ಮಣ್ಣಿನ ವ್ಯಕ್ತಿ ಮತ್ತೆ ಆ ಮಣ್ಣಿನ ಮನೆಯವರ ಹೆಂಗಸರು ಊಟ ಕೊಟ್ಟ ಸ್ಥಳಕ್ಕೆ ಬಂದ. ಅಲ್ಲಿಗೆ ಬಂದು ಒಂದು ಮರದ ಕೆಳಗಿದ್ದ ಕಟ್ಟೆಯ ಮೇಲೆ ಕುಳಿತು ಕೊಂಡು "ನಾನು ಮಣ್ಣು. ಈ ಮಣ್ಣನ್ನು ಖರೀದಿಸಲು ಯಾರಾದರೂ ಇದ್ದೀರಾ?" ಎಂದು ಕೂಗಿ ಹೇಳತೊಡಗಿದ.

ಆದರೆ ಪ್ರತಿದಿನವೂ ಹಬ್ಬವಾಗಿರುವುದಿಲ್ಲವಲ್ಲ, ಪ್ರತಿಕ್ಷಣವೂ ಜನರ ಮನದಲ್ಲಿ ದಯೆ ಉಂಟಾಗುವದಿಲ್ಲ! ಆ ವ್ಯಕ್ತಿ ಸಂಜೆಯವರೆಗೆ ಹಸಿವಿನಿಂದಲೇ ಕುಳಿತಿದ್ದ. ಯಾರೂ ನೀರು ಬೇಕೇ ಎಂದೂ ಕೇಳಲಿಲ್ಲ. ಅದಕ್ಕೆ ಬದಲಾಗಿ ನಿನ್ನೆ ದಯೆ ತೋರಿದ ಹೆಂಗಸರೂ ಇಂದು ಮುಖ ಕಿವುಚಿ "ಮಿಯಾನಿಗೆ ಬಿಟ್ಟಿ ಊಟ ಮಾಡುವ ಚಟ ಹಿಡಿದಿರುವಂತಿದೆ" ಎಂದರು. ಆದರೂ ಆ ವ್ಯಕ್ತಿ ಅಲ್ಲಿಂದ ಕದಲಲಿಲ್ಲ. ಹೋಗುವುದಾದರೂ ಎಲ್ಲಿಗೆ? ಮಾಡುವುದಾದರೂ ಏನನ್ನು ಅವನ ಬಳಿ ಕತ್ತೆಯೂ ಇಲ್ಲ -ಗುದ್ದಲಿ ಬಾಣಲೆ ಗಳು ಇಲ್ಲವೇ ಇಲ್ಲ. ಅಲ್ಲದೆ ಖುದಾನ ಸೃಷ್ಟಿಯಾದ ಮಣ್ಣು ಕೂಡ ಭೂಮಿಯ ಮಾಲಿಕರ ಸ್ವಂತ ಆಸ್ತಿ ಆಗಿಬಿಟ್ಟಿದೆ. ಅವನು ಕೈಯಿಂದಲೂ ಮಣ್ಣು ಅಗೆಯಲು ತಯಾರಿದ್ದ. ಆದರೆ ಜಮೀನಿನ ಮಾಲಿಕ ಬಂದು ಎಲ್ಲಿಯಾದರೂ ತನ್ನ ಕೈಯನ್ನೇ ಕಡಿದು ಹಾಕಿದರೆ ಎಂದು ಹೆದರುತ್ತಿದ್ದ.

ಸಂಜೆ ಕೆಲಸ ಮುಗಿಸಿಕೊಂಡು ಮೊಹಲ್ಲಾದ ಜನಗಳು ಹಿಂದಿರುಗುತ್ತಿದ್ದಾಗಲೂ ಆ ವ್ಯಕ್ತಿ ಮತ್ತೆ ಕಿರುಚತೊಡಗಿದ, "ಮಣ್ಣು ತಗೊಳ್ಳಿ ಮಣ್ಣು."

"ಎಂಥ ಮಣ್ಣು?" ಜನನಿರಾಶರಾಗಿ ಕೇಳಿದರು.

"ನಾನೇ ಮಣ್ಣು ನಾನೇ ಮಣ್ಣು."

"ಆದರೆ ನಿನ್ನನ್ನು ಸಾರಿಸಲಿಕ್ಕಾಗಲೀ ಮತ್ತಾವುದಕ್ಕಾಗಲೀ ಉಪಯೋಗಿಸಲು ಸಾಧ್ಯವಿಲ್ಲ. ನಿನ್ನನ್ನು ತೆಗೆದುಕೊಂಡು ಯಾರು ಏನು ಮಾಡಿಯಾರು?"

"ನನಗೆ ಅಗೆಯುವುದು ಗೊತ್ತು. ನನ್ನಿಂದ ಅಗೆತದ ಕೆಲಸ ಮಾಡಿಸಿಕೊಳ್ಳಿ."

"ತಮಾಷೆ ಏಕೆ ಮಾಡುತ್ತಿ ಮಿಯಾ? ನಿನ್ನಿಂದ ಅಗೆತದ ಕೆಲಸ ಮಾಡಿಸಿಕೊಳ್ಳಲು ನಮ್ಮ ಬಳಿ ಜಮೀನು ಆಸ್ತಿಗಳಲ್ಲಿವೆ? ನಮ್ಮ ಹತ್ರ ಹೊಲ ಇಲ್ಲ, ತೋಟ ಇಲ್ಲ, ಬಾವಿ ಕಾಲುವೆಗಳಿಲ್ಲ, ಕೆರೆ ಕಟ್ಟೆಗಳೂ ಇಲ್ಲ, ಅಗೆಸೋಣ ಅಂದ್ರೆ ಬೀಳಲಿರುವ ಮನೆ ಮಾತ್ರ ಇದೆಯಷ್ಟೇ ಅದರಲ್ಲಿ ಯಾವುದೇ ಖಜಾನೆ ಹುದುಗಿಲ್ಲ! ಅಗೆಯಬೇಕಾದಲ್ಲಿ ಬೇರೆಲ್ಲಾದರೂ ಹೋಗು."

ಮತ್ತ್ಯಾರೋ ಹೇಳಿದರು "ಕೂಲಿ ಕೆಲ್ಸದಾದು ಮಿಯಾ" ನಾವು ದಣಿದೋಯ್ತಾಗೆ. ಇಲ್ಲಿಗೆ ಬಂದು ಭಿಕ್ಷೆ ಬೇಡೋದಿಕ್ಕೆ ಕೂತ ಬಿಟ್ಟೆ. ಇದಕ್ಕಿಂತ ಒಳ್ಳೆಯದೊಂದ್ರೆ ಎಲ್ಲಿಯಾದರೂ ಹೋಗಿ ಕೆಲ್ಸ ಹುಡುಕು."

ಆ ವ್ಯಕ್ತಿ ಭಿಕ್ಷುಕನಾಗಿರಲಿಲ್ಲವಾದ್ದರಿಂದ ಅವನಿಗೆ ಬಹಳ ನಾಚಿಕೆಯಾಯಿತು. ಅವನು ಪ್ರಮಾಣ ಸಂಪಾದನೆಯನ್ನೇ ಇಷ್ಟಪಡುತ್ತಿದ್ದ. ನಾಚಿಕೆಯಿಂದ ಅವನು ಅಲ್ಲಿಂದೆದ್ದು ಹೊರಟ.

ಕೆಲಸದ ಹುಡುಕಾಟದಲ್ಲಿ ಆ ವ್ಯಕ್ತಿ ಅಲೆಯುತ್ತಾ ಒಂದು ಸ್ಮಶಾನದ ಬಳಿ ನಡೆಯುತ್ತಿದ್ದಾಗ ಅಲ್ಲಿ ಅವನಿಗೆ ಒಬ್ಬ ವ್ಯಕ್ತಿ ಹೆಣ ಹೂಳಲು ಹಳ್ಳ ತೊಡುತ್ತಿದ್ದುದು ಕಂಡಿತು. ಅವನ ಬಳಿಗೆ ಹೋಗಿ "ಏನಣ್ಣ ನನಗೂ ಈ ಕೆಲಸ ಸಿಗುವುದೇ?" ಎಂದು ಕೇಳಿದ.

ಹಳ್ಳ ತೋಡುತ್ತಿದ್ದ ವ್ಯಕ್ತಿ ವ್ಯಂಗ್ಯವಾಗಿ, "ಮಿಯಾ ನೀನೇ ಸಾಯುವಂತಾಗಿದ್ದಿ. ನಿನ್ನ ಹೆಣ ಹೂಳಲು ನೀನೇ ಹಳ್ಳ ತೊಡಬೇಕೆಂದಿದ್ದೀಯೇನು?" ಎಂದ.

ಆ ವ್ಯಕ್ತಿ ಒಂದು ಕ್ಷಣ ಯೋಚಿಸಿ "ಇಲ್ಲ ನನ್ನನ್ನು ಬದುಕಿದ್ದಂತೆಯೇ ಕೊಂದು ಹಾಕಿದ ಆ ಎಲ್ಲ ಜಮೀನಿನ ಮಾಲಿಕರ ಹೆಣಗಳನ್ನು ಹೂಳಲು ಹಳ್ಳ ತೊಡಬೇಕೆಂದಿದ್ದೇನೆ" ಎಂದ. ✦

ಇದು ಅವರ
ಅಮೃತ ಮಹೋತ್ಸವ ವರ್ಷ

ತಪೋವನದ ಮಹಾ ತಪಸ್ವಿ

ಎನ್. ಎಸ್. ಬಿ.

ಋಷ್ಯಾಶ್ರಮಗಳು ತಪೋವನಗಳು ವೇದ ಕಾಲದಲ್ಲಿ ಮಾತ್ರ ಇದ್ದವು ಎಂದು ಕಲ್ಪನೆಯಾಗಿತ್ತು. ಆದರೆ ಈಗಲೂ ಅಂಥ ತಪೋವನಗಳಿವೆ. ಅದೇಕೆ? ಧಾರವಾಡದಿಂದ ಮೂರು ಕಿಲೋಮೀಟರ್ ದೂರದಲ್ಲಿಯೇ ಅಂಥದೊಂದು ತಪೋವನವಿದೆ.

ಅದು ಇದೆ ಎಂದು ಎಂದಿನಿಂದಲೂ ಗೊತ್ತಿದ್ದರೂ ನಾನು ಅದನ್ನು ಮೊದಲು ನೋಡಿದ್ದು ಒಂದೆರಡು ವರ್ಷದ ಹಿಂದೆ ಮಾತ್ರ, ನನ್ನ ಗುರಿಯಿಲ್ಲದ ಅಲೆದಾಟದ ಸಂದರ್ಭದಲ್ಲಿ! ಅದೊಂದು ಯೋಗಾಯೋಗ! ಅದು ಮಳೆಗಾಲದ ಒಂದು ಸಂಜೆ. ಮಳೆಯಲ್ಲಿ ಮಡಿಯಾಗಿ ನಿಂತ ವನರಾಶಿಯೆಲ್ಲ ಹೊಂಬಣ್ಣದ ಎಳೆ ಬಿಸಿಲಿನಲ್ಲಿ ನಳಿನಳಿಸುತ್ತಿತ್ತು. ತಪೋವನದ ಮಹಾದ್ವಾರದ ಬಳಿಯಲ್ಲಿಯ ಹೊಲದಲ್ಲಿ ಒಕ್ಕಲಿಗ ಮಕ್ಕಳಿಬ್ಬರು ಯಾವುದೋ ಕೆಲಸದಲ್ಲಿ ಮಗ್ನರಾಗಿದ್ದರು. ಅಲ್ಲಿಯ ಧ್ಯಾನಮಂದಿರದಲ್ಲಿ ಸೌಮ್ಯ ಶಾಂತಿ ನೆಲೆಸಿತ್ತು. ಅದೇ ಶಾಂತಿ ಅದೇ ಚೆಲುವು ಅಲ್ಲಿ ಎಲ್ಲೆಲ್ಲಿಯೂ ತನ್ನ ಮೋಡಿಯನ್ನು ಹರಡಿತ್ತು. ಪುಣ್ಯಾಗಮನವೊಂದರ ನಿರೀಕ್ಷೆಯಲ್ಲಿ ತಪೋವನವೆಲ್ಲ ಪುಲಕಿತವಾದಂತೆ ಸ್ಪಂದಿಸುತ್ತಿತ್ತು. ಆಗ ಆ ತಪೋವನದ ಮಹಾತಪಸ್ವಿ ಶ್ರೀ ಕುಮಾರ ಸ್ವಾಮಿಗಳು ದೂರ ದೂರದಿಂದ ಬಂದು ದಾರಿ ಕಾಯುತ್ತ ಕುಳಿತ ತಮ್ಮ ಭಕ್ತವೃಂದಕ್ಕೆ ದರ್ಶನವನ್ನೀಯುವ ಅಮೃತ ನಿಮಿಷವದು! ದರ್ಶನಾಕಾಂಕ್ಷಿ ಭಕ್ತರನ್ನು ಹಿಂಬಾಲಿಸಿ ನಾನೂ ಹೊರಟೆ. ಅಲ್ಲಿಯೇ ತೋಟವೊಂದರ ಮಧ್ಯೆ ಕಾಲುದಾರಿಯೊಂದಿಗೆ ಅದರಲ್ಲಿಂದ ಮುಂದೆ ಸಾಗಿದರೆ ಸ್ವಾಮಿಗಳು ದರ್ಶನ ನೀಡುವ ಪಾವನ ತಾಣವನ್ನು ತಲಪುತ್ತೇವೆ. ಅಲ್ಲಿಯ ಒಂದು ಸುಖಾಸೀನದ ಮೇಲೆ ಸ್ವಾಮಿಗಳು ಕುಳಿತಿದ್ದರು, ಸುತ್ತಲೂ ಹಲವಾರು ಭಕ್ತರೂ ಕುಳಿತಿದ್ದರು. ತಮ್ಮ ತಮ್ಮ ತೊಂದರೆಗಳನ್ನು ಕಷ್ಟಕಾರ್ಪಣ್ಯಗಳನ್ನು ತೋಡಿಕೊಳ್ಳುತ್ತಿದ್ದರು. ಸ್ವಾಮಿಗಳು ಅವುಗಳಿಗೆಲ್ಲ ಸಮಾಧಾನಚಿತ್ತರಾಗಿ ಪರಿಹಾರಗಳನ್ನು ಒದಗಿಸುತ್ತ ಇದ್ದರು. ಮಂದಸ್ಮಿತವೊಂದು ಅವರ ಮುಖಕಾಂತಿಯನ್ನು ಇಮ್ಮಡಿಯಾಗಿ ಹೆಚ್ಚಿಸಿತ್ತು. ತಿಳಿಯಾದ ಕಣ್ಣುಗಳಲ್ಲಿ

ಮಿಳಿನಗೆಯೊಂದು ಬೆಳಗುತ್ತಿತ್ತು. ನೀಳವಾದ ಅವರ ಕೇಶರಾಶಿ ತನ್ನ ಕಪ್ಪನ್ನು ಇನ್ನೂ ಕಾಯ್ದು ಕೊಂಡಿತ್ತು. ಅವರ ಇರುವಿಕೆಯಲ್ಲೆಲ್ಲ ಒಂದು ಬಗೆಯ ಓರಣವಿತ್ತು. ಶುಚಿರ್ಭೂತತನವಿತ್ತು. ಶುಭ್ರ ಕಾವಿ ಪರಿಧಾನವು ಅವರ ವ್ಯಕ್ತಿತ್ವವನ್ನು ಪ್ರಕಾಶಮಯವಾಗಿಸಿತ್ತು. ಇದು ಸ್ವಾಮಿಗಳನ್ನು ನಾನು ಮೊದಲ ಸಲ ಕಂಡ ನೋಟ.

ಈಗ ನಾನು ಹೋದದ್ದು 'ಕಸ್ತೂರಿ'ಯ ಸಂದರ್ಶಕನಾಗಿ ತಪೋವನದ ತಂಪಿಗೆ ಕಸ್ತೂರಿಯ ಕಂಪನ್ನು ತೆಗೆದುಕೊಂಡು ಹೋಗಿದ್ದೆ. ಮಧ್ಯಾಹ್ನದ ನಾಲ್ಕು ಗಂಟೆಗೆ ಬಂದು ತಪೋವನಕ್ಕೆ ತಮ್ಮ ಕಾರಿನಲ್ಲಿ ಕರೆದುಕೊಂಡು ಹೋದವರು ಡಾ. ಎನ್. ಎಂ. ಹತ್ತಿಕಾಳ ಅವರು. ಅಲ್ಲಿ ನಮ್ಮನ್ನು ಮೊದಲು ಸ್ವಾಗತಿಸಿದವರು ರಾಜಶೇಖರ ಮಡಕೆಯವರು. ಇವರು ಸೊಲ್ಲಾಪುರದವರು, ಶ್ರೀಮತಿ ಜಯದೇವಿತಾಯಿ ಲಿಗಾಡೆಯವರ ಸಹೋದರರು. ಅವರು ಮೊದಲು ಹೊಸದಾಗಿ ಏಳುತ್ತಿರುವ ಸಾಮೋರು ಕಟ್ಟಡವನ್ನು ತೋರಿಸಿದರು. ಸ್ವಾಮಿಗಳೊಂದಿಗೆ ಸಂದರ್ಶನ ಸಮಯವನ್ನು ಪಡೆದಿರುವದಾಗಿಯೂ ಹೇಳಿದರು. ನಾವೆಲ್ಲ – ನಾನು, ರಾಜಶೇಖರ ಮಡಕೆ ಮತ್ತು ಡಾ. ಹತ್ತಿಕಾಳ – ಸ್ವಾಮಿಗಳ ದರ್ಶನಕ್ಕೆ ಹೊರಟೆವು. ಧ್ಯಾನಮಂದಿರದ ಕೋಣೆಯೊಂದರಲ್ಲಿ ಕುಳಿತುಕೊಂಡೆವು. ಕೆಲವೊಂದು ಕ್ಷಣಗಳಲ್ಲಿಯೆ ಸ್ವಾಮಿಗಳೂ ಬಂದು ತಮ್ಮ ಪೀಠದ ಮೇಲೆ ಆಸೀನರಾದರು. ಅವರ ವೈಯಕ್ತಿಕ ಜೀವನದ ಬಗ್ಗೆ ಸಂನ್ಯಾಸಪೂರ್ವ ಕಾಲದಲ್ಲಿಯ ಅವರ ರಾಜಕೀಯ ಚಟುವಟಿಕೆಗಳ ಬಗ್ಗೆ ಇಂದಿನ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಅವರ ಆಧ್ಯಾತ್ಮಿಕ ಅನುಭವಗಳ ಬಗ್ಗೆ ನಾನು ಅನೇಕ ಪ್ರಶ್ನೆಗಳನ್ನು ಕೇಳಿದೆ. ಅವನ್ನೆಲ್ಲ ಸ್ವಾಮಿಗಳು ನಗುನಗುತ್ತ ಸಮಾಧಾನದಿಂದ ಆತ್ಮೀಯವಾಗಿ ಉತ್ತರಿಸಿ ಅನುಗ್ರಹಿಸಿದರು.

೧೯೨೪. ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದ ವರ್ಷ. ಮಹಾತ್ಮಾ ಗಾಂಧಿ ಅವರ ಅಧ್ಯಕ್ಷರು. ಆಗ ಸ್ವಾಮಿಗಳು ಇನ್ನೂ ೧೫ ವರುಷದ ಶಾಲಾ ವಿದ್ಯಾರ್ಥಿಯಾಗಿದ್ದರು. ಬೆಳಗಾಂವಿಯ ಗಿಲಗಂಚಿ–ಅರಟಾಳ ಹೈಸ್ಕೂಲಿನಲ್ಲಿ ಓದುತ್ತಿದ್ದರು. ಈ ಕಾಂಗ್ರೆಸ್ ಅಧಿವೇಶನ ಅದರಲ್ಲಿ ಸ್ವಾಭಾವಿಕವಾಗಿ ಆಗ ಮೂಲತಃ ರಾಷ್ಟ್ರೀಯ ಪ್ರಜ್ಞೆಗೆ ಚಾಲನೆಯನ್ನೂ ಹೆಚ್ಚಿನ ಸ್ಫೂರ್ತಿಯನ್ನೂ ಒದಗಿಸಿತು. ಗಾಂಧಿಯವರ ಋಜುತ್ವ ಹಾಗೂ ರಾಜಕೀಯದಲ್ಲಿಯ ಅವರ ಧಾರ್ಮಿಕತೆ ಸ್ವಾಮಿಜಿಯ ಮೇಲೆ ಬಹಳ ಪ್ರಭಾವವನ್ನು ಬೀರಿದಂತೆ ತೋರುತ್ತದೆ. ಸ್ವಾಮಿಜಿ ತಮ್ಮ ಮಾತುಗಳಲ್ಲಿ ಗಾಂಧಿಯವರ ಉಲ್ಲೇಖವನ್ನು ಪದೇ ಪದೇ ಗೌರವದಿಂದ ಮಾಡಿದರು. ಈ ಕಾಂಗ್ರೆಸ್ ಅಧಿವೇಶನ ಸಂದರ್ಭದಲ್ಲಿ ಸ್ವಾಮಿಜಿಗೆ ಗಾಂಧಿಯವರ ಸಮೀಪ ಸಂಪರ್ಕ ಒದಗಿತ್ತು. ಅವರನ್ನು ಆಗ ಆಕರ್ಷಿಸಿದ ಇನ್ನೊಂದು ಮಹಾನ್ ವ್ಯಕ್ತಿಯೆಂದರೆ ಶ್ರೀಮತಿ ಸರೋಜಿನಿ



ನಾಯುಡು ಅವರು. ಸ್ವಾಮೀಜಿ ಆಗಲೂ ಖಾದಿ ಧಾರಿಗಳು. ತಮ್ಮ ವಿದ್ಯಾರ್ಥಿದೆಸೆ ಮುಗಿಯುವ ವರೆಗೂ ಸ್ವಾಮೀಜಿ ಸ್ವಾತಂತ್ರ್ಯಾಂದೋಲನದ ಹಲವಾರು ಚಟುವಟಿಕೆಗಳಲ್ಲಿ ಕಾರ್ಯಕ್ರಮ ಗಳಲ್ಲಿ ನೇರವಾದ, ಕೆಲವೊಂದು ಸಲ ಅಪ್ರತ್ಯಕ್ಷ ವಾದ ಪಾತ್ರವನ್ನು ಮತ್ತು ತಮ್ಮ ಭಾಗದಲ್ಲಿ ಧುರೀಣತ್ವವನ್ನು ವಹಿಸುತ್ತಲೇ ಇದ್ದರು.

ರಾಜಕೀಯ ಅವರ ಬದುಕಿನ ಭಾಗ ಮಾತ್ರ ವಾಗಿತ್ತು. ಅದೇ ಅವರ ಬದುಕಾಗಿದ್ದಿಲ್ಲ. ಅವರ ಆಧ್ಯಾತ್ಮಿಕ ಧ್ಯೇಯ ಸಾಧನೆಯ ಮಾರ್ಗ ದಲ್ಲಿಯ ಒಂದು ಮೈಲುಗಲ್ಲು ಮಾತ್ರವಾಗಿತ್ತು. ಅದೇ ತಮ್ಮ ತಂಗು ತಾಣವೆಂದು ಅವರು ಆಗಲೂ ಬಗೆದಿದ್ದಿಲ್ಲ, ಮುಂದೂ ಬಗೆಯಲಿಲ್ಲ.

ಈ ದೃಷ್ಟಿಯಿಂದ ವಿಶ್ಲೇಷಿಸಿದಾಗ ಶ್ರೀ ಕುಮಾರಸ್ವಾಮಿಗಳ ಶ್ರೀ ಅರವಿಂದ ಘೋಷರ ಹಾಗೂ ಮಹಾತ್ಮಾ ಗಾಂಧಿಯವರ ಬದುಕು ಗಳಲ್ಲಿ ಕೆಲವೊಂದು ಬಗೆಯ ಸಮಾಂತರ ರೇಖೆ ಗಳು ಗೋಚರವಾಗುತ್ತವೆ. ಮೂವರೂ ತಮ್ಮದೇ ಆದ ರೀತಿಯಲ್ಲಿ ಆಧ್ಯಾತ್ಮವಾದಿಗಳು, ಶುದ್ಧವಾಗಿ ಮತ್ತು ಮುಖ್ಯವಾಗಿ ಧಾರ್ಮಿಕ ವಾಗೂ ನೈತಿಕ ತಳಹದಿಯನ್ನೂ ಆಧಾರವನ್ನೂ ಉಳ್ಳವರು ತಮ್ಮ ತಮ್ಮ ಆತ್ಮ ಸಿರಿ ಕ್ಷಣಿಗೂ ಸಾಕ್ಷಾತ್ಕಾರಕ್ಕೂ ಬಳಸಿಕೊಂಡ ಹಲ ವಾರು ಸಾಧನಗಳಲ್ಲಿ ಆ ಮಹಾನರಿಗೂ ರಾಜ ಕೀಯವೂ ಒಂದು ಸಾಧನವಾಗಿತ್ತು. ಅಲ್ಲದೆ ಆಗಿನ ಕಾಲದ ರಾಜಕೀಯದ ಮುಖ್ಯಗುರಿಯು ಮಾತೃಭೂಮಿಯ ವಿಮುಕ್ತಿಯಂತಹ ಧಾರ್ಮಿಕವೆ ಅನ್ನಬಹುದಾದ ರಾಷ್ಟ್ರಮಾದವಾಗಿತ್ತು. ತ್ಯಾಗ ಬಲಿದಾನಗಳು ಆಗಿನ ರಾಜಕೀಯದ ಲಕ್ಷಣ ಗಳಾಗಿದ್ದವು, ಲೋಭ–ಮೋಸಗಲ್ಲ.

ಸತ್ಯ, ಅಹಿಂಸೆ, ಪ್ರೇಮ ಇವು ಗಾಂಧೀಜಿಯ ಬದುಕಿನ ಧ್ರುವತಾರೆಗಳು, ಧ್ಯೇಯಗಳು. ಅವರ ಬದುಕು ಇವುಗಳ ಸಾಧನೆಯ ಒಂದು ಪ್ರಯೋಗ ಶಾಲೆ. ತಮ್ಮ ಜೀವನದ ವಿವಿಧ ಚಟುವಟಿಕೆ ಗಳ ಮೂಲಕ ತಮ್ಮ ಈ ಧ್ಯೇಯ ಸಾಧನೆ ಮಾಡಿಕೊಳ್ಳಲು ಯತ್ನಿಸಿದಂತೆ ತಮ್ಮ ರಾಜಕೀಯದಲ್ಲೂ ಆ ಧ್ಯೇಯಗಳನ್ನು ಅಳವಡಿಸಿ ಕೊಳ್ಳಲು ಗಾಂಧಿ ಯತ್ನಿಸಿದರು; ಅಚ್ಚರಿ ಎನ್ನಿಸುವ ಮಟ್ಟಿಗೆ ವೈಯಕ್ತಿಕ ಯಶಸ್ಸನ್ನೂ ಪಡೆದರು.

ಶ್ರೀ ಅರವಿಂದರ ದಿವ್ಯ ಜೀವನದ ದಾರಿಯ ಸಮಗ್ರಯೋಗದಲ್ಲಿ ರಾಜಕೀಯ ಒಂದು ಪಾರ್ಶ್ವವಾಗಿತ್ತು. ಬಹು ಬೇಗನೆ ಅವರು ಆ ಘಟ್ಟವನ್ನು ದಾಟಿದರು. ರಾಜಕೀಯವನ್ನು ಬಿಟ್ಟರು. ಗಾಂಧಿ ರಾಜಕೀಯವನ್ನು ಬಿಡ ಬೇಕೆಂದರೆ ರಾಜಕೀಯ ಗಾಂಧಿಯವರನ್ನು ಬಿಡ ಲಿಲ್ಲ; ತೆಗೆದುಕೊಂಡೇ ಹೋಯಿತು.

ಶ್ರೀ ಕುಮಾರಸ್ವಾಮಿಗಳ ಜೀವನದಲ್ಲಿಯೂ ರಾಜಕೀಯ ಒಂದು ಹಂತ ಮಾತ್ರವಾಗಿದೆ. ಅದೂ ಕ್ಷಣಿಕ ಹಾಗೂ ತಾತ್ಕಾಲಿಕವಾದದ್ದು. ಅದು ಅವರ ಬದುಕಿನ ಒಂದು ಸಂಚಾರಿ ಭಾವ. ಅವರ ಸ್ಥಾಯಿ ಭಾವ ಅಧ್ಯಾತ್ಮಿ ಕತೆಯಲ್ಲಿದೆ. ರಾಜಕೀಯ ಅವರ ಬಾಳಿನ ಒಂದು ಸಂದರ್ಭದಲ್ಲಿ ಬಂದು ಹೋದದ್ದು; ಅಧ್ಯಾತ್ಮ ಅವರೊಂದಿಗೆ ಬಹುಶಃ ಅವರ ಪೂರ್ವ ಜನ್ಮ ದಿಂದಲೂ ಬಂದದ್ದು / ಹಾಗೂ ಅವರೊಂದಿಗೆ ಅವರದಾಗಿಯೆ ಇದ್ದಂಥದು.

ಅಲೌಕಿಕ ಆಧ್ಯಾತ್ಮಿಕ ಅನುಭವಗಳನ್ನು ಅವರು ತಮ್ಮ ಬಾಲ್ಯದಿಂದಲೆ ಪಡೆದರು. ರಾಜಕೀಯ ಅವರ ಬಹಿರಂಗ ಬದುಕಾದರೆ; ಆಧ್ಯಾತ್ಮ ಅವರ ಅಂತರಂಗ ಬದುಕು. ಅಂತರಂಗ ಬಹಿರಂಗಗಳೆರಡರಲ್ಲಿಯೂ ಅವರು ಶುದ್ಧ ರಾಗಿಯೆ ಬದುಕಿದರು. ಎಂಟು ವರ್ಷದವರಿ ದ್ದಾಗಲೆ ಬೈಲಹೊಂಗಲದ ಕೆರೆ [illegible] ದೇವರ ಮತ್ತು ಮಡಿ ಬಸವಣ್ಣನ ಗುಡಿ ಗಳಲ್ಲಿ ಅವರ ಆಧ್ಯಾತ್ಮಿಕ ಸಾಧನೆ ಹಾಗೂ ಅನುಭವಗಳ ಚಿಗುರು ಮೊಳಕೆ ಒಡೆದವು. ಹೈಸ್ಕೂಲು ಶಿಕ್ಷಣ ಮುಗಿಯಿತು. ಕೊಲ್ಹಾ ಪುರದ ರಾಜಾರಾಮ ಕಾಲೇಜನ್ನು ಸೇರಿದರು. ಆಗ ಅಲ್ಲಿ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರೂ ರಾಜ್ಯಶಾಸ್ತ್ರಜ್ಞರೂ ಆದ ಡಾ. ಬಾಳಕೃಷ್ಣ ಅವರು ಪ್ರಿನ್ಸಿಪಾಲರಾಗಿದ್ದರು. ಸ್ವಾಮೀಜಿ ಅದೇ ವಿಷಯಗಳನ್ನು ತೆಗೆದುಕೊಂಡರು. ಪ್ರಿನ್ಸಿಪಾಲರಿಗೆ ತಮ್ಮ ಮೇಧಾಶಕ್ತಿಯಿಂದಾಗಿ

ಬಹಳ ಅಚ್ಚುಮೆಚ್ಚಿನವರೆನಿಸಿದರು. ಕಾಲೇಜಿನಲ್ಲಿದ್ದಾಗಲೆ ಸ್ವಾಮೀಜಿ ಶ್ರೀ ಅರವಿಂದರ 'Mother' ಗ್ರಂಥವನ್ನು ಕನ್ನಡದಲ್ಲಿ ಸಮರ್ಥವಾಗಿ ಅನುವಾದಿಸಿದರು. ಪ್ರಕಟಣೆಯ ಪರಿಶೀಲನೆಗಾಗಿ ಆ ಭಾಷಾಂತರವನ್ನು ಆಗಿನ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶ್ರೀ ನಲಿನೀಕಾಂತ ಗುಪ್ತರಿಗೆ ಕಳಿಸಿದರು. ಸ್ವಾಮೀಜಿ ಮಾಡಿದ ಭಾಷಾಂತರವೆಂದ ಬಳಿಕ ಕೇಳುವದೇನು? ಅದನ್ನು ಬಹಳವಾಗಿ ಮೆಚ್ಚಿ ಬರೆದರು, ಮೂಲ ಗ್ರಂಥ ಕರ್ತರಾದ ಶ್ರೀ ಅರವಿಂದರ ಅನುಮತಿ ಪಡೆದು ಪ್ರಕಟಿಸಬೇಕೆಂದು ಶ್ರೀ ನಲಿನೀಕಾಂತ ಗುಪ್ತರು ತಿಳಿಸಿದರು. ಈ ವಿಷಯ ಕುರಿತು ಸ್ವಾಮೀಜಿ ೧೯೩೦ರಲ್ಲಿ ಎರಡು ಸಲ ಪಾಂಡಿಚೇರಿಯಲ್ಲಿಯ ಅರವಿಂದಾಶ್ರಮಕ್ಕೆ ಹೋಗಿ ಬಂದರು. ಮೊದಲನೇ ಸಲ ಫೆಬ್ರುವರಿ ೨೧ ರಂದು. ಅದು ಮಾತೆಯವರ ಜನ್ಮದಿನ. ಎರಡನೇಯ ಸಲ ಹೋದದ್ದು ನವೆಂಬರ್ ೨೪ರಂದು. ಅದು ಅರವಿಂದರಿಗೆ ಆಧ್ಯಾತ್ಮಿಕ ಸಾಕ್ಷಾತ್ಕಾರವಾದ ದಿನ. ಎರಡೂ ಸಲ ಅವರಿಗೆ ಶ್ರೀ ಅರವಿಂದರ ದರ್ಶನಲಾಭವಾಯಿತು. ಮಾತ್ರವಲ್ಲದೆ ಅರವಿಂದರು ಹಸ್ತಸ್ಪರ್ಶ ಮಾಡಿ ಕೊಟ್ಟ ಆಶೀರ್ವಾದದ ದಿವ್ಯಾನುಭವವೂ ಆಯಿತು. ಇಷ್ಟೇ ಅಲ್ಲ, ಸ್ವಾಮೀಜಿ ಮಾಡಿದ "Mother" ಗ್ರಂಥದ ಕನ್ನಡ ಭಾಷಾಂತರವನ್ನು ಪ್ರಕಟಿಸಲು ಅರವಿಂದರು ಅನುಮತಿಯನ್ನೂ ಕೊಟ್ಟರು. ಮಾನವಳ್ಳಿಯಲ್ಲಿಯ ಬಾಳಿ ಎಂಬವರು ಸ್ವಾಮೀಜಿಯ ಶ್ರೀಮಂತ ಮಿತ್ರರು. ಅವರು ಅದನ್ನು ಪ್ರಕಟಿಸಲು ತೆಗೆದುಕೊಂಡರು. ಆದರೆ ಕಾರಣಾಂತರದಿಂದ ಅದು ಪ್ರಕಟವಾಗಲೇ ಇಲ್ಲ. ಹೀಗಾಗಿ ಕನ್ನಡ ವಾಙ್ಮಯವು ಒಂದು ಅತ್ಯಮೂಲ್ಯವಾದ ಭಾಷಾಂತರಕ್ಕೆ ಕೊನೆಯ ವರೆಗೂ ಎರವಾಗಬೇಕಾಯಿತು. ಏಕೆಂದರೆ ಅದರ ಹಸ್ತಪ್ರತಿಯೂ ಬಾಳಿಯವರಲ್ಲಿಯೆ ಉಳಿದು ಕಾಲಗರ್ಭದಲ್ಲಿ ಕಳೆದುಹೋಯಿತು.

ಶ್ರೀ ಕುಮಾರಸ್ವಾಮಿಗಳ ಈ ಪಾಂಡಿಚೇರಿ ಯಾತ್ರೆ ಮುಖ್ಯವಾಗಿ ಆಧ್ಯಾತ್ಮಿಕ ಉದ್ದೇಶವುಳ್ಳದ್ದು. ಆದರೆ ಅದಕ್ಕೂ ರಾಜಕೀಯ ಬಣ್ಣ ಬರದೆ ಇರಲಿಲ್ಲ. ಅರವಿಂದರು ಒಂದು ಕಾಲದಲ್ಲಿ ರಾಜಕೀಯ ಕ್ರಾಂತಿಕಾರಿಗಳಲ್ಲವೆ? ಸ್ವಾಮಿಗಳೂ ಬೆಳಗಾಂವಿ ಕಾಂಗ್ರೆಸ್ಸಿನಿಂದಲೂ ರಾಜಕೀಯದಲ್ಲಿದ್ದವರೂ ರಾಷ್ಟ್ರೀಯ ಪ್ರವೃತ್ತಿಯುಳ್ಳವರೂ ಅಲ್ಲವೆ? ಆಯಿತು. ಸಿಐಡಿ ಮತ್ತು ಪೋಲೀಸ್ ಅಧಿಕಾರಿಗಳು ರಾಜಾರಾಮ ಕಾಲೇಜಿಗೆ ಬಂದರು. ಪ್ರಿನ್ಸಿಪಾಲ್ ಡಾ. ಬಾಳಕೃಷ್ಣರನ್ನು ಭೆಟ್ಟಿಯಾದರು. ಹಾಗೆ ಬಂದ ಡಿ. ಎಸ್. ಪಿ. ಅವರನ್ನು ಡಾ. ಬಾಳಕೃಷ್ಣರು ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಮರಳಿ ಕಳಿಸಿದರು. ಡಾ. ಬಾಳಕೃಷ್ಣರಿಗೆ ಸ್ವಾಮೀಜಿ ಮೇಲೆ ಬಹಳ ವಾತ್ಸಲ್ಯ. ಇನ್ನು ಒಂದು ಸಲ ಅವರು ಹೀಗೆಯೇ ಸ್ವಾಮಿಗಳಿಗೆ ಬೆಂಗಾವಲಾಗಿ ನಿಂತದ್ದಿದೆ. ಮಾನಪ್ರತಿಬಂಧ ಆಂದೋಲನದ ಅಂಗವಾಗಿ ಶಿಂದಿ ಗಿಡಗಳನ್ನು ಕಡಿಯುವ ಚಳವಳಿಯೂ ನಡೆಯುತ್ತಿತ್ತು. ಮಾನವಳ್ಳಿ ಸವದತ್ತಿ ಭಾಗದಲ್ಲಿಯು ಶಿಂದಿ ಗಿಡ ಕಡಿಯುವ ಚಳವಳಿಯ ಧುರೀಣತ್ವವನ್ನು ಸ್ವಾಮೀಜಿ ತಮ್ಮ ವಿದ್ಯಾರ್ಥಿ ದಸೆಯಲ್ಲಿಯೇ ವಹಿಸಿದ್ದರು. ಬೆಳಗಾಂವಿ ಕಲೆಕ್ಟರನಿಂದ ಡಾ. ಬಾಳಕೃಷ್ಣರಿಗೆ ಕೊಲ್ಹಾಪುರದ ವರೆಗೂ ನೋಟೀಸು ಹೋಯಿತು. ಪ್ರಿನ್ಸಿಪಾಲರು ಸ್ವಾಮಿಗಳನ್ನು ತಮ್ಮ ಚೇಂಬರಿಗೆ ಕರೆಸಿದರು. ಸ್ವಾಮಿಗಳ ತಲೆಯನ್ನು ನೇವರಿಸಿ "You my naughty boy!" ಎಂದು ಮಮತೆಯಿಂದ ನುಡಿದರು. ಆಗ ಸ್ವಾಮೀಜಿ ಜ್ಯೂನಿಯರ್ ಬಿ. ಎ. ದಲ್ಲಿದ್ದರು. ಸ್ವಾಮಿಜಿಯ ವಿದ್ವತ್ತೆಯಲ್ಲಿ ಡಾ. ಬಾಳಕೃಷ್ಣರಿಗೆ ಬಹಳ ವಿಶ್ವಾಸ. ಆಗ ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ಗೆ ಭಾರತೀಯ ವಿದ್ಯಾರ್ಥಿಗಳನ್ನು ಫೆಲೊ ಎಂದು ಆಯ್ಕೆ ಮಾಡುವದರಲ್ಲಿ ಡಾ. ಬಾಳಕೃಷ್ಣರು ಇದ್ದರು. ಶ್ರೀ ಕುಮಾರಸ್ವಾಮಿಗಳನ್ನು ಈ ಸ್ಕೂಲಿಗೆ ಫೆಲೊ ಎಂದು ಕಳಿಸುವ ಸಕಲ ಸಿದ್ಧತೆಯನ್ನೂ ಅವರು ಮಾಡಿದರು. ಆದರೆ ನಮ್ಮ [illegible] ಕಳೆಯುತ್ತಿತ್ತು? ತಪೋನುಷ್ಠಾನದ [illegible] ಸ್ಫುರಿಸದಾಗಿತ್ತು. ಲಂಡನ್ ಮತ್ತು [illegible]ತೀರ್ಥಗಳಿಗೆ [illegible]

ದಾರಿಯಲ್ಲಿ ಸ್ವಾಮೀಜಿ ನಿಂತಿದ್ದಾರೆ! ವಿಲಾಸ ವೈರಾಗ್ಯಗಳ ದ್ವಂದ್ವ ನಡೆದಿದೆ. ಬಾಲ್ಯತಃ ವೀರ ವಿರಾಗಿಗಳಾದ ಸ್ವಾಮೀಜಿ ತಮ್ಮ ಉಕ್ಕುವ ತಾರುಣ್ಯದಲ್ಲಿ ಲಂಡನ್ನಿಗೆ ಬೆನ್ನು ತಿರುಗಿ ನವಿಲು ತೀರ್ಥದ ಪ್ರಕೃತಿರಮ್ಯ ರಂಗ ಸಜ್ಜಿಕೆಯಲ್ಲಿ ಅನುಷ್ಠಾನದ ಕಠಿಣ ವ್ರತಕ್ಕೆ ಕುಳಿತರು. ಇದು ನಡೆದದ್ದು ೧೯೩೨ರ ಸುಮಾರಿಗೆ.

ನವಿಲುತೀರ್ಥದಿಂದ ಧಾರವಾಡದ ತಪೋವನದ ವರೆಗಿನ ಭೌಗೋಲಿಕ ಅಂತರ ಬಹಳ ದೇನಲ್ಲ. ಆದರೆ ಈ ನಡುವಿನ ಆಧ್ಯಾತ್ಮಿಕ ಮಾರ್ಗ ಮಾತ್ರ ಸಾಧನೆಯ ದಾರಿ ಮಾತ್ರ ಬಹಳ ದೀರ್ಘವಾದದ್ದು, ಅಸಿಧಾರೆಗಿಂತಲೂ ತೀಕ್ಷ್ಣವಾದದ್ದು. ಆದರೆ ತಪೋವನದ ಶ್ರೀ ಕುಮಾರಸ್ವಾಮಿಗಳು ಆ ಎಲ್ಲ ದೀರ್ಘವಾದ ಅಷ್ಟೆಲ್ಲ ಕಷ್ಟಕರವಾದ ಮಾರ್ಗವನ್ನು ಕ್ರಮಿಸಿ – ಆಕ್ರಮಿಸಿ ಅನ್ನೋಣವೆ?– ಬಂದಿದ್ದಾರೆ.

ಅನಂತರದ ಹಾಗೂ ಈಗಿನ ಅವರ ಜೀವನ ಮತ್ತು ಬದುಕು ಲೋಕಾದ್ಯಂತ ಪರಿಚಿತವಾದದ್ದು. ೧೯೩೨ ರಲ್ಲಿಯೆ ಅವರು ಸಂನ್ಯಾಸ ದೀಕ್ಷೆ ತೆಗೆದುಕೊಂಡಿದ್ದರು. ೧೯೩೫ ರಲ್ಲಿ ಧಾರವಾಡದಲ್ಲಿ ನವಕಲ್ಯಾಣ ಮಠವನ್ನು ಸ್ಥಾಪಿಸಿದರು. ತಪೋವನಕ್ಕೆ ಬಂದದ್ದು ೧೯೬೫ರಲ್ಲಿ ವಿಧ್ಯುಕ್ತ ಸಂನ್ಯಾಸ ತೆಗೆದುಕೊಂಡದ್ದೂ ಅದೇ ವರ್ಷ.

ಇಲ್ಲಿಯ ವರೆಗೆ ಸುಮಾರು ೧೨ ಗ್ರಂಥಗಳನ್ನು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಹಾಲಂಡಿನ ಡಾ. ಜೆ. ಬಿ. ಹಾಡಿಯಸ್ ಸ್ವಾಮೀಜಿಯವರನ್ನು 'ಅಧುನಿಕ ವಿವೇಕಾನಂದ' ಎಂದು ಕರೆದಿದ್ದಾರೆ. ಸ್ವಾಮೀಜಿ ಬರೆದ 'Veerashaiva Philosophy and Mysticism' ಗ್ರಂಥಕ್ಕೆ ಸುಪ್ರಸಿದ್ಧ ಆಧ್ಯಾತ್ಮವಾದಿ ಡಾ. ಪಾವುಲ್ ಬ್ರುಂಟನ್ನರ ಮುನ್ನುಡಿ ಇದೆ. ಎಲ್ಲಿಯ ವರೆಗೆ ಪೂಜ್ಯ ಸ್ವಾಮೀಜಿಯಂತಹ ಪ್ರಾಮಾಣಿಕ ಹಾಗೂ ತಿಳುವಳಿಕೆಯುಳ್ಳ ಲೇಖಕರಿರುವರೋ ಅಲ್ಲಿಯ ವರೆಗೆ ಭಾರತದ ಹಿಂದಿನ ಉಜ್ವಲ ಪರಂಪರೆ ಸುಭದ್ರವಾಗಿರುವದು ಎಂದು ಬ್ರುಂಟನ್ ಹೇಳಿರುತ್ತಾರೆ.

ಘನವಿದ್ವಾಂಸರಾದ ಸ್ವಾಮೀಜಿ ನಿಷ್ಣಾತ ವ್ಯಾಖ್ಯಾನಕಾರರು ವಕ್ತೃತ್ವಕಲಾಪರಿಪೂರ್ಣರು. ಭಾರತಾದ್ಯಂತ ತಮ್ಮ ವ್ಯಾಖ್ಯಾನಗಳ ಡಿಂಡಿಮವನ್ನು ನುಡಿಸಿದವರು. ಅಖಿಲ ಭಾರತ ತತ್ವಜ್ಞಾನ ಮಹಾಮಂಡಲದ ಆಶ್ರಯದಲ್ಲಿ ಮದ್ರಾಸಿನಲ್ಲಿ ಸೇರಿದ್ದ ಸಮ್ಮೇಲನದಲ್ಲಿ ವ್ಯಾಖ್ಯಾನಗಳನ್ನಿತ್ತಿದ್ದಾರೆ. ೧೯೫೩ ರಲ್ಲಿ ಹೃಷೀಕೇಶದಲ್ಲಿ ಸೇರಿದ ವಿಶ್ವಧರ್ಮ ಸಮ್ಮೇಲನಕ್ಕೆ ಅಲ್ಲಿ ಆಶ್ರಮದ ಸ್ವಾಮಿ ಶಿವಾನಂದರು ಸ್ವಾಮೀಜಿಯನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದರು. ಭಾರತ ಮತ್ತು ಯುರೋಪಿನ ಹಲವಾರು ಎಡೆಗಳಲ್ಲಿ ಅಂತಾರಾಷ್ಟ್ರೀಯ ಪ್ರಾರ್ಥನಾಯೋಗ ಕೇಂದ್ರಗಳನ್ನು ಸ್ಥಾಪಿಸುವದಕ್ಕೆ ಸ್ವಾಮೀಜಿಯೇ ಕಾರಣೀಭೂತರು. ಈ ಪೂಜ್ಯರ ದೈವಿ ಆಶ್ರಯದಲ್ಲಿ ಮಹಾತಪಸ್ವಿ ಶ್ರೀ ಕುಮಾರಸ್ವಾಮೀಜಿ ಆಧ್ಯಾತ್ಮ ಮತ್ತು ಯೋಗ ಸಂಘದ ರಚನೆ



ಯಾದದ್ದು ೧೯೭೩ರಲ್ಲಿ. ಸ್ಥಾಪಿತವಾದ ವರ್ಷದಲ್ಲಿಯೇ ಈ ಸಂಸ್ಥೆ ತಪೋವನದಲ್ಲಿ ಅಂತಾರಾಷ್ಟ್ರೀಯ ಪ್ರಾರ್ಥನಾ ಯೋಗ ಸಮ್ಮೇಲನವನ್ನು ಸಂಘಟಿಸಿತು. ಭಾರತದಿಂದ ಸುಮಾರು ೧೫೦೦೦ ಪ್ರತಿನಿಧಿಗಳು ಹಾಗೂ ಫ್ರಾನ್ಸ್, ಬೆಲ್ಜಿಯಂ, ವೆಸ್ಟ್ ಇಂಡೀಜ್ ಮುಂತಾದ ದೇಶಗಳಿಂದ ೫೫ ಪ್ರತಿನಿಧಿಗಳು ಈ ಸಮ್ಮೇಲನದಲ್ಲಿ ಭಾಗವಹಿಸಿದ್ದರು ಎಂಬ ಸಂಗತಿ ಸ್ವಾಮೀಜಿಯ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಲೋಕೋತ್ತರತ್ವದ ಸಂಕೇತವಾಗಿದೆ.

೧೯೭೨ ರಿಂದ ೮೦ರ ಅವಧಿಯಲ್ಲಿ ಪೂಜ್ಯರು ಯೂರೋಪನ್ನು ಆರು ಸಲ ಸಂದರ್ಶಿಸಿದ್ದಾರೆ. ಭಾರತೀಯ ಸಾಂಸ್ಕೃತಿಕ ಪರಂಪರೆಯ ಜೈತ್ರಯಾತ್ರೆಗಳನ್ನು ಕೈಗೊಂಡಿದ್ದಾರೆ. ೧೯೭೨ರಲ್ಲಿ ಫ್ರೆಂಚ್ ರಾಷ್ಟ್ರೀಯ ಯೋಗ ಸಂಸ್ಥೆಯು ಫ್ರಾನ್ಸಿನ ಗ್ರೆನೋಬಲ್‌ನಲ್ಲಿ ಅಂತಾರಾಷ್ಟ್ರೀಯ ಯೋಗ ಸಮ್ಮೇಲನವನ್ನು ಮತ್ತು ಮತ್ತು ಪ್ಯಾರಿಸ್ಸಿನಲ್ಲಿ ವಿಶ್ವಧರ್ಮ ಸಮ್ಮೇಲನವನ್ನು ಸಂಘಟಿಸಿತ್ತು. ಆ ಸಮ್ಮೇಲನಗಳಿಗೆ ಸ್ವಾಮೀಜಿಯನ್ನು ವಿಶೇಷವಾಗಿ ಆಮಂತ್ರಿಸಿ, ಅವೆರಡೂ ಸಮ್ಮೇಳನಗಳ ಅಧ್ಯಕ್ಷನ್ನಾಗಿಯೂ ಮಾಡಲಾಗಿತ್ತು. ಆಗ ಇಂಗ್ಲೆಂಡ್, ಹಾಲೆಂಡ್, ಬೆಲ್ಜಿಯಮ್ ಮತ್ತು ಇಟಲಿಗಳಲ್ಲಿ ಅವರ ವ್ಯಾಖ್ಯಾನಗಳೂ ಆದವು. ೧೯೭೨ರ ನವೆಂಬರ್ ೪ರಂದು ಪೂಜ್ಯ ಸ್ವಾಮೀಜಿ ವ್ಯಾಟಿಕನ್ನಿನಲ್ಲಿ ಪೂಜ್ಯ ಪೋಪ್ ಪಾಲರನ್ನು ಸಂದರ್ಶಿಸಿದರು. ಗಂಗೆ ಯಮುನೆ ಕೂಡಿದಂತೆ ಎರಡು ಮಹಾಚೇತನಗಳ ಸಂಗಮವಾಯಿತು. ಸ್ವಾಮೀಜಿ ಆಗ ಶಿವಯೋಗ ಕುರಿತು ಚರ್ಚಿಸಿದರು. ಇಷ್ಟಲಿಂಗವನ್ನು ಪೋಪ್ ಪಾಲರಿಗೆ ಕಾಣಿಕೆಯಿತ್ತರು. ೧೯೭೫ರಲ್ಲಿ ಫ್ರಾನ್ಸಿನಲ್ಲಿ ಅಂತಾರಾಷ್ಟ್ರೀಯ ಅಭ್ಯಾಸ ಕೂಟವನ್ನು ಉದ್ಘಾಟಿಸಿದರು. ೧೯೭೬ರಲ್ಲಿ ಅಂತಾರಾಷ್ಟ್ರೀಯ ಯೋಗ ಮತ್ತು ವಿಜ್ಞಾನ ಸಮ್ಮೇಲನ ಲಂಡನ್ನಿನಲ್ಲಿ ಸೇರಿತ್ತು. ಸ್ವಾಮಿಜಿಯವರೆ ಅದಕ್ಕೆ ಮುಖ್ಯ ಅತಿಥಿಗಳು. ೧೯೭೭ರಲ್ಲಿ ಫ್ರಾನ್ಸಿನಲ್ಲಿಯ ಫ್ರಾಂಕೋ– ಇಂಡಿಯನ್ ಸಾಂಸ್ಕೃತಿಕ ಸಂಬಂಧಗಳ ಸಾಂಸ್ಕೃತಿಕ ಕೇಂದ್ರದ ಆಮಂತ್ರಣ ಸ್ವೀಕರಿಸಿ ಫ್ರಾನ್ಸ್ ಬೆಲ್ಜಿಯಮ್ ದೇಶಗಳನ್ನು ಸಂಚರಿಸಿ ಬಂದರು. ಹೀಗೆ ಈ ದೇಶಗಳು ಮಾತ್ರವಲ್ಲದೆ ಲಂಡನ್, ಬಾಕ್ಸ್‌ಹಿಲ್, ಹಾರ್ನ್‌ಫಾರ್ಮ್‌ಗಳಲ್ಲಿಯೂ ಹಲವಾರು ಉಪನ್ಯಾಸಗಳನ್ನು ಕೊಟ್ಟಿದ್ದಾರೆ. ಲಂಡನ್ನಿನಲ್ಲಿ ಅವರಿತ್ತ "Cosmic Consciousness" (ವಿಶ್ವದ ಅರಿವು) ಎಂಬ ವಿಷಯದ ಮೇಲಿನ ವ್ಯಾಖ್ಯಾನ ಐರೋಪ್ಯ ವಿದ್ವಜ್ಜಗತ್ತನ್ನೆಲ್ಲ ಆಕರ್ಷಿಸಿತು; ಲಂಡನ್ನಿನ ಕ್ಲಾಯ್ಸ್ಟರ್‌ಗೇಟ್ ಸಂಸ್ಥೆಯು ಸಂದರ್ಶಕರಿಂದ ಪ್ರಾಚಾರ್ಯರಾಗಬೇಕೆಂದು ಕರೆಯೂ ಬಂದಿತು. ೧೯೮೦ರಲ್ಲಿ ಫ್ರಾನ್ಸಿನ ಬೀಚ್ ಪಟ್ಟಣದಲ್ಲಿಯ ಯೋಗ ಸಮ್ಮೇಲನದಲ್ಲಿ "The Technique of opening the third Eye" ಕುರಿತು ಕೊಟ್ಟ ಉಪನ್ಯಾಸವೂ ವಿದ್ವಾಂಸರನ್ನು ಆಕರ್ಷಿಸಿತು.

೧೯೭೫ ಜೂನ್ ೭ರಂದು ಮಾರ್ಸೇಲ್ಸಿನಲ್ಲಿ ಹೊರಡುವ 'ಲಾಸ್ವಾರ್' ಎಂಬ ದಿನಪತ್ರಿಕೆಯಲ್ಲಿ ಶ್ರೀ ಕುಮಾರಸ್ವಾಮಿಗಳ ಬಗೆಗೆ ಪ್ರಕಟವಾದ ವಾರ್ತೆಯ ವಿವರ.

ಇಂದು ರಾತ್ರಿ ೮–೩೦ ಗಂಟೆಗೆ ಸ್ಪೆಂಡಿಡ್ ಹೊಟೆಲಿನಲ್ಲಿ ಆಧುನಿಕ ಭಾರತದ ಶ್ರೇಷ್ಠ ಸಂತರಲ್ಲಿ ಒಬ್ಬರಾದ ಶ್ರೀ ಕುಮಾರಸ್ವಾಮಿಗಳವರ ಅಸಾಧಾರಣ ಸಭೆಯೊಂದು ಜರುಗುವದು. ಪ್ರತಿಭಾವಂತ ಯೋಗಿಗಳಾದ ಶ್ರೀ ಕುಮಾರಸ್ವಾಮಿಗಳು ಸೌತ್ ಈಸ್ಟ್ ಹಠಯೋಗ ಲೀಗ್ ಭಾರತ ಫ್ರಾನ್ಸ್ ಸಾಂಸ್ಕೃತಿಕ ಕೇಂದ್ರದ ಗೌರವ ಅತಿಥಿಗಳಾಗಿದ್ದಾರೆ. ಸಮಕಾಲೀನ ಭಾರತದ ಸಂತ ವಿದ್ವನ್ಮಣಿಗಳಲ್ಲಿ ಅವರೊಬ್ಬರಾಗಿದ್ದಾರೆ. ಭಾರತದಲ್ಲಿ ಹಾಗೂ ಪಾಶ್ಚಾತ್ಯ ದೇಶಗಳಲ್ಲಿ ಅವರು ತತ್ವಜ್ಞಾನಿಯೆಂದು ಅನುಭಾವಿಯೆಂದು ಶಿಕ್ಷಣವೇತ್ತರೆಂದು ಮಾನವತಾವಾದಿಗಳೆಂದೂ ಅಪ್ರತಿಮ ವಾಗ್ಮಿಗಳೆಂದು ಕಾಲಪ್ರವಾಹದಲ್ಲಿ ಜರುಗುವ ಘಟನೆಗಳನ್ನು ಅರಿತು ಹೇಳಬಲ್ಲ ಯೋಗಿಗಳೆಂದು ಪರಿಚಿತರಾಗಿದ್ದಾರೆ. ಅವರು ಬರೆದ ಧಾರ್ಮಿಕ ತಾತ್ವಿಕ ಹಾಗೂ

ಅನುಭಾವಾತ್ಮಕ ಗ್ರಂಥಗಳು ಮೂಡಣದ ಹಾಗೂ ಪಡುವಣದ ಪಂಡಿತರಿಂದ ಪ್ರಶಸ್ತಿಯನ್ನು ಪಡೆದಿವೆ.

ರಾಷ್ಟ್ರ ರಾಷ್ಟ್ರಗಳಲ್ಲಿ ಮೈತ್ರಿ ಭಾವವನ್ನು ಕುದುರಿಸುವದಕ್ಕಾಗಿ ಜಾಗತಿಕ ಏಕತೆ ಅನುವಾದಕ್ಕಾಗಿ ಅವರು ಅತುಲ ಧೈರ್ಯದಿಂದ ಪರಿಶ್ರಮಪಡುತ್ತಲಿದ್ದಾರೆ. ಇಂಥವರ ಪರಿಶ್ರಮವೇ ಸಾಂಸ್ಕೃತಿಕ ಸೇತು ಕಟ್ಟಿದಲ್ಲಿ ಶಾಂತಿ ನೆಲೆಸದ ಇಂದಿನ ಜಗತ್ತಿಗೆ ಸಾಂತ್ವನವನ್ನು ನೀಡಬಲ್ಲುದು,

ಅವರ ಭಾಷಣಗಳನ್ನು ಕೇಳುವ ಸುಸಂಧಿಯನ್ನು ಪಡೆದ ಮಾಹನೀಯರು ಈ ಸುಂದರ ಉಪನ್ಯಾಸಗಳನ್ನು ಕೇಳುತ್ತಿರುವದೆಂದರೆ ಅನುಭಾವದ ರಸದೂಟವನ್ನು ಉಂಡಂತೆ ಹೇಳದೆ ಇರಲಾರರು.

ನಮ್ಮ ದೇಶವನ್ನು ಮೆಚ್ಚಿಕೊಂಡ ಹಾಗೂ ಖ್ಯಾತಿವೆತ್ತರಾದ ಇವರಿಗೆ ಸುಸ್ವಾಗತವನ್ನು ಬಯಸಿ ಫ್ರಾನ್ಸ್ ಹಾಗೂ ಯುರೋಪಿನಲ್ಲಿ ಇವರ ಮುಂದಿನ ಪ್ರಯಾಣವು ಸುಖಕರವಾಗಲೆಂದು ಹಾರೈಸುತ್ತೇವೆ.

"ಹೇ ಪ್ರಭೊ ಪ್ರಸೀದ ಓಂ" ಎಂಬ ಮಹಾಮಂತ್ರದ ದ್ರಷ್ಟಾರರಾದ ಸ್ವಾಮೀಜಿ ಸಾಧಕರಿಗೂ ಮುಮುಕ್ಷುಗಳಿಗೂ ಅನುಗ್ರಹಿಸಿದ ಶಿವಯೋಗವು ಯೋಗ ವಿಜ್ಞಾನದ ಒಂದು ನವ ಆವಿಷ್ಕಾರವೇ ಆಗಿದೆ. ಆಶೀರ್ವಾದಯುಕ್ತ ಪ್ರಸಾದವೇ ಆಗಿದೆ.

ಮಾನವನಲ್ಲಿ ಪೀಯೂಷ ಗ್ರಂಥಿ ಇರುತ್ತದೆ. ಆದರೆ ಸುಪ್ತಾವಸ್ಥೆಯಲ್ಲಿ ಇರುತ್ತದೆ. ಮೆದುಳಿನ ಮೂರನೆ ಕುಹರವೆ ಇದರ ಸ್ಥಾನ. ಇದೇ ಮೂರನೆ ಕಣ್ಣು ಅಥವಾ ಮೂರನೇ ಕಣ್ಣಿನ ಅವಶೇಷ. ಈ ಮೂರನೆ ಕಣ್ಣನ್ನು ತೆರೆಯಿಸಬೇಕು. ಅದಕ್ಕೆ ಶಿವಯೋಗವೇ ಸಾಧನ. ತ್ರಾಟಕ ಮುದ್ರೆಯಿಂದ ಈ ಮೂರನೇ ಕಣ್ಣು ತೆರೆಯುವದು. ಈ ತಂತ್ರಕ್ಕೆ ಇಷ್ಟಲಿಂಗವೇ ಆಧಾರ ಅದನ್ನು ಎವೆಯಿಕ್ಕದೆ ದಿಟ್ಟಿಸುವದೆ ತ್ರಾಟಕ ಮುದ್ರೆ. ಈ ಶಿವಯೋಗ ಸುಲಭ ಪರಿಣಾಮಕಾರಿ ಮತ್ತು ವೈಜ್ಞಾನಿಕ. ಇದರಿಂದ ಮನಸ್ಸು ಮತ್ತು ದೇಹ ನಿರೋಗಿಯಾಗುವದು ದೃಷ್ಟಿ ಶುದ್ಧವಾಗುವದು ಅಲ್ಲದೆ ಸಿದ್ಧಿಗಳೂ ಪ್ರಾಪ್ತವಾಗುವವು. ಶ್ರೀ ರಾಜಶೇಖರ ಮಡಕಿಯವರು ಸ್ವಾಮೀಜಿ ಅಪ್ಪಣೆ ಕೊಟ್ಟಿದ್ದರಿಂದ ಶಿವಯೋಗದ ಪ್ರಾತ್ಯಕ್ಷಿಕೆಯನ್ನು ನನಗೆ ಮಾಡಿ ತೋರಿಸಿದರು. ಅದೆಷ್ಟೋ ಹೊತ್ತಿನ ವರೆಗೆ ಸ್ವಾಮೀಜಿ ಇದೆಲ್ಲವನ್ನು ನನಗೆ ಶಾಂತರಾಗಿ ಪ್ರಸನ್ನರಾಗಿ ಹೇಳಿದರು.

ಹೊರಗೆ ಸಂಜೆ ಸರಿದಿತ್ತು. ಇರುಳು ಇಣುಕುತ್ತಲಿತ್ತು. ಮುಗಿಲಲ್ಲಿ ಒಂದೆರಡು ತಾರೆಗಳು ಮಿನುಗುತ್ತಿದ್ದವು. ಸ್ವಾಮೀಜಿ ನಮಗೆಲ್ಲ ಫಲಹಾರವನ್ನು ತರಿಸಿದರು. ತಾವೇ ಸ್ವತಃ ಮುಂದೆ ಕುಳಿತು ಅದನ್ನೆಲ್ಲ ನಮಗೆ ನೀಡಿದರು. ಜೊತೆಗೆ ಗೆಳೆಯರಾದ ರಾಜಶೇಖರ ಮಡಕಿ ಮ ಡಾ. ಹತ್ತಿಕಾಳ ಅವರೂ ಇದ್ದರು.

ನಮ್ಮ ನೆಚ್ಚಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಕಾಲವಾಗಿ ಆಗ ಒಂದೆರಡು ದಿನಗಳು ಮಾತ್ರ ಸಂದಿದ್ದವು. ನಾನು ಸ್ವಾಭಾವಿಕವಾಗಿ ದೇಶದ ರಾಜಕೀಯ ಭವಿತವ್ಯದ ಬಗ್ಗೆ ದೇಶದ ಬಗ್ಗೆ ಸ್ವಾಮೀಜಿಯಲ್ಲಿ ವಿಚಾರಿಸಿದೆ. ಸ್ವಾಮೀಜಿ ಗಂಭೀರರಾಗಿ ಆಳವಾಗಿ ಯೋಚಿಸಿದರು. "ಅದೆಲ್ಲ ಈಗ ಬೇಡ" ಎಂದು ಅಪ್ಪಣೆ ಕೊಟ್ಟರು "ಜನರಿಗೆ ನಿಮ್ಮ ಸಂದೇಶ" ಏನು?" ಎಂದು ನಾನು ಕೇಳಿದೆ.

"God is a short form of Good" therefore, be good and do good," ಸ್ವಾಮೀಜಿ ಅಪ್ಪಣೆ ಕೊಟ್ಟರು.



ಕಾವಲುಗಾರ

ಮೂಲ : ಆಲ್ಬರ್ಟ್ ನೋರೆವಿಯಾ
ರೂಪಾಂತರ: ಎ. ಗುರುಪಾದರಾವ್, ನಂದೀಶಳಿ

ಆತ ಮುದುಕನಾಗಿರಬಯಸುತ್ತಿದ್ದ. ನಯವಾದ ಸ್ಕಿನ್. ಹೊಗಸಿನ ಕತ್ತು ಇರುವ ಅವನನ್ನು ಅಣಕಿಸುತ್ತಿದ್ದರು. ಆಗ ಆತ ಕೆರಳುತ್ತಿದ್ದ. ಕೆರಳಿದಾಗ ಅವನ ಉಗ್ರವಿಕೆ ಹೆಚ್ಚಾಗುತ್ತಿತ್ತು.

ವರ್ಸ್ಮಲರಿಯಾದಿಂದ ಸುಮಾರು ೧೫ ಮೈಲಿ ದೂರದಲ್ಲಿರುವ ಕಂಪನಿಯೊಂದರ ಡಿಪೋದವರು ಕಾವಲುಗಾರನನ್ನು ಅತನನ್ನು ನೇಮಿಸಿಕೊಂಡಾಗ ಆತ ತುಟಿ ಪಿಟಕ್ಕೆನ್ನದೆ ಒಪ್ಪಿಕೊಂಡ. ಅಗಲವಾದ ಕಣಿವೆ, ಬೋಳು ಗುಡ್ಡಗಳ ನಡುವೆ ಇರುವ ಆ ಡಿಪೋ ಕಲ್ಪಿಸಿಕೊಂಡರೆ ತೀರಾ ನೀರಸ. ಧೂಳು, ಕಸದರಾಶಿಗಳನ್ನು ಸುತ್ತುವರಿದ ಇಟ್ಟಿಗೆಯ ಗೋಡೆಗಳು. ಅದರ ಒಳಭಾಗದಲ್ಲಿ ಆತನ ಗುಡಿಸಲುಗಳು—ತವರು ಚಿಕ್ಕ ಚಿಕ್ಕ ಇತರ ಗುಡಿಸಲುಗಳು. ಪ್ರತಿಯೊಂದು ಗುಡಿಸಲಿನ ಮುಂಭಾಗದ ಹೊಂಟು ಕೊಟ್ಟ ಬೀಗದ ಕಪ್ಪಾಗಿ ಬಾಗಿದ ಕೋಣೆಗಳು. ಆ ಕೋಣೆಗಳೊಳಗೆ ನಾನಾಬಗೆ ಡಬ್ಬಿಗಳು.

ಗುಡಿಸಲುಗಳ ಒಳಗೆ ಸಿಮೆಂಟಿನ ಚೀಲಗಳು, ಪೈಪುಗಳು, ಹಂಡೆಗಳು, ಡಾಮರಿನ ಡ್ರಮ್ಮುಗಳು, ಚೆಲ್ಲಾಪಿಲ್ಲಿಯಾಗಿಟ್ಟ ತೊಲೆಗಳು, ತರಾವರಿ ಸಾಮಾಗ್ರಿಗಳು.

ಈ ಸ್ಥಳ ಹೊರ ಜಗತ್ತಿನಿಂದ ತೀರಾ ದೂರವಾಗಿತ್ತು. ಗುಡ್ಡ ಹತ್ತಿ ನೋಡಿದರೆ ಆ ಪ್ರದೇಶವೆಲ್ಲಾ ಕಾಣಿಸುತ್ತಿತ್ತು. ವರ್ಸ್ಮಲರಿಯಾ ತುಂಬಾ ಸಮೀಪವಾಗಿ ತೋರುತ್ತಿತ್ತು. ರಸ್ತೆಗೆ ಸ್ವಲ್ಪ ತಗ್ಗಿನಲ್ಲಿ ಆತ ಊಟಕ್ಕೆ ಹೋಗುತ್ತಿದ್ದ ಮನೆಯೂ ಕಾಣುತ್ತಿತ್ತು.

ಅಲ್ಲಿ ಯಾರೂ ಕೆಲಸಮಾಡುತ್ತಿರಲಿಲ್ಲ. ರಾತ್ರಿ ವೇಳೆ ಅಲ್ಲಿ ಅಲೆದಾಡಬೇಕಾದವರನ್ನು ಬಿಟ್ಟರೆ ಬೇರೆ ಜನರಿರುತ್ತಿರಲಿಲ್ಲ. ಕೆಲವೊಮ್ಮೆ ಆತ ಗುಡ್ಡಗಳಿಗೆ ಹೋಗಿ ಗಂಟು ಹಾಕಿಸುತ್ತಿದ್ದ—ಡಿಪೋದವರು ಹೀಗಿನ ಬಗ್ಗೆ ಕೆಲಸ ಕೊಡಲಿಲ್ಲ.

ಏನೂ ಸಂಭವಿಸದೆ ನಾಲ್ಕು ತಿಂಗಳುಗಳು ಗತಿಸಿಹೋದವು. ಒಂದು ದಿನ ಬಾಗಿಲು ತಟ್ಟಿದ ಶಬ್ದವಾಯಿತು. ಯಾರೋ ಕಂಪನಿಯವರಿರಬಹುದು ಎಂದುಕೊಂಡು ಬಾಗಿಲು ತೆರೆದ. ಇಬ್ಬರು ಗಂಡಸರು ಒಬ್ಬ ಹೆಂಗಸು ಒಳ ಬಂದರು. ಅವರಲ್ಲಿಬ್ಬರು ಅಪರಿಚಿತರು. ಮತ್ತೊಬ್ಬನನ್ನು ಆತ ಚೆನ್ನಾಗಿ ಬಲ್ಲ. ಆತನ ಹೆಸರು ರಿನಾಲ್ಡೊ. ಒಂದೆ ಇದ್ದಸ್ಥ ಹಟ್ಟಿಯಲ್ಲಿಯೇ ಆತನೂ ಇದ್ದ. ಆತ ಲಾರಿ ಡ್ರೈವರ್. ರಿನಾಲ್ಡೊ

ಆತನಿಗೆ ತುಂಬಾ ಮೆಚ್ಚಿಗೆಯಾಗಿದ್ದ. ಎಂದೂ ಅವನು ಇತರರಂತೆ ಟೀಕಿಸಿರಲಿಲ್ಲ. ಇಬ್ಬರಿಗೂ ತುಂಬಾ ವ್ಯತ್ಯಾಸವಿತ್ತು. ಆತ ಗುಗ್ಗುವಿನಂತಿದ್ದರೆ, ಕುರೂಪಿಯಾಗಿದ್ದರೆ ರಿನಾಲ್ಡ್ ಚೆಲುವಿದ್ದ, ಲಕ್ಷಣವಾಗಿದ್ದ. ಅಚ್ಚ ಕಪ್ಪಗೆ ಎತ್ತರ, ದಷ್ಟಪುಷ್ಟವಾಗಿದ್ದ. ಹೆಂಗಳೆಯರಿಗೆಲ್ಲಾ ಅಚ್ಚುಮೆಚ್ಚಿನವನಾಗಿದ್ದ. ಅವರು ಅವನಿಂದ ಆಕರ್ಷಿತರಾಗುತ್ತಿದ್ದರು. ಹಾಗಾಗಿ ಆತ ಅವನನ್ನು ಮೆಚ್ಚಿಕೊಂಡಿದ್ದ, ಪ್ರೀತಿಸುತ್ತಿದ್ದ.

ರಿನಾಲ್ಡನ ಜೊತೆಗಿದ್ದ ಹೆಂಗಸಿನ ಹೆಸರು ಎಮಿಯಾ ಎಂದು. ಆಕೆ ಕುಳ್ಳಗೆ ದಪ್ಪಗೆ ಇದ್ದು ಮುಖ ಮೊಟ್ಟೆಯಾಕಾರದ್ದಾಗಿತ್ತು, ಆಕೆಯ ಬಿಳಿಯ ಕಣ್ಣುಗಳಲ್ಲಿ ಬಳಲಿಕೆ ಎದ್ದು ಕಾಣುತ್ತಿತ್ತು. ಆಕೆ ಮುಗುಳ್ನಗುತ್ತಿದ್ದಳು. ಟಿಯೋಡೆರೆ ಎಂಬ ವ್ಯಕ್ತಿ ರಿನಾಲ್ಡನ ಮತ್ತೊಬ್ಬ ಸಂಗಾತಿ – ಮಾಂಟೇರದವನು. ಕೆಂಬಣ್ಣದ ಕೂದಲಿನ ಅವನ ಕಣ್ಣುಗಳು ಹಳದಿ ಬಣ್ಣದವು. ಆತನ ಮೂಗು ಚೂಪಾಗಿತ್ತು. ಆತನ ನೀಲಿ ಕೆಂಪು ಮಿಶ್ರಿತ ಕೆನ್ನೆಗಳಲ್ಲಿ ಈಶಾನ್ಯದ ಗಾಳಿಯು ಸೊಗಡು ಮನೆ ಮಾಡಿತ್ತು.

ರಿನಾಲ್ಡ್ ಸ್ವಲ್ಪ ಮಾತಾಡುವುದಿದೆ ಎಂದಾಗ ಆತ ಅವನನ್ನು ಒಳಗೊಯ್ದ. ಎಸೆಂಜೋ ಎಂದು ಕರೆಯುತ್ತಾ ರಿನಾಲ್ಡ್ ಆತನಿಗೊಂದು ಸಿಗರೇಟು ನೀಡಿದ. "ನೀನು ಕಾವಲುಗಾರನಾಗಿಯೇ ಉಳಿದರೂ ಯಾವ ತೊಂದರೆಯೂ ಇಲ್ಲದೆ ಸ್ವಲ್ಪ ಹಣ ಮಾಡಿಕೊಳ್ಳುವ ಅವಕಾಶವಿದೆ." ಎಂದಾಗ ಆತ ಏನನ್ನೂ ಹೇಳದೆ ಕಣ್ಣಗಲಿಸಿದ. ಆತನ ಮೌನದಿಂದ ಧೈರ್ಯಗೊಂಡ ರಿನಾಲ್ಡ್ ವಿವರಣೆ ನೀಡಿದ: ಅವರು ತುಂಬಾ ಕಚ್ಚಾ ಪದಾರ್ಥಗಳನ್ನು ಹೊಂದಿರುವುದಾಗಿಯೂ ಅವನ್ನು ಆತನ ಗುಡಿಸಲೊಂದರಲ್ಲಿ ಇಡಲು ಅವಕಾಶ ಮಾಡಿಕೊಡಬೇಕೆಂದೂ ಕೆಲವು ದಿನಗಳ ನಂತರ ಅವನ್ನು ಒಯ್ಯುವುದಾಗಿಯೂ ಹೇಳಿ ಒಯ್ಯುವಾಗ ಪ್ರತಿಫಲ ನೀಡುವುದಾಗಿ ಹೇಳಿದ.

ರಿನಾಲ್ಡನ, ಸಲಹೆಯನ್ನು ಕೇಳಿ ಆತನ ಮೈಬಿಸಿಯಾದರೂ, ಅದು ಕಳವಿನ ಮಾಲೆಂಬ ಅರಿವಾದರೂ ಮುಖ ಮುರಿದು ಹೇಳಲು ಆತನಿಂದಾಗಲಿಲ್ಲ. ಆತ ಉಗ್ಗುತ್ತ ಹೇಳಿದ– "ರಿನಾಲ್ಡ್, ಇಲ್ಲಿ ನಾನೊಬ್ಬ ಕಾವಲುಗಾರ ಹೌದೋ ಅಲ್ಲವೋ?"

"ಹೌದು ಖಂಡಿತವಾಗಿ."

"ಸರಿ; ನಾನೊಬ್ಬ ಕಾವಲುಗಾರನಾಗಿರುವುದರಿಂದ ಅವರಂತೆ ನಾನಿರಲು ಪ್ರಯತ್ನಿಸುವೆ."

"ಹಾಗೆಂದರೆ?"

"ಹಾಗೆಂದರೆ ನಿನಗಿಷ್ಟವಾದಂತೆ ನೀನು ಮಾಡಬಹುದು. ನಿನ್ನ ಪದಾರ್ಥಗಳನ್ನು ಗುಡಿಸಲಿನಲ್ಲಿಡಬಹುದು. ನೀನು ಆಗಾಗ್ಗೆ ಭೇಟಿ ಕೊಡುತ್ತಿರಬಹುದು. ಆದರೆ ಆ ಬಗ್ಗೆ ನನಗೆ ಏನೂ ತಿಳಿಯದಂತಿರುವೆ. ಒಂದು ಮಾತು. ಒಂದು ವೇಳೆ ನನ್ನನ್ನು ಕುರಿತು ಯಾರಾದರೂ– ಪ್ರಶ್ನಿಸಿದರೆ ನಾನು ನಿನಗೆ ಅಪರಿಚಿತನೆಂದೇ ಹೇಳಬೇಕು. ಹಾಗಿದ್ದರೆ ಮಾತ್ರ ಗುಡಿಸಲಿನಲ್ಲಿ ನಿನ್ನ ವಸ್ತುಗಳನ್ನು ಇಡಬಹುದು – ಅದೂ ನನ್ನ ಗಮನಕ್ಕೆ ಬಾರದಂತೆ." ಆತನ ಮಾತಿನಿಂದ ಆಶ್ಚರ್ಯಗೊಂಡವರಂತೆ ಅವರು ತಲೆ ಎತ್ತಿದರು. ಟಿಯೋಡೆರೊ ಬಹುವಾಗಿ ಬೆದರಿಸುವ ರೀತಿಯಲ್ಲಿ ಹೇಳಿದ. "ಆದರೆ ನಮ್ಮ ವಸ್ತುಗಳ ಮೇಲೆ ಎಚ್ಚರಿಕೆ ವಹಿಸಬೇಕು. ನೀನು ಅಪರಿಚಿತನಾಗಿದ್ದರಿಂದ ಏನಾದರೂ ಹೆಚ್ಚು ಕಡಿಮೆಯಾಗುವ ಸಾಧ್ಯತೆಯೂ ಇರಬಹುದು." ರಿನಾಲ್ಡ್ ಮಧ್ಯೆ ಬಾಯಿ ಹಾಕಿ ಹೇಳಿದ. "ನೀನು ಎಸಂಜೋನ ಅರಿತಿಲ್ಲ. ಈ ವಿಚಾರದಲ್ಲಿ ತಲೆ ಕೆಡಿಸಿಕೊಳ್ಳುವ ಪರಿಸ್ಥಿತಿಯೂ ಇಲ್ಲ. ಆಗ ಆತ ಮತ್ತೊಮ್ಮೆ ಹೇಳಿದ, "ನಾನಿಲ್ಲಿಯ ವಸ್ತುಗಳ ಮೇಲೆ ನಿಗಾ ವಹಿಸುವಂತೆ ನಿಮ್ಮ ವಸ್ತುಗಳ ಬಗ್ಗೆಯೂ ಎಚ್ಚರವಾಗಿರುವೆ."

ಆತನ ಮಾತಿನಿಂದ ಅಸಮಾಧಾನಗೊಂಡ ಟಿಯೋಡೆರೊ ಪುನಃ ಗುಡುಗಿದ. "ನಿನಗೆ, ನಿನ್ನ ಪಾಲನ್ನು ಕೊಡುತ್ತೇನೆ. ಅದಕ್ಕಾಗಿ ನೀನು ಚಿಂತಿಸಬೇಕಿಲ್ಲ," ಆತನಾಗ ರೇಗಿ ನುಡಿದ. "ನಿನ್ನಿಂದ ನಾನೇನನ್ನೂ ಬಯಸುವುದಿಲ್ಲ ತಿಳಿಯಿತೆ ?"

ಅವರೊಂದು ಒಪ್ಪಂದಕ್ಕೆ ಬಂದಾಗ ರಿನಾಲ್ ಹೋಗಿ ಲಾರಿಯಲ್ಲಿ ತಂದ ವಸ್ತುಗಳನ್ನು

ಗುಡಿಸಲೊಂದರಲ್ಲಿ ಇಳಿಸಿದ. ಆತ ಅಲ್ಲಿಗೆ ಹೋಗಲಿಲ್ಲ. ಅದರೆ ಅದು ಬಟ್ಟೆಗಳೆಂದೂ ಅವುಗಳನ್ನು ಪಿಪಾಯಿಗಳ ಮರೆಯಲ್ಲಿ ಮುಚ್ಚಿರುವುದಾಗಿ ಹೇಳಿ ಹೊರಟುಹೋಗುವಾಗ ಎಮಿಲಿಯಾ ಆತನತ್ತ ಬೀರಿದ ನೋಟ ತುಂಬಾ ಅಪ್ಯಾಯಮಾನವಾಗಿತ್ತು. ಆತ ಅವಳು ತನಗಿತ್ತ ಬಹುಮಾನವೆಂದೇ ಪರಿಗಣಿಸಿದ್ದ. ನಂತರ ನಾಲ್ಕೈದು ಬಾರಿ ಆ ಗುಂಪು ಅಲ್ಲಿಗೆ ಬರುತ್ತಿತ್ತು. ಎಮಿಲಿಯಾಳೂ ಬರುತ್ತಿದ್ದಳು.

ಲಾರಿಯ ಮೇಲೆ ಬರುತ್ತಿದ್ದ ಅವರು ಹಾರ್ನ್-ನ್ನೊತ್ತಿ ತಾವು ಬಂದ ಸೂಚನೆಯನ್ನು ಕೊಡುತ್ತಿದ್ದರು. ಆತ ಗೇಟು ತೆರೆಯುತ್ತಿದ್ದ. ಅವರು ಲಾರಿಯಲ್ಲಿ ತಂದ ವಸ್ತುಗಳನ್ನು ಇಳಿಸಿ ಹೊರಟು ಹೋಗುತ್ತಿದ್ದರು. ಆಗ ಆತ ಗುಡಿಸಲ ಕದ ಮುಚ್ಚಿ ಒಳಗೇ ಇದ್ದುಬಿಡುತ್ತಿದ್ದ. ಬಲಟನಾಗಿದ್ದ ಟೆಯೊಡೆರೊ ಆತನೊಂದಿಗೆ ಆಡುತ್ತಿದ್ದ ಜಬರದಸ್ತಿನ ಮಾತನ್ನು ಸಹಿಸಲಾಗುತ್ತಿರಲಿಲ್ಲ. ಎಮಿಲಿಯಾ ಮಾತ್ರ ಆತ



ನನ್ನ ಸಹಾನುಭೂತಿಯಿಂದ ಕಾಣುತ್ತಿದ್ದಳು.

"ಆ ರೀತಿ ಒಬ್ಬಂಟಿಯಾಗಿರಲು ನಿಮಗೆ ಬೇಸರ ವಾಗುವುದಿಲ್ಲವೇ ?" "ಒಬ್ಬಂಟಿಗನಾಗಿರುವುದೇ ನನಗೆ ಒಗ್ಗಿ ಹೋಗಿದೆ," ಆತ ಉತ್ತರಿಸಿದ್ದ.

ಅದೊಂದು ದಿನ ವೃತ್ತಪತ್ರಿಕೆಯನ್ನು ತೆರೆದು ನೋಡಿದಾಗ ಟಿವುಡೆರೊ, ರಿನಾಲ್ಡ್ ಮತ್ತಿರತರು ಬಂಧನಕ್ಕೊಳಗಾಗಿರುವ ವಿಷಯವನ್ನು ಕಂಡ. ಅವರು ಕನ್ನ ಕೊರೆದು ಕಳ್ಳತನ ಮಾಡು ತ್ತಿದ್ದುದರಿಂದ 'ಕನ್ನ ಕೊರೆಯುವ ಕಳ್ಳರ ಗುಂಪು' ಎಂದು ಪತ್ರಿಕೆ ಹೆಸರಿಸಿತು. ರಿನಾಲ್ಡ್ ಟಿಯೊಡೆರೊ ಹಾಗೂ ಇನ್ನೊಬ್ಬ ವ್ಯಕ್ತಿಯ ಭಾವ ಚಿತ್ರದೊಂದಿಗೆ ಈ ಸುದ್ದಿ ಪ್ರಕಟವಾಗಿತ್ತು. ಬಿಟ್ಟಗಣ್ಣಿನ ಕೂದಲಿಲ್ಲದ ಅಂಗಿಯನ್ನು ತೊಟ್ಟಿದ್ದ ಆ ಇನ್ನೊಬ್ಬ ವ್ಯಕ್ತಿ ಆತನಿಗ ಪರಿಚಿತ ನಾಗಿದ್ದ. ಪತ್ರಿಕೆಯಲ್ಲಿ ಟಿಯೊಡೆರೊ ಹಾಗೂ ಅಪರಿಚಿತನ ಬಗ್ಗೆಯೇ ಹೆಚ್ಚಾಗಿ ಬರೆದಿತ್ತು. ರಿನಾಲ್ಡ್‌ನು ಬರಿ ಚಾಲಕನಾಗಿದ್ದುದರಿಂದಲೊ ಏನೋ ಅಷ್ಟೊಂದು ಪ್ರಾಮುಖ್ಯ ಕೊಟ್ಟಿರ ಲಿಲ್ಲ. ಎಮಿಲಿಯಾಳನ್ನು ಕುರಿತು ಯಾವ ವಿಷಯವೂ ಇರಲಿಲ್ಲ. ಬಂಧಿತರನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಲಾಗುವುದು ಎಂದು ಪತ್ರಿಕೆ ತಿಳಿಸಿತ್ತು.

ಚಳಿಗಾಲದ ಅದೊಂದು ರಾತ್ರಿ. ಜಡಿ ಮಳೆಯಿಂದ ಆವರಣದಲ್ಲೆಲ್ಲಾ ನೀರು ನಿಂತು ಕೆರೆಯಂತೆ ತೋರುತ್ತಿತ್ತು. ಬಾಗಿಲು ಬಡಿದ ಸದ್ದು ಕೇಳಿ ಆತ ಬಾಗಿಲು ತೆರೆದ. ಎಮಿಲಿಯಾ ನಿಂತಿದ್ದಳು. ಬಸಿರಿಯಾದ ಅವಳ ಹೊಟ್ಟೆ ದೊಡ್ಡ ದಾಗಿ ಕಾಣುತ್ತಿತ್ತು. ಚಳಿಯಿಂದ ಅವಳ ಬಾಯಿ ಹೊಟ್ಟೆಯುತ್ತ ಜೋತು ಬಿದ್ದಿತ್ತು. ಮಳೆ ಯಿಂದ ತೊಯ್ದಿದ್ದ ಬಟ್ಟೆಯಿಂದಾಗಿ ಅವಳು ನಡುಗುತ್ತಿದ್ದಳು. ಅವಳ ಕೂದಲುಗಳು ಹಣೆಗೆ ಅಂಟಿಕೊಂಡಿದ್ದವು. ನೇರವಾಗಿ ಗುಡಿಸಲೊಳಗೆ ಬಂದ ಅವಳು ಏನೊಂದೂ ಮಾತನಾಡದೆ ರಿನಾಲ್ಡ್‌ನ ಚೀಟಿಯೊಂದನ್ನು ಆತನ ಕೈಗಿತ್ತಳು. ತಾನು ವರ್ಷದೊಳಗೆ ಜೈಲಿನಿಂದ ಹೊರಬರುವು ದಾಗಿಯೂ ಅಲ್ಲಿಯ ವರೆಗೆ ಎಮಿಲಿಯಾಳ ಜವಾಬ್ದಾರಿಯನ್ನು ಆತನಿಗೆ ಹೊರಿಸಿರುವು ದಾಗಿಯೂ ಆತ ಬರೆದಿದ್ದಲ್ಲದೆ ತನ್ನೆಲ್ಲಾ ವಸ್ತು ಗಳ ಮೇಲೆ ನಿಗಾ ಇಡುವಂತೆ ಕೇಳಿಕೊಂಡಿದ್ದ.

ಅಷ್ಟೊಂದು ನಂಬಿಕೊಂಡಿದ್ದ ರಿನಾಲ್ಡ್‌ನಿಗಾಗಿ ಆತನೀಗ ಏನು ಮಾಡಲೂ ಸಿದ್ಧನಿದ್ದ. ಆ ರಾತ್ರಿ ಎಮಿಲಿಯಾಳಿಗೆ ತನ್ನ ಹಾಸಿಗೆಯಲ್ಲಿ ಮಲಗುವಂತೆ ಹೇಳಿ ಆತ ಇನ್ನೊಂದು ಕೋಣೆ ಯಲ್ಲಿ ತಲೆದಿಂಬೊಂದನ್ನು ಹಾಕಿಕೊಂಡು ನೆಲದ ಮೇಲೆಯೇ ಮಲಗಿದ್ದ.

ಆನಂತರದಲ್ಲಿ ಯಾರಾದರೂ ದಿಢೀರನೆ ಬಂದಿದ್ದರೆ ಅವರನ್ನು ದಂಪತಿಗಳೆಂದೇ ಭಾವಿ ಸುತ್ತಿದ್ದರು. ಅಕ್ಟೋಬರ್ ತಿಂಗಳು ಅಂಗಳದ ತುಂಬಾ ಸೂರ್ಯನ ಹೊಂಬೆಳಕು ಚೆಲ್ಲಿತ್ತು. ಎಮಿಲಿಯಾ ಬಟ್ಟೆ ಒಗೆಯುತ್ತಿದ್ದಳು. ಅವಳ ಕುಲುಕಾಡುವ ದುಂಡು ತೋಳುಗಳು. ಕೈಗಳು ನೀರಿನಲ್ಲಿ ಬಟ್ಟೆಗಳನ್ನು ಅದ್ದಿತೆಗೆಯುವಾಗಿನ ಬಿನ್ನಾಣ ಒಯ್ಯಾರ ಒಂದು ಮೋಹಕ ದೃಶ್ಯ. ಕೆಲವು ಬಟ್ಟೆಗಳನ್ನು ಬಿಸಿಲಿಗೆ ಒಣ ಹಾಕಿದ್ದಳು. ಹಗ್ಗದ ಮೇಲೆ ಅವಳು ಬಟ್ಟೆ ಒಗೆಯುತ್ತಿದ್ದ- ಆತ ಬಿಸಿಲಿಗೆ ಮೈಯೊಡ್ಡಿ ಕುರ್ಚಿಯಲ್ಲಿ ಕುಳಿತಿದ್ದ- ಎಮಿಲಿಯಾಳ ಬಾಗುವನ್ನು ನೋಡುತ್ತಿದ್ದ. ಆತನ ಗುಡಿಸಲಿನ ಪಕ್ಕದಲ್ಲಿ ಆತನೇ ಕಟ್ಟಿದ್ದ ಗುಡಿ ಸಲವೊಂದಿತ್ತು. ಅಲ್ಲಿಂದ ಬರುತ್ತಿದ್ದ ಗೋದಿ ವಾಸನೆಯು ಕಂಡು ಎಮಿಲಿಯಾ ಅದಿಗೆಯ ಕೆಲಸದಲ್ಲಿ ತೊಡಗುವುದನ್ನು ಸೂಚಿಸುತ್ತಿತ್ತು. ಆ ಗುಡಿಸಲಿಗೆ ಆತ ಅಷ್ಟಾಗಿ ಹೋಗು ತ್ತಿರಲಿಲ್ಲ. ಅವರ ಸ್ನೇಹ ಪವಿತ್ರವಾಗಿತ್ತು. ಅವರ ಹಿಂದೆ ಯಾವ ದುರುದ್ದೇಶ ಇದ್ದಿರಲಿಲ್ಲವಾದರೂ ಅವಳು ಗಂಡನಿಗೆ ಸೇವೆ ಮಾಡುವಂತೆ ತನಗೆ ಮಾಡುತ್ತಿರುವುದನ್ನು ಯಾರಾದರೂ ಕಂಡರೆ ತಪ್ಪಾಗಿ ತಿಳಿಯದೇ ಇರಲಾರರೆಂದು ಆತ ಆಗಾಗ್ಗೆ ಯೋಚಿಸುತ್ತಿದ್ದ. ಹಿಂದೆ ಕಂಪನಿಯ ಸ್ವತ್ತಿಗೆ ಮಾತ್ರ ಕಾವಲು ಗಾರನಾಗಿದ್ದ ಆತನಿಗೆ ಈಗ ರಿನಾಲ್ಡನ ವಸ್ತುಗಳು ಎಮಿಲಿಯಾ ಮತ್ತು ಅವಳ ಮಗು ವಿನ ರಕ್ಷಣೆಯ ಭಾರವೂ ಬಿದ್ದಿತ್ತು. ಎಮಿ ಲಿಯಾ ಮತ್ತು ಆ ಸುಂದರ ಮಗುವಿನ ಒಡ ನಾಟದಲ್ಲಿ ಆತನಿಗೆ ಅವು ಅಧಿಕವೆನಿಸಿಯೇ ಇರಲಿಲ್ಲ

ಹಾಗಂತ ರಿನಾಲ್ಡನನ್ನ ಮರೆತವನಲ್ಲ. ಎಮಿಲಿಯಾಳೊಂದಿಗೆ ಮಾತನಾಡುವಾಗಲ್ಲ ಜೈಲಿನಿಂದ ಹೊರಬರುವ ತನಕ ತಿಂಗಳು. ದಿನಗಳನ್ನು ಎಣಿಸಬೇಕಾಗಿರುವ ರಿನಾಲ್ಡನನ್ನು ನೆನೆಸಿಕೊಳ್ಳುತ್ತಿದ್ದ.


ಒಂದು ಕಡೆ ರಿನಾಲ್ಡ್ ಆತನ ಪರಮಮಿತ್ರ. ಇನ್ನೊಂದು ಕಡೆ ಎಮಿಲಿಯಾಳು ಆಥವನ ಪತ್ನಿ. ಇವೆರಡಕ್ಕೂ ಮಿಗಿಲಾಗಿ ಜನಾನುರಾಗಿಯಾಗಿದ್ದ ರಿನಾಲ್ಡ್‌ನನ್ನು ಆತ ಮರೆಯುವಂತೆಯೇ ಇರಲಿಲ್ಲ.

ಅದೊಂದು ಸಂಜೆ, ಎಮಿಲಿಯಾಳಲ್ಲಿ ಆತ ಇವನ್ನೆಲ್ಲವನ್ನೂ ಹೇಳಿಕೊಂಡ. ಇದರಿಂದ ಅವಳಿಗೆ ಆತ ತುಂಬಾ ಹಿಡಿಸಿದ, ಹತ್ತಿರವಾದ. ಆತನಲ್ಲಿ ಒಲವು ತೋರಿದಳು. ಪ್ರೇಮದ ಚುಚ್ಚು ನುಡಿಗಳಿಂದ ಆತನನ್ನು ಉದ್ರೇಕಿಸಲಾರಂಭಿಸಿದಳು. ಅವಳ ತುಂಟುತನಕ್ಕೆ ಅಂಜಿದ ಆತನಿಗೆ ತಾನೆಲ್ಲೊ ಸೋಲುತ್ತಿದ್ದೇನ ಅರಿವಾಗುತ್ತಿತ್ತು. ಕೊನೆಗೊಮ್ಮೆ ಅವಳಿಗೆ ಹೇಳಿದ, "ನೀನು ರಿನಾಲ್ಡನವಳು. ನನ್ನಲ್ಲಿ ಆಸಕ್ತಳಾಗುವುದು ಸರಿಯಲ್ಲ. ಮುಂದೆ ಇಬ್ಬರಿಗೂ ಅದು ಕ್ಷೇಮವಲ್ಲ."

"ನಾನು ರಿನಾಲ್ಡನವಳೇನೋ ನಿಜ," ಎಂದವಳೆ ಕ್ಷಣಕಾಲ ಮೌನವಹಿಸಿ, "ಏನೋ ಆತ್ಮೀಯನೆಂದು ಸಲಿಗೆ ತೋರುತ್ತಿರುವೆ. ನೀನದನ್ನು ತಪ್ಪಾಗಿ ಗ್ರಹಿಸಿ ಬೇಸರಿಸಿಕೊಳ್ಳಬಹುದಾತೆ," ಎಂದಷ್ಟೇ ನುಡಿದು ಸುಮ್ಮನಾದಳು. ಆ ಬಳಿಕ ಅವಳ ತುಂಟತನ ಮಾಯವಾಯಿತು.

ಅದೊಂದು ರಾತ್ರಿ ಏನೋ ಸಪ್ಪಳವಾಗುತ್ತಿರುವುದನ್ನು ಗಮನಿಸಿ ಆತ ರಿವಾಲ್ವರನ್ನು ತೆಗೆದುಕೊಂಡು ಗುಡಿಸಲಿನಿಂದ ಹೊರಬಿದ್ದ. ಹುಣ್ಣಿಮೆಯ ರಾತ್ರಿ. ನಿರಭ್ರ ವಿಹಾಯಸದಲ್ಲಿ ತೋರುತ್ತಿದ್ದ ಚಂದ್ರ ಬೆಳ್ಳಿಯಂತೆ ಥಳಥಳಿಸುತ್ತಿದ್ದ. ಸುತ್ತಲಿನ ಗುಡ್ಡಗಳ ನಿರ್ವಿಕಾರ ಭಾವದಲ್ಲಿ ಸೃಷ್ಟಿ ಗಗನಕ್ಕೆ ನೇರವಾಗಿ ನಿಂತಿದ್ದವು. ಆ ಹಾಲಿನಂತಹ ಬೆಳಕಲ್ಲಿ ಆತ ವ್ಯಕ್ತಿಯೊಬ್ಬನನ್ನು ಕಂಡ. ಗುಡಿಸಲಿನ ಮರೆಯಲ್ಲಿ ಹೊಕ್ಕು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಆ ವ್ಯಕ್ತಿಗೆ ಅಲ್ಲೆ ನಿಲ್ಲುವಂತೆ ಗಟ್ಟಿಯಾಗಿ ಕೂಗಿ ಹೇಳಿದ. ಕೂಗಿನ ಹಿಂದೆಯೇ ಬಂದವನಂತೆ ಆತನೆದುರು ಬಂದು ನಿಂತ ಆ ವ್ಯಕ್ತಿ ಗುಡುಗಿದ: "ಪಿಸ್ತೂಲನ್ನು ಕೆಳಗಿಳಿಸು. ನನ್ನನ್ನು ಗುರುತಿಸಲಾರದಾದೆಯಾ ?"

ಚಿಂದಿ ಬಟ್ಟೆಯಲ್ಲಿದ್ದ ಆ ವ್ಯಕ್ತಿಯ ಪೊಳ್ಳು ಕೆನ್ನೆಗಳು ನಸುಗೆಂಪಾಗಿದ್ದವು. ಅಚ್ಚರಿಪಡುವಷ್ಟು ಬದಲಾಗಿದ್ದ ಆ ವ್ಯಕ್ತಿಯು ಟಿಯೊಡೆರೊ ಎಂದು ಗುರುತಿಸಲು ಆತನಿಗೆ ಕೆಲವಾರು ನಿಮಿಷಗಳೇ ಬೇಕಾದವು. ಅವನು ತನ್ನ ಹಳದಿ ಕಣ್ಣುಗಳಿಂದ ಆತನನ್ನು ದಿಟ್ಟಿಸುತ್ತಾ, "ನಾನಿಲ್ಲಿಗೆ ಆ ವಸ್ತುಗಳನ್ನೊಯ್ಯಲು ಬಂದಿರುವೆ. ಅದ



"ರೇಷ್ಮೆ ಸೀರೆ ಹುಳುಗಳಿಂದ ಮಾಡಿದ್ದಲ್ಲವೇನೇ!... ನಮ್ಮಂಥಾ ಮಡಿ ಬ್ರಾಹ್ಮಣರಿಗೆ ಯಾಕೇ ಅದೂ...?!"

ಕ್ಕಾಗಿ ಲಾರಿಯನ್ನು ತಂದಿರುವೆ. ಹೊರಗಡೆ ನನ್ನ ಸ್ನೇಹಿತರು ಕಾದು ನಿಂತಿದ್ದಾರೆ." ಎಂದು ನುಡಿದಾಗ "ಆ ವಸ್ತುಗಳು ರಿನಾಲ್ಡನವು," ಎಂದಷ್ಟೇ ಆತ ಉತ್ತರಿಸಿದ.

ಅವರಲ್ಲಿ ವಾದ ವಿವಾದಗಳಾದವು. ಅವನು ಬೆದರಿಕೆ ಹಾಕಿದ. ಆತ ಮಣಿಯದಿದ್ದಾಗ ಅವನು ಆಸೆ ತೋರಿಸಿ ಆತನ ಮನವೊಲಿಸುವ ಪ್ರಯತ್ನ ಮಾಡಿದ. ಅದೂ ವಿಫಲವಾಯಿತು. ಆ ವೇಳೆಯಲ್ಲಿ ಅವರಿಬ್ಬರೂ ನೀರಿನ ತೊಟ್ಟಿಯ ಹತ್ತಿರ ನಿಂತಿದ್ದರು. ಎಮಿಲಿಯಾಳ ಗುಡಿಸಲಿನ ಚಿಕ್ಕ ಕಿಟಕಿಯಲ್ಲಿ ಬೆಳಕು ಕಾಣಿಸುತ್ತಿತ್ತು. ಅವಳಾಗ ಭಯದಿಂದ ಆತನ ನಿರೀಕ್ಷೆಯಲ್ಲಿದ್ದಳೋ ಏನೋ. ಆತ ಕೊನೆಗೊಮ್ಮೆ ಗಡುಸಾಗಿ ಹೇಳಿದ. "ಒಳ್ಳೇ ಮಾತಿನಿಂದ ಹೊರಟುಹೋಗು."

"ಹೋಗುತ್ತೇನೆ, ಚಿಂತಿಸಬೇಡ."

ಮರು ನುಡಿದದ್ದೇ ಅವನು ಗೇಟಿನತ್ತ ಹೆಜ್ಜೆ ಹಾಕಿದ. ಸದಾ ಚಾಕುವನ್ನು ಹೊಂದಿರುತ್ತಿದ್ದ ಅವನು ತುಂಬಾ ಅಪಾಯಕಾರಿ ವ್ಯಕ್ತಿ ಎಂಬ ಅರಿವು ಆತನಿಗಿದ್ದರಿಂದ ಅವನನ್ನು ಅನುಸರಿಸುವಾಗ ತುಂಬಾ ಜಾಗರೂಕನಾಗಿದ್ದ.

ಆತನ ಎಣಿಕೆಯಂತೆ ಕಾಂಪೌಂಡಿನ ಗೇಟನ್ನು ಸಮೀಪಿಸುವವರಲ್ಲಿದ್ದ ಅವನು ಆತನ ಮೇಲೆರಗಿದ್ದ. ಕೂಡಲೆ ಹಿಂದೊಂದು ಹೆಜ್ಜೆ ಸರಿದು ಆತ ಗುಂಡು ಹಾರಿಸಿದ್ದ.

ಅವನ ಗಂಟು ಮೋರೆ ಕ್ರೂರ ನೋಟ ಹಿಂದಿರುಗುವಂತೆ ಇದ್ದಿತಾದರೂ ಎಡಗೈ ಪೆಟ್ಟು ಬಿದ್ದಿದ್ದ ಎದೆಯ ಮೇಲಿತ್ತು. ಬಲಗೈಯಲ್ಲಿ ಚೂರಿ ಹಿಡಿದಿದ್ದ ಅವನು ಆತನತ್ತ ಧಾವಿಸಿ ಬರುತ್ತಿದ್ದ. ಆತ ಧೃತಿಗೆಡದೆ ಪುನಃ ಗುಂಡು ಹಾರಿಸಿದ. ನೆಲಕ್ಕುರುಳಿ ಬಿದ್ದಿದ್ದ ಅವನ ಬಾಯಿಯಲ್ಲಿ ರಕ್ತ ಸೋರುತ್ತಿತ್ತು.

ಮಾರನೆಯ ದಿನ ಬೆಳಿಗ್ಗೆ ಪೋಲೀಸರು ನಡೆಸಿದ ವಿಚಾರಣೆಯಿಂದ ಅವನು ಜೈಲಿನಿಂದ ತಪ್ಪಿಸಿಕೊಂಡು ಬಂದಿದ್ದ ಕೈದಿ ಎಂಬುದು ತಿಳಿದುಬಂದಿತ್ತು.

ಅದೇ ಸಮಯದಲ್ಲಿ ಕಂಪನಿಯು ಆತನಿಗೊಂದು ಬಹುಮಾನ ನೀಡಿ ಪುರಸ್ಕರಿಸಿತು. ಕಂಪನಿಯ ದೃಷ್ಟಿಯಲ್ಲಿ ಆತನೊಬ್ಬ ಕರ್ತವ್ಯನಿಷ್ಠ ಕಾವಲುಗಾರನಾಗಿದ್ದ. ಇದರಿಂದ ಸಂತಸಗೊಳ್ಳುವ ಬದಲು ಆತ ಮತ್ತಷ್ಟು ಖಿನ್ನಗೊಂಡ. ಒಮ್ಮೆ ಎಮಿಲಿಯಾಳಲ್ಲಿ ಹೇಳಿಯೂ ಕೊಂಡ. "ಅಂದು ರಿನಾಲ್ಡ್ ನನ್ನನ್ನೊಬ್ಬ ಕಳ್ಳನನ್ನಾಗಿ ಮಾತ್ರ ಮಾಡಿದ್ದ." ಅದರಿಂದ ಕೊಲೆಗಾರನನ್ನಾಗಿಯೂ ಮಾಡಿಬಿಟ್ಟ." ಅದಕ್ಕವಳು, "ನನಗೆ ಹೇಳಲಿಕ್ಕಾದರೂ ಏನಿದೆ? ನಿನ್ನ ರಕ್ಷಣೆಗಾಗಿ ನೀನು ಹಾಗೆ ಮಾಡಿದೆ ಎಂಬದೊಂದನ್ನು ಬಿಟ್ಟರೆ" ಎಂದಾಗ ಅವಳ ಪೆಚ್ಚು ಮೋರೆಯನ್ನು ನೋಡಲಾಗದೆಯೇ ಆತ, "ಏನೋ ಹೇಳಿದೆ. ಕಾವಲುಗಾರನಾಗಿ ನಾನಾಗ ಮಾಡಿದ್ದು ನನ್ನ ಕರ್ತವ್ಯ," ಎಂದಷ್ಟೇ ನುಡಿದು ಸುಮ್ಮನಾದ.

ಕೆಲವೇ ದಿನಗಳಲ್ಲಿ ರಿನಾಲ್ಡ್ ಜೈಲಿನಿಂದ ಬಿಡುಗಡೆ ಹೊಂದಲಿದ್ದ. ಅವನು ತನ್ನ ಎಮಿಲಿಯಾ ಮತ್ತು ಮಗುವನ್ನು ಕರೆದೊಯ್ಯುವುದರ ಜೊತೆಗೆ ತನ್ನ ವಸ್ತುಗಳನ್ನೂ ಸಾಗಿಸುವವನಿದ್ದ. ಕಂಪನಿಯು ಆತನಿಗೆ ನೀಡಿದ್ದ ತಿಳುವಳಿಕೆಯಂತೆ ಅದು ಸಧ್ಯದಲ್ಲೇ ತನ್ನ ಡಿಪೋವನ್ನು ತೆರವು ಮಾಡಲಿತ್ತು. ಆತವಿನ್ನು ಕಂಪನಿಗಾಗಲೀ ರಿನಾಲ್ಡ್‌ನಿಗಾಗಲಿ ಬಹುಕಾಲ ಕಾವಲುಗಾರನಾಗುಳಿಯುವಂತಿರಲ್ಲಿಲ್ಲ. ಒಮ್ಮೆಗೇ ಆಗಲಿದ್ದ ಈ ಎಲ್ಲಾ ಆಘಾತಗಳನ್ನು ಆತ ಕೆಲವೊಮ್ಮೆ ಗಲ್ಲಕ್ಕೆ ಕೈ ಹಚ್ಚಿ ಕುಳಿತು ಯೋಚಿಸುತ್ತಿದ್ದ.

ಅದೊಂದು ಮಧ್ಯರಾತ್ರಿ ರಿನಾಲ್ಡ್ ಲಾರಿಯಲ್ಲಿ ಬಂದಿಳಿದಿದ್ದ. ಲಾರಿಯ ವಿಂಡ್‌ಸ್ಕ್ರೀನಿನ ಮೇಲೆ ಎಮಿಲಿಯಾ ಎಂದು ಚೆಳಿಯ ಅಕ್ಷರಗಳಲ್ಲಿ ಬರೆಯಲ್ಪಟ್ಟಿತ್ತು. ಆತ ಹೇಳಿದ, "ರಿನಾಲ್ಡ್ ನಿನ್ನ ಎಮಿಲಿಯಾ ಇಲ್ಲಿದ್ದಾಳೆ. ನಿನ್ನ ಮಗುವೂ ಇಲ್ಲೇ ಇದೆ. ಅಲ್ಲಿ ಒಳಗಡೆ ನೀನು ಹೇಗಿಟ್ಟಿರುವೆಯೋ ಹಾಗೆಯೇ ಇರುವ ಬಟ್ಟೆಗಳಿವೆ." ಎಮಿಲಿಯಾ ಮತ್ತು ಮಗುವಿನೊಂದಿಗಿದ್ದ ರಿನಾಲ್ಡ್ ತುಂಬಾ ಸಂತಸಗೊಂಡಿದ್ದ. ಅವನು ಮುಗುಳ್ನಗುತ್ತಾ ಆತನಿಗೆ ಹೇಳಿದ, "ನಾನು ಮಿತ್ರರಲ್ಲಿ ನಂಬಿರುವುದು ನಿನ್ನೊಬ್ಬನನ್ನೇ." ಆತ ಎಮಿಲಿಯಾಳ ಮುಖ ನೋಡಿದ,

ಅವಳ ದೃಷ್ಟಿ ರಿನಾಲ್ಡ್‌ನ ಮೇಲಿತ್ತು. ಆಗ ಆತನ ಮನಸಲ್ಲಾಗುತ್ತಿದ್ದ ವಿಪ್ಲವನ್ನು ಯಾರೂ ಗುರುತಿಸುವಂತಿತ್ತು. ರಿನಾಲ್ಡ್ ಹಣ ಕೊಡಲು ಹೋದಾಗ ಆತ ತೆಗೆದುಕೊಳ್ಳದೆಯೇ ಬೇಡ ವೆಂದ. ವಾಚೊಂದನ್ನು ಆತನಿಗೆ ಕೊಡುಗೆ ಯಾಗಿ ನೀಡುವಲ್ಲಿಯೂ ವಿಫಲನಾದಾಗ ರಿನಾಲ್ಡ್ ತನ್ನ ಲಾರಿಯಲ್ಲಿ ರೋಂ ನಗರಕ್ಕೆ ಬಂದು ತನ್ನೊಂದಿಗೆ ಇರುವಂತೆ ಆತನನ್ನು ಕೇಳಿಕೊಂಡ. ಅಷಕ್ಕೂ ಒಪ್ಪದೆ ಆತ ನುಡಿದ. "ನಾನೇನನ್ನೂ ಬಯಸುವದಿಲ್ಲ. ನಾನೊಬ್ಬ ಕಾವಲುಗಾರನಲ್ಲವೇ? ನಾನೇನೂ ಬಯಸಲಾರೆ."

ಎಮಿಲಿಯಾಳಲ್ಲಿ ಅನುರಕ್ತನಾಗಿದ್ದರ ತೀವ್ರತೆಯ ಅರಿವು ಆತನಿಗೀಗ ಆಗಿತ್ತು. ಅದರಿಂದಾದ ನೋವು-ನಲಿವುಗಳು ಆತ ಅವಳನ್ನು ಗೌರವಿಸುವಂತೆ ಮಾಡಿತ್ತು. ಅವರು ಸಾಮಾನುಗಳನ್ನು ಲಾರಿಗೆ ತುಂಬುತ್ತಿರುವಾಗ ಸುಮ್ಮನೆ ನಿಂತಿರಲಾರದೆಯೇ ಆತನೂ ನೆರವಾದ. ಚಿಕ್ಕ ಜನಜಾನೆಯಲ್ಲಿ ಸಾತ್ತಿಕೊಂಡಿದ್ದ ಮಗುವನ್ನೆತ್ತಿಕೊಂಡು ಎಮಿಲಿಯಾ ಮುಗುಳ್ನಗುತ್ತಾ ಲಾರಿಯನ್ನೇರಿದಾಗ ರಿನಾಲ್ಡನೂ ಅವಳನ್ನು ಹಿಂಬಾಲಿಸಿದ್ದ. "ಏ ಕಾವಲುಗಾರ, ಸದ್ಯದಲ್ಲೆ ನಿನ್ನನ್ನು ಪುನಃ ಕಾಣುವೆ," ಎಂದು ಕೂಗಿಕೊಳ್ಳುತ್ತಿದ್ದಂತೆಯೇ ಲಾರಿ ಚಲಿಸಲಾರಂಭಿಸಿತ್ತು. ರಿನಾಲ್ಡನ ಆ ನುಡಿಯು ಹಿಂದೆ ಕೊಂಕಾಗಲಿ ದುರುದ್ದೇಶವಾಗಲಿ ಇರಲಿಲ್ಲವೆಂಬ ನಂಬಿಕೆ ಆತನಿಗಿತ್ತು. ಮುಂದೆ ಕೆಲವೆ ದಿನಗಳಲ್ಲಿ ಕಂಪನಿಯ ಲಾರಿಗಳು ಅಲ್ಲಿಗೆ ಬಂದಿದ್ದವು. ಗುಡಿಸಲುಗಳಲ್ಲಿದ್ದ ಸಾಮಾನೆಲ್ಲವನ್ನೂ ಈಗ ಸಾಗಿಸುವ ಕೆಲಸ ನಡೆದಿತ್ತು. ಸಾಮಾನುಗಳಿಂದ ಭರ್ತಿಯಾಗಿದ್ದ ಲಾರಿಗಳು ಭರ್ಜರಿಯಾಗಿ ಸದ್ದು ಮಾಡುತ್ತಾ ಹೊರಟುಹೋಗುತ್ತಿದ್ದವು. ಇಟ್ಟಿಗೆಗಳು, ಸಿಮೆಂಟಿನ ಚೀಲಗಳು ಟಾರಿನ ಡ್ರಂಗಳು ಸಾಗಿಸಲ್ಪಟ್ಟ ಬಳಿಕ ಆವರಣದ ಗೋಡೆಯನ್ನು ಕೆಡವಿ ಇಟ್ಟಿಗೆಗಳನ್ನು ಸಾಗಿಸಲಾರಂಭಿಸಿದ್ದರು. ಹಗಲಿರುಳೆನ್ನದೆ ಲಾರಿಗಳು ಧೂಳೆಬ್ಬಿಸುತ್ತಾ ಓಡುತ್ತಿದ್ದವು. ಅಂತಿಮವಾಗಿ ಗುಡಿಸಲುಗಳನ್ನು ಕಿತ್ತು ಸಾಗಿಸುವ ಕೆಲಸ ನಡೆದಿತ್ತು. ಕೊನೆಗೊಂದು ದಿನ ಬೆಳಿಗ್ಗೆ ಆತನ ಗುಡಿಸಲೂ ಅವಕ್ಕೆ ತುತ್ತಾಗಿತ್ತು.

ಸಮತಟ್ಟಾದ ಮಣ್ಣಿನ ನೆಲದಂತೆ ತೋರುತ್ತಿದ್ದ ಆ ಪ್ರದೇಶದಲ್ಲೀಗ ಅಲ್ಲಲ್ಲಿ ಚಿಗುರುತ್ತಿರುವ ಹುಲ್ಲುಗಳು, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಇಟ್ಟಿಗೆಯ ಚೂರುಗಳು, ಗುಂಡಿಗಳಲ್ಲಿ ನಿಂತಿದ್ದ ಮಳೆಯ ಕೊಚ್ಚೆ ನೀರು, ತುಸು ದೂರದಲ್ಲಿ ನಿರ್ವಿಕಾರವಾಗಿ ನಿಂತಿರುವ ಗುಡ್ಡಗಳನ್ನು ಬಿಟ್ಟರೆ ಮತ್ತೇನೇನೂ ಉಳಿದಿರಲಿಲ್ಲ. ಆತ ಬಹಳ ವರ್ಷಗಳನ್ನೇ ಕಳೆದಿದ್ದ ಆ ತಾಣವೂ ಈಗ ಆತನಿಗಿಲ್ಲವಾಗಿತ್ತು. ತನ್ನೆಲ್ಲಾ ಸಾಮಾನುಗಳಿದ್ದ ಬಟ್ಟೆಯ ಚೀಲವನ್ನು ಬೈಸಿಕಲ್ಲಿಗೆ ಕಟ್ಟಿಕೊಂಡಿದ್ದ ಆತ ಬೈಸಿಕಲ್ಲನ್ನು ತಳ್ಳಿಕೊಂಡು ಮಯಾಸ್ಸಲರಿಯಾನ ಕಡೆಗೆ ಹೆಜ್ಜೆ ಹಾಕಿದ. ಮುಖ್ಯ ರಸ್ತೆ ತಲುಪಿದ್ದೇ ನಿಂತ. ಕ್ಷಣ ಯೋಚಿಸಿ ಬೈಸಿಕಲ್ಲನ್ನೇರಿದ್ದ ಆತ ಇದ್ದಕ್ಕಿದ್ದಂತೆ ರೋಂ ನಗರದತ್ತ ಬೈಸಿಕಲ್ಲನ್ನು ತಿರುಗಿಸಿದ್ದ. ◆

ಒಬ್ಬ ಶ್ರೀಮಂತ ಜಿಪುಣ ಹಾದಿಹೋಕನೊಬ್ಬನನ್ನು ಕರೆದು ಊಟದ ಹಾಕಿದ. ಅವನು ಹಾಕಿದ ಕೆಟ್ಟ ಭೋಜನದಿಂದ ಹಾದಿ ಹೋಕ ಅನಾರೋಗ್ಯವುಂಟಾಗಿ ಕೊನೆಗೆ ತೀರಿಕೊಂಡ. ಶ್ರೀಮಂತ ಅವನ ಶವಸಂಸ್ಕಾರದ ವ್ಯವಸ್ಥೆ ಮಾಡಿದ. ಆ ಸಂದರ್ಭದಲ್ಲಿ ಮಾತನಾಡಿದ ಧರ್ಮಗುರುಗಳು ಹೀಗೆಂದರು: "ಶ್ರೀಮಂತರು ಏಕಕಾಲದಲ್ಲಿ ಮುಮ್ಮಡಿ ಪುಣ್ಯ ಸಂಪಾದಿಸಿದ್ದಾರೆ. ಅತಿಥಿ ಸತ್ಕಾರ, ರೋಗಿಯ ಉಪಚಾರ ಮತ್ತು ಶವಸಂಸ್ಕಾರ!"

–ಸವಡ ಎಂ. ಗಣಪತಿ ಅಡಿಗ

– ೭೩ –

ಪಾತ್ರ ವಿವೇಕ

ಪಾತ್ರ, ಭಾಂಡಿ, ಭಾಜನ ಇವು ಪಾತ್ರ ಸಾಮಾನ್ಯಕ್ಕೆ ಕನ್ನಡದಲ್ಲಿ ದೊರಕುವ ಪದಗಳು. **ಪಾತ್ರ** ಸಾಧಾರಣವಾಗಿ ಕರ್ನಾಟಕದಲ್ಲೆಲ್ಲ ಅರ್ಥವಾಗುವ ಪದ; **ಭಾಂಡಿ** ಉತ್ತರ ಕರ್ನಾಟಕದಲ್ಲಿ ಪಾತ್ರಕ್ಕೆ ಹೆಚ್ಚು ಪ್ರಚಲಿತವಾದ ಶಬ್ದ; **ಭಾಜನ** ಎಂಬುದು ಹೆಚ್ಚು ವಿರಳವಾದರೂ ಗ್ರಂಥಸ್ಥವಾದದ್ದು. ಮೂರನ್ನೂ ಸಂಸ್ಕೃತದಿಂದಲ್ಲೇ ಕನ್ನಡ ಸ್ವೀಕರಿಸಿದೆಯಾದರೂ ಇವುಗಳ ಕಥೆ ವಿಭಿನ್ನ.

ಪಾತ್ರ ಋಗ್ವೇದದಲ್ಲೇ ಸಿಗುತ್ತದೆ. ಅದರ ಮೂಲ ಅರ್ಥ ಕುಡಿಯುವುದಕ್ಕೆ ಬಳಸುವ ಸಾಧನ ಎಂಬುದಾಗಿ. ಗ್ರೀಕ್, ಲ್ಯಾಟಿನ್, ಸ್ಲಾವಿಕ್ ಭಾಷೆಗಳೊಡನೆ ಸಂಸ್ಕೃತಕ್ಕೆ ಸಮಾನವೆನ್ನಬಹುದಾದ **ಪಾ** (ಗ್ರೀಕ್–ಪೇ, ಲ್ಯಾಟಿನ್–ಪೋತಂ, ಸ್ಲಾವಿಕ್–ಪಿ–ತಿ) ಧಾತುವಿನಿಂದ "ಪಾತ್ರ" ಹುಟ್ಟಿತು. ಭಾಷೆಗಳಲ್ಲಿ ಸಾಮಾನ್ಯವಾಗಿ ಆಗುವ ಹಾಗೆ ವಿಶಿಷ್ಟದಿಂದ ಸಾಮಾನ್ಯಕ್ಕೆ ಅರ್ಥವಿಕಾಸ ಇಲ್ಲಿಯೂ ಆಗಿ, ಕುಡಿಯುವ ತಟ್ಟೆಯಿಂದ ಉಣ್ಣುವ ತಟ್ಟೆ, ತುಂಬಿಡುವ ಕುಡಿಕೆ, ತಾಟಿನಲ್ಲಿ ಬಡಿಸಿಟ್ಟ ಊಟ ಹೀಗೆಲ್ಲ ವೇದಕಾಲದಲ್ಲೇ ಅದು ಕೈಕಾಲು ಬೆಳೆಸಿಕೊಂಡು, ಐತರೇಯ ಬ್ರಾಹ್ಮಣದ ಕಾಲದಲ್ಲಿ ಹೊಳೆ ಹಳ್ಳಗಳ ಹರಿಯುವ ನೀರಿನ ತಳ ಅಥವಾ ಪಥವೆಂಬ ಅರ್ಥವನ್ನು ಕೊಡತೊಡಗಿತು (ಕನ್ನಡದಲ್ಲಿ ಕೂಡ ಈ ಅರ್ಥದಲ್ಲಿ **ಪಾತ್ರ** ಶಬ್ದ ಬಳಕೆಯಲ್ಲಿದೆ); **ಪಾತ್ರ** ಎಂಬುದು ದ್ರವಾದಿ ಪದಾರ್ಥಗಳನ್ನು ತನ್ನಲ್ಲಿ ಅಡಕ ಮಾಡಿಕೊಳ್ಳುತ್ತದೆ ಎಂಬುದರಿಂದ ("ಪಾ" ಧಾತುವಿಗೆ ಪಡೆದುಕೊಳ್ಳು ಎಂಬರ್ಥವೂ ಸಂಸ್ಕೃತದಲ್ಲಿದೆ) ಏನನ್ನಾದರೂ ಪಡೆದವನು ಮತ್ತು ಪಡೆಯಲು ಯೋಗ್ಯನಾದವನು ಕೂಡ ಪಾತ್ರನೆನಿಸಿದ. ಕರುಣಾಪಾತ್ರ, ದಾನಪಾತ್ರ ಇತ್ಯಾದಿ. "ಸತ್ಪಾತ್ರರೊಳ್ ದಾನಮಂ." ಯೋಗ್ಯನಲ್ಲದವನು "ಅಪಾತ್ರ" ನಾದ. "ಅಪಾತ್ರೇ ರಮತೇ ನಾರೀ" (ಹೆಣ್ಣು ಅಪಾತ್ರನಿಗೆ ಒಲಿಯುತ್ತಾಳೆ). ಮಹಾಭಾರತ ಕಾಲಕ್ಕಾಗಲೇ "ಪಾತ್ರ"ಕ್ಕೆ ಈ ಅರ್ಥ ಪ್ರಾಪ್ತವಾಗಿತ್ತು. ಅಷ್ಟರಲ್ಲೇ (ಮಣ್ಣಿನ) ಪಾತ್ರೆಗಳು ನಿಶ್ಚಿತ ಗಾತ್ರಗಳಲ್ಲಿ ತಯಾರಾಗುತ್ತಿರಬೇಕು. ಆದ್ದರಿಂದ ಶತಪಥ ಬ್ರಾಹ್ಮಣ, ಶ್ರೌತ ಸೂತ್ರಗಳಲ್ಲಿ "ಪಾತ್ರ" ಎಂಬುದಕ್ಕೆ ಒಂದು ವಿಶಿಷ್ಟ ಅಳತೆ (ಒಂದು ಆಢಕ) ಎಂಬರ್ಥ ಕಾಣಿಸುತ್ತದೆ.

ನಾಟಕದಲ್ಲಿ ಬೇರೊಬ್ಬನ ರೂಪದಲ್ಲಿ ನಟಿಸುವವನೂ "ಪಾತ್ರ"ನಾದ. ಯಾಕೆಂದರೆ ಆ ಇನ್ನೊಬ್ಬನನ್ನು ಇವನು ತನ್ನಲ್ಲಿ ಅಡಕ ಅಥವಾ ಸಮಾವೇಶ ಮಾಡಿಕೊಳ್ಳುತ್ತಾನೆ. ಕರಾವಳಿ ಕರ್ನಾಟಕದಲ್ಲಿ ದೇವತೆಗಳ ಅಥವಾ ಭೂತಗಳ ಆವೇಶ ಹೊಂದಿ ನರ್ತಿಸುವವನನ್ನು "ಪಾತ್ರಿ" ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ ವೇಶ್ಯೆಯರನ್ನು "ಪಾತರ"ದವರು ಎನ್ನುತ್ತಾರೆ.

ಉತ್ತರ ಕರ್ನಾಟಕದಲ್ಲಿ ಪಾತ್ರ ಸಾಮಾನ್ಯಕ್ಕೆ ಇರುವ **ಭಾಂಡಿ** ಶಬ್ದದ ಮೂಲ ಸಂಸ್ಕೃತದ **ಭಾಂಡ**. ಇದು ವೇದ ಕಾಲದಷ್ಟು ಹಳೆಯದಲ್ಲದಿದ್ದರೂ ಮನು, ಮಹಾಭಾರತದಷ್ಟು ಹಿಂದಿನಿಂದ ಪಾತ್ರ ಸಾಮಾನ್ಯಕ್ಕೆ ಮಾತ್ರವಲ್ಲದೆ ಪೆಟ್ಟಿಗೆ ಮೊದಲಾದ ತನ್ನೊಳಗೆ ಅಡಕಮಾಡಿಕೊಳ್ಳಬಲ್ಲ ಉಪಕರಣಗಳಿಗೆ ಅನ್ವಯವಾಗಿದೆ. ಯಾಜ್ಞವಲ್ಕ್ಯ ಸಂಹಿತೆಯ ಕಾಲದಿಂದಲೂ ಭಂಡ, **ಭಾಂಡ** ಶಬ್ದಗಳು ವ್ಯಾಪಾರದ ಸರಕುಗಳಿಗೆ ಹೆಸರಾಗಿದವು. **ಬಂಡಸಾಲೆ, ಭಂಡಾರ, ಭಾಂಡಾಗಾರ** ಮೊದಲಾದ ಶಬ್ದಗಳಲ್ಲಿ ಅದು ಇನ್ನೂ ವ್ಯಾಪಕಾರ್ಥ ಪಡೆದು **ಬಂಡವಾಳ**ದಲ್ಲಿ ಅದು ಸರಕು ಎಂಬರ್ಥವನ್ನು ಮೀರಿ ಹಣದ ಕ್ಷೇತ್ರವನ್ನೂ ಆಕ್ರಮಿಸಿದೆ. ಆದರೆ ಈ ಶಬ್ದ ಮೂಲತಃ ಸಂಸ್ಕೃತದ್ದೋ ಎಂಬುದೇ ಸಂಶಯಾಸ್ಪದ. ದೊಡ್ಡ ಮಣ್ಣಿನ ಮಡಿಕೆ ಎಂಬರ್ಥದ ತಮಿಳು **ಪಾಣ್ಯ, ಪಾಣಾ,** (ಕನ್ನಡ **ಬಾನ ಬಾನಿ**) ಶಬ್ದದ ಪ್ರಾಚೀನ ರೂಪದಿಂದ ಭಾಂಡ ಹುಟ್ಟಿರಬಹುದು.

ಭಾಜನ ಕೂಡ ಭಾಂಡದಷ್ಟೇ ಪ್ರಾಚೀನ. ಭಾಜ್ (= ಪಾಲು ಪಡೆ) ಧಾತುವಿನಿಂದ ಅದು ಬಂದಿದೆ. ಪಡೆದದ್ದು ತನಗೆ ಸೇರುವುದರಿಂದ ಭಾಜನ ಎನ್ನುವುದಕ್ಕೆ ಸೇರಿಸಿಕೊಳ್ಳುವುದು, ಅಡಕವಾಗಿಸುವುದು, ಪಾಲಿಗೆ ಅರ್ಹವಾಗಿರುವುದು ಎಂದಿತ್ಯಾದಿಯಾಗಿ ಅರ್ಥ ವಿಸ್ತರಣೆಯಾಗಿದೆ. ಭಾಜನ ಎಂಬುದು ಪಾತ್ರದ ಅನೇಕ ಅರ್ಥಗಳನ್ನು ಸ್ವೀಕರಿಸಿದೆ.

ಆದರೆ ಪಾತ್ರದ ಎಲ್ಲ ಅರ್ಥಗಳಿಗೆ ಭಾಜನ ಪಾತ್ರವಾಗಲಿಲ್ಲ. ನದೀ ಭಾಜನ ಎಂದು ಯಾರೂ ಹೇಳುವುದಿಲ್ಲ. ಹಾಗೆ ಭಾಂಡ ಪದ ಮೂಲಧನ (ಬಂಡವಾಳ) ಅಥವಾ ಸರಕು ಎಂಬರ್ಥ ಪಡೆದಂತೆ ಪಾತ್ರ, ಭಾಜನಗಳು ಪಡೆಯಲಿಲ್ಲ. ಹಾಗೆಯೇ "ಅಪಾತ್ರ" ಎನ್ನುವ ಬದಲು "ಅಭಾಜನ" ಸಲ್ಲದು. ಶಬ್ದಗಳು ಅರ್ಥ ವಿಸ್ತರಿಸಿಕೊಳ್ಳುವ ರೀತಿ ಅಗಮ್ಯವಾಗಿದೆ.

ಭಾಷೆಯಿಂದ ಭಾಷೆಗೆ ವಲಸೆ ಹೋಗುವಾಗಲೂ ಪದಗಳು ವಿಚಿತ್ರವಾಗಿ ನರ್ತಿಸುತ್ತವೆ. ಉದಾಹರಣೆಗೆ, ದಕ್ಷಿಣ ಕನ್ನಡದಲ್ಲಿ "ಪಾತ್ರ" ಪದವನ್ನು ತುಳು ಬ್ರಾಹ್ಮಣರು ಹೆಚ್ಚಾಗಿ ಬಳಸುತ್ತಿದ್ದರೆ ಇತರರು ಭಾಜನ (ಬಾಜೆನ) ಪದವನ್ನು ಸ್ವೀಕರಿಸಿದ್ದಾರೆ.

ಇಂಗ್ಲೀಷಿನಲ್ಲಿ ಪಾತ್ರ ಸಾಮಾನ್ಯಕ್ಕೆ ವೆಸಲ್ (vessel) ಶಬ್ದ ಇದೆ. ಇದು ಲ್ಯಾಟಿನ್ನಿನ ವಾಸ್ ಶಬ್ದದಿಂದ ಬಂದಿದೆ. ಅಡಕವಾಗಿಸಿಕೊಳ್ಳುವುದು ಎಂಬರ್ಥದ ಧಾತುವಿನಿಂದ ಸಂಸ್ಕೃತ ಪಾತ್ರದಂತೆಯೆ ಇತರ ಜನನ. ಇದೇ ಶಬ್ದವನ್ನು ಹಡಗು ಎಂಬರ್ಥದಲ್ಲಿಯೂ ಬಳಸುತ್ತಾರೆ. ಹಡಗು ಕೂಡ ತನ್ನಲ್ಲಿ ಸರಕನ್ನು ಅಡಕ ಮಾಡಿಕೊಳ್ಳುತ್ತದೆ ತಾನೆ. ಇಂಗ್ಲೀಷಿಗೂ ದ್ರಾವಿಡ ಭಾಷೆಗಳಿಗೂ ಇರುವ ದೂರ ಎಷ್ಟು! ಆದರೂ ತಮಿಳಿನ ಕಲ (ಂ) ಮತ್ತು ತೆಲುಗಿನ ಕಲವು ಶಬ್ದಗಳು ಪಾತ್ರವೆಂದೂ ಹಡಗು ಎಂದೂ ಅರ್ಥಕೊಡುತ್ತವೆ. ತಮಿಳಿನಲ್ಲಿ ಕಲವರ್ ತೆಲುಗಿನಲ್ಲಿ ಕಲವಂಗ ಎಂದರೆ ಹಡಗು ನಡೆಸುವವರು. ಕಲ್ಪನೆಯ ಸಾಮ್ಯಕ್ಕೆ ಇದೊಂದು ನಿದರ್ಶನ.

ವೇದಕಾಲದಿಂದ ನಮ್ಮೊಡನಿರುವ ಇನ್ನೊಂದು ಪಾತ್ರ ಸ್ಥಾಲೀ. ಅನ್ನ ಬೇಯಿಸುವ ಹಂಡೆ. ಪಾತೇಲಿ ಇತ್ಯಾದಿಗಳಿಗೆ ಅಥರ್ವವೇದ, ಬ್ರಾಹ್ಮಣ ಮೊದಲಾದವುಗಳಲ್ಲಿ ಆ ಹೆಸರು ಇತ್ತು. ಆಹುತಿಗಾಗಿ ಅನ್ನ ಬೇಯಿಸುವುದು ಎಂಬರ್ಥದಲ್ಲಿ ಸ್ಥಾಲೀ ಪಾಕ್ ಎಂಬ ಪದ ಇದೆ. ಕನ್ನಡದಲ್ಲಿ ಈ ಪದ ಥಾಲಿ ಎಂಬುದಾಗಿ ಚಿಕ್ಕ ಕವಳಿಗೆ ಅಥವಾ ಕೊಳಗ ಎಂಬರ್ಥದಲ್ಲಿ ಜೀವಂತವಾಗಿದೆ. ಹಿಂದಿಯಲ್ಲಿ ಅದು ಥಾಲೀ ಎಂಬ ರೂಪದಲ್ಲಿ ಊಟದ ತಾಟು ಅಥವಾ ಪರಿವಾಣ ಎಂಬರ್ಥ ಕೊಡುತ್ತದೆ. ಈ ಎರಡೂ ಅರ್ಥಗಳಲ್ಲಿ "ಸ್ಥಾಲೀ" ಪುರಾತನ ಕಾಲದಿಂದ ನಡೆದು ಬಂದಿದೆ. ಕನ್ನಡದ ತಳಿಗೆ ಕೂಡುವ ಬಹುಶಃ ಸಂಸ್ಕೃತದ ಸ್ಥಾಲಿಕಾ ಶಬ್ದದ್ದೇ ತದ್ಭವ ಅದು ಪರಿವಾಣ ಎಂದೇ ಅರ್ಥ ಕೊಡುತ್ತದೆ. ಈ ರೂಪದಲ್ಲಿ ಈ ಪದ ತಮಿಳು, ತೆಲುಗುಗಳಲ್ಲೂ ಇದೆ.

ಕಲಶ ಎಂಬುದು ಅತ್ಯಂತ ಪುರಾತನವಾದ ಇನ್ನೊಂದು ಪಾತ್ರ. ನೀರು ತುಂಬುವ ಕೊಡ ಮತ್ತು ಅದೇ ಆಕಾರದ ಗುಂಡಾದ ಜಾಡಿ, ತಂಬಿಗೆ ಮೊದಲಾದವುಗಳನ್ನು ಅದು ಸೂಚಿಸುತ್ತದೆ. ಋಗ್ವೇದದಲ್ಲೇ ಅದು ಕಾಣಿಸುವುದಲ್ಲದೇ ಗ್ರೀಕ್, ಲ್ಯಾಟಿನ್ನುಗಳಲ್ಲಿಯೂ cal x ಎಂಬ ರೂಪದಲ್ಲಿ ಅದು ಇರುವುದರಿಂದ ಆರ್ಯ ಜನಾಂಗಗಳು ವಿಭಜನೆ ಹೊಂದುವುದಕ್ಕಿಂತ ಮುಂಚೆಯೇ ಅಂಥದೊಂದು ಪಾತ್ರ ಅವರೊಡನೆ ಇದ್ದಿರಬಹುದು.

ಬಾಲಕಿ ಅಥವಾ ಹುರಮುರಿ ಭಟ್ಟಿ ಎನ್ನುತ್ತೇವಲ್ಲ ಅದು ಕೂಡ ವೇದಗಳಷ್ಟಲ್ಲದಿದ್ದರೂ ಶ್ರೌತ ಸೂತ್ರಗಳಷ್ಟು ಪ್ರಾಚೀನ. ಧಾನ್ಯ ಹುರಿಯುದಕ್ಕೆ "ಭ್ರಜ್ಜನ"ವೆಂದು ಸಂಸ್ಕೃತದಲ್ಲಿ ಶಬ್ದ. ಅದಕ್ಕೆ ಸಂವಾದಿಯಾಗಿ ಗ್ರೀಕಿನಲ್ಲಿ phrygein, ಲ್ಯಾಟಿನ್ನಿನಲ್ಲಿ fregere ಪದಗಳಿವೆ. ಭ್ರಾಷ್ಟ್ರ ಎಂದರೆ ಹುರಿಯುವ ಹಂಚು. ಭ್ರಷ್ಟ ಎಂದರೆ ಹುರಿಯುವ ಕೆಲಸ. ಆದರಿಂದಲೇ ಭಟ್ಟಿ ಬಂದಿದೆ. ಹುರಿದ ಧಾನ್ಯದಿಂದ ಮಾಡುವ ಖಾದ್ಯಗಳ ವಿಚಾರ ಯಜ್ಞ ಕರ್ಮದಲ್ಲಿ

ಕಲ್ಪನೆಯ ಅಗಾಧ ಶಕ್ತಿ

ಆರ್. ಎಸ್. ವೆಂಕಟರಾಮ್

ಅನಿಲಕುಮಾರ ಒಬ್ಬ ವಿದ್ಯಾರ್ಥಿ. ಪ್ರತಿ ದಿನ ಅವನು ಬೆಳಿಗ್ಗೆ ಬೇಗ ಎದ್ದು ಅಭ್ಯಾಸಕ್ಕೆ ತೊಡಗಬೇಕೆಂದು ಆಲೋಚಿಸುತ್ತಾನೆ. ಆದರೆ ಬೆಳಗಿನ ಜಾವದಲ್ಲಿ ಏಳುವುದಕ್ಕೇ ಆಗುವುದಿಲ್ಲ. ಹಿಂದಿನ ದಿನದ ಎಲ್ಲ ದೃಢ ನಿರ್ಧಾರಗಳನ್ನೂ ಮೀರಿ ನಿದ್ದೆ ಅವನನ್ನು ಸೆಳೆದು ಹಾಸಿಗೆಗೆ ಅಂಟಿಸಿಬಿಡುತ್ತದೆ.

ಪ್ರಕಾಶ ಒಂದು ಖಾಸಗಿ ಕಂಪನಿಯಲ್ಲಿ ನೌಕರ. ದಿನಕ್ಕೆ ಕನಿಷ್ಠ ಎಂದರೆ ಇಪ್ಪತ್ತು ಸಿಗರೇಟು ಸೇದುತ್ತಾನೆ. ಇತ್ತೀಚಿಗೆ ಸಿಗರೇಟು ಸೇದುವುದರಿಂದ ಅವನಿಗೆ ಯಾವ ಒಳ್ಳೆಯ ಪರಿಣಾಮವೂ ಕಾಣುತ್ತಿಲ್ಲ; ಕೇವಲ ಹೊಗೆ ಉಗುಳುತ್ತಿರುತ್ತಾನೆ. ಅತ್ತ ಆರೋಗ್ಯವೂ ಕ್ಷೀಣಿಸುತ್ತಿದೆಯಲ್ಲದೆ ಹಣವೂ ಹೆಚ್ಚು ಖರ್ಚಾಗುತ್ತಿದೆ. ಧೂಮಪಾನ ಆರೋಗ್ಯಕ್ಕೆ ಮಾರಕವೆಂದು ಅವನಿಗೆ ತಿಳಿದಿದ್ದರೂ ಈ ಅಭ್ಯಾಸವನ್ನು ತ್ಯಜಿಸಬೇಕೆಂದು ಹಲವು ತಿಂಗಳುಗಳಿಂದ ನಿರ್ಧಾರಗಳನ್ನು ಕೈಕೊಳ್ಳುತ್ತಿದ್ದರೂ ಇದುವರೆಗೆ ಆಗಿಲ್ಲ.

ಸೀನಪ್ಪ ಇಡೀ ಆಫೀಸಿನಲ್ಲಿ ಎಲ್ಲರಿಗೂ ಮೆಚ್ಚುಗೆಯ ವ್ಯಕ್ತಿ. ಆದರೆ ಅವನಲ್ಲಿರುವ ಒಂದೇ ಒಂದು ಕೆಟ್ಟ ಅಭ್ಯಾಸವೆಂದರೆ ಕುಡಿಯುವುದು. ಸಂಜೆ ಹೊತ್ತು ಕುಡಿಯದಿದ್ದರೆ ಅವನಿಗೆ ನಿದ್ದೆಯೇ ಬರುವುದಿಲ್ಲ. ತನ್ನ ಮದ್ಯಪಾನದಿಂದಾಗಿ ಮನೆಯವರ ಜೀವನ ಸಾಗುವುದು ಕಷ್ಟ; ತಾನು ಹೆಂಡತಿ, ಮಕ್ಕಳಿಗೆ ಕೊಡಬೇಕಾದಷ್ಟು ಗಮನ ಕೊಡಲಾಗುತ್ತಿಲ್ಲ ಎಂಬುದು ಅವನಿಗೆ ತಿಳಿದಿದೆ. ಮದ್ಯಪಾನವನ್ನು ಬಿಡಬೇಕೆಂದು ದಿನಕ್ಕೊಮ್ಮೆಯಾದರೂ ಆಲೋಚಿಸುತ್ತಾನೆ. ಆಯಿತು, ಇದೇ ಕೊನೆಯ ಬಾರಿ; ಇನ್ನು ಕುಡಿಯುವುದಿಲ್ಲ ಎಂದು ಪ್ರತಿಜ್ಞೆಗಳನ್ನು ಮಾಡುತ್ತಾನೆ. ಆದರೆ ಸಂಜೆಯಾದೊಡನೆ ಸಾಲ ಮಾಡಿಯಾದರೂ ಸರಾಯಿ ಅಂಗಡಿಗೆ ಹೋಗುವುದನ್ನು ತಪ್ಪಿಸಲಾಗುತ್ತಿಲ್ಲ.

ಶಾಮರಾವ್ ಅವರಿಗೆ ರಾತ್ರಿ ಎಂಬುದು ಒಂದು ದುಃಸ್ವಪ್ನದಂತೆ. ಅವರು ತಮ್ಮ ನಿದ್ರಾಹೀನತೆಗಾಗಿ ಹಲವು ಡಾಕ್ಟರರ ಮೊರೆ ಹೊಕ್ಕರು. ಈಗೀಗಂತೂ ನಿದ್ರೆ ಗುಳಿಗೆಗಳಿಲ್ಲದೆ ಅವರಿಗೆ ನಿದ್ರೆ ಬರುವುದೇ ಇಲ್ಲ ಎನಿಸಿಬಿಟ್ಟಿದೆ. ಸರಿಸುಮಾರು ಹೊತ್ತಿನ ವರೆಗೆ ಹಾಸಿಗೆಯಲ್ಲಿ ಅತ್ತಿಂದಿತ್ತ ಹೊರಳಾಡುತ್ತಲೇ ಇರುತ್ತಾರೆ. ತಮ್ಮ ನಿದ್ರಾಹೀನತೆಯ ಬಗ್ಗೆ ಚಿಂತಿಸಿ ಹಣ್ಣಾಗುತ್ತಿದ್ದಾರೆ.

'ಅವರ ಹೆಸರು... ಮನಸ್ಸಿನಲ್ಲಿದೆ. ಹೇಳೋಕೆ ಆಗ್ತಾ ಇಲ್ಲ. ಜ್ಞಾಪಕಕ್ಕೇ ಬರ್ತಾ ಇಲ್ಲ. ನಾಲಗೆ ಮೇಲೇ ಇದೆ. ಆದರೆ ಬಾಯಿಂದ ಹೊರಗೇ ಬರ್ತಾ ಇಲ್ಲ' ಹೀಗೆ ಯಾರಾದರೂ ಹೇಳುವುದನ್ನು ನೀವೂ ಕೇಳಿರಬಹುದು. ಅಥವಾ ಕೆಲವರು ಅಳುವನ್ನೋ ನಗುವನ್ನೋ ಕಷ್ಟಪಟ್ಟು ತಡೆದಷ್ಟೂ ಅದು ಮತ್ತಷ್ಟು ಉಕ್ಕಿ ಬರುತ್ತಿರುವುದನ್ನೂ ನೋಡಿರಬಹುದು. ಹೀಗೇಕೆ?

ಮೇಲೆ ನೋಡಿದ ಪ್ರತಿ ವ್ಯಕ್ತಿಯೂ ಏನನ್ನೋ ಮಾಡಬೇಕೆಂದು ನಿರ್ಧರಿಸಿದರೂ ಅದೇಕೆ ತದ್ವಿರುದ್ಧ ಪರಿಣಾಮವೇ ಆಗುತ್ತಿದೆ? ಅವರ ನಿರ್ಧಾರಗಳೇಕೆ ಕಾರ್ಯರೂಪಕ್ಕೆ ಬರುತ್ತಿಲ್ಲ? ನಿರ್ಧಾರವನ್ನಿ, ಆತ್ಮವಿಶ್ವಾಸವನ್ನಿ, ದೃಢ ನಿಶ್ಚಯವನ್ನಿ ಏನಾದರೆನ್ನಿ, ಅದೇಕೆ ಇವರ ಸಹಾಯಕ್ಕೆ ಬರುತ್ತಿಲ್ಲ? ಅವರ ನಿರ್ಧಾರಗಳನ್ನು ಅದಾವ ಶಕ್ತಿ ತೊಡೆದುಹಾಕುತ್ತಿದೆ?

'ಮನಸ್ಸಿದ್ದಲ್ಲಿ ಮಾರ್ಗ' ಹೋಗಬೇಕಾದ ಸ್ಥಳವನ್ನು ನಿಶ್ಚಯಿಸಿಕೊಳ್ಳಿ. ನೀವು ಖಂಡಿತ ಅದನ್ನು ತಲಪಬಲ್ಲಿರಿ. ದೃಢ ನಿರ್ಧಾರವಿದ್ದಲ್ಲಿ ಅರ್ಧ ಪ್ರಯತ್ನ ಯಶಸ್ವಿ ಆದಂತೆಯೇ.' ಮುಂತಾಗಿ ಹಿರಿಯರು ಹೇಳಿದರೂ ಮೇಲೆ ಕಂಡ ವ್ಯಕ್ತಿಗಳ ವಿಷಯದಲ್ಲೇಕೆ ಇದು ಸುಳ್ಳಾಗುತ್ತಿದೆ?

ನಿರ್ಧಾರ ಎಂಬ ಪದಕ್ಕೆ 'ಕ್ರಿಯೆಯನ್ನು ಸ್ವತಂತ್ರವಾಗಿ ನಿರ್ವಹಿಸುವ ಒಂದು ಗುಣ' ಎಂದು ಅರ್ಥಕೋಶ ಹೇಳುತ್ತದೆ. ಇದನ್ನು ನಾವು ಯಾವ ಅನುಮಾನವೂ ಇಲ್ಲದೆ ಒಪ್ಪಿಕೊಳ್ಳುತ್ತೇವೆ.

ಆದರೆ, ಇದು ಎಷ್ಟರ ಮಟ್ಟಿಗೆ ನಿಜ?

ಕ್ರಿಯೆ ಉಂಟಾಗುವುದು ನಿರ್ಧಾರದಿಂದಲ್ಲ–ಕಲ್ಪನೆಯಿಂದ

ನಿರ್ಧಾರ ಕಲ್ಪನೆಗೆ ಸೋಲುತ್ತದೆ ಎಂದು ಹೇಳಿದರೆ ನೀವು ಹುಬ್ಬೇರಿಸಬಹುದು. ಸುಳ್ಳು. ಮೌಢ್ಯದ ಪರಮಾವಧಿ ಎಂದು ಉದ್ಗರಿಸಬಹುದು. ಒಂದು ಸಣ್ಣ ಉದಾಹರಣೆಯನ್ನು ನೋಡೋಣ.

ನೆಲದ ಮೇಲೆ ಒಂದು ಅಡಿ ಅಗಲ, ಮೂವತ್ತು ಅಡಿ ಉದ್ದದ ಮರದ ಹಲಗೆಯೊಂದಿದೆ ಎಂದು ಭಾವಿಸಿ ಇದರ ಮೇಲೆ ನಡೆದುಹೋಗಬೇಕು. ಬಹಳ ಸುಲಭ ಅಲ್ಲವೆ? ಯಾರಾದರೂ ಈ ಹಲಗೆಯ ಮೇಲೆ ಅಂಚುಗಳಿಂದ ಹೊರಜಾರದಂತೆ ಎಷ್ಟು ಬಾರಿ ಬೇಕಾದರೂ ಓಡಾಡುತ್ತಾರೆ.

ಈಗ ಇದನ್ನೇ ಸ್ವಲ್ಪ ಬದಲಿಸಿ ನೋಡೋಣ. ಮರದ ಹಲಗೆ ನೆಲದ ಮೇಲಿರದೆ ದೇವಸ್ಥಾನವೊಂದರ ಗೋಪುರ ಎತ್ತರದಲ್ಲಿ ಇದೆ ಎಂದು ಭಾವಿಸೋಣ. ಈಗ ಯಾರಾದರೂ ಇದರ ಮೇಲೆ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ನಡೆದು ಹೋಗಬಲ್ಲರೆ? ಮೊದಲೆರಡು ಹೆಜ್ಜೆ ಇಡುವಷ್ಟರಲ್ಲಿ ಕಾಲು ನಡುಗುತ್ತದೆ. ತಲೆ ಸುತ್ತಿ ಕಣ್ಣು ಮಂಜಾಗುತ್ತದೆ. ಇನ್ನೊಂದು ಹೆಜ್ಜೆ ಇಡುವಷ್ಟರಲ್ಲಿ ನೆಲಕ್ಕೆ ಬೀಳುತ್ತಾರೆ. ಹಲಗೆ ನೆಲದ ಮೇಲಿದ್ದಾಗ ಸರಾಗವಾಗಿ ಓಡಾಡಬಹುದಾಗಿದ್ದದು ಈಗೇಕೆ ಹೀಗಾಯಿತು?

ಒಂದು ಸರಳ ಸತ್ಯ

ಮೊದಲ ನಿದರ್ಶನದಲ್ಲಿ ಕೆಳಕ್ಕೆ ಬೀಳಲಾರೆ, ಏನೂ ಆಗಲಾರದು ಎಂಬ ಭಾವನೆಯಿತ್ತು. ಎರಡನೇ ನಿದರ್ಶನದಲ್ಲಿ ತಾನೆಲ್ಲಿ ಕೆಳಕ್ಕೆ ಬಿದ್ದುಬಿಡುವೆನೋ ಎಂಬ ಊಹೆ, ಬೀಳಲಿದ್ದೇನೆಂಬ ಕಲ್ಪನೆ ಇತ್ತು.

ನಿರ್ಧಾರ ಹಾಗೂ ಕಲ್ಪನೆ

ನಾವು ತುಂಬ ಹೆಮ್ಮೆಪಡುವ 'ನಿರ್ಧಾರ' ಹಿಂದಿನ ನಿದರ್ಶನದಲ್ಲಿ ಯಾವುದೇ ಉಪಯೋಗಕ್ಕೆ ಬರಲಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಮತ್ತೊಮ್ಮೆ ಹಲಗೆಯ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ನೆಲಕ್ಕಿಂತ ಬಹಳ ಎತ್ತರದಲ್ಲಿ ತಮ್ಮ ಕೆಲಸ

ನಿರ್ವಹಿಸಬೇಕಾಗುವ ಸಣ್ಣ ಬಳಿಯುವವರು-ಮಾರಗೆಲಸದವರನ್ನು ನೋಡಿ. ಅವರು ಕೆಳಗೆ ಬೀಳುವುದಿಲ್ಲ. ಅವರ ಕಾಲು, ನಡು, ತಲೆ ತಿರುಗುವುದಿಲ್ಲ. ಏಕೆಂದರೆ ತಮಗೇನೂ ಸಂಭವಿಸುವುದಿಲ್ಲವೆಂದು ಅವರು ಭಾವಿಸುತ್ತಾರೆ.

ಮತ್ತೊಂದು ಉದಾಹರಣೆ: ಹಿಂದೆ ನೀವು ಸೈಕಲ್ ಸವಾರಿ ಕಲಿತಿದ್ದನ್ನು ಜ್ಞಾಪಿಸಿಕೊಳ್ಳಿ. ಮೊದಮೊದಲು ರಸ್ತೆಯ ಮೇಲಿನ ಸಣ್ಣ ಸಣ್ಣ ಕಲ್ಲು, ಗುಣಿಗಳು ಅಗಾಧವಾಗಿ ಕಾಣುತ್ತಿದ್ದುವಲ್ಲ. ಅವುಗಳನ್ನು ತಪ್ಪಿಸಬೇಕೆಂದು ಎಷ್ಟೆಲ್ಲ ಪ್ರಯತ್ನಿಸಿದರೂ ಸಾಧ್ಯವಾಗದೆ ಅವುಗಳಿಗೆ ಢಿಕ್ಕಿ ಹೊಡೆಯುತ್ತಿದ್ದುದು ಕೆಳಗೆ ಬೀಳುತ್ತಿದ್ದುದನ್ನು ನೆನೆಸಿಕೊಳ್ಳಿ.

ಅಲ್ಲೆಲ್ಲ ನಮ್ಮ ನಿರ್ಧಾರ, ಬಯಕೆಗಳನ್ನು ಮೀರಿ ಬೇರೊಂದು ಶಕ್ತಿ ಪ್ರಭಾವ ಬೀರುತ್ತಿತ್ತು. ಅದೇ ಕಲ್ಪನೆ-ನಮ್ಮ ಊಹೆ. ನಿರ್ಧಾರ ಯಾವಾಗಲೂ ಕಲ್ಪನೆಗೆ ಮಣಿಯುತ್ತದೆ. ಊಹೆಗೆ ವಿಶ್ವಾಸ ಶರಣಾಗುತ್ತದೆ.

ಕಲ್ಪನೆಯ ಕೈಗೊಂಬೆಗಳು

ಕಲ್ಪನೆ ನಮ್ಮ ಜೀವನದಲ್ಲಿ ಹೆಚ್ಚಿನ ಪರಿಣಾಮವನ್ನು ಬೀರುತ್ತದೆ. ಮನಸ್ಸಿನಲ್ಲಿ ನಾವು ಚಿತ್ರಿಸಿಕೊಂಡದ್ದು ವಾಸ್ತವದಲ್ಲಿ ಪ್ರಕಟಗೊಳ್ಳುತ್ತದೆ, ಪುನರಾವರ್ತನೆಯಾಗುತ್ತದೆ. ನಮ್ಮ ಕಾಲ್ಪನಿಕ ಊಹೆ ಎಲ್ಲ ನಿರ್ಧಾರಗಳನ್ನೂ ಗಾಳಿಗೆ ತೂರುತ್ತದೆ.

ಯಾವುದು ಆಗಬಾರದೆಂದು ಬಲವಂತವಾಗಿ ತಡೆಯುತ್ತೇವೋ ಅದು ನಮ್ಮ ಆಂತರಿಕ ಉದ್ವೇಗ, ಕಲ್ಪನೆಯ ಹೆದರಿಕೆ, ಸುಖದ ಊಹೆಗಳಿಂದಾಗಿ ಸಂಭವಿಸಿಯೇ ತೀರುತ್ತದೆ. ನಿರ್ಧಾರ ಬಲವಾದಷ್ಟೂ ಕಲ್ಪನೆ ವೇಗವಾಗಿ ಕಾರ್ಯರೂಪಕ್ಕಿಳಿಯುತ್ತದೆ.


ಹಾಗಾದ್ದರೆ, ನಮಗೆ ಪ್ರಿಯವಾದದ್ದನ್ನು ಸಾಧಿಸುವುದು ಹೇಗೆ?

ಕಲ್ಪನೆ ಮತ್ತು ನಾವು

ಸುಪ್ತ ಮನಸ್ಸಿನ ಬಗ್ಗೆ ನಿಮಗೆ ತಿಳಿದಿರಬಹುದು. ಇದು ವ್ಯಕ್ತಿ ಎಚ್ಚರವಾಗಿರುವಾಗ, ನಿದ್ರಿಸುವಾಗ ಯಾವಾಗಲೂ ಜಾಗೃತವಾಗಿರುತ್ತದೆ. ವ್ಯಕ್ತಿ ಮರೆತರೂ ಇದು ಎಷ್ಟೋ ವಿಷಯಗಳನ್ನು ದಾಖಲಿಸಿಕೊಂಡಿರುತ್ತದೆ. ಅವನ ದಿನನಿತ್ಯದ ನಡವಳಿಕೆಗಳಲ್ಲಿ ಗಮನಾರ್ಹ ಪ್ರಮಾಣದ ಪ್ರಭಾವ ಬೀರುತ್ತದೆ. ಆದರೆ, ಒಂದು ವ್ಯತ್ಯಾಸ: ಸುಪ್ತ ಮನಸ್ಸು ಪುಟ್ಟ ಮಗುವಿನಂತಹುದು. ಬಹಳ ಬೇಗ ಮೋಸ ಹೋಗುತ್ತದೆ. ಹೇಳಿದ್ದನ್ನೆಲ್ಲ ಅಕ್ಷರಶಃ ನಂಬುತ್ತದೆ. ಸುಪ್ತ ಮನಸ್ಸಿನ ಈ ಮುಗ್ಧತೆಯನ್ನು ನಮ್ಮ ಒಳ್ಳೆಯದಕ್ಕಾಗಿ, ನಿಶ್ಚಿತ ಪರಿಣಾಮಗಳಿಗಾಗಿ ಉಪಯೋಗಿಸಿಕೊಳ್ಳಬಹುದು.

ಇಂದಿನಿಂದ ನೀವು

ಏನಾಗಬೇಕೆಂದು ಬಯಸುತ್ತೀರೋ ಅದರ ಬಗ್ಗೆ ಯೋಚಿಸಿ; ಅದು ಈಗಾಗಲೇ ಸಂಭವಿಸಿದೆಯೆಂದು ಊಹಿಸಿ ಯಾವುದಕ್ಕೂ ಬಲವಂತವಾಗಿ ಮನಸ್ಸಿನ ಮೇಲೆ ಹೇರಬೇಡಿ. ಕೆಲ ದಿನಗಳಲ್ಲೇ ಬದಲಾದ ಪರಿಣಾಮಗಳನ್ನು ಕಾಣುತ್ತೀರಿ.



ಪ್ರಪಂಚದಲ್ಲಿ ಪ್ರತಿಯೊಬ್ಬ ಬಿತ್ತಿದ್ದನ್ನೇ ಬೆಳೆಯುತ್ತಾನೆ - ವಿಲಾಸಿ ತೋಟಗಾರ ಮಾತ್ರ ಇದಕ್ಕೆ ಅಪವಾದ.

-ಸಿ. ಕೆ.

ನಿಮ್ಮ ಚಿಂತೆ ಕಳೆಯುವ
ಮಧುರಕಂಠ ಇವರದು

ಶಿವಮೊಗ್ಗ ಸುಬ್ಬಣ್ಣ

ಡಾ. ಎ. ಎಸ್. ವೇಣುಗೋಪಾಲರಾವ್



ನಮ್ಮ ಸುಬ್ಬಣ್ಣ ತನ್ನ ಶಿವಮೊಗ್ಗೆಯ ಬೀದಿಗಳಲ್ಲಿ ಸುವೇಗ ಏರಿ ಸಾಗುವಾಗ ಅಯಾಚಿತವಾಗಿ ಗಣಪತಿಯ ನೆನಪು ಬರುತ್ತಿತ್ತು. ಸುಬ್ಬಣ್ಣ ಬೆಳ್ಳಗೆ ದುಂಡ ದುಂಡಗೆ ಧಡೂತಿಯಾಗಿರುವ ಆಸಾಮಿ. ಬೇಸಗೆಯಲ್ಲೂ ಉಲ್ಲನ್ ಕೋಟು ಟೈ ಧರಿಸಿ ದೊಡ್ಡದಾಗಿ ನಗುತ್ತಾ ತಿರುಗಾಡುವ ರಂಜಕ ವ್ಯಕ್ತಿ. ಆತನ ಆಕಾರಕ್ಕೆ ಈ ವಾಹನ ತೀರ ಚಿಕ್ಕದು.

ಏನೋ ಸೀರಿಯಸ್ ವಿಷಯ ಮಾತನಾಡುತ್ತ ಗೆಳೆಯರೊಡನೆ ನೆಹರೂ ರಸ್ತೆಯಲ್ಲಿ ನಿಂತಿರುವಾಗ ಅಥವಾ ಪ್ರಪಂಚವೇ ತಲೆಯ ಮೇಲೆ ಬಿದ್ದಂತೆ ಚಿಂತಿತ ಮುಖ ಹೊತ್ತು ನೀವು ಸಾಗುತ್ತಿರುವಾಗ, ಟರರ್‌ರ್ ಸದ್ದು ಕಿವಿಗೆ ಬಿದ್ದ. ತಿರುಗುವಷ್ಟರಲ್ಲಿ ಬೆನ್ನಮೇಲೆ ತಪ್ಪನೆಂದು ಒಂದು ಪೆಟ್ಟು, ಅದು ಸಾಕಷ್ಟು ಬಲವಾದುದೇ, ನನ್ನಂತಹ ಬಡಕಲ ತತ್ತರಿಸಲು ಅದು ಸಾಕು. ಆ ಪೆಟ್ಟಿನೊಡನೆ ಸುಬ್ಬಣ್ಣ ನಿಮ್ಮನ್ನು ಆಕ್ರಮಿಸುತ್ತಾರೆ. "ನಡೀರಿ ಬೈಟೂ ಹಾಕೋಣ." ಎನ್ನುತ್ತಾರೆ. ಮೌನವಾಗಿ ಅವರ ಹಿಂದೆ ಸಾಗುವುದು ಕ್ಷೇಮ, ಲಾಭದಾಯಕ. "ಈಗ ತಾನೇ ಆಗಿದೆ..." ಎಂದು ಏನಾದರೂ ಗೊಣಗಿದಿರೋ ಚಾಟಿ ಪೆಟ್ಟು ಸಿದ್ಧ. "ಏನು ಬುದ್ಧಿಜೀವಿಗಳು ನಮ್ಮಂಥೋರ ಜತೆಗೆ ಕಾಫಿ ಕುಡಿಬಾರ್ದೋ?"

ಬುದ್ಧಿಜೀವಿಗಳು ಎಂದು ಸ್ವಯಂ ಘೋಷಿಸಿಕೊಳ್ಳುವ ಗೂಡಾರದ ಮನುಷ್ಯರನ್ನು ಚುಡಾಯಿಸುವುದು ಸುಬ್ಬಣ್ಣನಿಗೆ ಖಯಾಲಿ. ಚುನಾವಣೆ ದಿನಗಳಲ್ಲಂತೂ ಇದು ತುಂಬ ಜೋರು.

ಈ ಬಿಡುಬೀಸುತನ ಸುಬ್ಬಣ್ಣನ ಮರೆಯಲಾಗದ ಲಕ್ಷಣ. ಆತ ತಮ್ಮ ಅಬ್ಬರದ ನಗೆಯಿಂದ ಮುಖದ ತುಂಬು ಚೆಲುವಿನಿಂದ ನಿಮ್ಮನ್ನು ಬಹುಬೇಗ ಸುತ್ತಿಬಿಡುತ್ತಾರೆ. ನೀವು ಮರ್ಯಾದೆ ರಾಮಣ್ಣನಾಗಿದ್ದರೆ ಆತನ ಪುಟ್ಟ ಸುವೇಗದಂತೆ ನೀವು ಕುಸಿದು ಹೋಗುತ್ತ ಇಲಿಯ ಮರಿಯಾಗುತ್ತೀರಿ. ಆತ ನಿಮ್ಮನ್ನು ನಾಲ್ಕು ಕಡೆಯು ಮುಚ್ಚಿ ಮರೆಮಾಡಿಬಿಡುತ್ತಾರೆ. ಆದುದರಿಂದ ನನ್ನ ಹಾಗೆ ವಿವೇಕಿಗಳಾಗಿ ಅವರೊಡನೆ ಸೆಣಸುವ

ಸೀಕ್ರೆಟ್ ವಿಧಾನಗಳನ್ನು ಕಲಿತುಕೊಳ್ಳಿ. ಎದುರಿನಿಂದ ಆತ ಬಂದರೆ ಪೆಟ್ಟು ಕೊಡಲು ಎತ್ತಿದ ಬಲವಾದ ಕೈಯನ್ನೇ ಹಿಸುಕಿ "ಹಲೋ" ಎನ್ನಿ "ಬೈಟೂಗೆ ಬನ್ನಿ" ಆಂದರೆ "ಎಂಥ ಜುಗತನಾರೀ ನಿಮ್ಮದು? ಮೈಸೂರು ಮಂದಿ ಹಾಗೆ. ಅಚ್ಚ ಕಟ್ಟಾಗಿ ಎರಡು ಕಪ್ಪು ಕಾಫಿ ಕೊಡಿಸಬಾರ್ದಾ?" ಎನ್ನಿ. ಅವರಿಗೆ ತುಂಬ ಖುಷಿಯಾಗಿ ಕಾಫಿ ಜತೆಗೆ ಚಕ್ಕುಲಿಯೂ ನಿಮಗೆ ದೊರೆಯುತ್ತದೆ. ಅದನಕ್ಕು ನಾಲಿಗೆಯಾಡಿಸುತ್ತ ಆತ ಸುಖವಾಗಿ ಮಾತನಾಡುತ್ತ ಹೋಗುತ್ತಾರೆ. ಬೇಂದ್ರೆ ಅಡಿಗ ಅಶ್ವತ್ಥ ಕಾರಂತ ಅಂತ ನಗುನಗುತ್ತ ಆಡುತ್ತ ಬಹುಕಾಲ ನಿಮ್ಮ ಮನಸ್ಸನ್ನು ಮುತ್ತುತ್ತಾರೆ. ಸ್ನೇಹಜೀವಿ ಸುಬ್ಬಣ್ಣನಿಂದ ನಿಮ್ಮ ಮುಖದ ಗಂಟು ಸಡಿಲುವಾಗುತ್ತದೆ. ಸುಖದ ಯಾವುದೋ ನೆನಪುಗಳು ತೇಲಿ ಬರುತ್ತವೆ. "ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್" ಎಂಬಂತೆ ಮನಸ್ಸು ಪರ್ಯುತ್ಸುಕವಾಗಿ ಬಿಡುತ್ತದೆ. ಸುಬ್ಬಣ್ಣನಲ್ಲಿ ನೋಡಲಿಕ್ಕೂ ಉಂಟು, ಕೇಳಲಿಕ್ಕೂ ಉಂಟು.

ಶಿವಮೊಗ್ಗ ಸುಬ್ಬಣ್ಣನ ಹೆಸರು ಜಿ. ಸುಬ್ರಮಣ್ಯಂ. ಬಿ.ಎ., ಬಿ.ಕಾಂ., ಬಿ. ಎಲ್. ಎಂದು ಕೇಳಿದ್ದೇನೆ. ಸರಿಯಾಗಿ ತಿಳಿದಿಲ್ಲ. ಆತನನ್ನು ಒಮ್ಮೆ ಆಫೀಸಿಗೆ ಹುಡುಕಿ ಹೋಗಿ ಅಬ್ಬರದ ಈ ಬೋರ್ಡುಗಳು ಇಂಗ್ಲಿಷಿನಲ್ಲಿ ಕನ್ನಡದಲ್ಲಿ ನೋಡಿ ಈತ ನನ್ನ ವ್ಯಕ್ತಿ ಅಲ್ಲವೇನೋ ಎಂದು ಹಾಗೆಯೇ ಸಾಗಿಹೋಗಿದ್ದೇನೆ. ಈ ಹೆಸರು ಶಿವಮೊಗ್ಗೆಯಲ್ಲಿ ಬಹುಜನಕ್ಕೆ ನನ್ನ ಹಾಗೆಯೇ ತಿಳಿಯದು. ಚಡ್ಡಿ ಹಾಕಿಕೊಂಡು ಗಣಪತಿ ಪೆಂಡಾಲಿನ ಮುಂದೆ ಮುಂದೆ ಸ್ವಯಂಸೇವಕನಾಗಿ ಸುತ್ತುತ್ತಿದ್ದ ಸುಬ್ಬಣ್ಣ ಈಗ ಆಡಿಟರ್ ಸುಬ್ಬಣ್ಣ ಆಗಿದ್ದಾನೆ. ಹಾಗೆಂದರೂ ಅದು ಯಾರು? ಎನ್ನುತ್ತಾ ಹುಬ್ಬೇರಿಸುವ ಜನ ಇದ್ದೇ ಇದ್ದಾರೆ. ಆಗ 'ಆಕಾಶವಾಣಿ ಸುಬ್ಬಣ್ಣ', 'ಎಂದಾಗ 'ನಮ್ಮ ಸುಬ್ಬಣ್ಣನೇ' ಎಂದು ಆತನನ್ನು ಬಿಗಿದುಕೊಳ್ಳುತ್ತಾರೆ.

ನನಗೆ ಇದೇ ಒಂದು ಸೋಜಿಗ. ಸಾಮಾನ್ಯವಾಗಿ ನಮಗೆಲ್ಲ ಒಂದು ಸೀಮಿತ ಸ್ನೇಹವಲಯ ಇದೆ. ನಾನು ಮೇಷ್ಟ್ರು. ನನ್ನ ಸುತ್ತ ಹುಡುಗ ಹುಡುಗಿಯರು ಸಹೋಪಾಧ್ಯಾಯರು – ಇದು ನನ್ನ ಬಳಗ. ಮಧ್ಯಾಹ್ನ ಎರಡು ಗಂಟೆ ಸುಮಾರಿಗೆ ನ್ಯಾಶನಲ್ ಹೈಸ್ಕೂಲಿನ ಸರ್ಕಲ್ ಸಮೀಪದ ಒಂದು ಹೋಟೆಲಿಗೆ ನುಗ್ಗಿ ನೋಡಿ. ಕರಿ ಕೋಟುಧಾರಿಗಳ ಒಂದು ಭಾರಿ ಗುಂಪು ಬಿಳಿ ಹಾಳೆ ಸುರುಳಿ ಕೈಯಲ್ಲಿ ಹಿಡಿದು ಹಿಯರಿಂಗು ಅಡ್ಜರ್ನು ನೋಟೀಸು ಅಂತ ಹರಟುತ್ತಾ ಕಾಫಿ ಹೀರುತ್ತಿರುತ್ತೆ. ಅದು ವಕೀಲರ ತಂಡ. ಹೀಗೇ ಹಕ್ಕಿಗಳು ಒಟ್ಟುಗೂಡುತ್ತವೆ. ಸಾಹಿತ್ಯ ರಚನೆಗೂ ತೊಡಗಿದ ಅಧ್ಯಾಪಕರಿಗೆ ತಮ್ಮ ವೃತ್ತಿಯ ಹೊರಗೆ ಹತ್ತು ಜನದ ಹೆಚ್ಚು (ಅಥವಾ ಇನ್ನು ಕಡಿಮೆ) ಪರಿಚಯ ಇದ್ದೀತು. ಅಧ್ಯಾಪಕರು ಎಂದುಕೊಳ್ಳುವ ಕೆಲವು ರಾಜಕಾರಣಿಗಳಿಗೆ, ಅಥವಾ ಗದ್ದೆಯಲ್ಲಿ ಕಬ್ಬು ನಾಟಿ ಹಾಕಿಸುತ್ತಾ ಹೊಲದಲ್ಲಿ ಕಾಯಿ ಕೀಳಿಸುವ ಕೆಲವು ವೈದ್ಯರಿಗೆ ಇತರ ವೃತ್ತಿಗಳ ಧಂದೆಗಳ ಸ್ನೇಹಿತರೂ ಇದ್ದಾರು. ಇದು ಸಹಜವೆ. ನಮ್ಮ ವ ನಮ್ಮ ಮನಸ್ಸನ್ನು ತಿದ್ದುತ್ತದೆ, ಸ್ನೇಹಿತರನ್ನು ನಿರ್ಧರಿಸುತ್ತದೆ. ಆದರೆ ಶಿವಮೊಗ್ಗ ಸುಬ್ಬಣ್ಣನ ಸ್ನೇಹವಲಯದಲ್ಲಿ ವಿದ್ಯಾರ್ಥಿಗಳು ಅಧ್ಯಾಪಕರು ಮಾಜಿ ಹಾಲಿ ಕಾಂಗ್ರೆಸಿಗರು ಜನತಾ ಪಕ್ಷದವರು ವೃತ್ತಿಗಾಯಕರು ಹವ್ಯಾಸಿ ನಟರು. ಅಬ್ಬ! ಈ ವಲಯ ಎಷ್ಟು ದೊಡ್ಡದು! ಹೆಮ್ಮೆಯಾಗುತ್ತದೆ. ಇಂಥವರನ್ನೆಲ್ಲ ನುಡಿಸುತ್ತ ನಗಿಸುತ್ತಾ ರೇಗಿಸಿ ಕೀಟಲೆ ಮಾಡುತ್ತಾ ಸುಬ್ಬಣ್ಣ ದಿನವನ್ನು ಕಳೆದು ಯಾವುದೋ ಅವೇಳೆಯಲ್ಲಿ ತನ್ನ ಆಡಿಟ್ ಆಫೀಸಿನ ಬಾಗಿಲು ತೆರೆಯುತ್ತಾರೆ. ತಮ್ಮ ಗಿರಾಕಿಗಳಿಗೆ ನೆರವಾಗುತ್ತಾರೆ. ಈ ಅವೇಳೆಯಲ್ಲಿ ಬಾಗಿಲು ತೆರೆವ ಬಗ್ಗೆಯೂ ಸುಬ್ಬಣ್ಣನದೇ ಆದ ಒಂದು ಜೋಕ್ ಇದೆ. ಆದರೆ ಅದನ್ನು 'ಕಸ್ತೂರಿ'ಯ ಗಂಭೀರವಾಚಕರಿಗೆ ಗಟ್ಟಿಯಾಗಿ ಹೇಳಲು ನನಗೆ ಸಂಕೋಚ. ಅಲ್ಲದೆ ಅದನ್ನು ಕೇಳಿದಾಗ ನಗೆಯು ಒದಲು ನಿಮ್ಮ ಕಣ್ಣ ಅಂಚಿನಲ್ಲಿ ನೀರು ಚಿಮ್ಮಿದರೂ ಆಶ್ಚರ್ಯವಿಲ್ಲ. ಕಣ್ಣೀರು ಕಾಣಿಸುವುದು ಸುಬ್ಬಣ್ಣನಿಗೆ ಸುತರಾಂ ಇಷ್ಟವಿಲ್ಲ.

ಶಿವಮೊಗ್ಗೆಯ ಸಾಹಿತ್ಯಕ ಸಮಾರಂಭಗಳಲ್ಲಿ ಸುಬ್ಬಣ್ಣ ಆಸಕ್ತ ಶ್ರೋತೃಗಳಲ್ಲಿ ಒಬ್ಬರು. ಸಾಹಿತ್ಯದ ಹೊಸ ಮಾರ್ಗ ಒಲವುಗಳನ್ನು ಕುತೂಹಲದಿಂದ ಗಮನಿಸುತ್ತಾರೆ. ಇಂತಹ ಸಮಾರಂಭಗಳಲ್ಲಿ ಮೌನವಾಗಿ ಕುಳಿತ ಸುಬ್ಬಣ್ಣನಿಗೆ ಇದ್ದಕ್ಕಿದ್ದಂತೆ ಕಾರ್ಯಕರ್ತರ ಕಿವಿಮಾತು. ಸಭೆಯ ಅಧ್ಯಕ್ಷರೇ ಒಮ್ಮೊಮ್ಮೆ "ಬನ್ನೀಪ್ಪಾ, ಒಂದು ಭಾವಗೀತೆ ಹಾಡಿ," ಎಂದುಬಿಡುತ್ತಾರೆ. ಹೆಚ್ಚು ಕೊಸರಾಡದೆ ಸುಬ್ಬಣ್ಣ ಎದ್ದು ವೇದಿಕೆಗೆ ನಡೆಯುತ್ತಾರೆ. ಒಂದು ಕೈಯಲ್ಲಿ ಮೈಕ್ ಹಿಡಿದು ಇನ್ನೊಂದನ್ನು ಬೆನ್ನ ಹಿಂದೆ ಕಟ್ಟಿಕೊಂಡು ಸುಬ್ಬಣ್ಣ ಒಮ್ಮೆ ಮಾತ್ರ ಸಭೆಯನ್ನು ವಿಹಂಗಮ ದೃಷ್ಟಿಯಿಂದ ನೋಡುತ್ತಾರೆ. ಅಪ್ರಯತ್ನವಾಗಿ ಅವರ ಕಣ್ಣುಗಳು ಮುಚ್ಚುತ್ತವೆ. ತುಟಿ ತೆರೆಯುತ್ತದೆ. ತುಂಬು ನಾದದ ಪರಿಪುಷ್ಟದನಿ ಮೊರೆಯುತ್ತದೆ. ಮೊಗೆದು ಮೊಗೆದು ಸುರಿದಂತೆ ರಾಗವಾಹಿನಿ ಉಕ್ಕಿ ಹರಿಯುತ್ತದೆ. ಇದರ ಪ್ರಭಾವ ತುಂಬ ಗಾಢವಾದದ್ದು. ಬೇಗ ಅಳಿಸುವಂತಹುದಲ್ಲ. ಯಾವುದೋ ಹಿಂದೂಸ್ತಾನಿ ರಾಗಛಾಯೆ. ದೇಸ್ ಆಗಬಹುದು. ಕಾಫಿಯಾದೀತು, ಭೀಮ್‌ಪಲಾಸ್ ನಡೆದೀತು, ಅದರ ನೆರಳಿನಲ್ಲಿ ಸಾಹಿತ್ಯವನ್ನು ಬಿಡಿಸುತ್ತಾ ಹೋಗುತ್ತಾರೆ. "ಓ ನನ್ನ ಚೇತನಾ ಆಗು ನೀ ಅನಿಕೇತನಾ" ಆಗಬಹುದು. "ನೀನು ಸಕ್ಕರೆ ಹಾಲು ಸಕ್ಕರೆ ಹಾಲಿನಲ್ಲಿ ಸಕ್ಕರೆ" ಆಗಬಹುದು. ಸಂಗೀತದ ಅಬ್ಬರದಲ್ಲಿ ಸಾಹಿತ್ಯ ಎಂದೂ ಮಸುಳುವುದಿಲ್ಲ. ಕವಿಭಾವಕ್ಕೆ ಎಂದೂ ಲೋಪ ಬರುವುದಿಲ್ಲ. ಅದು ಮತ್ತಷ್ಟು ಲವಲವಿಕೆಯಿಂದ ಬೆಳಗುತ್ತದೆ. ತಾಳದ ಪೆಟ್ಟಿಗಾಗಿ "ಓದಿ ಬಾರೈ ವೈಕುಂಟಪತಿ ನೀನು" ಎಂದು ಕತ್ತರಿಸುವ ಹವ್ಯಾಸ ಸುಬ್ಬಣ್ಣನದಲ್ಲ. ಸಂಗೀತವನ್ನೇ ಸಾಹಿತ್ಯಕ್ಕೆ ಒಲಿಸಿಕೊಳ್ಳುತ್ತಾರೆ, ಪಳಗಿಸುತ್ತಾರೆ. ಹೀಗೆ ಸಾಹಿತ್ಯದ ಪರಿಚಾರಿಕೆಯನ್ನು ಸುಬ್ಬಣ್ಣ ಕಳೆದ ಹತ್ತು ಹದಿನೈದು ವರ್ಷಗಳಿಂದ ಮಾಡುತ್ತಲೇ ಇದ್ದಾರೆ. ಇವರ ರಾಗ ಭಾವ ಲಯದ ತ್ರಿವೇಣಿ ಸಂಗಮದ ಶುಚಿ ರುಚಿಯನ್ನು ಕಂಡು ಕೇಳಿದ ರಾಷ್ಟ್ರಕವಿ ಕುವೆಂಪು ಅವರು ಸಮಾತ್ರ ಕಾಲೇಜಿನ ಒಂದು ಸಮಾರಂಭದಲ್ಲಿ ತುಂಬು ಹೃದಯದಿಂದ ನುಡಿದರು, "ಇವರು ನೋಡಿ ಹೇಗೆ ಹಾಡಿದರು, ಕವಿಯ ಭಾವ ಸ್ಪಷ್ಟವಾಗಿ ಹೊಮ್ಮುವ ಹಾಗೆ. ಭಾವಗೀತೆ ಹಾಡಿದರೆ ಹಾಗೆ ಹಾಡಬೇಕು."

ಸುಬ್ಬಣ್ಣ ಹೀಗೆ ಸುಖವಾಗಿ ಹಾಡುತ್ತಾ ಭಾವಗೀತೆಯನ್ನು ಮುಗಿಸುತ್ತಾರೆ. ಆಗಲೇ ಮುಚ್ಚಿದ ಕಣ್ಣು ತೆರೆಯುತ್ತದೆ. "ಇದೇನು ಸುಬ್ಬಣ್ಣ ಈ ಯೋಗ ಸಮಾಧಿ? ಕಣ್ಣು ತೆರೆದೇ ಹಾಡಬಾರದಾ!" ಎಂದರೆ, "ಒಂದು ಸಾರಿ ಹಾಗೆ ಟ್ರೈ ಮಾಡ್ದೇರಿ. ಆದರೆ ಎದುರಿಗೆ ನೋಡ್ತೀನಿ, ಸಾವಿರಾರು ಜೋಡಿ ಕಣ್ಣು ನನ್ನೇ ನೋಡ್ತಿವೆ, ನೆಟ್ಟ ನೋಟದಿಂದ. ಅಬ್ಬಾ ಎಷ್ಟು ಮುಜುಗರ ಆಯ್ತು ಗೊತ್ತಾ! ನನ್ನ ಮೂಡೇ ಹೋಗಿ ಬಿಡ್ತು ಹಾಳಾದ್ದು. ನನ್ನ ಕೈಲಾಗೋದಿಲ್ಲಪ್ಪ!" ಹಾಡುವಾಗ ಸುಬ್ಬಣ್ಣ ಅಂತರಂಗದಿಂದ ಹಾಡುತ್ತಾರೆ. ಅನುಭವಿಸಿ ಹಾಡುತ್ತಾರೆ. ಅದು ಒಳಗುಮ್ಮಿದಾನಂದತನು ತುಂಬಿ ತುಳುಕಿ ಬಾನ್ದೆರಗಿಳಿದು ಮೋಹಿಸುವ ರಾಗ ರಂಜನಿ. ಅಂತೆಯೇ ಅದು ಅಷ್ಟು ಮೋಹಕ.

೧೯೭೮ ರಲ್ಲಿ ಸುಬ್ಬಣ್ಣನಿಗೆ ವರ್ಷದ ಶ್ರೇಷ್ಠ ಹಿನ್ನೆಲೆ ಗಾಯಕನೆಂದು ರಾಷ್ಟ್ರಪ್ರಶಸ್ತಿ ಬಂದಿತು. ಅವರ ಜೀವನದ ರೋಮಾಂಚಕಾರೀ ಅನುಭವ ಅದು. ಪತ್ರಿಕೆಗಳಲ್ಲಿ ಸುದ್ದಿ ಓದಿ, ಭಾವಚಿತ್ರಗಳನ್ನು ನೋಡಿ ನಮಗೆ ಸ್ನೇಹಿತರಿಗೆ ಸಂತೋಷ ಹೆಮ್ಮೆ. ಸುಬ್ಬಣ್ಣ ಮನೆತನಕ್ಕೆ ಹೆಸರು ತಂದರು. ಕರ್ನಾಟಕಕ್ಕೆ ಕೀರ್ತಿ ತಂದರು. ಶಿವಮೊಗ್ಗೆಯ ಹೆಮ್ಮೆ ಅವರು.

ಪ್ರಶಸ್ತಿ ಸ್ವೀಕರಿಸಲು ಸುಬ್ಬಣ್ಣ ಕುಟುಂಬ ಸಮೇತ ದೆಹಲಿಗೆ ಹೋಗಿದ್ದರು. "ಸರ್ಕಾರದ ಆತಿಥ್ಯ. ಕರ್ನಾಟಕ ಭವನದಲ್ಲಿ ಪ್ರಶಸ್ತಿ ಸ್ವೀಕಾರ. ಕಂಬಾರ – ಕಾರಂತರ ಸಹವಾಸ "ಭಾಳ ಮಜ ಇತ್ರಿ" ಎನ್ನುತ್ತಾರೆ ಸುಬ್ಬಣ್ಣ. ಅಂದಹಾಗೇ ಸುಬ್ಬಣ್ಣನ ಮಡದಿ ಶಾಂತಾ ಸುಬ್ಬಣ್ಣ ಅವರೂ ಸಂಗೀತದಲ್ಲಿ ರುಚಿ ಉಳ್ಳವರು. ಹಿಂದೂಸ್ತಾನಿ ಕಲಿಯುತ್ತಿದ್ದಾರೆ. ಪುಟ್ಟ ಮಗಳು ಸುಬ್ಬಣ್ಣನ ಪ್ರಿಯ ರಾಗಿಣಿ ಬಾಗೇಶ್ರೀ, ಕುಮಾರ ಕಂಠೀರವ

ಪಾದರಸದಂತೆ ಚುರುಕು. ನಿಂತಲ್ಲಿ ನಿಲ್ಲದೆ ಚಿಮ್ಮುವ ಈ ಚಿಗರೆಯನ್ನು ಗೆಳೆಯರೆಲ್ಲ 'ಕಾಡ ಕುದುರೆ' ಮರಿ ಎಂದು ರೇಗಿಸುತ್ತಾರಂತೆ. ಹಾಗೆಂದು ಅವನೇ ಖುಷಿ ಉಬ್ಬಿಸಿ ಹೇಳುವುದನ್ನು ನೋಡುವುದೇ ಚೆಂದ. ಹೀಗೆ ಸುಬ್ಬಣ್ಣನದು ಸುಂದರ ಸಂಸಾರ. ಅವರಿಬ್ಬರು ಅವರಿಗಿಬ್ಬರು ಮಾದರಿ. ರಾಷ್ಟ್ರಪ್ರಶಸ್ತಿ ಅವರ ತಲೆ ತಿರುಗಿಸಿಲ್ಲ. ಮನೆಗೆ ಹೋದರೆ ತುಂಬು ಹೃದಯದ ಸ್ವಾಗತ. ದೆಹಲಿಯಲ್ಲಿ ತೆಗೆದ ಚಿತ್ರಗಳನ್ನು ನಿಮ್ಮ ಮುಂದೆ ಹರಡುತ್ತಾರೆ. ಅಭಿಮಾನಿಗಳು ಕೊಟ್ಟ ಉಡುಗೊರೆಗಳನ್ನು ತೋರಿಸುತ್ತಾರೆ. ರಾಷ್ಟ್ರಪತಿ ನೀಡಿದ ರಜತ ಪದಕವನ್ನು ನಿಮ್ಮ ಮುಂದೆ ಆಡಿಸುತ್ತಾ "ಎಷ್ಟು ತೂಕ ಇದೆ ನೋಡ್ರಿ" ಎನ್ನುತ್ತಾರೆ. ಅವರು ಕೊಟ್ಟ ಬಿಸ್ಕತ್ತು ಕಡಿಯುತ್ತಾ ಚಾ ಹೀರುತ್ತಿರುವ ತೆರೆ "ಈ ಗೀತೆ ಕೇಳಿದಿರಾ? -ಲಕ್ಷ್ಮಿನಾರಾಯಣ ಭಟ್ಟರದ್ದು ಲೇಟೆಸ್ಟು" ಎನ್ನುತ್ತಾ ಗಂಟಲು ಸರಿಮಾಡಿಕೊಂಡು ದನಿಯೆತ್ತಿ ಹಾಡಿಯೇ ಬಿಡುತ್ತಾರೆ. "ಚಿಂತೆ ಯಾತಕೇ ಗೆಳತೀ……"

ನಿಮ್ಮ ಮನೆಯ ಹತ್ತಿರದ ಲೈಟು ಕಂಬದ ವರೆಗೂ ನಿಮ್ಮ ಜೊತೆ ಬಂದು ಉದ್ದಕ್ಕೂ ಬಾಯ್ತುಂಬ ಹರಟುತ್ತಾರೆ. "ಹೊತ್ತಾಗಿದೆ ಸುಬ್ಬಣ್ಣ" ಎಂದರೆ "ಮನೆಗೆ ಹೋಗಿ ಏನು ಕಡೀತೀರಿ? ಸುಮ್ನಿರ್ರಿ, ಕಂಡಿದೀನಿ" ಎನ್ನುತ್ತಾರೆ. ಈತ ಆದಿಗೂ ಇಂದಿಗೂ ನಮ್ಮ ಸುಬ್ಬಣ್ಣ ಎಂದು ನಿಮಗೆ ಖಾತರಿಯಾಗುತ್ತದೆ.

ಸುಬ್ಬಣ್ಣನ ಮನೆತನ ಸಂಗೀತಕ್ಕೆ ಪ್ರಸಿದ್ಧ ಎಂಬ ಸಂಗತಿ ಈಗ ಎಲ್ಲರಿಗೂ ತಿಳಿದದ್ದೆ. ಅಜ್ಜ, ಸಂಗೀತದ ಶಾಮಣ್ಣ ಎಂದೇ ಪ್ರಸಿದ್ಧವಂತೆ. ತಾತ ಕೃಷ್ಣ ಉಡುಪರು ಪ್ರಸಿದ್ಧ ಸಂಗೀತ ಗಾಯಕರಂತೆ. ವಿದ್ವಾನ್ ರಾಮರಾಜೋಯಿಸರು ವಿದ್ವಾನ್ ಎಂ. ಪ್ರಭಾಕರ ಈ ಮಹಾನ್ ಸುಪ್ತ ಪ್ರತಿಭೆಗೆ ನೀರೆರೆದು ಬೆಳೆಸಿದವರು. ಸುಬ್ಬಣ್ಣ ಕರ್ನಾಟಕೀ ಹಿಂದೂಸ್ತಾನಿ ಎರಡನ್ನೂ ಕಲಿತಿದ್ದಾರೆ. ಚೆನ್ನಾಗಿ ಹಾಡುತ್ತಾರೆ. ಆದರೆ ಪ್ರತಿ ಗಾಯಕರಾಗಲೂ ಇಷ್ಟ ಇಲ್ಲವಂತೆ "ನೋಡ್ರಿ ನನ್ನ ಕೆಪ್ಯಾಸಿಟೀಗೆ ನಾನು ಬಾಲಮುರುಳಿ ಶಮ್ಮಂಗುಡಿ ಹಾಗೆ ಪ್ರಸಿದ್ಧಿ ಪಡೆಯೋದಕ್ಕೆ ಆಗುತ್ತಾ? ಅಬ್ಬಬ್ಬಾ ಎಂದರೆ ಮೀಡಿಯೋಕರ್ ಸಂಗೀತಗಾರ ಆಗಬಹುದು, ಅಷ್ಟೆ. ಅದಕ್ಕೆ ಬದಲು ಈ ಸುಗಮ ಸಂಗೀತ ನನಗೆ ಒಗ್ಗುತ್ತೆ. ಹೊಸ ಕ್ಷೇತ್ರ ಮಾಸ್ಟರ್ ಮಾಡಿಕೊಬಹುದು. ಅದರಲ್ಲೇ ಬೆಸ್ಟ್ ಆಗಬಹುದು ಅಲ್ವಾ?" ಎಂದು ಈ ಆಳವಾದ ಗಂಭೀರ ಪ್ರಶ್ನೆಯನ್ನು ಮಗು ವಿನಂತೆ ಮುಗ್ಧರಾಗಿ ಕೇಳುತ್ತಾರೆ. ನಿಮಗೆ ಅಂಗ್ಲ ಸುಭಾಷಿತ ಖಂಡಿತ ನೆನಪಿಗೆ ಬರುತ್ತದೆ.

Be a bush if you can't be tree. Be the best of whatever you are.

ಸುಬ್ಬಣ್ಣ ಖಂಡಿತ ತಮ್ಮ ಕ್ಷೇತ್ರದಲ್ಲಿ ಬೆಸ್ಟ್ ಆಗುತ್ತಾರೆ. ಈಗಾಗಲೇ ಅವರು ಬೆಳೆದಿದ್ದಾರೆ. ಇನ್ನೂ ಬೆಳೆಯುತ್ತಿದ್ದಾರೆ. ಶಾಸ್ತ್ರೀಯ ಸಂಗೀತದ ನೆಲಗಟ್ಟಿನಲ್ಲಿ ಸುಗಮ ಸಂಗೀತ ಬೆಳೆಸೋವ ಹೊಸ ಹೊಸ ಪ್ರಯೋಗ ಮಾಡೋದು ಅವರ ಹಂಬಲ. ಅದಕ್ಕೆ ಪೋಷಕವಾಗಿ ಈಗಾಗಲೇ ರಿಕಾರ್ಡಿಂಗ್ ಎಂದು ಹಿನ್ನೆಲೆ ಗಾಯನಕ್ಕೆಂದು ಅನೇಕರು ಅವರ ಬೆನ್ನು ಹತ್ತಿದ್ದಾರಂತೆ.

ಸುಬ್ಬಣ್ಣ ಈಗ ಉದ್ಯೋಗ ನಿಮಿತ್ತ ಬೆಂಗಳೂರು ಸೇರಿದ್ದಾರೆ. ಆದರೂ ಶಿವಮೊಗ್ಗ ಸುಬ್ಬಣ್ಣ ಆಗಿಯೇ ಉಳಿದಿದ್ದಾರೆ. ಅವರ ಕಲಾ ಕ್ಷೇತ್ರ ಈಗ ಸಾಕಷ್ಟು ವಿಸ್ತರಿಸಿದೆ. ದಕ್ಷಿಣದ ತಮಿಳುನಾಡಿನಿಂದ ಉತ್ತರದ ತುತ್ತತುದಿ ಚಂಡೀಘರದ ವರೆಗೂ ಅವರು ಸಂಚರಿಸಿ ಗಾಯನ ಕಾರ್ಯಕ್ರಮ ನೀಡಿದ್ದಾರೆ. ತುಂಬಿದ ಸಭೆಗಳನ್ನು ರಂಜಿಸಿದ್ದಾರೆ. ಶಿವಮೊಗ್ಗೆಯ ಹಾಗೂ ಕರ್ನಾಟಕದ ಹೆಮ್ಮೆಯನ್ನು ಹೆಚ್ಚಿಸಿದ್ದಾರೆ.

'ಎಚ್. ದೇವಿ'

ಎಂಟಾಣೆ ನಾಣ್ಯ

ನಾನು ಪ್ರೌಢಶಾಲೆಯ ಉಪಾಧ್ಯಾಯನಾಗಿದ್ದಾಗಿನಿಂದಲೂ ವಿದ್ಯಾರ್ಥಿಗಳು ಅನೇಕ ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ. ಅವರ ಪ್ರಶ್ನೆಗಳಿಗೆಲ್ಲ ಸಮರ್ಪಕ ಉತ್ತರ ಹೇಳಿದ್ದೇನೆಂಬ ನಂಬಿಕೆಯೂ ಇದೆ. ಸುಮಾರು ದಿನಗಳ ಹಿಂದೆ ಗ್ರಹಣಗಳ ಬಗ್ಗೆ ಪಾಠ ಹೇಳುತ್ತಿದ್ದೆ. ಒಬ್ಬ ವಿದ್ಯಾರ್ಥಿ ಕೇಳಿದ ಆಗಿನ ಪ್ರಶ್ನೆ ನನ್ನ ತಲೆಯನ್ನು ತಿನ್ನುತ್ತಿದೆ:

"ಭೂಮಿ ಗುಂಡಾಗಿದೆಯೆ ಸಾರ್?"

"ಹೌದು," ನಾನೆಂದೆ.

"ಇಷ್ಟೊಂದು ಭಾರಿ ಗಿರಿಶಿಖರಗಳಿವೆ. ಕಂದರಗಳಿವೆ. ತಗ್ಗು ದಿಬ್ಬಗಳಿವೆ. ಹಾಗಿದ್ದರೂ ಭೂಮಿ ಗುಂಡಾಗಿದೆ ಎಂದು ಹೇಗೆ ಹೇಳುತ್ತೀರಿ?"

"ವಿಜ್ಞಾನದ ಪ್ರಯೋಗಗಳು ಭೂಮಿ ಗುಂಡಾಗಿದೆಯೆಂದು ತೋರಿಸಿಕೊಟ್ಟಿವೆ. ಆಕಾಶದಲ್ಲಿ ಅನತಿ ದೂರದಿಂದ ವೀಕ್ಷಿಸಿದಾಗ ಗಗನಯಾತ್ರಿಗಳಿಗೆ ಭೂಮಿ ಗುಂಡಾಗಿ ತೋರಿದೆ," ನಾನು ವಿವರಿಸಿದೆ. ನನ್ನ ಉತ್ತರ ಆ ವಿದ್ಯಾರ್ಥಿಗೆ ತೃಪ್ತಿ ಕೊಡಲಿಲ್ಲವೆಂದು ಕಾಣುತ್ತದೆ. ಮತ್ತೆ ಕೇಳಿದ:

"ತನ್ನ ಕಕ್ಷದಲ್ಲಿ ದೀರ್ಘವಾಗಿ ಸುತ್ತುವ ಪ್ರತಿಯೊಂದು ವಸ್ತುವು ಗುಂಡಾಗಿ ತೋರುತ್ತದೆ ಅಲ್ಲವೆ ಸಾರ್? ಭೂಮಿ ತನ್ನ ಕಕ್ಷದಲ್ಲಿ ತಾನು ಸುತ್ತುವುದರಿಂದ ಅದು ಗುಂಡಾಗಿ ತೋರುತ್ತದೆ ಅಷ್ಟೆ ಸಾರ್, ಅದು ನಿಶ್ಚಲ ಸ್ಥಿತಿಯಲ್ಲಿ ಬಾರದೆ ಅದರ ಆಕಾರವನ್ನು ಸ್ಪಷ್ಟವಾಗಿ ಹೇಳುವುದು ಕಷ್ಟ."

ಅವನೇ ಒಂದು ಉತ್ತರ ಕಂಡುಕೊಂಡಿತ್ತು. ನಾನು ಪುಸ್ತಕದಲ್ಲಿ ಹೇಳಿದ. ನಿದರ್ಶನಗಳನ್ನು ಭೂಮಿ ಗುಂಡಾಗಿದೆ ಎಂದು ಹೇಳಲು ಉಪಯೋಗಿಸಿಕೊಂಡೆ. ಆ ಉತ್ತರ ಸಮರ್ಪಕವಾಗಿತ್ತೆಂದು ನನಗೇ ನಂಬಿಕೆ ಇಲ್ಲ.

ಅದೇ ಪ್ರಶ್ನೆ ಆ ಸರಿರಾತ್ರಿಯಲ್ಲಿಯೂ ನನ್ನ ತಲೆಯನ್ನು ಬಿಡದೆ ಆವರಿಸಿಕೊಂಡಿದೆ. ಆ ಮಗ್ಗುಲಿನಿಂದ ಈ ಮಗ್ಗುಲು ಬದಲಾಯಿಸುತ್ತೇನೆ, ನಿಟ್ಟುಸಿರು ಬಿಡುತ್ತೇನೆ. ನಿದ್ರಾದೇವಿ ನನ್ನ ಮೇಲೆ ಮುನಿದಿದ್ದಾಳೆ. ಅತ್ತ ಕಡೆ ಗೂಬೆ

ವಿಚಿತ್ರ ಧ್ವನಿಯಲ್ಲಿ ಅರಚುತ್ತಿದೆ. ಪೋಲೀಸ ನೊಬ್ಬ ಸಿಳ್ಳು ಹಾಕುತ್ತಲೂ, ಗೂರ್ಖಾನೊಬ್ಬ ನೆಲಕ್ಕೆ ಕೋಲನ್ನು ಕುಟ್ಟುತ್ತಲೂ ಸಾಗಿದ್ದಾರೆ. ವಾಹನವೊಂದು ಗಂಟೆ ಬಾರಿಸುತ್ತ ನಡೆದಿದೆ. ೧೯೭೫ನೇ ಇಸವಿ ೧೯೭೬ನೇ ಇಸವಿಯ ಸ್ವಾಗತ ಕ್ಕಾಗಿ ಕಾದು ಕುಳಿತಿದೆ. ವಾತಾವರಣ ಭಯ ತರಿಸುವಂಥದ್ದಾಗಿದೆ. ನಾನು ಕಣ್ಣು ಮುಚ್ಚಿ ಕೊಂಡು ತಲೆ ತುಂಬ ಚಾದರ ಎಳೆದುಕೊಳ್ಳು ತ್ತೇನೆ. ನನ್ನವಳು ಹೊಡೆಯುತ್ತಿರುವ ಗೊರಕೆ ನನ್ನ ನಿದ್ರೆಗೆ ಭಂಗ ತರುತ್ತದೆ. ನನ್ನ ಮನೆಯ ಮಾಲಕನ ಮನೆಯಲ್ಲಿ ಟೆಲಿಫೋನ್ ಅರಚಿ ಕೊಳ್ಳುತ್ತದೆ. ಮಾಲಕ ಏನನ್ನೊ ಗೊಣಗುಟ್ಟು ತ್ತಿದ್ದಾನೆ.

"ಮೇಷ್ಟ್ರೆ, ಮೇಷ್ಟ್ರೆ, ನಿಮಗೆ ಯಾರೋ ಕೇಳುತ್ತಿದ್ದಾರೆ," ಎಂದು ಮಾಲಕ ಕೂಗುತ್ತಿ ದ್ದಾನೆ. ನಾನು ಅವನ ಮನೆ ಹೊಕ್ಕು ರಿಸೀ ವರ್ ಕೈಗೆತ್ತಿಕೊಳ್ಳುತ್ತೇನೆ.

"ನಿನ್ನ ಮಗ ರಾಜು ಜ್ಞಾನಭಾರತಿ ಕ್ಯಾಂಪಸ್ಸಿನಲ್ಲಿ ಮೆನ್ಸ್ ಹಾಸ್ಟೆಲ್ಲಿನ ರೂಂ ನಂ. ೫ರಲ್ಲಿ ತಾನೆ ಇರುವುದು?" ಗೆಳೆಯ ಸಬ್ ಇನ್ಸ್‌ಪೆಕ್ಟರ್ ಶ್ರೀನಿವಾಸ ಕೇಳುತ್ತಿದ್ದಾನೆ.

"ಹೌದು, ಅಲ್ಲಿಯೆ ಇರುವುದು," ನಾನು ಗಾಬರಿಯಾಗಿ ಹೇಳುತ್ತೇನೆ. "ರೂಂ. ನಂ. ೫ ರಲ್ಲಿ ಕೆಲವು ವಿಚ್ಛಿದ್ರಕಾರಕ ಶಕ್ತಿಗಳು ಸೇರಿ ಕೊಂಡಿವೆ ಎಂದು ಸರ್ಕಾರಕ್ಕೆ ಸುದ್ದಿ ಹೋಗಿದೆ. ಮೇಲಧಿಕಾರಿಗಳ ಸೂಚನೆಯಂತೆ ಪೋಲೀಸಿ ನವರು ಆ ರೂಮಿನ ಮೇಲೆ ಈ ರಾತ್ರಿ ಮೂರು ಗಂಟೆಗೆ ಅಟ್ಯಾಕ್ ಮಾಡುತ್ತಾರೆ. ನೀನು ಅಷ್ಟ ರೊಳಗೆ ಹೋಗಿ ನಿನ್ನ ಮಗನನ್ನು ಕರೆದು ಕೊಂಡು ಬಂದುಬಿಡು. ೧೯೭೫ರ ಜೂನ್ ತಿಂಗಳಿನಿಂದ ಏನು ನಡೆಯುತ್ತಿದೆ ಎಂದು ನಿನಗೆ ಗೊತ್ತಿಲ್ಲ. ಕೈದಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸದೆ ಜೈಲಿನಲ್ಲಿಡುತ್ತಿದ್ದಾರೆ. ಈಗಾಗಲೇ ೧-೩೦. ಬೇಗ ಹೊರಡು," ಎಂದು



ರಿಸೀವರ್ ಕೆಳಗಿಟ್ಟೆ.

ಅಯ್ಯೋ! ಈ ಸಮಯದಲ್ಲಿ ಆಟೊ ಒಂದು ಸಿಕ್ಕುವುದುಂಟೆ? ನನ್ನ ಬೈಸಿಕಲ್ ಮೇಲೆಯೆ ಹೊರಡಲು ಅನುವಾಗುತ್ತೇನೆ. ನನ್ನವಳು ಗಾಬರಿಗೊಂಡಂತಿದೆ. "ಎಲ್ಲಿಗೆ ಹೊರಟೀರಿ?" ಎಂದು ಕೇಳುತ್ತಿದ್ದಾಳೆ. "ಈಗ ಬಂದೆ," ಎಂದು ಹೊರಡುತ್ತೇನೆ. ಮಲ್ಲೇಶ್ವರದಿಂದ ಹೊರಟು ರವೀಂದ್ರ ಕಲಾಕ್ಷೇತ್ರದ ಬಳಿ ಬರುವ ಹೊತ್ತಿಗೆ ಬೈಸಿಕಲ್ ಏಕೊ ಮುಂದಕ್ಕೆ ಹೋಗುತ್ತಿಲ್ಲ ಎಂದು ನೋಡುತ್ತೇನೆ. ಹಿಂದಿನ ಚಕ್ರದಲ್ಲಿ ಗಾಳಿ ಇಲ್ಲವಾಗಿದೆ. ಹೃದಯದಾಳದಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ಕಣ್ಣಿಗೆ ಏನೊಂದೂ ತೋರುತ್ತಿಲ್ಲ. ರಕ್ತಸಂಬಂಧವೆ? ನನ್ನ ರಕ್ತದ ಕುಡಿಗಾಗಿ ಎಷ್ಟೊಂದು ಹಂಬಲಿಸುತ್ತಿದೆ ಎಂದುಕೊಳ್ಳುತ್ತೇನೆ. ಸುತ್ತಮುತ್ತ ಯಾರೂ ಕಾಣಬರುತ್ತಿಲ್ಲ. ಬೈಸಿಕಲ್ಲಿಗೆ ಗಾಳಿ ತುಂಬುವ ಪಂಪ್ ಎಲ್ಲಾದರೂ ಇದೆ ಎಂದು ಹುಡುಕಲಿಕ್ಕೆ ಹೋಗುವುದು ದಡ್ಡತನವಾಗುತ್ತದೆ. ಆಟೋದ ಸದ್ದೊಂದು ನನ್ನ ಕಡೆಯೆ ಬರುತ್ತಿರುವಂತೆ ಕೇಳಿಸುತ್ತಿದೆ. ನನ್ನ ಕಡೆಯೇ ಬರುತ್ತಿದೆ. ಕೈಯನ್ನು ಮುಂದೆ ಚಾಚುತ್ತೇನೆ. ನನ್ನ ಕಷ್ಟ ಅವನಿಗೇನು ಗೊತ್ತು? ಆವನು ನಿಲ್ಲಿಸದೆಯೇ ಮುಂದೆ ಸಾಗುತ್ತಾನೆ. ನನ್ನ ಅದೃಷ್ಟವನ್ನು ಹಳಿದುಕೊಳ್ಳುತ್ತೇನೆ.

ಸೈಕಲ್ಲನ್ನು ತಳ್ಳಿಕೊಂಡು ಮುಂದೆ ಸಾಗುತ್ತೇನೆ. ಮನಸ್ಸಿಗೆ ಏನೊಂದೂ ಹೊಳೆಯುತ್ತಿಲ್ಲ. ರಾತ್ರಿ ಏಕೋ ಎನ್ನುತ್ತಿದೆ. ಚರ್ಚಿನ ಗಂಟೆ ಢಣ್, ಢಣ್, ಢಣ್ ಎಂದು ಮೂರು ಬಾರಿಸುತ್ತದೆ. ಆ ಶಬ್ದ ನನಗೆ ಸ್ಫೂರ್ತಿ ಕೊಟ್ಟಿದೆ. ಎಲ್ಲಾದರೂ ಪಬ್ಲಿಕ್ ಟೆಲಿಫೋನ್ ಬೂತ್ ಇದೆಯೋ ಎಂದು ನೋಡುತ್ತೇನೆ. ಕೊನೆಯ ಪಕ್ಷ ಮಗನಿಗೆ ರೂಮಿನಿಂದ ಹೊರಗೆ ಇರುವಂತೆ ಹೇಳಬಹುದೆಂದುಕೊಳ್ಳುತ್ತೇನೆ. ಅಲ್ಲೊಂದು ಕಾಯಿನ್ ಕಲೆಕ್ಟಿಂಗ್ ಬಾಕ್ಸ್ ಕಾಣಿಸುತ್ತದೆ. ರಿಸೀವರ್ ಮೇಲಕ್ಕೆತ್ತಿ ನಂಬರ್ ಡಯಲ್ ಮಾಡುತ್ತೇನೆ. ಅತ್ತ ಕಡೆಯಿಂದ 'ಹಲೋ' ಶಬ್ದ ಬರುತ್ತದೆ. ಎಂಟಾಣೆ ನಾಣ್ಯಕ್ಕಾಗಿ ಜೇಬನ್ನು ತಡಕಾಡುತ್ತೇನೆ. ನೂರರ ಮೂರು ನೋಟುಗಳು, ಹತ್ತರ ಮೂವತ್ತು ನೋಟುಗಳು, ಒಂದು ಹತ್ತು ಪೈಸೆ ಇದೆ. ಅದೂ ಈ ದಿನವೇ ಸಂಬಳ ಪಡೆದುಕೊಂಡದ್ದು. ಎಂಟಾಣೆ ನಾಣ್ಯಕ್ಕಾಗಿ ಮತ್ತೆ ಮತ್ತೆ ತಡಕಾಡುತ್ತೇನೆ. ಇದ್ದರೆ ತಾನೆ, ಎಂಟಾಣೆ ನಾಣ್ಯ ಕಾಯಿನ್ ಕಲೆಕ್ಟಿಂಗ್ ಬಾಕ್ಸ್‌ಗೆ ಹಾಕಿದರೆ ನಾವಿಬ್ಬರೂ ಮಾತನಾಡಬಹುದು; ಇಲ್ಲದಿದ್ದರೆ ಸಾಧ್ಯವಿಲ್ಲ. ಇಷ್ಟೆಲ್ಲ ಹಣ ಇಟ್ಟುಕೊಂಡು ಎಂಟಾಣೆ ನಾಣ್ಯಕ್ಕಾಗಿ ಒದ್ದಾಡುವ ಸ್ಥಿತಿ ಬಂದಿದೆ. ಈಗ ಈ ನೋಟುಗಳಿಗೆ ಬೆಲೆ ಇಲ್ಲವಾಗಿದೆ, ದುಃಖ ಉಕ್ಕಿ ಬರುತ್ತದೆ.

ಅಲ್ಲೊಬ್ಬ ಭಿಕ್ಷುಕ ಮಲಗಿದ್ದಾನೆ. ಅವನನ್ನು ಎಬ್ಬಿಸಿ, ಆ ಭಿಕ್ಷುಕನ ಮುಂದೆ ಎಂಟಾಣೆ ನಾಣ್ಯಕ್ಕಾಗಿ ಕೈಚಾಚುತ್ತೇನೆ. ನನ್ನೆಲ್ಲ ಕಷ್ಟಗಳನ್ನು ಅವನಿಗೆ ಹೇಳುತ್ತೇನೆ. ಅರಿತುಕೊಳ್ಳುವುದು ಅವನಿಗೇನೂ ಕಷ್ಟವಾಗುವುದಿಲ್ಲ. ನಾಲ್ಕೈದು ಬಟ್ಟೆ ಗಂಟುಗಳನ್ನು ಬಿಚ್ಚಿ ಒಂದು ಕೊಳೆಯಾದ ಚಿಂದಿಯಿಂದ ಎಂಟಾಣೆ ನಾಣ್ಯವನ್ನು ಕೊಡುತ್ತಾನೆ. ಅವನುಟ್ಟಿರುವ ಈ ಚಿಂದಿ ಛಿದ್ರ ಛಿದ್ರವಾಗಿ ಹರಿದು ಕೊಳೆ ಮೆತ್ತಿಕೊಂಡಿದೆ. ಅವನ ಹೃದಯ ಛಿದ್ರವಾಗಿಲ್ಲ. ಕೊಳೆಯಾಗಿಯೂ ಇಲ್ಲ. ಪರಿಶುದ್ಧವಾಗಿದೆ.

ಹಾಸ್ಟೆಲ್ ನಂಬರನ್ನು ಡಯಲ್ ಮಾಡಿ ಎಂಟಾಣೆ ನಾಣ್ಯವನ್ನು ಆ ಪೆಟ್ಟಿಗೆಯೊಳಕ್ಕೆ ಇಳಿಬಿಡುತ್ತೇನೆ. ಅತ್ತ ಕಡೆಯಿಂದ ವಾಚ್‌ಮಾನ್ ಮಾತನಾಡುತ್ತಿದ್ದಾನೆ. "ರೂಂ ನಂ. ೫ ರಲ್ಲಿ ನನ್ನ ಮಗ ರಾಜು ಇದ್ದಾನೆ. ಬೇಗ ಕರೆದುಕೊಂಡು ಬನ್ನಿ" ಎಂದು ಬೇಡಿಕೊಳ್ಳುತ್ತೇನೆ. ಸ್ವಲ್ಪ ಹೊತ್ತಿನ ನಂತರ,

"ರಾಜು ಅಪ್ಪಾ ಮಾತನಾಡೋದು." ನನ್ನ ಮಗ ರಾಜು ಅತ್ತ ಕಡೆಯಿಂದ ಮಾತನಾಡುತ್ತಾನೆ. ನಾನು ಗಾಬರಿಯಿಂದ ಹೇಳುತ್ತೇನೆ: "ಈಗ ನಿಮ್ಮ ರೂಮಿಗೆ ಪೋಲೀಸಿನವರು ಬರುತ್ತಾರೆ. ಈಗ ಮತ್ತೆ ನಿಮ್ಮ ರೂಮಿಗೆ ಹೋಗಬೇಡ. ಬೇರೆ ಕಡೆ ಇದ್ದುಬಿಡು" ಎಂದು ಹೇಳುವುದಕ್ಕೂ "ಅಪ್ಪಾ, ಪೋಲೀಸ್ ವ್ಯಾನ್

ಬಂತಪ್ಪಾ," ಎಂದು ಹೇಳುವುದಕ್ಕೂ ಸರಿ ಹೋಗುತ್ತದೆ. ಮತ್ತೆ ಅತ್ತಕಡೆಯಿಂದ ಮಾತಿಲ್ಲ.

ನನಗೆ ಗಾಬರಿಯಾಗುತ್ತದೆ. ಏನು ಮಾಡು ವುದಕ್ಕೂ ಈ ಸರಿ ರಾತ್ರಿಯಲ್ಲಿ ಸಾಧ್ಯವಾಗು ತ್ತಿಲ್ಲ. ನಿರಾಶೆಯೇ ಗತಿ. ಆಗುವುದನ್ನು ತಪ್ಪಿ ಸುವುದಕ್ಕಾಗುವುದಿಲ್ಲ ಎಂದು ಬೈಸಿಕಲ್ ತಳ್ಳಿ ಕೊಂಡು ಮನೆಗೆ ಹಿಂದಿರುಗುತ್ತೇನೆ. ನನ್ನವಳು ದೀಪ ಹಚ್ಚಿ ಬಾಗಿಲಲ್ಲಿಯೇ ಕಾದು ನಿಂತಿದ್ದಾಳೆ. "ಹೊರಗೆ ಏಕೆ ಹೋದಿರಿ?" ಎಂದು ಕಾಡಿಸಿ ಪೀಡಿಸಿ ಕೇಳುತ್ತಿದ್ದಾಳೆ. ಅವನ್ನೇ ದೊಡ್ಡದು ಮಾಡಿಬಿಡುತ್ತಾಳೆಂದು ಅವಳಿಗೆ ಏನೊಂದು ಹೇಳದೆ ಸುಮ್ಮನೆ ಮಲಗಿಬಿಡುತ್ತೇನೆ.

ಬೆಳಿಗ್ಗೆ ಎಂಟು ಗಂಟೆ. ಯಾರೋ ಬಾಗಿಲು ತಟ್ಟಿದ ಸದ್ದಾಗುತ್ತದೆ. ನನ್ನವಳು ಬಾಗಿಲು ತೆರೆಯುತ್ತಾಳೆ. ನನ್ನ ಮಗ ರಾಜು. ನನಗೆ ಆನಂದ ಬಾಷ್ಪಗಳು ಕಣ್ಣಿನಲ್ಲಿ ಸುರಿಯು ತ್ತವೆ. ಆ ಭಿಕ್ಷುಕ ಕೊಟ್ಟ ಎಂಟಾಣೆ ನಾಣ್ಯ ಸಾರ್ಥಕವಾಯಿತೆಂದುಕೊಳ್ಳುತ್ತೇನೆ.

ನನ್ನ ಮಗ ಇಂಜಿನಿಯರಿಂಗ್ ಕೊನೆ ವರ್ಷ ದಲ್ಲಿ ಓದುತ್ತಿದ್ದ. ಮನೆಯಲ್ಲಿದ್ದರೆ ಅಭ್ಯಾಸಕ್ಕೆ ತೊಂದರೆಯಾಗುತ್ತದೆಂದು ಹಾಸ್ಟೆಲ್ಲಿನಲ್ಲಿಯೇ ಇರಿಸಿದ್ದೆ. ಮತ್ತೆ ಮನೆಯಲ್ಲಿಯೇ ಓದು ಎಂದು ಹೇಳಬೇಕಾಯಿತು.

ನಡೆದದ್ದೇನೆಂದು ನನ್ನ ಮಗನನ್ನು ಕೇಳು ತ್ತೇನೆ. "ನಮ್ಮ ರೂಮಿನಲ್ಲಿ ಯಾರೂ ವಿಚ್ಛಿದ್ರ ಕಾರಿಯಾಗಿದ್ದವರು ಇರಲಿಲ್ಲ. ಇನ್ನೂ ರೂಮ್ ನಂ. ೧೫ರಲ್ಲಿ ಕೆಲವರಿದ್ದರು. ನಿಮ್ಮ ಬಳಿ ಮಾತನಾಡುತ್ತಿದ್ದಾಗ ಪೋಲೀಸ್ ವ್ಯಾನ್ ಬಂತು. ನಾನು ರಿಸೀವರ್ ಅಲ್ಲಿಯೇ ಇಟ್ಟು ಬೇರೆಡೆ ಅಡಗಿಕೊಂಡೆ. ನನ್ನ ಸಹಚರರಾದ ನಾಗರಾಜು, ವೆಂಕಟೇಶ ಅವರಿಬ್ಬರನ್ನೂ ಕೋಲಿ ನಿಂದ ಹೊಡೆದು ಎಳೆದುಕೊಂಡು ಹೋದರು. ಇನ್ನೊಬ್ಬನೆಲ್ಲಿ? ಎಂದು ಹೊಡೆದು ಹೊಡೆದು ಅವರನ್ನು ಕೇಳುತ್ತಿದ್ದರು. ನಾನು ರಾತ್ರಿಯೆಲ್ಲ ಅಲ್ಲೇ ಅಡಗಿಕೊಂಡಿದ್ದು ಬೆಳಿಗ್ಗೆ ಬಂದೆ." ಎಂದು ನಿಟ್ಟುಸಿರು ಬಿಟ್ಟ.

ನಾಗರಾಜು, ವೆಂಕಟೇಶರ ತಂದೆಯಂದಿರಿಗೆ ಅವರ ವಿಳಾಸ ಪಡೆದು, ನಡೆದದ್ದನ್ನು ನಾನೇ ತಿಳಿಸಿದೆ. "ಇನ್ನೂ ಮೂರು ದಿನ ಜೈಲಿನಲ್ಲಿಟ್ಟು ಬಿಟ್ಟುಬಿಡುತ್ತೇವೆ," ಎಂದು ನಾಗರಾಜುವಿನ ತಂದೆಗೆ ಪೋಲೀಸ್ ಸೂಪರಿಂಟೆಂಡೆಂಟ್ ಹೇಳಿದರಂತೆ. ಮೂರು ನಾಲ್ಕು ದಿನಗಳ ನಂತರ ಹೋದಾಗ ಅವರನ್ನೇ ಬೈದು ಕಳುಹಿಸಿದರಂತೆ. ವಿಷಯವನ್ನು ಮುಖ್ಯಮಂತ್ರಿಗೆ ತಿಳಿಸಿದರು. ಪ್ರಯೋಜನವಾಗದಿದ್ದಾಗ ವಿಷಯವನ್ನು ಕೋರ್ಟಿಗೆ ಎಳೆದರು. ಅವರನ್ನು ಬಿಟ್ಟುಬಿಡ ಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದರು. ಅವರಿದ್ದರೆ ತಾನೇ ಬಿಡುವುದು.

ಅವರನ್ನು ಕೈದು ಮಾಡಿಲ್ಲವೆಂದು ಸರ್ಕಾರ ಹೈಕೋರ್ಟಿಗೆ ಅಪೀಲ್ ಹೋಯಿತು. ನ್ಯಾಯವು ಸರ್ಕಾರದ ಕಡೆಯೇ ವಾಲಿತು. ವೆಂಕಟೇಶ, ನಾಗರಾಜು ಈ ವರೆಗೆ ಪತ್ತೆಯಾಗಿಲ್ಲ. ಅವರು ಪತ್ತೆಯಾಗುವುದೂ ಇಲ್ಲ.

ಭೂಮಿ ಗುಂಡಾಗಿದೆ ಅಥವಾ ಇಲ್ಲ? ಈ ಪ್ರಶ್ನೆ ಬಗೆಹರಿದಿತ್ತೋ ಇಲ್ಲವೊ ೧೯೭೫ ವಂತೂ ೧೯೭೬ರ ಪ್ರಶ್ನೆಯಂತೂ ಬಗೆಹರಿ ದಿತ್ತು. ಕಾಡಿನ ಕ್ರೂರ ಪ್ರಾಣಿಗಳಿಗೂ ಆರಕ್ಷಕ ಠಾಣೆಯ ಜನರಿಗೂ ಆ ಸಮಯದಲ್ಲಿ ಸಂಪೂರ್ಣ ಹೋಲಿಕೆಯನ್ನು ನಾನು ಕಾಣು ತ್ತಿದ್ದೆ.

ಕಣ್ಬುರುಡರ್ ಕಯ್ಯಾಯೆ ಬರ್ಪಂ ಶಂಖಂ
ಪುಣ್ಯದೊಳ್ ಪುರುಡುಂಟೇ
ಬಗುಳ್ವನ ಬಾಲೊಳಗುಗುಳ್

-ಮಧುರ (ಧರ್ಮನಾಥ ಪುರಾಣಂ)

ಇದುವೇ ಜೀವ ಇದು ಜೀವನ

ಈ ಸಂಗತಿ ನಡೆದದ್ದು ಸುಮಾರು ೩೫ ವರ್ಷಗಳ ಹಿಂದೆ. ಆಗ ನಾನು ಕರ್ನೂಲಿನಲ್ಲಿ ಸಹಕಾರಿ ಹಾಲು ಉತ್ಪಾದಕ ಇಲಾಖೆಯಲ್ಲಿ ಸಂಘದ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದೆ. ನನ್ನ ಕೆಲಸ ಇಂತಹ ಸಂಘಗಳನ್ನು ಸ್ಥಾಪಿಸಿ ಸದಸ್ಯರಿಗೆ ಎಮ್ಮೆಗಳನ್ನು ಕೊಳ್ಳಲು ಸಾಲವನ್ನು ಕೊಡಿಸುವುದಾಗಿತ್ತು. ಸದಸ್ಯರು ಹಾಲನ್ನು ಸಂಗ್ರಹಿಸಿ ಕರ್ನೂಲಿನಲ್ಲಿ ಇರುವ ಕೇಂದ್ರ ಸಂಘಕ್ಕೆ ಹಾಕಬೇಕಿತ್ತು. ಈ ಸಂಘವು ಹಾಲನ್ನು ಮಾರಾಟ ಮಾಡಿ ಅರ್ಧ ಹಣವನ್ನು ಸಾಲಕ್ಕೆ ಹಿಡಿದುಕೊಂಡು ಉಳಿದರ್ಧವನ್ನು ಸದಸ್ಯರಿಗೆ ಕೊಡುತ್ತಿತ್ತು. ಸರಕಾರದ ಸಾಲ ಮತ್ತು ಬಡ್ಡಿಯು ಸಹ ಬಹಳ ಅಲ್ಪವಾಗಿತ್ತು. ಇಂತಹ ಸಂಘವನ್ನು ಸ್ಥಾಪಿಸಲು ಒಂದು ಹಳ್ಳಿಗೆ ಹೋಗಿದ್ದೆ. ಮೊದಲೇ ಸೂಚನೆ ಕೊಟ್ಟಿದ್ದರಿಂದ ಊರಿನ ಪ್ರಮುಖರೆಲ್ಲರೂ ಬಂದಿದ್ದರು. ನಾನು ಸ್ಥಾಪಿಸಬೇಕಾದ ಸಂಘದ ಉದ್ದೇಶ ಮತ್ತು ನಮ್ಮ ಹಳ್ಳಿಗರು ಈ ಒಂದು ಯೋಜನೆಯಿಂದ ಎಷ್ಟು ಪ್ರಯೋಜನ ಪಡೆದುಕೊಳ್ಳಬಹುದೆಂಬುವದನ್ನು ಸವಿಸ್ತಾರವಾಗಿ ಸುಮಾರು ಅರ್ಧಗಂಟೆಯ ವರೆಗೂ ತಿಳಿಸಿ ಹೇಳಿದೆ. ಎಲ್ಲರೂ ನಿಶ್ಶಬ್ದರಾಗಿ ಕೇಳಿದ್ದನ್ನು ನೋಡಿ ನನಗೆ ತುಂಬಾ ಸಂತೋಷವಾಗಿ ಇನ್ನೂ ಅರ್ಧಗಂಟೆಯ ಕಾಲದ ವರೆಗೆ ಸರಕಾರವು ನಮ್ಮ ಹಳ್ಳಿಗರ ಆರ್ಥಿಕ ಪ್ರಗತಿಗಾಗಿ ಕೈಕೊಂಡ ಕೆಲವು ಯೋಜನೆಗಳನ್ನು ವಿವರಿಸಿದೆ. ಕೊನೆಯಲ್ಲಿ ಈ ಬಗ್ಗೆ ಏನಾದರೂ ಪ್ರಶ್ನೆಗಳಿದ್ದರೆ ಕೇಳಬೇಕೆಂದು ಹೇಳಿದೆ. ಒಂದು ನಿಮಿಷ ಎಲ್ಲರೂ ಮೌನದಿಂದಿದ್ದರು. ಆಗ ಅವರಲ್ಲೊಬ್ಬ- ಊರಿನ ಯಜಮಾನನಿರಬಹುದು—ಎದ್ದು ನಿಂತು, "ಸ್ವಾಮಿ, ನೀವು ಹೇಳಿದ್ದನ್ನೆಲ್ಲಾ ಕೇಳಿದೆವು. ಇನ್ಯಾವುದಾದರೂ ಹೊಸ ಯೋಜನೆ ಬಂದಿದೆಯೋ ಹೇಗೆ?" ಎಂದು ಕೇಳಿದ. ನಾನು ಕುತೂಹಲದಿಂದ, "ಏಕೆ?" ಎಂದು ಕೇಳಿದೆ. ಆತ, "ಸ್ವಾಮಿ, ಈ ಎಲ್ಲಾ ಯೋಜನೆಗಳ ಸಾಲವನ್ನೂ ಪಡೆದಿದ್ದೇವೆ. ಹೊಸದೇನಾದರೂ ಇದ್ದರೆ ಅದನ್ನೂ ಪಡೆಯುತ್ತೇವೆ." ಎಂದು ಹೇಳಿದ. ಆಗ ನನ್ನ ಕುತೂಹಲ ಕೆರಳಿ, "ಆ ಹಣವನ್ನೆಲ್ಲಾ ಹೇಗೆ ಉಪಯೋಗಿಸಿಕೊಂಡಿರಿ?" ಎಂದು ಕೇಳಿದೆ. "ಏನು ಮಾಡೋದು ಸ್ವಾಮಿ, ಮಳೆ ಸರಿಯಾಗಿ ಬರಲಿಲ್ಲ. ಆ ಹಣವನ್ನೆಲ್ಲಾ ನಾವೇ ಉಪಯೋಗಿಸಿಕೊಂಡೆವು," ಎಂದು ನಿಸ್ಸಂಕೋಚವಾಗಿ ಹೇಳಿಯೇಬಿಟ್ಟ.

-ಕೆ. ಮಾಧವರಾವ್

ತನ್ನ ಕುರಿತು ತಾನ್ನೇ ಮಾಡಿದ ಹಾಸ್ಯ ಉತ್ತಮ ಹಾಸ್ಯಕ್ಕೆ ಮಾದರಿಯಂತೆ. ಅಂದಕ್ಕೊಂದು ಉದಾಹರಣೆಯಿದು.

ನಾನು ಹುಬ್ಬಳ್ಳಿಯಲ್ಲಿ ಸಿಟಿ ಬಸ್ಸೊಂದರಲ್ಲಿ ಪ್ರಯಾಣ ಮಾಡುತ್ತಿದ್ದೆ. ಹೊರಟಿದ್ದು, ಹುಬ್ಬಳ್ಳಿಯ ಹೊರವಲಯದಲ್ಲಿರುವ ತೋಪಲಗಟ್ಟಿ ಎನ್ನುವ ಸ್ಥಳದಿಂದ ಬಸ್‌ಸ್ಟ್ಯಾಂಡಿಗೆ. ತೋಪಲುಗಟ್ಟಿ ಸ್ಟಾಪಿನಲ್ಲಿ ಬಸ್ಸು ನಿಂತಾಗ ನನ್ನನ್ನೂ ಸೇರಿ ಒಟ್ಟು ಮೂವರು ಬಸ್ಸು ಏರಿದೆವು. ಅಷ್ಟೇ ಹೊತ್ತಿಗೆ ಸ್ವಲ್ಪ ಎತ್ತರದ ನಿಲುವು, ಆಕರ್ಷಕವಾದ ಬಣ್ಣ ಮುಖದಲ್ಲಿ ಮಿಲಿಟರಿ ಮೀಸೆಯಿರುವ ವ್ಯಕ್ತಿಯೊಂದು ಓಡೋ-ಡುತ್ತ ಬಂದು ಬಸ್ಸು ಏರಿತು. ಬಾಗಿಲಲ್ಲಿ ನಿಂತಿದ್ದ ಕಂಡಕ್ಟರ್ ಕೇಳಿದ, "ಏನ್ರಿ ಕುದ್ರಿ ಸಾಹೇಬ್ರ, ಯಾವ ಕಡೆಗೆ ಹೊರಟಿರಿ?"

ಇದೆಂಥ ಹೆಸರು? ಎಂದು ಕುತೂಹಲವುಂಟಾಗಿ ಆ ವ್ಯಕ್ತಿಯ ಮುಖ ನೋಡಿದೆ.

"ಮೆಯ್ಯಾಕೆ (ಮೇಯುವದಕ್ಕೆ) ಹೊಂಟವ್ರಿ, ಕಂಡಕ್ಟರ್ ಸಾಹೇಬ್ರ," ಎಂದು ಆ ವ್ಯಕ್ತಿ ಕಿರು ನಗೆಯೊಂದಿಗೆ

ಉತ್ತರಿಸಿಯೇಬಿಟ್ಟೆ. ಭೂಪ. ಬಸ್ಸು ಸ್ವಾರಸ್ಯಾಗಿ 'ಬುರ್' ಎಂದು ಹೊರಟಾಗಲೂ ನಗೆಯ ಅಲೆ ನಿಂತಿರಲಿಲ್ಲ! –ಶ್ರೀಪಾದ ಹೆಗಡೆ

ಮಾಮೂಲಿನಂತೆ ಮುಹೂರ್ತಕ್ಕೆ ಇನ್ನು ೧೫ ನಿಮಿಷಗಳಿರುವಂತೆ ಅವಸರದಲ್ಲಿ ಬಂದ ಪುರೋಹಿತರು, "ಎಲ್ಲಿ ಅದು ತನ್ನಿ...... ಎಲ್ಲಮ್ಮಾ ಈ ಮಂತ್ರ ಹೇಳು........ ಹೊತ್ತಾಯ್ತು......ಬೇಗ...ನಿಲ್ಲಿ; ಅಗ್ನಿಗೆ ತುಪ್ಪ ಹಾಕಿ...ಹೂಂ..."ಎಂದೆಲ್ಲಾ ಗಡಿಬಿಡಿಯುಬ್ಬಿಸಿ ಅಂತೂ ಸರಿ ಮುಹೂರ್ತದಲ್ಲೇ ತಾಳಿ ಕಟ್ಟಿಸಿದರು. 'ಸರಿ, ಬನ್ನಿ ಬನ್ನಿ,' ಎಂದು ನಮ್ಮಿಬ್ಬರನ್ನೂ ಹೊರಾಂಗಣಕ್ಕೆ ಕರೆದೊಯ್ದು, ಆ ನಡುಹಗಲಲ್ಲಿ, 'ನೋಡಿ ಅರುಂಧತಿ ನಕ್ಷತ್ರ ಕಂಡಿತಾ...ಬೇಗ... ಊಂ...ಅನ್ನಿ...ಎಲ್ಲಪ್ಪಾ...ಹೊಸ ಗಂಡೇ, ಕೈ ಹಿಡ್ಕೋ...ಬೇಗ...'

ಮುಂದಿನ ಅವರ ಮಾತು ನನ್ನ ಗೆಳತಿಯರ ಹೋ...ಎನ್ನುವ ನಗು, ಗಲಾಟೆಯ ನಡುವೆ ಕೇಳಿದಾಗ ಮೆಲ್ಲಗೆ ಕತ್ತೆತ್ತಿ ನೋಡಿದೆ. ನನಗೂ ನಗೆಯುಕ್ಕಿ ಬಂತು. ನನ್ನವರು ಗಡಿಬಿಡಿಯಲ್ಲಿ ಆ ಪುರೋಹಿತರ ಕೈಯನ್ನೇ ಹಿಡಿದಿದ್ದರು.

–ಡಾ. ಸ್ವರ್ಣ ಲೋಕೇಶ್

ಗ್ರಾಮೀಣ ಜನರ ಉದ್ಧಾರಕ್ಕಾಗಿ ಸರ್ಕಾರ IRDP ಸ್ಕೀಮಿನಲ್ಲಿ ಕಡಿಮೆ ದರದ ಬಡ್ಡಿಯ ಸಾಲವನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಹಂಚುತ್ತಿದೆ. ನಮ್ಮ ಹಳ್ಳಿಯ ಒಂದು ಬ್ಯಾಂಕಿನಲ್ಲಿ ಈ ಸಾಲವನ್ನು ಹಂಚಿ ಹಂಚಿ ಮ್ಯಾನೇಜರ್ ಬಹಳ ಸುಸ್ತಾಗಿದ್ದರು. ಪ್ರತಿ ತಿಂಗಳು ಇಂತಿಷ್ಟು ರೂಪಾಯಿಗಳನ್ನು ಅಥವಾ ಇಂತಿಷ್ಟು ಜನರಿಗೆ ಸಾಲ ಹಂಚಲೇಬೇಕೆಂಬ ಕಡ್ಡಾಯವಿದೆ. ಎಷ್ಟೋ ಸಾಲ ಹಂಚಿದರೂ ಮತ್ತಷ್ಟು ಜನ ಮತ್ತಷ್ಟು ಸಾಲಕ್ಕಾಗಿ ಮ್ಯಾನೇಜರರನ್ನು ಕಾಡುತ್ತಿರುತ್ತಾರೆ. ಒಬ್ಬಾತ ಒಂದು ದಿನ ಮ್ಯಾನೇಜರ್ ಬಳಿ ಬಂದು, "ಸಾರ್, ಕತ್ತೆಗೆ ಸಾಲ ಕೊಡುತ್ತೀರಾ?" ಎಂದ. ಈಗಾಗಲೇ ಸಾಕಷ್ಟು ಬೇಜಾರಾಗಿದ್ದ ಮ್ಯಾನೇಜರ್ ನುಡಿದರು: "ಮತ್ಯಾರಿಗಯ್ಯಾ, ನಾವು ಈಗ ಕೊಡುತ್ತಿರುವುದು?" –ಎಸ್. ಶ್ರೀನಿವಾಸ

ನಮ್ಮೂರ ಬಸ್ ನಿಲ್ದಾಣದಲ್ಲಿ ನನ್ನ ಪ್ರಾಧ್ಯಾಪಕ ಮಿತ್ರರೊಂದಿಗೆ ಬಸ್ಸಿಗಾಗಿ ಕಾಯುತ್ತ ಸಿಮೆಂಟ್ ಬೆಂಚಿನ ಮೇಲೆ ಕುಳಿತಿದ್ದೆ. ನನ್ನ ಕೈಯಲ್ಲಿದ್ದ ಕಾದಂಬರಿಯಲ್ಲಿರುವ ಕಥೆ ಪರಾಕಾಷ್ಠೆಯನ್ನು ಸಮೀಪಿಸುತ್ತಿದಂತೆ ನಾನು ಅದರಲ್ಲೇ ತನ್ಮಯನಾಗಿದ್ದೆ. ನನಗೆ ಬೇರೆ ಯಾವುದರೆಡೆಯೂ ಲಕ್ಷವಿಲ್ಲದಷ್ಟು ನಾನು ಆ ಕಥೆಯೊಂದಿಗೆ ಒಂದಾಗಿಬಿಟ್ಟಿದ್ದೆ. ಅಷ್ಟರಲ್ಲಿ ನನ್ನ ಕಾಲ ಬಳಿ ಏನೋ ಸರಿದಾಡುತ್ತಿದ್ದಂತೆನಿಸಿ ಬಗ್ಗಿ ನೋಡಿದೆ. ಒಬ್ಬ ೭೦-೭೫ ವರ್ಷದ ಮುದುಕ ನಾನು ಕುಳಿತಿದ್ದ ಬೆಂಚಿನ ಕೆಳಗಡೆ ಏನನ್ನೋ ಹುಡುಕುತ್ತಿದ್ದಾನೆ. "ಏಜ್ಜಾ, ಏನ ಹುಡಕತೀ?" ನಾನು ತುಸು ಅಸಹನೆಯಿಂದಲೇ ಕೇಳಿದೆ.

"ಹತ್ತ ಪೈಸಾ ಯಪ್ಪಾ......ನಿಮಗಿಂತಾ ಮುಂಚೆ ನಾ ಇಲ್ಲೇ ಕುಂತಗೊಂಡಿದ್ದೆ. ಅಗ ಬಿದ್ದಿರಬೇಕು..."

ಹತ್ತು ಪೈಸೆಯಷ್ಟೇ ಅವನ ಸಮಸ್ಯೆಯಾಗಿದ್ದರೆ ಪೀಡೆಯಾದರೂ ತೊಲಗಲೆಂದುಕೊಂಡು ನನ್ನ ಜೇಬಿನಿಂದ ಹತ್ತು ಪೈಸೆಯ ನಾಣ್ಯವೊಂದನ್ನು ಹೊರದೆಗೆದು, "ತಗೊ ಇದನ್ನು ತಗೊಂಡು ಹೋಗಿಬಿಡು," ಎಂದೆ ನಾನು.

"ಎಲಾ, ಇವನ! ನೀನೇ ತಗೊಂಡಿದ್ದಿ ಅಂತ ಗೊತ್ತಿದ್ದರ ನಾಯೆಲ್ಲಿ ಹುಡಕತಿದ್ದೆ; ಮುಂಚೇನ ಹೇಳಬಾರದೇನು?" ಎಂದು ಕಳ್ಳನನ್ನು ಹಿಡಿದ ಪೋಲೀಸನಂತೆ ಅತ ಅಬ್ಬರಿಸಿ ಅಲ್ಲಿಂದ ಹೊರಟು ಹೋದ.

"ಸ್ವಾಮಿ; ಇದು ನಿಮ್ಮ ಔದಾರ್ಯಕ್ಕೆ ದೊರೆತ ಪ್ರತಿಫಲ!" ಎಂದುದ್ಗರಿಸಿದರು ಪ್ರಾಧ್ಯಾಪಕ-ಮಿತ್ರರು. –ಸಿದ್ಧರಾಜ ಪೂಜಾರ



ಮೂಲ: ಅಮೃತ ಸೋಮೇಶ್ವರ

ಸಂಗ್ರಹ: ಗಾಯತ್ರೀ ವಿ. ನಾವಡ

ತೀರದ ತೆರೆ

ಕಡಲ ಕರೆಯ ಬದುಕನ್ನು ಚಿತ್ರಿಸುವ ಕಾದಂಬರಿಯಿದು. ದಕ್ಷಿಣ ಕನ್ನಡದ ಕರಾವಳಿಯಲ್ಲಿ ಮೀನುಗಾರರ ಬದುಕಿನ ಹಲವು ಪದರಗಳನ್ನು ಬಿಡಿಬಿಡಿಸಿ ತೋರುವ 'ತೀರದ ತೆರೆ' ಅಮೃತ ಸೋಮೇಶ್ವರರ ಸಫಲ ಕೃತಿಗಳಲ್ಲೊಂದು. 'ಕಸ್ತೂರಿ'ಗಾಗಿ ಇದನ್ನು ಸಂಗ್ರಹಿಸಿದವರು ಶ್ರೀಮತಿ ಗಾಯತ್ರಿ ವಿ. ನಾವಡ.

ಬೀಸಿದ ಬಲೆ ಬರಿದಾಗಿಯೇ ಮೇಲಕ್ಕೆ ಬಂತು. ಮತ್ತೆ ಬೀಸಿದ. ಎಳೆದ. ಬರಿದಾದ ಬಲೆ ಮಾತ್ರ. ಇನ್ನೊಮ್ಮೆ. ಮತ್ತೊಮ್ಮೆ. ಏನಾದರೂ ಸಿಗಬಹುದೆಂಬ ಆಸೆ. ಬೆಟ್ಟಗಳಿಂದ ತೊಡಗಿ. [illegible] ಕಡಲಿನ [illegible] ಬಂತೇ ಮರಳು ಸೊಂಟಕ್ಕೆ ಕಟ್ಟಿಕೊಂಡ 'ಕಳ್ಳಿ' ಮಾತ್ರ ಬರಿದಾಗಿ ತೂಗುತ್ತಿತ್ತು. ಬಲೆ ಬೀಸಿ ಬೀಸಿ ಚೆಂದಪ್ಪನ ರಟ್ಟೆ ಸೋತರೂ ಅವನ [illegible] ಒಂದು ಮೀನೂ ಸಿಕ್ಕಿರಲಿಲ್ಲ.

ನಾಲ್ಕು ದಿನಗಳಿಂದಲೂ ಇದೇ ಪಾಡು. ನಿತ್ಯವೂ ಕಡಲ ಕರೆಗೆ [illegible]. ಕಡಲ ನೀರಿನ [illegible] ಬಲೆ ನೀರಿಗಿಳಿಸುವುದೇ [illegible]. ಸಿಕ್ಕರೆ. ಸಿಕ್ಕದಿದ್ದರೆ ಬಲೆ [illegible] ಚೆಂದಪ್ಪನಿಗೆ. ಒಂದು ದಿನ ತಪ್ಪಿದರೆ ಮತ್ತೆ ಗೇಣೋ ಅರಕೆ [illegible].

[illegible]

ಚೆಂದಪ್ಪನಿಗೆ. ತನ್ನದೆಂಬ ಕೂಸು– [illegible] ಸಂಕಷ್ಟದಿಂದ ಕ್ರಯಕ್ಕೆ ಕೊಂಡ ದೋಣಿ. [illegible] 'ದೋಣಿ ಕಡವಿನ' ತೆಂಕು ಕೊನೆಯಲ್ಲಿ ನಿಂತಿತ್ತು. ಅದನ್ನೊಮ್ಮೆ ಅಭಿಮಾನದಿಂದ ನೋಡಿ. ಹಣೆಯ ಬೆವರನ್ನು ಎಡ ಮುಂಗೈಯಿಂದ ಒರೆಸಿ [illegible] ಬಲೆಯನ್ನು ಕೊಡವಿ [illegible].

ಇಪ್ಪತ್ತೈದು ಇಪ್ಪತ್ತಾರರ ಹರೆಯದ ಚೆಂದಪ್ಪನ ಮೈಕಟ್ಟು ದುಡಿತದಿಂದ ದಷ್ಟಪುಷ್ಟವಾಗಿದ್ದು ಮಾಟವಾಗಿತ್ತು. [illegible] ಅಗಲವಾದ ಎದೆ, ಅದಕ್ಕೆ [illegible] ತಲೆಗಿಟ್ಟ [illegible] ಕೆಂಪು ಬಟ್ಟೆ. ಸೊಂಟದ [illegible]– ಅಷ್ಟೇ ಅವನ ಉಡುಪು. [illegible] ನೀರಿನಿಂದ ತೊಯ್ದಿತ್ತು.

ಅಲ್ಲಿಂದ [illegible] ಬಲೆ [illegible] ಕಲ್ಲು. [illegible] ಕಲ್ಲು. [illegible]

ಹೆಬ್ಬಂಡೆಗಳು ಮೀನುಗಾರರಿಗೆ ನೈಸರ್ಗಿಕ ದೋಣಿ ಕಡವನ್ನು ಸೃಷ್ಟಿಸಿದ್ದವು.

ಬಿತ್ತಿನಲ್ಲೆ ಹತ್ತಿರದಲ್ಲಿ ಸೋಮನಾಥ ದೇವಾಲಯದ ಶಿಲಾಮಯವಾದ ಹಳೆಯ ಪೌಳಿ ದೋಣಿ ಕಡವಿನ, ಮೂಡುಗಡೆಯ ಗೋಡೆಯಂತಿತ್ತು. ಅಲ್ಲೆ ಪಡು ದಿಕ್ಕಿಗೆ ಮುಖ ಮಾಡಿ ನಿಂತಿತ್ತು ಬೊಬ್ಬರ್ಯನ ಗುಡಿ.

ಅಂದು ಸಂಕ್ರಮಣವಾದ್ದರಿಂದ ಹೆಚ್ಚಿನವರು ಬಲೆ ಬೀಸಿರಲಿಲ್ಲ. ಹೀಗಾಗಿ ಮರಳ ದಿಣ್ಣೆಯ ದೋಣಿ ಚಪ್ಪರದಲ್ಲಿ ಆರೆಂಟು ಚಿಕ್ಕ, ದೊಡ್ಡ ದೋಣಿಗಳು ಸಾಲಾಗಿ ನಿಂತಿದ್ದವು. ಬಲೆಗಳು, ಬೆಂಡುಗಳು ತಳ್ಳಿಮರ ಸೆಣಬಿನ ಕೋಲುಗಳು, ಹಗ್ಗ, ಬುಟ್ಟಿ ಇತ್ಯಾದಿ ಸಾಧನಗಳು ಮರಳ ರಾಶಿಯ ಮೇಲೆ ಚದರಿ ಬಿದ್ದಿದ್ದವು. ಒಬ್ಬಬ್ಬರು ದೋಣಿ ಚಪ್ಪರದಲ್ಲಿ ಕುಳಿತು ಬಲೆ ಕಟ್ಟುತ್ತಿದ್ದರು. ತುಸು ದೂರದಲ್ಲಿ ಒಬ್ಬ ಮರದ ನೆರಳಲ್ಲಿ ನೂಲೋಡಿನಿಂದ ಸಣಬಿನ ನೂಲನ್ನು ತಿರುಪುತ್ತಿದ್ದ.

ಆಗಲೆ ಹಸಿದ ಬಲೆಯೊಳಗೆ ದೊಡ್ಡ ಮೀನೊಂದು ಗುಡುಮ್ಮನೆ ಮಿಡುಕಿದ ಅನುಭವ. ಅನಿರೀಕ್ಷಿತವಾಗಿ ಧಡಕ್ಕನೆ ಮೇಲೇರಿ ಬಂದ ತೆರೆಯ ಪೆಟ್ಟನ್ನು ಸಹಿಸಿ ಆತುರಾತುರವಾಗಿ ಬಲೆಯನ್ನೆಳೆದು ಹಾಕಿದ. ಬಲೆಯಲ್ಲಿ ಯಾವ ಪ್ರಾಣಿಯೂ ಕಾಣಲಿಲ್ಲ: ಮೀನು ಬಲೆಯನ್ನು ಹರಿದು ಪರಾರಿಯಾಗಿತ್ತು. ಬಹುಶಃ ಕೊಲಜಿ ಮೀನಿರಬೇಕು. ಅದು ಇಂಥ ಬಲೆಯಲ್ಲಿ ಸಾಯುವುದುಂಟೇ? ಅದಕ್ಕೆ ಕೊಲಜಿ ಬಲೆಯೇ ಆಗಬೇಕು. ಹೆಗ್ಗಣ್ಣಿನ ಬಲೆಯನ್ನು ಬೇಗನೆ ಕಟ್ಟಿ ಮುಗಿಸಬೇಕು.

"ಇವತ್ತಿನ ಬೇಟೆ ಸಾಕಪ್ಪ" ಎಂದು ನಿಧಾನವಾಗಿ [illegible]ಗಳನ್ನು ದಾಟಿ ಕರೆಗಿಳಿದ ಚೆಂದಪ್ಪ. ಬಲೆಯ ಉಪ್ಪು ತೊಳೆಯಲು ದೇವರ ಕೆರೆಯ ಕಡೆಗೆ ಹೊರಟ. ದಾಸು ನಾಯಿ ನಿರಾಶೆಯಿಂದ ಅವನನ್ನು ಹಿಂಬಾಲಿಸುತ್ತ ನಡೆಯಿತು. ಬಲೆಯ ಉಪ್ಪನ್ನು ತೊಳೆದು ಕೆರೆಯ ಪೌಳಿಯ ಮೇಲೆ ಹರವಿದ. ತಾನೂ ಮೈ ತೊಳೆದು, ತಲೆಗೆ ಬಿಗಿದಿದ್ದ ಪಂಚೆಯನ್ನೇ ಬಿಚ್ಚಿ ಸೊಂಟಕ್ಕೆ ಸುತ್ತಿ ಮತ್ತೆ ಕಡವಿಗೆ ಬಂದ. ತೆಂಗಿನ ಸಿಪ್ಪೆಯ ಕುಂಚವನ್ನು ಗಡಿಗೆಯಲ್ಲಿದ್ದ ಮೀನೆಣ್ಣೆಗೆ ಅದ್ದಿ ಅದ್ದಿ ದೋಣಿಯ ಮೈಗೆ ಬಳಿಯ ತೊಡಗಿದ. ಅಭ್ಯಾಸ ಬಲದಿಂದ ಯಕ್ಷಗಾನದ ಸೊಲ್ಲನ್ನು ಬಾಯಿ ಗುಣುಗುಣಿಸುತ್ತಿತ್ತು.

ಹತ್ತಿರದಲ್ಲೆ ದೊಪ್ಪೆಂದು ಸದ್ದಾದಾಗ ಚೆಂದಪ್ಪ ತಿರುಗಿ ನೋಡಿದ. ನೀಲಮ್ಮ. ಸಣಬಿನ ಕಟ್ಟೊಂದನ್ನು ತಲೆಯಿಂದ ಕೆಳಗೆ ಹಾಕಿ ನಿಂತಿದ್ದಳು. ಮುದ್ದಾಳೆ ತೆಗೆದು ಮುಖದ ಬೆವರನ್ನು ಸೆರಗಿನ ಕೊನೆಯಿಂದ ಒರಸಿಕೊಂಡಳು. ಚೆಂದಪ್ಪ ಆಕೆಯನ್ನು ಇಲ್ಲಿ ನಿರೀಕ್ಷಿಸಿರಲಿಲ್ಲ. ಥಕ್ಕನೆ ಮಾತು ಹೊರಡದೆ ಅರೆಕ್ಷಣ ಆಕೆಯನ್ನೆ ಎವೆಯಿಕ್ಕದೆ ನೋಡಿದ. ತಾರುಣ್ಯದ ಹೊಳಪು ತುಂಬಿದ ಮುಖ ನಸು ಬಿಸಿಲಿಗೆ ಇನ್ನಷ್ಟು ಕೆಂಪೇರಿತ್ತು. ಮೈ ಕೈ ಮತ್ತಷ್ಟು ತುಂಬಿಕೊಂಡಿತ್ತು. ಆದರೂ ಆ ಮುಖದಲ್ಲಿ ಹೇಳಬಾರದ ಬದಲಾಣೆ ಕೆದರಿತ್ತು.

ನೀಲಮ್ಮ ವಿಧವೆ. ಚೆಂದಪ್ಪನ ವಧುವಾಗಬೇಕಾಗಿದ್ದ ನೀಲಮ್ಮ ಈಗ ವಿಧವೆಯಾಗಿ ಆತನ ಮುಂದೆ ನಿಂತಿದ್ದಾಳೆ. ನೀಲಮ್ಮ ಹೀಗೆ ಬೇರೊಬ್ಬನ ಕೈ ಹಿಡಿಯುವಂತಾದುದರಲ್ಲಿ ಅವಳ ತಪ್ಪೇನೂ ಇಲ್ಲ.

"ಯಾರು, ನೀಲಮ್ಮನೇನು?" ಚೆಂದಪ್ಪ ನಸು ನಗುವ ಪ್ರಯತ್ನ ಮಾಡಿದ.

"ಹೌದು" ಮಾರುಗತಿ ಇಲ್ಲದ ಅವಳ ಮುಖ ನಸುನಕ್ಕರೂ ಆ ನಗೆಯಲ್ಲಿ ವಿಷಾದದ ಛಾಯೆ ಸ್ಪಷ್ಟವಾಗಿತ್ತು.

ಉಚ್ಚಿಲದಲ್ಲಿ ಅವಳ ತಂದೆಯ ಮನೆ. ಅಷ್ಟದಲ್ಲಿರುವ ಅವಳ ದೊಡ್ಡಮ್ಮನಲ್ಲಿಗೆ ಬಂದಿದ್ದಳು.

ಇಬ್ಬರ ಮನಸ್ಸುಗಳೂ ನೆನಪಿನ ಸುಳಿಗುಂಡಿಯಾಗಿದ್ದವು. ಇಬ್ಬರೂ ಮೌನವಾಗಿ ಅವರವರ ಕೆಲಸದಲ್ಲಿ ಮಗ್ನರಾದರು. ನಾಲ್ಕು ವರ್ಷಗಳ ಹಿಂದೆ ಒಂದು ದಿನ ಹೀಗೆ ಅವಳು ಸೆಣಬಿನ ಕಟ್ಟನ್ನು ಹೊತ್ತು ತಂದು ತನ್ನ ಬಳಿಯಲ್ಲಿಯೆ ದಣಕ್ಕನೆ ಉರುಳಿಸಿ ನಿಂತಿದ್ದಳು. ಥಕ್ಕನೆ ಆಕೆಯ ಪರಿಚಯ ಚೆಂದಪ್ಪನಿಗೆ ಆಗಲಿಲ್ಲ. ತನ್ನ ನೆರೆ

ಮನೆಗೆ ಬಂದು ಹೋಗುತ್ತಿದ್ದ ತನ್ನಲ್ಲಿ ಯಾವಾಗಲೂ ಬಾಯಿ ತುಂಬ ಹರಟೆ ಹೊಡೆಯುತ್ತಿದ್ದ ಹುಡುಗಿಯೇ ಇವಳು? ಎಷ್ಟೊಂದು ಬದಲಾವಣೆ?, ಕಳೆದ ವರ್ಷ ಅಡ್ಕ ಜಾತ್ರೆಯ ವೇಳೆ ಕಂಡಿದ್ದಾಗ ಮೈಗೆ ಈ ಮಾಟವಿರಲಿಲ್ಲ. ನೀಲಮ್ಮ ನಕ್ಕಳು. ಬಿಳುಪಿನ ಹಲ್ಲು ಸಾಲು ಸುಳಿಗಲ್ಲ ಚಂದಪ್ಪನಿಗೆ ತುಂಬ ಸೊಗಸಾಗಿ ಕಂಡವು.

"ನಿನ್ನ ಗುರುತೇ ನನಗೆ ಸಿಗಲಿಲ್ಲ, ಮೊದಲು. ತುಂಬ ಬದಲಾಯಿಸಿ ಬಿಟ್ಟಿದ್ದೀ." ಆಕೆಯನ್ನೇ ನಿಟ್ಟಿಸುತ್ತ ಚಂದಪ್ಪನೆಂದ. ನಾಚುಗೆ ಅನಿಸಿತು ನೀಲಮ್ಮನಿಗೆ. ಆಕೆ ಮುಖ ಕೆಳಗೆ ಮಾಡಿ ಮೆಲ್ಲನೆ ಸಣಬಿನ ಕಟ್ಟನ್ನು ಬಿಚ್ಚತೊಡಗಿದಳು.

ಸಣಬಿನ ಕೆಲಸವಿರುವ ಸಮಯದಲ್ಲೆಲ್ಲ ನೀಲಮ್ಮ ಅಡ್ಕದ ದೊಡ್ಡಮ್ಮನ ಮನೆಗೆ ಬರುವುದಿತ್ತು. ಕಡಲ ಕರೆಯಲ್ಲಿ ಹತ್ತಾರು ಬಾರಿ ತಾವು ಭೇಟಿಯಾಗಿದ್ದ ನೆನಪುಗಳು, ಘಟನೆಗಳು ಚಿತ್ತಾರಗಳಾಗಿ ಇಬ್ಬರ ಮನಸ್ಸಿನಲ್ಲೂ ಒಂದರ ಮೇಲೊಂದರಂತೆ ನುಗ್ಗಿ ಬರುತ್ತಿದ್ದವು. ಕೈಗಳು ಮಾತ್ರ ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದವು.

ನೀಲಮ್ಮ ಸಣಬು ಹರಡುವ ಕೆಲಸ ಮುಗಿಸಿ ಹೊರಟಳು. ಚಂದಪ್ಪ ಬೇಗ ಬೇಗ ತನ್ನ ಕೆಲಸ ಪೂರೈಸುವುದಕ್ಕೆ ಕೈ ಹಚ್ಚಿದ. ದೋಣಿಗೆ ಒಂದು ಕೈ ಎಣ್ಣೆ ಬಳಿದು, ಮಡಲುಗಳನ್ನು ಹೊದಿಸಿ, "ದಾಸು ಬಾ ಹೋಗೋಣ" ಎಂದು ಕರೆದು ಮನೆಗೆಂದು ಹೊರಟ. ಅವನ ಮನಸ್ಸು ಎಂದಿನಂತೆ ಉತ್ಸಾಹದಿಂದಿರಲಿಲ್ಲ. ಘಳಿಗೆಗೊಮ್ಮೆ ಬೊಟ್ಟು, ಮೂಗುತಿ ಇಲ್ಲದ ನೀಲಮ್ಮನ ಮೋರೆ ಅವನ ಮನಸ್ಸಿನಲ್ಲಿ ಮುಂದೆ ಬಂದು ನಿಲ್ಲುತ್ತಿತ್ತು. ಮದುವೆಯಾಗಿ ಆರೇ ತಿಂಗಳಲ್ಲಿ ನೀಲಮ್ಮ ವಿಧವೆಯಾಗಿದ್ದಳು. ಕಂತಬಲೆಗೆಂದು ಕಡಲಿಗೆ ಹೋದ ನೀಲಮ್ಮನ ಗಂಡನನ್ನು ಸಮುದ್ರದ ಹಾವು ಕಡಿದಿತ್ತು. ದೋಣಿ ಕರೆಗೆ ಮುಟ್ಟುವಷ್ಟರಲ್ಲಿ ಅವನ ಪ್ರಾಣ ಹೋಗಿತ್ತು. ನೀಲಮ್ಮ ಮಂಗಲಪಾಡಿಯಿಂದ ಗಂಡನ ಮನೆಯಿಂದ 'ದುಃಖದ ಸೀರೆ' ಉಟ್ಟುಕೊಂಡು ಉಪ್ಪಿಲಕ್ಕೆ ಮರಳಿದ್ದಳು.

ಚಂದಪ್ಪ, ನೀಲಮ್ಮ ಮದುವೆಯಾಗಬೇಕೆಂದು ಪರಸ್ಪರ ಬಯಸಿದ್ದರು. ಆಸೆಯ ಕನಸು ಕಟ್ಟಿದ್ದರು. ಹಿರಿಯರ ಅಸ್ತು ಸಿಗದೆ ನೀಲಮ್ಮ ಬೇರೆಯವನ ಕೈ ಹಿಡಿಯುವಂತಾಗಿತ್ತು. ಎರಡು ತಲೆಮಾರುಗಳ ಹಿಂದೆ ಇವರ ಹಿರಿಯರಲ್ಲಿ ಯಾವುದೋ ವಿಷಯಕ್ಕೆ ಜಗಳವಾಗಿ ಆಣೆ, ಭಾಷೆ, ಪ್ರಮಾಣಗಳಾಗಿ ಮೂರು ನಾಲ್ಕು ಸಾವುಗಳಾಗಿತ್ತು. ಅಂದಿನಿಂದ ಆ ಎರಡು ಕುಟುಂಬಗಳೊಳಗೆ ಅನ್ನ, ಕನ್ಯಾವ್ಯವಹಾರ ನಿಂತುಹೋಗಿತ್ತು. ನಿಂತುಹೋದ ಸಂಬಂಧವನ್ನು ಮತ್ತೆ ಕೂಡಿಸುವುದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ದೈವ ದೇವರಿಗೆ ಕಪ್ಪ ಕಾಣಿಕೆ ಸಲ್ಲಿಸಿ ಮತ್ತೆ ಒಟ್ಟಿಗೆ ಬೆಸೆಯೋಣ ಅಂದರೂ ಆ ಎರಡು ಕುಟುಂಬಗಳ ಯಜಮಾನರಿಗೆ ಪರಸ್ಪರ ಮಾತುಕತೆಯೂ ಇರಲಿಲ್ಲ. ಹಿರಿಯರ ನಂಬಿಕೆಯಡಿಯಲ್ಲಿ ಇವರ ಎಲ್ಲ ಪ್ರಯತ್ನವೂ ವಿಫಲವಾಗಿತ್ತು.

ಅಂದು ಅನಿರೀಕ್ಷಿತವಾಗಿ ಬರುವ ದಾರಿಯಲ್ಲಿ ಹಸಿ ಮೀನಿನ ಹೆಡಿಗೆ ಹೊತ್ತು ನೀಲಮ್ಮ ಬರುತ್ತಿದ್ದು ಚಂದಪ್ಪನಿಗೆ ಕಾಣಿಸಿದಳು. ಇಬ್ಬರಿಗೂ ಮಾತು ಹೊರಡಲಿಲ್ಲ. ನೀಲಮ್ಮನ ಕಣ್ಣು ಮಂಜಾಗಿ ಕಂಬನಿ ತೊಟ್ಟಿಕ್ಕಿತು. ಚಂದಪ್ಪನ ತುಟಿ ಉದ್ವೇಗದಿಂದ ಕಂಪಿಸುತ್ತಿತ್ತು. "ನಾವು, ಒಂದು ಮನೆಯಲ್ಲಿ ಬಾಳುವ ಸಂದರ್ಭ ಇಲ್ಲ ನೀಲಮ್ಮ. ಹಿಂದಿನದೆಲ್ಲವನ್ನೂ ಮರೆತುಬಿಡೋಣ" ಎನ್ನುವಾಗ ಚಂದಪ್ಪನ ಹೃದಯವೇ ಬಾಯಿಗೆ ಬಂದಂತಾಯಿತು. ನೀಲಮ್ಮನಿಗೆ ಏನೂ ಆಡಲು ಸಾಧ್ಯವಾಗಲಿಲ್ಲ. ಇಬ್ಬರೂ ಕೆಲ ಗಳಿಗೆ ಮೌನವಾಗಿ ನಿಂತಿದ್ದರು. ಮತ್ತೆ ಚಂದಪ್ಪನೆ ಹೇಳಿದ, "ಹೋಗು ನೀಲಮ್ಮ, ದೇವರು ಬಯಸಿದ ಹಾಗಾಗಲಿ, ನೀನೇನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ" ಎಂದು ಬೀಳ್ಕೊಟ್ಟ,

ಕೆಲ ಸಮಯದಲ್ಲೆ ನೀಲಮ್ಮನಿಗೆ ಮದುವೆಯಾಯಿತು. ದೋಣಿ, ಬಲೆ ಇದ್ದ ಚೆಲುವ ಹುಡುಗನನ್ನೆ ಸೇರಿದ್ದಳು ನೀಲಮ್ಮ. ಆದರೆ ವಿಧಿ ಆರೇ ತಿಂಗಳಲ್ಲಿ ಅವನನ್ನು ಕಬಳಿಸಿತು. ಈ ಮಧ್ಯೆ ಚಂದಪ್ಪನ ತಂದೆಗೆ ಮೈಯಲ್ಲಿ ನೀರು ತುಂಬಿ ಆತ ತೀರಿಕೊಂಡ. ನೀಲಮ್ಮ ವಿಧವೆಯಾಗಿ ಉಪ್ಪಿಲಕ್ಕೆ ಮರಳಿದ ಮೇಲೆ ಚಂದಪ್ಪನ ಮನಸ್ಸು

ಮತ್ತೊಮ್ಮೆ ಚಿಂತಿಸತೊಡಗಿತು. ನೀಲಮ್ಮನಿಗೆ ಮಂಗಲಪಾಡಿಯ ಮನೆಯಲ್ಲಿ ಬಾಳುವ ಯೋಗ ವಿಧಿ ಒದಗಿಸಲಿಲ್ಲ. ತಾನೇಕೆ ಅವಳನ್ನು ಮತ್ತೆ ಮದುವೆಯಾಗಬಾರದು? ಮೊದಲನೆಯ ಸಂಬಂಧಕ್ಕೆ ವಿಧವೆಯನ್ನು ಮದುವೆ ಆಗುವ ರೂಢಿ ಇಲ್ಲ. ಆದರೆ ಹೊಸ ರೂಢಿಯನ್ನೇಕೆ ಮಾಡಬಾರದು? ಈಗ ಪ್ರತಿಘಟಕಗಳು ಯಾವುದೂ ಇಲ್ಲ. ತನ್ನ ಮನೆಗೇ ಅವಳು ಬರುವಂತೆ ದೈವದ ಸಂಕಲ್ಪ ಇರಬಾರದೇಕೆ?

ಇದು ವಿಧವೆಯಾದ ಮೇಲೆ ಮೊದಲ ಬಾರಿ ನೀಲಮ್ಮನನ್ನು ಕಂಡಾಗ ಮರಳಿ ಅವನ ಯೋಚನೆಗೆ ಚಾಲನೆ ಬಂದಿತ್ತು.

× × ×

ಉಂಡು ಮಲಗಿದ್ದ ಚಂದಪ್ಪನಿಗೆ ಬಹಳ ಹೊತ್ತು ನಿದ್ರೆ ಬಂದಿರಲಿಲ್ಲ. ಕೊನೆಗೊಮ್ಮೆ ಕಣ್ಣು ಭಾರವಾದಂತೆನಿಸಿತ್ತು. ಥಕ್ಕನೆ ಎಚ್ಚರವಾದಾಗ ಬಹಳಷ್ಟು ನಿದ್ರಿಸಿದೆನೇ ಎಂದು ಗಾಬರಿಗೊಂಡ. ಒಡನೆ ಗಡಬಡಿಸಿ ಎದ್ದು ಹೊರಗೆ ಬಂದು ಮೇಲೆ ನೋಡಿದ. ತೆಂಗಿನ ಮರಗಳ ಎಡೆಯಲ್ಲಿನ ತಿಂಗಳ ಬಿಂಬ ಕಂಡಾಗ ಮನಸ್ಸಿಗೆ ತೃಪ್ತಿಯಾಯಿತು. ನೀರಿನ ಇಳಿತ ಭರತಗಳ ತಿಳಿದಿದ್ದ ಚಂದಪ್ಪ ಅಂದು ಒಂದು ನಿದ್ದೆಯಾದ ಮೇಲೆ ಹೋದರೆ ನೀರಿನ ಮದ ಚೆನ್ನಾಗಿದ್ದು ಬಲೆ ಬೀಸುವ ಯೋಚನೆ ಮಾಡಿದ್ದ. ತಲೆಗೊಂದು ಬಿಳಿ ವಸ್ತ್ರ ಸುತ್ತಿ ತನ್ನ ಹೊಸ ಬಲೆಯನ್ನು ಹೆಗಲಿಗೇರಿಸಿಕೊಂಡು "ಅಮ್ಮಾ" ಎಂದು ಕೂಗಿ ತಾಯಿಗೆ ಹೇಳಿ ದಾಸುವನ್ನು ಕರೆದುಕೊಂಡು ಹೊರಟ.

ಬೆಳದಿಂಗಳು ಪ್ರಶಸ್ತವಾಗಿತ್ತು. ದಾರಿ ನಡೆಯಲು ತೊಡಕಿರಲಿಲ್ಲ. ಅಡ್ಡದಿಂದ ಕಡಲ ತೀರಕ್ಕೆ ಅರ್ಧ ಮೈಲಿನ ಹಾದಿ. ಹೊಸ ಬಲೆಯನ್ನು ನೀರಿಗಿಕ್ಕುವ ಉತ್ಸಾಹದಿಂದ ಚಂದಪ್ಪ ಬೀಸುಗಾಲು ಹಾಕಿದ. ಹೆಗಲಲ್ಲಿ ಹೊತ್ತ ಬಲೆಯ ಸೀಸದ ಹೊಸ ಮಣಿಗಳು ಗಿಜಿಕ್ ಗಿಜಿಕ್ ಎಂದು ಸಣ್ಣಗೆ ದನಿ ಮಾಡುತ್ತಿದ್ದಂತೆ ಆತ ಸೋಮೇಶ್ವರದತ್ತ ನಡೆದ. ಸೋಮನಾಥ ದೇಗುಲದ ಇದಿರಿನ ಬಂಡೆಯನ್ನಿಳಿದು, ದೇವರ ಕೆರೆಯನ್ನು ಹಿಂದಿಕ್ಕಿ ತೇರುಮಾಡವನ್ನು ಹಾದು ದೋಣಿ ಕಡವಿನತ್ತ ತಿರುಗಿದ.

ಹಗಲಲ್ಲಿ ಮೀನುಗಾರರ ಬಳಗದ ವಿವಿಧ ಚಟುವಟಿಕೆಗಳಿಂದ ಶಬ್ದಮಯವಾಗಿರುತ್ತಿದ್ದ ದೋಣಿ ಕಡವು ಈಗ ಮೌನವಹಿಸಿ ಬಿಮ್ಮಗೆ ನಿಂತಿತ್ತು. ಬೆಳ್ಳಗೆ ಹರಡಿದ ಮರಳ ರಾಶಿಯ ಮೇಲೆ ಬೆಳದಿಂಗಳ ಸೋನೆ ಸುರಿಯುತ್ತಿತ್ತು. ಅಲ್ಲಲ್ಲಿ ಕಪ್ಪಗೆ ಎದ್ದು ನಿಂತ ಬಂಡೆಗಳಿಗೆ ಬೆಳದಿಂಗಳಿಂದಾಗಿ ಗಂಭೀರತೆ ಹೆಚ್ಚಿದಂತಿತ್ತು.

ಗಾಳಿಯ ಬೀಸುವಿಕೆಯೂ ಕಡಲ ಮೊರೆತವೂ ಅನುಕೂಲವಾಗಿಯೇ ಇತ್ತು. ತೆರೆಗಳು ಸಾವಧಾನದಿಂದ ಕಡಲ ದಂಡೆಗೆ ಬಡಿದು ತಿಂಗಳ ಬೆಳಕಿಗೆ ಬುರುಗಿನ ರಾಶಿಯನ್ನು ಮಿರುಗಿಸಿ ಹಿಂದೆರಳುತ್ತಿದ್ದುವು.

ಚಂದಪ್ಪ ತನ್ನ ದೋಣಿಯ ಬಳಿಗೊಮ್ಮೆ ಹೋಗಿ ಬೆಳಕಿನಲ್ಲಿ ಅದರ ಸೊಬಗನ್ನು ನೋಡಿ ಖುಷಿಪಟ್ಟ. ಯಾಕೋ ಇಬ್ಬನಿಗೆಂದು ಹರಡಿ ಹೋದ ಸಣಬನ್ನು ಕಾಣುತ್ತಲೆ ಚಂದಪ್ಪನಿಗೆ ನೀಲಮ್ಮನ ನೆನಪಾಯಿತು.

ಹಿಂದೊಮ್ಮೆ ಇಂಥದೇ ಬೆಳದಿಂಗಳು, ಬೀಸುವ 'ತಗ್ಗದ ಬಲೆ'ಯನ್ನು ಹಿಡಿದುಕೊಂಡು ಚಂದಪ್ಪ ಕಡಲ ತೀರಕ್ಕೆ ಬಂದಿದ್ದ. ಮೇಲು ಕಡವಿನ ಕಲ್ಲಿನ ಬಳಿಯಲ್ಲಿ ಮಂಜಪ್ಪ ಬಲೆ ಬೀಸುತ್ತಿದ್ದ. ಬಂಡೆಯ ಸಮೀಪ ಮರಳ ದಂಡೆಯ ಮೇಲೆ ಚಿಕ್ಕ ಬುಟ್ಟಿಯೊಂದನ್ನು ಹಿಡಿದುಕೊಂಡು ನೀಲಮ್ಮ ನಿಂತಿದ್ದಳು.

"ಓ, ಬಹಳ ದೂರದಿಂದ ಬಂದಿದ್ದೀರಿ, ತಂದೆ-ಮಗಳು. ಉಚ್ಚಿಲದಲ್ಲಿ ಏನೂ ಸಿಕ್ಕಲಿಲ್ಲವೇ?" ಎಂದು ನಗುತ್ತ ಕೇಳಿದ ಚಂದಪ್ಪ ಆಕೆಯಲ್ಲಿ.

"ಇಲ್ಲ, ನಿಮ್ಮೂರ ಕಡೆ ಏನಾದರೂ ಸಿಗುತ್ತದೋ ನೋಡೋಣ ಎಂದು ಬಂದೆವು" ಎಂದಳು ನೀಲಮ್ಮ.

ನಗುತ್ತ ಬಲೆ ಬೀಸಲು ಬಂಡೆಯ ಮೇಲೇರಿ ಮುಂದುವರಿದ ಚಂದಪ್ಪ. ಮಂಜಪ್ಪ ಇವನನ್ನು ಕಾಣುತ್ತಲೆ,

"ಯಾರು? ಚಂದಪ್ಪನೇನು? ನೀನು ಬಂದದ್ದು ಬಹಳ ಒಳ್ಳೆಯದಾಯಿತು. ನನ್ನ ಬಲೆ ಕಲ್ಲಿನ

ಬುಡಕ್ಕೆ ಸಿಕ್ಕಿಕೊಂಡು ಬರುವುದಿಲ್ಲ ನೋಡು."

ಚಂದಪ್ಪನ ತಂದೆಯೊಡನೆ ಮಂಜಪ್ಪನಿಗೆ ಮಾತಿಲ್ಲದಿದ್ದರೂ ಚಂದಪ್ಪನಲ್ಲಿ ಅವನಿಗೆ ಕೋಪ ವಿರಲಿಲ್ಲ.

ಚಂದಪ್ಪ ಹುಲ್ಲನೆ ಬಂಡೆಯ ಮಗ್ಗುಲಿಗಿಳಿದು ಉಪಾಯದಿಂದ ಬಲೆಯನ್ನು ಬಿಡಿಸಿಕೊಟ್ಟ. ಚಂದಪ್ಪನೂ ಒಂದೆರಡು ಬಲೆ ಬೀಸಿದ. ಮರಿ ಮೀನು ಹೊರತು ಬೇರೇನೂ ಸಿಕ್ಕಲಿಲ್ಲ.

ಚಂದಪ್ಪ ಮರಳಿ ದಂಡೆಗೆ ಬಂದ. ಗಾಳಿಯ ಭರಕ್ಕೆ ನೀಲಮ್ಮನ ಮುಂಗುರುಳು, ಸೆರಗು ಗಾಳಿಯಲ್ಲಿ ಹೊಯ್ದಾಡುತ್ತಿತ್ತು. ಬೆಳ್ಳಗಿನ ಮರಳ ರಾಶಿಯ ಮೇಲೆ ಪ್ರಸನ್ನಮುಖಿಯಾಗಿ ನಿಂತಿದ್ದ ಆಕೆ ಬೆಳದಿಂಗಳ ಹಿನ್ನೆಲೆಯಲ್ಲಿ ಮುದ್ದಾಗಿ ಕಂಡಳು. ಆಕೆಯ ಸಮೀಪಕ್ಕೆ ಬಂದವನೆ, "ನಿನ್ನ ತಂದೆಯ ಬಲೆ ಬಿಡಿಸಿಕೊಟ್ಟೆ. ಇಡೀ ಮೈ ಒದ್ದೆಯಾಯಿತು ನೋಡು. ನನಗೇನು ಬಹುಮಾನ?" ಚಂದಪ್ಪ ಕೇಳಿದ.

"ಏನು ಬೇಕು ಇದೆ ಕೊಡಲಿ?" ಎಂದು ನಗುತ್ತ ಬುಟ್ಟಿಗೆ ಕೈ ಹಾಕಿದಾಗ ಆ ಕಲ್ಲೇಡಿ ಆಕೆಯ ತೋರುಬೆರಳನ್ನು ಕಚ್ಚಿದಾಗ ಆಯ್ ಎಂದು ಚೀರಿದಳಾಕೆ. ಚಂದಪ್ಪ ಕೂಡಲೆ ಬಲೆಯನ್ನು ಕೆಳಕ್ಕೆಸೆದು ಅದರ ಕೊಂಬು ಕಾಲನ್ನು ಮಲ್ಲಿಸಿದ ಹಾಗೆ ಮಾಡಿ ನೀಲಮ್ಮನ ಕೈಯನ್ನು ತನ್ನ ಕೈಗೆತ್ತಿಕೊಂಡ. ನೀಲಮ್ಮನಿಗೆ ಸಂಕೋಚ ವೆನಿಸಿತು. ಆದರೆ ಕೈಯನ್ನು ಬಿಡಿಸಿಕೊಳ್ಳಲಿಲ್ಲ.

"ಒಳ್ಳೆ ಬಹುಮಾನಕ್ಕೆ ಕೈ ಹಾಕಿದೆ ನೀನು?"

"ಮತ್ತೇನಿತ್ತು?"

"ಮತ್ತೇನು, ಇದು?"

ತಟ್ಟನೆ ನೀಲಮ್ಮನನ್ನು ತಬ್ಬಿಕೊಂಡು ಮುತ್ತಿಟ್ಟ ಚಂದಪ್ಪ. ಆಗಸದಲ್ಲಿ ಚಂದ್ರ ನಗುತ್ತಿದ್ದ. ಕಡಲ ತೆರೆಗಳು ಗಹಗಹಿಸುತ್ತಿದ್ದವು. ಗಾಳಿ ಪಿಸುಗುಟ್ಟಿ ನಸುನಗುತ್ತಿತ್ತು.

"ಛಿ, ಛಿ, ಉಪ್ಪು ನೀರೆಲ್ಲ ಮೈಗಾಯ್ತು" ಕೃತಕ ಕೋಪದಿಂದ ದೂರ ಸರಿದಳು ನೀಲಮ್ಮ. "ನೋಡಿ ಅಪ್ಪ ಇದ್ದಾರೆ ಅಲ್ಲಿ" ಧ್ವನಿ ಒಲುಮೆಯ ಘಾಸದಿಂದ ಆರ್ದ್ರವಾಗಿ ಮೆತ್ತಗಾಗಿತ್ತು.

"ಅಪ್ಪ ಇದ್ದರೇನು? ಅಪ್ಪನ ಮಗಳನ್ನು ನಾನೇನು ಮಾಡಿದೆ?" ಇಬ್ಬರೂ ಆತ್ಮೀಯವಾಗಿ ನಕ್ಕರು. ಮಂಜಪ್ಪ ದಂಡೆಗೆ ಬರುವ ಮೊದಲೇ ಚಂದಪ್ಪ ಬಲೆಯೊಂದಿಗೆ ಬಡಗು ದಿಕ್ಕಿಗೆ ನಡೆದಿದ್ದ.

ಪ್ರಣಯದ ಮೊದಲ ತುತ್ತನ್ನುಂಡ ಆ ಒಲಿದ ಜೀವಿಗಳಿಬ್ಬರ ಮನಸ್ಸುಗಳು ಆಮೇಲೆಯೂ ಬಹಳ ಹೊತ್ತು ವಿಧ ವಿಧದ ಕನಸುಗಳನ್ನು ಆ ಬೆಳದಿಂಗಳಲ್ಲಿ ಕಟ್ಟಿಕೊಳ್ಳುತ್ತಿದ್ದವು.

× × ×

ರುದ್ರನ ಬಂಡೆಯ ಪಡು ಬುಡದಲ್ಲಿ ಬಲೆ ಬೀಸಲು ಇಳಿದು ನಿಲ್ಲಬಹುದಾದ ಚಿಕ್ಕ ಜಗಲಿಯಂಥ ಒಂದು ತಾಣ. ಜಾಗವು ಇಕ್ಕಟ್ಟಾದುದರಿಂದ ತೆರೆಗಳು ಒಮ್ಮೊಮ್ಮೆ ಏರಿಬರುವ ಸಂಭವವಿರುವುದರಿಂದ, ಕೆಳಗೆ ಸುಳಿ ನೀರಿನ ಭಯವಿರುವುದರಿಂದ ಒಳ್ಳೆಯ ಅನುಭವಿಗಳಷ್ಟೇ ಅಲ್ಲಿ ಇಳಿದು ಬಲೆ ಬೀಸುತ್ತಿದ್ದರು. ಬಂಡೆಯ ಬುಡದ ಆ ಆಳವಾದ ಜಾಗ ಕೊಬ್ಬಿದ ಕೊರಣೆ, ಕೊಲಜೆ ಮುರುಮೀನು, ಬಲಮೀನು, ಕನಿಮೀನುಗಳ ತಾಣವಾಗಿತ್ತು.

ಚಂದಪ್ಪ ಜತನವಾಗಿ ಬಲೆಯನ್ನು ಹಿಡಿದುಕೊಂಡು ಆ ಜಾಗಕ್ಕೆ ಇಳಿದ. ಬಲೆಯ ಮಣಿಯ ಕೊನೆಯ ಕೈಯುರುಳನ್ನು ಎಡಗೈಯ ಮಣಿಗಂಟಿಗೆ ಸಿಕ್ಕಿಸಿಕೊಂಡು ಬಲೆಯನ್ನು ಕ್ರಮವಾಗಿ ಸಜ್ಜುಗೊಳಿಸಿ ಕಡಲಿನ ಹದವನ್ನು ನಿರುಕಿಸುತ್ತ, ಫಕ್ಕನೆ ಬಲೆಯನ್ನು ಚಳಕದಿಂದ ನೀರಿಗೆ ಹಾರಿಸಿ ಬಿಟ್ಟ, ಬಲೆ ಅರಳಿ ಜಲ್ಲೆಂದು ನೀರಿಗೆರಗಿತು.

ಬಲೆ ಸಾಕಷ್ಟು ಹೊತ್ತು ನೀರಿನಲ್ಲಿದ್ದ ಮೇಲೆ ಚಂದಪ್ಪ ಬಲೆಯ ಹಗ್ಗವನ್ನು ನಾಜೂಕಿಯಾಗಿ ಸುತ್ತತೊಡಗಿದ. ದಿಗಿಲುಪಡಿಸುವಂಥ ದೊಡ್ಡ ತೆರೆಯೊಂದು ಉಕ್ಕುಕ್ಕಿ ಕರೆಗೆ ಧಾವಿಸಿ ಬರುತ್ತಿತ್ತು. ಚಂದಪ್ಪ ಬೇಗ ಬೇಗನೆ ಬಲೆಯ ಹಗ್ಗವನ್ನು ಎಳೆಯತೊಡಗಿದ. ಆದರೆ ಆಗಲೇ ತೆರೆ ಮೊರೆಯುತ್ತ ಏರಿ ಬಂದು ಬಂಡೆಯ ಬದಿಗೆ ಧಡಿಲ್ಲೆಂದು ಬಡಿದೂ ಆಗಿತ್ತು. ತೆರೆಯ ಹಿಂದೇಟಿಗೆ ಆತ ನೀರಿಗುರುಳಿ ಬಿದ್ದ. ಬಂಡೆಯ ಬಳಿಯ ಸುಳಿನೀರು ಚಂದಪ್ಪನನ್ನು ಬಲೆಯ ಸಮೇತ

ವೇಗವಾಗಿ ಸೆಳೆದೊಯ್ಯುತ್ತೊಡಗಿತು. ಆ ವೇಗಕ್ಕೆ ಬಲೆಯ ಮಿಣಿ ಬಿಗಿಯಾಗಿ ಟಪ್ಪನೆ ತುಂಡಾಯಿತು. ಬಲೆ ಕೈಬಿಟ್ಟು ಹಾರುವ್ವದ ಹಗ್ಗದ ತುಂಡು ಕೈಯಲ್ಲುಳಿಯಿತು.

ಚಂದಪ್ಪ ಜೀವ ಉಳಿಸಿಕೊಳ್ಳುವ ಹೋರಾಟ ನಡೆಸಿದ್ದ. ಎರಡು ವರ್ಷಗಳ ಹಿಂದೆ ಇದೇ ಸ್ಥಳ ಬಲೆಗಾರನೊಬ್ಬನ ಜೀವವನ್ನು ನುಂಗಿತ್ತು. ಆ ಘಟನೆ ನೆನಪಾಗಿ ಚಂದಪ್ಪ ನಡುಗಿದ. ನೀರು ಆಗಲೆ ಮೂರು ನಾಲ್ಕು ಮಾರು ದೂರಕ್ಕೆ ಅವನನ್ನು ಒಯ್ದಿತ್ತು. ಮನದಲ್ಲೆ ದೈವ ದೇವರುಗಳನ್ನು ನೆನೆಯುತ್ತಕೊಂಡ. ನೀರಿನ ವೇಗ ಕ್ರಮೇಣ ಕಡಿಮೆಯಾದಂತೆನಿಸಿತು. ಮೆಲ್ಲನೆ ಬಡಗು ದಿಕ್ಕು ಹಿಡಿದು ಈಜಿ ದಂಡೆ ಹಿಡಿದು ಮೇಲೆ ಬಂದ. ತಲೆಯ ಎಲೆವಸ್ತ್ರ ನೀರು ಪಾಲಾಗಿತ್ತು. ಅಂದು ಕೊಕ್ಕೆಯ ಸಹಾಯದಿಂದ ಕಳೆದು ಹೋದ ಬಲೆಯನ್ನು ಹುಡುಕಿದ. ಹೊಸ ಬಲೆಯ ಬೀಸಾಟದಲ್ಲಿ ಒಂದು ಕೊರಣೆ ಮೀನು. ಅರೆ ಮಾರುದ್ದದ ಸೂರುಮೀನು ಸಿಕ್ಕಾಗ ಚಂದಪ್ಪನಿಗೆ "ಬೋಣಿಯ ಬಲೆ ಬರಿದಾಗಲಿಲ್ಲ" ಎಂಬ ಸಮಾಧಾನ. ಬಲೆಯನ್ನು ದೇವರ ಕೆರೆಯಲ್ಲಿ ತೊಳೆದು ಚಂದಪ್ಪ ಮನೆಯತ್ತ ಹೆಜ್ಜೆ ಹಾಕಿದ್ದ.

× × ×

ಸುತ್ತ ಹತ್ತಾರು ತೆಂಗಿನ ಮರಗಳು, ನಡುವೆ ಸುಣ್ಣ ಗಿಲಿಕಿಗೆ ಮುಖ ಮಾಡಿ ನಿಂತ ಹುಲ್ಲು ಹೊದಿಸಿದ ಚಿಕ್ಕ ಮನೆ, ಜಗಲಿ, ಹಾಳೆಗಳ ಹೊಸತದಿಂದ ಹಾಸಿದ ಮಂಗಳಹುಲ್ಲು ಬೂದುಗಪ್ಪು ಬಣ್ಣಕ್ಕೆ ತಿರುಗಿದೆ. ಜಗಲಿಯ ಮೇಲಕ್ಕೆ ಜೋಡಿಸಿ ಕಟ್ಟಿದ್ದ ದೋಣಿಯ ಹುಟ್ಟಿನ ಗಳಗಳ ಮೇಲೆ ಚಂದಪ್ಪನ ಬಲೆ ಒಣಗಲು ತೂಗುತ್ತಿದೆ.. ಬಲೆಗಳ ಬುಡಗಳಲ್ಲಿ ತೋರಣ ಕಟ್ಟಿದಂತೆ ಇಳಿಬಿದ್ದ ಕುರುಬಾಗಿಲ ಜಾಲಿಯಲ್ಲಿ ಕೆಲವು ಕಪ್ಪುಚಿದ್ದ ಕಪ್ಪೆಗಿಡ ಮಡಕೆಗಳು, ತರಗ

ಮರದ ತೊಲೆಗಳು, ದೋಣಿ ಮುಂತಾದವುಗಳ ಮಧ್ಯೆ ಎಡೆ ಮಾಡಿಕೊಂಡ ದಾಸು. ಚಾವಡಿಯ ಮೂಲೆಯಲ್ಲಿಟ್ಟಿದ್ದ ಕಪ್ಪು ಬುಟ್ಟಿಯಿಂದ ಒಣ ಮೀನಿನ ಸಿಹುಗು ವಾಸನೆ ಹೊರಡುತ್ತಿತ್ತು.

ಕೆಳಮನೆ ಚಂದಪ್ಪನ ಸ್ವಂತದ್ದೇನೂ ಅಲ್ಲ. ತಂದೆಯನ್ನು ಕಳೆದುಕೊಂಡ ಚಂದಪ್ಪ ತಾಯಿಯೊಂದಿಗೆ ಮಾವನೊಡನೆ ಇರಲು 'ತೌರುವಾಡು' ಮನೆಗೆ ಬಂದಿದ್ದ. ತಂದೆ ತೀರಿಕೊಂಡ ಕೆಲವೇ ತಿಂಗಳಲ್ಲಿ ಸೋದರಮಾವನೂ ಸತ್ತು, ಅತ್ತೆ ಮಕ್ಕಳೊಂದಿಗೆ ತೌರು ಮನೆ ಉಚ್ಚಿಲಕ್ಕೆ ಹೊರಟು ಹೋಗಿದ್ದಳು.

ತನ್ನದೇ ಆದ ತುಂಡು ನೆಲವೊಂದರ ಮೇಲೆ ಚಿಕ್ಕ ಗುಡಿಸಲೊಂದನ್ನು ಕಟ್ಟುವ ಆಸೆ ಚಂದಪ್ಪನಿಗೆ. ಆದರೆ ಅದಕ್ಕೆಲ್ಲ ದುಡ್ಡು ಎಲ್ಲಿಂದ ಬರಬೇಕು? ತಂದೆಯಿಂದ ಸಿಕ್ಕಿದ ಆಸ್ತಿ ಹರಿದ ಕೆಲವು ಹಳೆಯ ಬಲೆಗಳು ಮಾತ್ರ. ಮಾವ ಸತ್ತಾಗಲೂ ಅಷ್ಟೇ. ಇದ್ದ ದೋಣಿ ಹಾಗೂ ಚೆನ್ನಾಗಿದ್ದ ಬಲೆಯನ್ನು ಮಾವನ ಮಗ ವಶಪಡಿಸಿಕೊಂಡಿದ್ದ. ಅಳಿಯ ಸಂತಾನದ ಬಳುವಳಿಯಾಗಿ ಸಿಕ್ಕಿದ್ದು ಮಾವನ ಉತ್ತರ ಕ್ರಿಯೆಗಾದ ಸಾಲದ ಹೊರೆ.

ಮೀನುಗಾರಿಕೆಯ ಬದುಕಿನಲ್ಲಿ ಬಿಡುವಿಲ್ಲದ ದುಡಿತ. ತೆರೆಗಳೊಂದಿಗೆ, ಬಿರುಗಾಳಿಯೊಂದಿಗೆ ಹೋರಾಡಿ ನಡೆಸಬೇಕಾದ ಬದುಕು. ಊಟ ನಿದ್ರೆ, ವಿಶ್ರಾಂತಿ ಬಿಟ್ಟು ಪ್ರಾಮಾಣಿಕವಾಗಿ ದುಡಿದರೂ ಫಲವನ್ನು ನಿರೀಕ್ಷಿಸಿಯೆ ಸಿದ್ಧ ಎನ್ನುವಂತಿಲ್ಲ. ವರುಣ ದೇವರು ಒಲಿದರುಂಟು, ಇಲ್ಲದಿದ್ದರೆ ಇಲ್ಲ. ಮನುಷ್ಯ ಪ್ರಯತ್ನಕ್ಕಿಂತ ಅದೃಷ್ಟದಾಟವೇ ಮುಖ್ಯ. ಒಂದು ದೋಣಿ ಮೀನಿನ ರಾಶಿಯಿಂದ 'ಸಿಕಾರು' ಆಗಿ ಬಂದರೆ, ಇನ್ನೊಂದು ಬರಿದಾಗಿಯೇ ಕರೆ ಹಿಡಿಯಬಹುದು. ಅದೂ ಮಳೆಗಾಲ ಬಂತೆಂದರೆ ಪಟ್ಟೆ ಬಲೆ, ಕಂತಬಲೆ, ಇರುಳ ಬಲೆಗಳನ್ನೆಲ್ಲ ಕಟ್ಟಿ ಮನೆಯೊಳಗೆ ತೂಗಿಸಬೇಕು.

ಒಮ್ಮೊಮ್ಮೆ ಈ ಮೀನುಗಾರಿಕೆಯಿಂದ ಎಷ್ಟು ತಾನೆ ಸಂಪಾದಿಸಬಹುದು? ಹಣ ಮಾಡಬೇಕಾದರೆ ತಮ್ಮೂರಿಂದ ಅನೇಕರು ಹೋಗಿರುವಂತೆ ಮುಂಬಯಿಗೆ ಹೋಗಬೇಕು ಅನಿಸುವುದಿದೆ. ಆದರೆ ದುಡಿಯುವ ನೆಲಕ್ಕಾದರೆ ತೆರಿಗೆಯೋ, ಗೇಣಿಯೋ ಕೊಡಬೇಕು. ಅದಕ್ಕಿಂತ ಈ ಸ್ವತಂತ್ರ ದುಡಿಮೆಯೆ ಹಿತವೆನಿಸುವುದು. ಕಡಲು ಮೀನುಗಾರ ಮಕ್ಕಳ ತಾಯಿ. ಅವರು ಗಂಗೆಯ ಒಕ್ಕಲು.

ಚಂದಪ್ಪ ತನ್ನದೊಂದು ಗುಡಿಸಲು ಕಟ್ಟುವ ಪ್ರಯತ್ನವನ್ನು ಕೈ ಬಿಟ್ಟಿರಲಿಲ್ಲ. ಕಡಲ ಕಿನಾರೆಯಲ್ಲಿ ಕಾಲು ಎಕ್ರೆ ಜಾಗವನ್ನು ದರಖಾಸ್ತಿಗೆ ಪಡೆದುಕೊಂಡಿದ್ದ ಚಂದಪ್ಪ. ನೆಟ್ಟ ತೆಂಗಿನ ಸಸಿಗಳು ಗರಿಯಾಡಿಸುತ್ತಾ ಮೇಲಕ್ಕೆ ಬರಲು ಹವಣಿಸುತ್ತಿದ್ದುವು.

ಎರಡೋ, ಮೂರೋ ವರ್ಷ ಶಾಲೆಗೆ ಹೋಗಿದ್ದ ಚಂದಪ್ಪ ಯಕ್ಷಗಾನ ಪ್ರಸಂಗವನ್ನು ಪ್ರಯತ್ನದಿಂದ ಓದುವುದನ್ನು ರೂಢಿಸಿಕೊಂಡಿದ್ದ. ಅದು ಆತನ ಬೇಸರ ನೀಗುವ ಸಂಜೀವಿನಿ.

ಕಡಲ ತಡಿಯ ದರಖಾಸ್ತು ನೆಲದಲ್ಲಿ ಚಂದಪ್ಪ ತೆಂಗಿನ ಸಸಿಗಳನ್ನು ಇಟ್ಟಿದ್ದ. ಅಲ್ಲೆ ಒಂದು ಹೊಂಡವನ್ನು ತೋಡಿ ಸಸಿಗಳಿಗೆ ನೀರುಣಿಸುತ್ತಿದ್ದ. ಮುಂಡಗದ ಗಿಡಗಳನ್ನೂರಿ ಸುತ್ತಲೂ ಬೇಲಿ ಮಾಡಿದ್ದ. "ಕಡಲಿಗೆ ಇಷ್ಟು ಸಮೀಪ ಹಿತ್ತಿಲು ಮಾಡಿ ಬೇಲಿ ಕಟ್ಟಿದರೆ, ಮಳೆಗಾಲದ ನಾಲ್ಕು 'ನೆರು' ಬಂದರೆ ಜಾಗ ಕರಗಿ ಹೋಗುವುದಿಲ್ಲವೇ?" ಕಂಡವರು ಆಡಿದರೂ ಚಂದಪ್ಪನಿಗೆ ಕಡಲ ತಾಯಿಯ ಮೇಲೆ ಅಪಾರ ವಿಶ್ವಾಸ. ಹೇಗಾದರೂ ಮಾಡಿ ಬೇಗನೆ ಅಲ್ಲಿ ತನ್ನದೊಂದು ಗುಡಿಸಲು ಕಟ್ಟಿಕೊಳ್ಳಬೇಕು. ಕೆಳಮನೆ ಹೇಗಿದ್ದರೂ, ಕುಟುಂಬದ ಸೊತ್ತು. ಇಂದಲ್ಲ ನಾಳೆ ತಕರಾರು ಬರುವಂಥದು' ಎಂದುಕೊಳ್ಳುತ್ತಿದ್ದ ಚಂದಪ್ಪ.

ಚಂದಪ್ಪನ ಎಣಿಕೆ ನಿಜವಾಗುವ ದಿನ ಬಂದೇ ಬಂತು. ಉದ್ಯಾವರಕ್ಕೆ ಕೊಟ್ಟಿದ್ದ ಚಂದಪ್ಪನ ಅಕ್ಕ ಪೊನ್ನಮ್ಮನ ಮಗು ದಿನಕ್ಕೆ ಹತ್ತಾರು ಬಾರಿ ಪ್ರಜ್ಞೆ ತಪ್ಪಿ ಟಿಪ್ಪನೆ ನೆಲಕ್ಕುರುಳುತ್ತಿದೆ. ಬಾಯಿಂದ ನೊರೆ ಹೊರ ಸೂಸುತ್ತಿದೆ ಎಂದು ಸುದ್ದಿ ಬಂದು ಚಂದಪ್ಪ ಹೋದ. ಜೋಯಿಸರಲ್ಲಿ ಪ್ರಶ್ನೆ ಕೇಳಿದಾಗ "ಭೂತಗಳ ಆಗ್ರಹ" ಎಂದರು. ಕೂಡಲೆ ಪ್ರಾರ್ಥನೆ ಮಾಡಿ ದೈವಗಳಿಗೆ ಜರುಗಿಸಬೇಕಾದುದನ್ನು ಮಾಡುತ್ತೇವೆಂದು ವಚನವಿತ್ತು ಆ ಬಗ್ಗೆ ನೆರೆದ ಹಿರಿಯರ ಮುಂದೆ 'ಈಡು' ಇಟ್ಟದ್ದಾಯಿತು.

ಕೆಳಮನೆಯಲ್ಲಿ ಕುಟುಂಬದವರೆಲ್ಲ ಸೇರಿ ದಿವ ವಾದು ದೈವಗಳಿಗೂ, ಗತಿಸಿದ ಹಿರಿಯರಿಗೂ 'ಪಸಾನೆ' ಬಳಸುವ ವಿಧಿ ನಡೆದು ಬಂದಿತ್ತು. ಆದರೆ ಈಚೆಗೆ ಎಷ್ಟೋ ವರ್ಷಗಳಿಂದ ಕುಟುಂಬ ದೊಳಗೆ ಕೆಲವರಿಗೆ ಮನಸ್ಸು ಸರಿಯಿಲ್ಲದೆ ಅದು ನಿಂತುಹೋಗಿತ್ತು.

ಮರುದಿನ ಮಗುವಿನ ಕಾಯಿಲೆ ತುಸು ಇಳಿಮುಖವಾಯಿತು. ಚಂದಪ್ಪ ಊರಿಗೆ ಬಂದವನು ದೈವಗಳಿಗೆ 'ಪಸಾನೆ' ಕೊಡುವ ಕುರಿತು ಕುಟುಂಬದವರನ್ನು ಕೂಡಿ ಹಾಕಿ ನಿರ್ಧರಿಸಿದ. ಭೂತಗಳಿಗೆ ಎಡೆ ಇಕ್ಕುವ ಕೆಲಸ ವಿಧಿವತ್ತಾಗಿ ನಡೆದು ಮೀನು, ಕೋಳಿ, ಕಳ್ಳುಗಳು ಸಮರ್ಪಿತವಾದುವು.

ಊಟವಾದ ಮೇಲೆ ಕೆಳಮನೆಯ ಜೀರ್ಣೋದ್ಧಾರದ ಕುರಿತು ಮಾತುಕತೆ – ವಾದ ವಿವಾದಗಳಾದವು. ಕುಟುಂಬದ ಮನೆಯನ್ನು ಈ ವರೆಗೆ ಒಂದೇ ಕವಲಿನವರು ಅನುಭವಿಸಿದರು.

"ಇನ್ನು ನಾನೆ ದುರಸ್ತಿ ಮಾಡಿ ನಾನೇ ಕುಳಿತು ಕೊಳ್ಳುತ್ತೇನೆ" ಸೋಮಪ್ಪನೆಂದಾಗ ಕೆಲವರು ವಿರೋಧಿಸಿದರು. ಚಂದಪ್ಪ ಅನುಮೋದಿಸಿದ. "ನನಗೆ ಎರಡು ತಿಂಗಳ ಅವಕಾಶ ಕೊಡಿ ನನ್ನ ದಾರಿ ನಾನು ನೋಡಿಕೊಳ್ಳುತ್ತೇನೆ. ಇಲ್ಲಿ ಸೋಮಪ್ಪಣ್ಣ ಕುಳಿತುಕೊಳ್ಳಲಿ" ಎಂದ.

ಮೇಲಿಂದ ಮೇಲೆ ಖರ್ಚಿನ ಬಾಬುಗಳು ಚಂದಪ್ಪನನ್ನು ಬಂದು ತಾಗಿದ್ದವು. ಮಾವನ ಉತ್ತರ ಕ್ರಿಯೆ.... ದೋಣಿ...ಈಗ ಹೊಸ ಮನೆ, ಆದರೂ ಹಂಗಿನ ಬದುಕು ಬೇಡ. ತನ್ನದೇ ಆದ ನಾಡಿನಡಿಯಲ್ಲಿ ತಾನು ಬದುಕಬೇಕೆಂಬ ಹಂಬಲ. ನೋಡೋಣ, ದೈವ ಕಣ್ಣು ತೆರೆಯ ಲಾರದೆ? ನಂಬಿಕೆ ಅವನನ್ನು ಕಾರ್ಯೋನ್ಮುಖ ನನ್ನಾಗಿಸಿತು.

× × ×

ಇನ್ನೂ ಬೆಳಗಾಗಿರಲಿಲ್ಲ. ಕಡಲಲ್ಲಿ ಬೀನೆಟ್ಟ ಕಪ್ಪನೆಯ ಕುರುಹು ಕಂಡ ಬಲೆಗಾರರು ಒಬ್ಬ ರನ್ನೊಬ್ಬರು ಕೂಗಿ ಕರೆದು ದೋಣಿಗಳನ್ನು ಕಡಲಿಗಿಳಿಸುವ ಸನ್ನಾಹ ಮಾಡುತ್ತಿದ್ದರು. ಹದಿ ನಾಲ್ಕು ಮೊಳದ ಬೀಸುವ 'ದೆಬ್ಬೆ' ಹುರಿ ಹಗ್ಗದ ದೊಡ್ಡ ಕಲ್ಲಿ, ಹುಟ್ಟು, ಚುಕ್ಕಾಣಿ ಇತ್ಯಾದಿಗಳಿಂದ ಸಜ್ಜಾಗಿ ಚಂದಪ್ಪನ ಹೊಸ ದೋಣಿ ನಿಂತಿತ್ತು.

ಪಟೇರಜ್ಜನ ನಿರ್ದೇಶದಂತೆ ತುದಿ ಹಲಗೆಯ ಮೇಲೆ ವಿಶಿಷ್ಟ ಭಂಗಿಯಲ್ಲಿ ನಿಂತು ಚಂದಪ್ಪನ ಬಲೆಯನ್ನು ಬೀಸಿ ಒಗೆದ. ಅದು ವಿಸ್ತಾರವಾಗಿ ನೀರಿಗೆರಗಿತು. ಜತನದಿಂದ ಬಲೆ ಮೇಲೆಳೆದಾಗ ಸೆರೆ ಸಿಕ್ಕ ಮೀನುಗಳು ಮಿಜಮಿಜನೆ ಒದ್ದಾಡುತ್ತಿದ್ದವು. ಬಾಂಕ್ಯಾಲು ಪಾಲು ಕಲ್ಲೂರು ಮೀನು, ಉಳಿದುದು 'ಬೆರಕೆ ಮೀನು'ಗಳು ದೋಣಿಯ 'ಕಳ್ಳಿ'ಯನ್ನು ತುಂಬಿದವು.

ಬೆಳಕೇರತೊಡಗಿತು. ದೋಣಿಗರಮೈಯಿಂದ ಬೆವರು ಬಸಿಯುತ್ತಿತ್ತು. ಮೀನು ಸಿಕ್ಕುವುದು ಕಡಿಮೆಯಾಗಿ ಒಂದೊಂದೇ ದೋಣಿ ಕರೆಗೆ ಹೊರಡುತ್ತಿತ್ತು. ಚಂದಪ್ಪನ ದೋಣಿಯೂ ಕಡವಿನ ಕಡೆ ಮುಖ ಮಾಡಿತು.

ಸಣಬು ಬಿಸಿಲಿಗಿಕ್ಕಲೆಂದು ಬಂದಿದ್ದ ನೀಲವ್ವ ದೋಣಿಯ ಮುಂತುದಿಯಲ್ಲಿ ಹುಟ್ಟು ಹಾಕುತ್ತಿದ್ದ ಚಂದಪ್ಪನನ್ನೂ ತೆರೆಗಳ ಮೇಲೆ ಕುಣಿಯುತ್ತ ಸಾಗುವ ಆತನ ದೋಣಿಯನ್ನೂ ನೋಡಿದಾಗಲೆ ಕಂಡು ಸಂತಸಗೊಂಡಳು. ತಮ್ಮ ಮನೆಯೆದುರಿನಿಂದಾಗಿಯೇ ಆತನ ದೋಣಿ ಕರೆಯಾಗುವಾಗ ತಾನು ಬಟ್ಟೆ ಒಗೆದು ಇಲ್ಲಿ ಕಾಯುತ್ತಿದ್ದೆ. ಅಂದು ನೆನೆದಾಗ ತಟ್ಟನೆ 'ಚಂದಪ್ಪ, ಇನ್ನೂ ಮದುವೆ ಮಾಡಿಕೊಂಡಿಲ್ಲ ಏಕೆ?' ಎಂಬ ಪ್ರಶ್ನೆ ಎದ್ದಿತು. ಹಿಂದೆಯ ಮನೆಯ ನೆನಪುಗಳು ಗರಿ ಬಿಚ್ಚಿದವು. ಕತ್ತು ಹೊರಳಿಸಿ, ಹಿಂದಕ್ಕೆ ನೋಡಿದರೆ ಬಹಳ ದೂರಕ್ಕೆ ಸಂದ ಆ ಬಾಲ್ಯಕಾಲದ ಸ್ಮೃತಿ ಚಿತ್ರಗಳು ಆಕೆಯ ಚಿತ್ತದಲ್ಲಿ ಮೂಡಿದವು. ಆದರೆ ಕೈ ಮೀರಿದ ಹೊತ್ತು ಮತ್ತೆ ಕೈ ಸೇರುವುದಿದೆಯೇ? ತಾನಿನ್ನು ಮರು ಮದುವೆ ಆಗುವುದಾದರೆ ಯಾರೋ ಒಬ್ಬ ವಿಧುರನನ್ನು – ಇಲ್ಲ ಮೊದಲ ಹೆಂಡತಿಯನ್ನು ಬಿಟ್ಟ ಅತೃಪ್ತ ಜೀವಿಯೊಬ್ಬನನ್ನು! ಚಂದಪ್ಪನ ಮನೆಯನ್ನು ಬೆಳಗುವ ಸುಯೋಗ ತನಗೆಲ್ಲಿ? ಅಂಥ ಪದ್ಧತಿಯೇ ಇಲ್ಲವಲ್ಲ?

ಕಡಲಿನ ಬೀಸು ಬಲೆಯು ದೋಣಿಗಳೆಲ್ಲ ಕರೆಯಾದೊಡನೆ ಜನ ಸುಡು ಬಿಸಿಲನ್ನೂ ಗಣಿಸದೆ ದೋಣಿಯು ಗಳಿಸಿದ್ದೆಷ್ಟೆಂದು ನೋಡುವ ಕುತೂಹಲದಿಂದ, ಸಿಕ್ಕುವ ಮೀನಿನ ಚಪಲದಿಂದ ದೋಣಿಗಳನ್ನು ಮುತ್ತಿದರು.

ದೊಡ್ಡಮ್ಮನ ಅಸೌಖ್ಯ ಪೂರ್ತಿ ಗುಣವಾಗದುದರಿಂದಲೂ ಸಣಬಿನ ಕೆಲಸ ಸಾಕಷ್ಟಿದ್ದುದರಿಂದಲೂ ನೀಲಮ್ಮ ಅಡ್ಕದಲ್ಲಿಯೆ ಉಳಿಯಬೇಕಾಯಿತು. ಸಣಬು ಒಣಗಿ. ಒಂದು ರಾತ್ರಿ ಇಬ್ಬನಿಗೆ ಹರಡಿದ ಮೇಲೆ ಅದನ್ನು ತೋಡಿನ ನೀರಿನಲ್ಲಿ ನೆನೆ ಹಾಕಬೇಕಿತ್ತು. ಚೊದಪ್ಪ ಬಿದಿರುಗಳನ್ನು ಒಯ್ದು ತೋಡಿಗಿಳಿದು ಚೌಕಟ್ಟು ಕಟ್ಟತೊಡಗಿದ. ನೀಲಮ್ಮನ ದೊಡ್ಡಮ್ಮನ ಕೇಳಿಕೆಯಂತೆ ಅವರ ಸಣಬಿಗೂ ಚೌಕಟ್ಟು ಕಟ್ಟುತ್ತಿದ್ದ. ಆಗಲೇ ನೀಲಮ್ಮ ಸಣಬಿನ ಕಟ್ಟುಗಳನ್ನು ತಂದು ಹಾಕಿದಳು. ಸಣಬಿನ ಕಟ್ಟುಗಳನ್ನೆಲ್ಲ ನೀರಿನಡಿಯಲ್ಲಿ ಚೌಕಟ್ಟುಗಳೊಳಗೆ ಭದ್ರವಾಗಿ ಇರಿಸಿ, ಕಲ್ಲು ಹೇರಿದ ಮೇಲೆ ಚೊದಪ್ಪ ಕೇಳಿದ: "ಒಂದು ವಿಷಯ ಮಾತಾಡಲು ನಿನ್ನನ್ನು ನಿಲ್ಲಲು ಹೇಳಿದೆ. ಮನೆಯ ಕಡೆ ಸಂದರ್ಭ ಸರಿ ಕಾಣಲಿಲ್ಲ..."

"ಏನು?"

"ನೀಲಮ್ಮ, ನಿನ್ನನ್ನು ನಮ್ಮ ಮನೆಗೆ ಕರೆಯಿಸಿಕೊಂಡರೆ ಹೇಗೆ?" ನೀಲಮ್ಮ ತಲೆ ತಗ್ಗಿಸಿದಳು. ಮಾತಾಡಲಿಲ್ಲ.

"ಯಾಕೆ ಸುಮ್ಮನಾದೆ? ನಿನಗೆ ಇಷ್ಟವಿಲ್ಲವೇ?"

ನೀಲಮ್ಮನ ಕಣ್ಣುಗಳಿಂದ ಕಣ್ಣೀರು ಚಿಮ್ಮಿತು. ಸೆರಗಿನ ಕೊನೆಯಿಂದ ಒರೆಸಿಕೊಂಡಳು. ಚೊದಪ್ಪ ಇನ್ನೂ ಮದುವೆ ಮಾಡಿಕೊಂಡಿಲ್ಲ. ಅವನಿಗೆ ತನ್ನ ಮೇಲಿನ ಒಲವು ಇನ್ನೂ ಹೋಗಿಲ್ಲ. ಆತನದು ವಿಚಿತ್ರವಾದ ಆಸೆ. ಮೊದಲ ಮದುವೆಗೆ ವಿಧವೆಯನ್ನು ವರಿಸುವ ಸಂಪ್ರದಾಯ ನಮ್ಮಲ್ಲಿಲ್ಲ. ಸಮಾಜ ಈ ಸಂಬಂಧಕ್ಕೆ 'ಅಸ್ತು' ಕೊಡುವುದೇ?

"ನೀನು ಸುಮ್ಮನೆ ನಿಂತುಬಿಟ್ಟರೆ ನಾನೇನು ತಿಳಿದುಕೊಳ್ಳಲಿ ನೀಲಮ್ಮ?"

"ನಾನೇನು ಹೇಳಲಿ? ಇದಕ್ಕೆ ಯಾರಾದರೂ ಒಪ್ಪುವುದುಂಟೆ?" ಆ ಮಾತಿನಲ್ಲಿ ಅಸಹಾಯ ಕತೆಯ ಧ್ವನಿ ಇತ್ತು.

"ಯಾರಾದರೂ ಒಪ್ಪುವ ಮಾತಿರಲಿ. ನೀನ ಒಪ್ಪುತ್ತಿಯೋ ಹೇಗೆ?" ನೀಲಮ್ಮ ಮಾತಾಡ-ಲಿಲ್ಲ. ಅವಳ ಮನಸ್ಸಿನಲ್ಲಿ ಕಡಲು ಭೋರ್ಗರೆಯು ವಂಥ ಅನುಭವವಾಗುತ್ತಿತ್ತು.

"ನೀಲಮ್ಮ ನೀನು ಏನಾದರೊಂದು ಮಾತ ಹೇಳಲೇಬೇಕು" ಚೊದಪ್ಪ ಒತ್ತಾಯಿಸಿದಾಗ ಆರ್ದ್ರವಾದ ಕಣ್ಣುಗಳನ್ನೆತ್ತಿ ನೀಲಮ್ಮ ಚೊದಪ್ಪನತ್ತ ಒಮ್ಮೆ ನೋಡಿದಳು. ಆ ನೋಟ ದಲ್ಲಿ ನೋವು, ಕೃತಜ್ಞತೆ, ಆರ್ತತೆಗಳ ತುಂಬಿದ್ದವು. "ನಾನೇನು ಹೇಳಬೇಕು? ನನ್ನೊಬ್ಬ ಒಪ್ಪಿಗೆಯಿಂದ ಏನಾಗುತ್ತದೆ" ಎಂದಳು ಮೆಲ್ಲನೆ

"ನೀನೇನೂ ಯೋಚಿಸಬೇಕಾಗಿಲ್ಲ. ನಿನ್ನೊಬ್ಬ ಒಪ್ಪಿಗೆ ಧಾರಾಳ ಸಾಕು."

ಇದೇ ಸಮಯದಲ್ಲಿ ನೀಲಮ್ಮನ ತಂದೆಯ ಮನೆಯಲ್ಲಿ ಅವಳ ಮರುಮದುವೆಗೆ ಸಂಬಂಧ ಪಟ್ಟಂತೆ ಬೇರೊಂದು ಬಗೆಯ ಮಾತುಕತ ನಡೆಯುತ್ತಿತ್ತು. ಉದ್ಯಾವರದ ಐತಪ್ಪನ ತಮ್ಮ ರಾಮಪ್ಪ ಮೊದಲ ಹೆಂಡತಿಯನ್ನು ಬಿಟ್ಟಿದ್ದ ಅವನಿಗೆ ಈಗ ಬೇರೆ ಮದುವೆಯಾಗುವ ಸುದ್ದಿ ಹರಡಿದೆ. ಅದಕ್ಕೆ ಮುಂಚಿತವಾಗಿ ರಾಮಪ್ಪನಿಗ 'ಕೈ ಹಿಡಿಸುವ' ಮದುವೆ ಮಾಡಿ ಬಿಡಬೇಕು ನಿಲಮ್ಮನ ಮೇಲೆ ಮನಸ್ಸು ಮಾಡಿ ಐತಪ್ಪ ಉಚ್ಚಿಲದ ಮಂಜಪ್ಪನ ಮನೆಗೆ ಬಂದಿದ್ದ ನೀಲಮ್ಮನಿಗೆ ಬೇಗ ಒಂದು ಮದುವೆ ಮಾಡಿ ಬಿಟ್ಟರೆ, ಅವರ ಬೆನ್ನಿಗೆ ತಾನು ಬಯಸಿದ್ದ ಸೀತ ವಳನ್ನು ಮನೆದು ತಂದುಕೊಳ್ಳಬಹುದು ಎನ್ನುವ ಯೋಚನೆಯಲ್ಲಿದ್ದ ಮಂಜಪ್ಪ ಕೂಡಲ ಒಪ್ಪಿಗೆ ನೀಡಿದ. ನೀಲಮ್ಮನಿಗೆ ತಿಳಿಯದೆಯೆ ಅವಳ ಮರುಮದುವೆ ನಿಶ್ಚಯವಾಯಿತು.

× × ×

ಈಚೆಗೆ ಹತ್ತಾರು ಕಣ್ಣುಗಳ ಹೆತ್ತವರ ಕಣ್ಣುಗಳು ಚೊದಪ್ಪನ ಮೇಲೆ ಇದ್ದವು. ಚೊದಪ್ಪ ಕಡಲ ತೀರದ ತನ್ನ ಹಿತ್ತಿಲಿನ ತೆಂಗಿನ ಸಸಿ

ಗಳಿಗೆ ನೀರೆರೆಯುತ್ತಿದ್ದಾಗ ಅವನ ಬಳಿಗೆ ಬಸಪ್ಪ ಬಂದ. ಬಂದವನು ಲೋಕಾಭಿರಾಮವಾಗಿ ಮಾತಾಡುತ್ತ ಮದುವೆಯ ಕುರಿತು ಪ್ರಸ್ತಾಪಿಸಿದ. ಚೆಂದದ ಹಿತ್ತಿಲ ಚೆನಿಯನ ಮಗಳ ಕುರಿತು ಹೊಗಳಿ ಆಡಿದ. "ಚೆನಿಯು ಪದ್ದೆಬಲೆಯ ಮೇಲೆಯೇ ಯಜಮಾನ. ಮದುವೆಯ ಖರ್ಚನ್ನು ಕೊಡಿಸಬಹುದು" ಎಂದಾಗ ಚೆಂದಪ್ಪ "ಈ ಬಗ್ಗೆ ದಯಮಾಡಿ ಮಾತಾಡುವುದು ಬೇಡ" ಎಂದು ಖಂಡಿತವಾಗಿ ಹೇಳಿದ.

ಬಸಪ್ಪ ಅತ್ತ ಹೋಗುತ್ತಲೂ, ಚಿಕ್ಕದಾದರೂ ಅಡ್ಡಿಯಿಲ್ಲ. ಇಲ್ಲೇ ಒಂದು ಜೋಪಡಿ ಕಟ್ಟಬೇಕು. ಗೋಡೆಗೆ ಸಧ್ಯಕ್ಕೆ ಮಡಲು ತಟ್ಟಿ ಕಟ್ಟುವುದು. ಮತ್ತೆ ಮಣ್ಣು ಹೊತ್ತು ತಂದು ಗೋಡೆ ಏರಿಸುವುದು. ಏನಿದ್ದರೂ ಹಂಗಿನ ಬದುಕು ಬೇಡ. ತನ್ನ ಭವಿಷ್ಯದ ಬದುಕನ್ನು ಹೆಣಿಕೆಮಾಡುತ್ತಿದ್ದಾಗ ನೀಲಮ್ಮನನ್ನು ತಾನುಕೊಳ್ಳುವ ವಿಷಯದಲ್ಲಿ ತಾಯಿ ಒಪ್ಪುತ್ತಾಳೋ ಇಲ್ಲವೋ! ಹೇಗಾದರೂ ಒಪ್ಪಿಸಬೇಕು. ನೀಲಮ್ಮನ ತಂದೆಯ, ಜಾತಿಬಾಂಧವರ ಸಮ್ಮತಿ ಸಿಗದೆ ಹೋದರೂ ನೀಲಮ್ಮನ ಕೈ ಹಿಡಿಯುವುದು ಹಿಡಿಯುವುದೇ! ದೈವ ಅನುಕೂಲಿಸಬೇಕು.' ಮನಸ್ಸಿನಲ್ಲಿ ಯೋಜನೆಗಳ ಲಹರಿ ಏಳುತ್ತಿದ್ದರೂ ಚೆಂದಪ್ಪನ ಬಾಯಿ ಯಕ್ಷಗಾನದ ಸೊಲ್ಲನ್ನು ನುಡಿಯುತ್ತಿತ್ತು.

× × ×

ಕೋಡಿಮನೆ ಇದ್ದುದು ರೈಲು ರಸ್ತೆಯ ಪೂರ್ವದ ಬದಿಯಲ್ಲಿ. ಮನೆಯ ಇದಿರಿನ ಪ್ರಕೃತಿಯ ಚಿತ್ರ ಸುಂದರವಾಗಿತ್ತು. ಮನೆ ತಕ್ಕಮಟ್ಟಿಗೆ ದೊಡ್ಡದೆ ಆಗಿತ್ತು. ದೊಡ್ಡಮ್ಮನಿಗೆ ಈಗ ಬಂದಿಷ್ಟು ವಾಸಿಯಾಗಿ ನೀಲಮ್ಮ ಉಚ್ಚಿಲಕ್ಕೆ ಮರಳಿ ಬಂದಿದ್ದಳು. ದಿನವೂ ಕಣ್ಣಿಗೆ ಬೀಳುತ್ತಿದ್ದ ಚೆಂದಪ್ಪನನ್ನು ಇನ್ನು ಥಕ್ಕನೆ ಕಾಣುವಂತಿಲ್ಲ. ಮತ್ತೆ ಅಷ್ಟಕ್ಕೆ ಹೋಗಬೇಕಾದರೆ ದೊಡ್ಡಮ್ಮ ಇನ್ನೊಮ್ಮೆ ಚಾಪೆ ಹಿಡಿಯಬೇಕು.

ಅಂದು ತಂದೆ ಇನ್ನೂ ಬಾರದೆ ನೀಲಮ್ಮ, ಕೃಷ್ಣಪ್ಪ ಹೊರಜಗಲಿಯಲ್ಲಿ ಕುಳಿತಿದ್ದರು. ತಾಯಿಯ ನೆನಪು ಮರುಕಳಿಸಿತು ನೀಲಮ್ಮನಿಗೆ. ಸತ್ತು ಸ್ವರ್ಗಕ್ಕೆ ಸೇರಿದವರು ನಕ್ಷತ್ರಗಳಾಗಿ ಮಿನುಗುತ್ತಾರೆಂದು ಯಾರೋ ಹೇಳಿದ್ದನ್ನು ಕೇಳಿದ್ದಳು ನೀಲಮ್ಮ. ತನ್ನ ಮನಸ್ಸಿಗೆ ಹಿತವಾದ ನಕ್ಷತ್ರವೊಂದನ್ನು ತನ್ನ ತಾಯಿಯು ಅದೆಂದು ತಿಳಿದಳು. ಕೃಷ್ಣಪ್ಪ ಶಾಲೆಯ ಪುಸ್ತಕವನ್ನೆತ್ತಿಕೊಂಡ. ನೀಲಮ್ಮ ಮತ್ತೆ ಆಗಸಕ್ಕೆ ಕಣ್ಣಾಗಿ ಕುಳಿತಳು.

ಆಗಲೆ ತಡಮೆಯ ಕಡೆಯಿಂದ "ನೀಲಮ್ಮ ನೀಲಮ್ಮ" ಎಂದು ಒಂದೆರಡು ಬಾರಿ ವಿಚಿತ್ರವಾದ ಸ್ವರವೊಂದು ಕೇಳಿ ಬಂತು. ತಂದೆ ಕುಡಿದು ತೊದಲಿರಬೇಕೆಂದು ಅರ್ಥವಾಯಿತು ನೀಲಮ್ಮನಿಗೆ. ಆಕೆ ಅಲ್ಲಿಗೆ ಹೋದಾಗ ತಡಮೆಯ ಅಡ್ಡಸಲಿಕೆಯನ್ನು ಎಡವಿ ಮುಂಜಪ್ಪ ಬಿದ್ದಿದ್ದ. ಮಕ್ಕಳಿಬ್ಬರು ಮೆಲ್ಲನೆ ಹಿಡಿದು ತಂದು ಜಗಲಿಯಲ್ಲಿ ಮಲಗಿಸಿದಾಗಲೂ ಮುಂಜಪ್ಪ ಏನೇನೋ ಗೊಣಗುತ್ತೊಡಗಿದ. "ನೀಲಮ್ಮ ಹೆದರಬೇಡ, ನಿನ್ನ ಮದುವೆ ನಿಶ್ಚಯವಾಯಿತು. ಕಣೇ... ಆದಷ್ಟು ಬೇಗ ಮದುವೆ ಮಾಡಿಬಿಡುತ್ತೇನೆ' ಹೇಳುತ್ತಿರುವಂತೆ ಗಳಕ್ಕನೆ ವಾಂತಿ ಮಾಡಿಕೊಂಡ. ಅಲ್ಲೇ ನಿದ್ದೆ ಹೋದ..

ನೀಲಮ್ಮನಿಗೆ ಥಕ್ಕನೆ ನಿದ್ರೆ ಬರಲಿಲ್ಲ. ತಂದೆ ಯಾಡಿದ ಮಾತು ಮದ್ಯದ ಅಮಲಿನಲ್ಲಿ ತೇಲಿ ಬಂದಿದ್ದರೂ ಅದು ಸುಳ್ಳಾಗಿರಲಾರದು ಎಂದು ತೋರಿತ್ತು ಅವಳಿಗೆ. ತಂದೆ ಯಾರಲ್ಲೋ ತನ್ನ ಮದುವೆಯ ಬಗ್ಗೆ ಮಾತಾಡಿ ನಿಶ್ಚಯ ಮಾಡಿರಬೇಕು ಎಂದು ಅವಳು ತರ್ಕಿಸಿದಳು. ತಂದೆಯೇನೋ ತನ್ನ ಹಿತಚಿಂತನೆಯಿಂದು ಮುಂದುವರಿದಿರಬಹುದು. ಆದರೆ ತನ್ನ ಮನಸ್ಸು ಅದಕ್ಕೆ ಒಪ್ಪಿಗೆ ಈಯಬಲ್ಲದೇ?

ತಂದೆಯ ಪ್ರಯತ್ನ ಅವಳಿಗೆ ಹಿತವಾಗಿ ಕಾಣಿಸಲಿಲ್ಲ. ತಲೆ ನೂರು ಯೋಚನೆಗಳ ಕಳವಾದಾಗ. ನಿದ್ರೆಯಾದರೂ ಬರಬಾರದೇ ಎಂದು ಹಂಬಲಿಸಿದಳು. ಆದರೆ ನಿದ್ರೆ ಅವಳನ್ನು ಅಣಕಿಸಿ ದೂರ ಸರಿದು ನಿಂತಿತ್ತು.

ನೀಲಮ್ಮ ತೆಂಗಿನ ಸಸಿಗಳಿಗೆ ನೀರೆರೆಯುವುದರಲ್ಲಿ ಮಗ್ನಳಾಗಿದ್ದಳು. ಕಡಲತೀರದಲ್ಲಿರುವ ಚೆಂದಪ್ಪನ ಸಸಿಗಳಿಗೆ ಹೀಗೆ ತಾನು ನೀರುಣಿಸುವುದು ಯಾವಾಗ? ಎಂದುಕೊಳ್ಳುತ್ತಿತ್ತು, ಅವಳ ಮನಸ್ಸು ಕಳೆದಿರುಳು ತಂದೆ ಎತ್ತಿದ ಮದುವೆಯ ಮಾತು ಇನ್ನೂ

ಅವಳ ಕಿವಿಯಲ್ಲಿ ಗುಣುಗುಣಿಸುತ್ತಿತ್ತು.

ಆ ದಿನ ಕಡಲು ಜೋರಾಗಿ, ದೋಣಿ ದೂಡು ವಂತಿರಲಿಲ್ಲವಾದ್ದರಿಂದ ಮಂಜಪ್ಪ ತನ್ನ ಹೊಸ ಬೀಸು ಬಲೆಗೆ 'ಸರ'ಗಳನ್ನು ಜೋಡಿಸುವ ಕೆಲಸಕ್ಕೆ ಕುಳಿತಿದ್ದ. ನೀಲಮ್ಮ ಬಾವಿ ಕಟ್ಟೆಯಲ್ಲಿ ಬಟ್ಟೆ ಒಗೆಯುತ್ತಿದ್ದಳು.

"ನೀಲಮ್ಮ ಇಲ್ಲಿ ಬಾ," ಮಂಜಪ್ಪ ಕರೆದ.

"ಏನಪ್ಪಾ?"

"ಉದ್ಯಾವರದಿಂದ ಒಂದು ಒಳ್ಳೆ ನೆಂಟಸ್ತಿಕೆ ಬಂದಿದೆ ನಿನಗೆ. ಅದನ್ನು ಹೇಳೋಣವೆಂದು ಕರೆದೆ. ನಮ್ಮ ಉದ್ಯಾವರ ಐತಣ್ಣ ಇದ್ದಾನಲ್ಲ. ಅವನ ತಮ್ಮನಿಗೆ ಆದಷ್ಟು ಬೇಗ ಮದುವೆ ಮುಗಿಸಿಬಿಡೋಣ ಎಂದು ಮಾತಾಗಿದೆ."

ನೀಲಮ್ಮನಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಆಕೆ ಮಾತಾಡಲಿಲ್ಲ. "ನಿನಗೆ ಒಳ್ಳೇ ಮನೆ ಸಿಕ್ಕಲಿ ಎಂದು ಕಾಯುತ್ತ ಇದ್ದೆ. ದೇವರು ಒಳ್ಳೇ ದಾರಿ ತೋರಿಸಿದ" ಮಂಜಪ್ಪ ಹೇಳಿದಾಗ ನೀಲಮ್ಮನಿಗೆ ಅಳು ಉಕ್ಕಿ ಬಂತು. ತಾನು ಸುಮ್ಮನೆ ಇದ್ದರೆ ತಂದೆ ಸಮ್ಮತಿಯೆಂದು ತಿಳಿದುಕೊಂಡಾರು. ಮದುವೆಯ ಏರ್ಪಾಡು ಮುಂದುವರಿಯಬಹುದು ಏನಿದ್ದರೂ ಈಗಲೆ ಧೈರ್ಯ ಮಾಡಿ ಹೇಳಿಬಿಡುವುದು ಒಳಿತು ಎಂದುಕೊಂಡಳು ನೀಲಮ್ಮ.

"ಅಪ್ಪಾ, ನನಗೆ ಈ ಮದುವೆ ಬೇಡ." ಬಿಕ್ಕುತ್ತ ಹೇಳಿದಳು ನೀಲಮ್ಮ. 'ಈ ಮದುವೆ' ಎನ್ನುವುದನ್ನು ಅಷ್ಟಾಗಿ ಗಮನಿಸದ ಮಂಜಪ್ಪ ಮಗಳು ಮದುವೆಯೇ ಬೇಡ ಎನ್ನುತ್ತಿದ್ದಾಳೆ ಎಂದು ತಿಳಿದುಕೊಂಡ. "ಯಾಕೆ? ಎರಡನೆಯ ಮದುವೆ ಆಗುವುದು ನಮ್ಮಲ್ಲಿ ಏನೂ ಹೊಸತಲ್ಲ. ಮೊದಲನೆಯದು ಆಯಿತು. ಹೋಯಿತು. ಅದನ್ನು ನೆನಪಿಸಿ ಇನ್ನು ಏನಾದೀತು? ನೀನಿನ್ನೂ ಚಿಕ್ಕ ಹುಡುಗಿ. ಮಕ್ಕಳಿಲ್ಲ, ಮರಿಯಿಲ್ಲ. ಹಾಗೆಲ್ಲ ಹೇಳಬಾರದು,"

"ಖಂಡಿತಕ್ಕೂ ಅಪ್ಪ, ನನಗೀ ಮದುವೆ ಬೇಡವೇ ಬೇಡ."

"ಅದು ಹೇಗಾದೀತು? ನಾನು ಮಾತು ಕೊಟ್ಟಾಗಿದೆ. ಈ ಹೊತ್ತು ಮದುವೆಯ ದಿನದ ಕುರಿತು ನಿಶ್ಚಯವಾಗಬೇಕಾಗಿದೆ."

"ಏನೇ ಆದರೂ ನಾನು ಈ ಮದುವೆಯಾಗುವುದಿಲ್ಲ."

"ಏನು, ನನ್ನ ಮರ್ಯಾದೆ ತೆಗೆಯುತ್ತೀಯಾ? ಆಗುವುದಿಲ್ಲ ಎನ್ನುವುದು ನಿನ್ನ ಖುಷಿಯ ಹಾಗು ದರೆ? ಮದುವೆ ಆಗದೆ ಎಲ್ಲಿಗೆ ಹೋಗುತ್ತದೆ ನೋಡುವ" ಮಂಜಪ್ಪನ ಸ್ವರ ಇದ್ದಕ್ಕಿದಂತೆ ಏರಿತು.

"ನಾನು ಸಮುದ್ರಕ್ಕೆ ಹಾರಿಕೊಳ್ಳುತ್ತೇನೆ."

"ಏನು?" ಮಂಜಪ್ಪ ಕೋಪದಿಂದ ಸಿಡಿದೆದ್ದು ನೀಲಮ್ಮನ ಕಪಾಳಕ್ಕೆ ಟಪಟಪನೆ ಬಾರಿಸಿದ. ನೋವು ಬಹಳವಾದರೂ ನೀಲಮ್ಮ ದನಿ ತೆಗೆದು ಕೂಗಲಿಲ್ಲ. ತುಟಿ ಕಚ್ಚಿ ಸಹಿಸಿಕೊಂಡಳು.

"ಏನು ಈಗ ಹೇಳು ನಿನ್ನ ಒಪ್ಪಿಗೆ ತಾನೆ?" ನಿರ್ಬಂಧದಿಂದ ಒಪ್ಪಿಸಬಹುದೆಂದು ಭಾವಿಸಿ ಆಡಿದ ಮಂಜಪ್ಪ.

"ಇಲ್ಲ, ಇಲ್ಲ ನಾನಿದಕ್ಕೆ ಒಪ್ಪುವುದಿಲ್ಲ. ನನ್ನನ್ನು ಕೊಂದರೂ ಚಿಂತಿಲ್ಲ."

"ಏನು ಒಪ್ಪುವುದಿಲ್ಲವೆ?" ತಟಕ್ಕನೆ ಜಾಮಡಿಯ 'ಉತ್ತರ ಹಲಗೆ'ಯ ಮೇಲೆ ಕೈಯಾಡಿಸಿ ನಾಗರ ಬೆತ್ತವನ್ನು ತೆಗೆದ, ನೀಲಮ್ಮ ಬೆದರಿದರೂ ಓಡಲಿಲ್ಲ. ಕಲ್ಲುಗೊಂಬೆಯಾಗಿ ನಿಂತೇ ಇದ್ದಳು. ನಾಗರ ಬೆತ್ತ ನಿರ್ದಯವಾಗಿ ಅವಳ ಮೈ ಕೈ ಮೋರೆ ಮೇಲೆಲ್ಲ ನರ್ತಿಸಿತು. ಅಲ್ಲೆಲ್ಲ ಬಾಸುಂಡೆಗಳು ಮೂಡಿದುವು. ಆದರೂ ನೀಲಮ್ಮ ಅತ್ತು ರಂಪಾಟ ಮಾಡಲಿಲ್ಲ. ಕಣ್ಣೀರು ಮಾತ್ರ ಒಂದೇ ಸಮನೆ ಸುರಿಯುತ್ತಿತ್ತು.

"ಕೊಲ್ಲುವುದಾದರೆ ಕೊಂದು ಬಿಡಿ" ಎಂದು ಸಹಿಸದಾದಾಗ ಬಿಕ್ಕಳಿಸಿ ಹೇಳಿ ತತ್ತರಿಸಿ ಕೆಳಕ್ಕೆ ಕುಸಿದಳು ನೀಲಮ್ಮ. ಬಿದ್ದಲ್ಲಿಗೇ ಇನ್ನೆರಡು ಏಟು ಕೊಟ್ಟು ಬೆತ್ತವನ್ನು ಮೂಲೆಗೆ ಎಸೆದು, ಬಾಯಿಗೆ ಬಂದ ಹಾಗೆ ಬಯ್ಯುತ್ತ ಇದ್ದು ಮತ್ತೆ ಎಲ್ಲಿಗೋ ಹೊರಟು ಹೋದ.

ತಂದೆ ಹೊರಟು ಹೋದ ಮೇಲೂ ಎಷ್ಟೋ ಹೊತ್ತು ನೀರವವಾಗಿ ಅತ್ತಳು ನೀಲಮ್ಮ. ಮೈ, ಕೈ ಮೋರೆಯ ಮೇಲೆ, ನೆತ್ತರಿನ ಗೆರೆ ಎಳೆದಂತಿತ್ತು. ನೋವು ದೇಹವನ್ನು ಹಿಂಡುತ್ತಿತ್ತು.

ಎಣ್ಣೆಯ ಕುಡಿಕೆಯಿಂದ ಎಣ್ಣೆ ತೆಗೆದು ಬಾಸುಂಡೆಗಳ ಮೇಲೆ ಮೆಲ್ಲನೆ ಸವರಿಕೊಂಡಳು.

'ಪಾಪ, ನೋವು ತಿನ್ನಲಿಕ್ಕಾಗಿಯೇ ಹೆಣ್ಣಿನ ಜನ್ಮವೋ ಏನೋ' ಅವಳ ಮನಸ್ಸು ನುಡಿಯಿತು. ಹಿಂದೆ ಕೆಲವು ಸಲ ತನ್ನ ತಾಯಿಯನ್ನು ತಂದೆ ಹೀಗೆ ದನಕ್ಕಿಂತಲೂ ಕಡೆಯದಾಗಿ ಹೊಡೆದ ನೆನಪಾಯಿತು.

ಮಧ್ಯಾಹ್ನ ಶಾಲೆ ಬಿಟ್ಟು ಬಂದ ಕೃಷ್ಣನು ಅಕ್ಕನ ಮೋರೆ ಮೈಯನ್ನು ಕಂಡು "ಇದೇನಕ್ಕ?" ಎಂದು ಕೇಳಿದ.

"ತೆಂಗಿನ ಮರದಿಂದ ಗರಿಯೊಂದು ಬೀಳುವಾಗ ಒರಸಿ ಹೋಯಿತಪ್ಪೋ" ಹೇಳಿದರೂ ಹುಡುಗ ನಂಬಲಿಲ್ಲ. "ಸುಳ್ಳು, ಅಪ್ಪ ಹೊಡೆದಿರಬೇಕು" ಎಂದಾಗ ನೀಲಮ್ಮನಿಗೆ ಮತ್ತೊಮ್ಮೆ ಅಳು ಉಕ್ಕರಿಸಿ ಬಂತು.

ಮಂಜಪ್ಪನ ಪ್ರೇಯಸಿ ನೀನು ಹೊರಗೆ ಆಗದೆ ಎಂದು ತಿಳಿದಾಯಿತು. ಆದಷ್ಟು ಬೇಗನೆ ಮಂಜಪ್ಪನನ್ನು ಕಾಡಿ ಬೇಡಿಯಾದರೂ ಅವನನ್ನು ಮದುವೆಮಾಡಿಕೊಳ್ಳುವಂತೆ ಒತ್ತಾಯಿಸುವುದು ತನ್ನ ಮೊದಲ ಕರ್ತವ್ಯ ಎಂದು ಭಾವಿಸಿದಳು. ಆದರೆ ಅವಳ ಕಿವಿಗೆ ಕರಗಿಸಿದ ಸೀಸವನ್ನು ಎರೆಯುವಂಥ ವಾರ್ತೆಯೊಂದು ಅವಳನ್ನು ಕಾದಿತ್ತು.

ಜೋಡಪ್ಪನ 'ಬಿದು ಬಲೆಗೆ' ಅಪೂರ್ವಕ್ಕೆ ಕಪಲ ಹಂದಿಯೊಂದು ಬಿದ್ದಿತ್ತು. ವಾಡಿಕೆಯಂತೆ ಅದರ ಮಾಂಸವನ್ನು ಎಲ್ಲರಿಗೆ ಹಂಚಿ ಕೊಟ್ಟುಯಾನು-

ಗೊಂದು ಪೂಜೆ ಸಲ್ಲಿಸಲಾಗಿತ್ತು. ಅದು ನಡೆದ ಮೇಲೆ ಕಡಲ ಕರೆಯ 'ಕಲಾವಿದ'ರಿಂದ ಯಕ್ಷ ಗಾನ ತಾಳ ಮದ್ದಳೆ. ಚೆಂಡ ಮದ್ದಲೆಗಳ ಮೇಳದಲ್ಲಿ ಚೂಪಪ್ಪ ಭಾಗವತನಾಗಿ ಜಾಗಟೆ ಹಿಡಿದ. ಸುಬ್ಬ ಕಾರ್ಣವ ರಾವಣ. ಕೂಡು ಮನೆ ಬಸಪ್ಪ ಶೂರ್ಪಣಖಿಯಾಗಿದ್ದ. ಮಂಡೋದರಿಯ ಪಾತ್ರವನ್ನು ಪರೇರ ವಹಿಸಿದ್ದ. ಕರಿಯ ಮಾರೀಚ.

ತಾಳ ಮದ್ದಳೆ ಸ್ವಾರಸ್ಯಕರವಾಗಿ ಸಾಗುತ್ತಿತ್ತು. ಅಷ್ಟರಲ್ಲಿ ತೆಂಕುದೆಸೆಯಿಂದ ಯಾರೋ ಓಡಿ ಬರುವುದು ಕಾಣಿಸಿತು. ಬಂದವನು ಪೆರು ಬೈಲಿನ ಅಬ್ಬು ಬ್ಯಾರಿ. ಆತ ಪಕೀರನನ್ನು ಕರೆದು, "ಕೋಡೀ ಮನೆ ಮಂಜಪ್ಪ ಮೇಲು ಕಡವಿನ ಕಲ್ಲಿಗೆ ಬೀಸಲು ಹೋದವನು ಕಾಲು ಜಾರಿ ಬಿದ್ದು ತಲೆ ಒಡೆದು ಹೋಗಿದೆ. ಜೀವದ ಮಿಸುಕಾಟ ಇಲ್ಲ" ಎಂದ.

ಒಮ್ಮೆ ಸುದ್ದಿ ಹರಿದು ತಾಳ ಮದ್ದಳೆ ಅರ್ಧದಲ್ಲೆ ಕೊನೆಗೊಂಡಿತು. ಜನ ಮೇಲು ಕಡವಿನತ್ತ ಓಡಿದರು.

ಮಂಜಪ್ಪ ಮಗನನ್ನು ಕರೆದುಕೊಂಡು ಬಲೆ ಬೀಸಲು ಬಂದಿದ್ದ. ಮೇಲು ಕಡವಿನ ಕಲ್ಲಿನ ಬಳಿ ಗಾಳ ಹಿಡಿಯುತ್ತ ಅಬ್ಬುಬ್ಯಾರಿ ನಿಂತಿದ್ದ. ಅವನನ್ನು ಮಾತಾಡಿಸಿ ಮಂಜಪ್ಪ ಕಲ್ಲಿಗೆ ಮುಂದುವರಿದ. ಎರಡು ಮೂರು ಬಾರಿ ಮಂಜಪ್ಪ ಬಲೆ ಎಸೆದಿರ ಬೇಕು. ಅಷ್ಟರಲ್ಲಿ ತೆರೆಯೊಂದು ರಭಸದಿಂದ ಮೇಲೇರಿ ಬಂತು. ಮಂಜಪ್ಪ ಅನುಸರಿಸಿ ಹಿಂದಕ್ಕೆ ಓಡುವಾಗ ಹಾವಸೆ ಜಾರಿ ದಡಕ್ಕನೆ ಬಿದ್ದು ಬಿಟ್ಟ. ಕೃಷ್ಣಪ್ಪ 'ಅಪ್ಪಾ, ಅಪ್ಪಾ' ಎಂದು ಬೊಬ್ಬಿದ್ದ. ಅಬ್ಬುವೂ ಕೂಡಲೆ ಗಾಳವನ್ನು ಬಿಸುಟು ಮಂಜಪ್ಪ ಬಿದ್ದಲ್ಲಿಗೆ ಬಂದ. ಇಬ್ಬರೂ ಕೂಡಿ ಪ್ರಯಾಸದಿಂದ ಮೇಲಕ್ಕೆ ತಂದರು. ಬಿದ್ದವನಿಗೆ ಬೋಧವಿರಲಿಲ್ಲ. ಹೆಡತಲೆಗೆ ಬಲವಾದ ಪೆಟ್ಟಾಗಿತ್ತು. ಕೃಷ್ಣಪ್ಪ ತಂದೆಯ ದೇಹದ ಮೇಲೆ ಬಿದ್ದು ಗೋಳಾಡತೊಡಗಿದ.

ತಾಯಿಯನ್ನು ಮೊದಲೆ ಕಳೆದುಕೊಂಡ ನೀಲಮ್ಮ, ಕೃಷ್ಣಪ್ಪರು ಈಗ ತಂದೆಯನ್ನೂ ಕಳೆದು ಕೊಂಡು ತೀರಾ ಅನಾಥರಾದರು. ತಂದೆ ತನ್ನನ್ನು ಕ್ರೂರವಾಗಿ ಹೊಡೆದಿದ್ದ ಹೊಡೆತ ಈಗ ಸಂಪೂರ್ಣ ವಾಗಿ ಮರೆತುಹೋಗಿತ್ತು ನೀಲಮ್ಮನಿಗೆ,

"ನನಗೆ ಯಾರು ಗತಿಯಿನ್ನು?" ಎಂದು ನೀಲಮ್ಮ ಅತ್ತಾಗ ಕೇಳುವವರ ಕರುಳು ಕವುಚುವಂತಾಗಿತ್ತು.

ಸುದ್ದಿ ತಿಳಿದ ಸೀತುವಿಗೆ ಆಕಾಶವೆ ಕಳಚಿ ಬಿದ್ದಂ ತಾಗಿತ್ತು. ಆಕೆ ಕೋಡಿ ಮನೆಗೆ ಓಡಿ ಬಂದಳು. ತಾನು ಅನಾಥೆಯಾದೆನೆಂದು ಅತ್ತಳು. ಶವದ ಕಾಲ ಬುಡದಲ್ಲಿ ತನ್ನ ಮಾಂಗಾಲ್ಯವನ್ನು ಕಳಚಿಟ್ಟು ಕೈ ಬಳೆಗಳನ್ನು ಒಡೆದಳು. ಎರಡು ಕೈಗಳಿಂದ ಆ ತಣ್ಣ ಗಿನ ಕಾಲುಗಳನ್ನು ಬಿಗಿ ಹಿಡಿದು ತನ್ನ ಕಣ್ಣೀರಿನಿಂದ ಅವುಗಳನ್ನು ಮೀಯಿಸಿದಳು.

× × ×

ಉದ್ಯಾವರ ಐತ ತನ್ನ ತಮ್ಮನ ಮದುವೆಯ ದಿನ ನಿಶ್ಚಯ ಮಾಡುವುದಕ್ಕಾಗಿ ಮಂಜಪ್ಪನಲ್ಲಿಗೆ ಹೊರಟು, ರೈಲು ರಸ್ತೆ ಹಿಡಿದಿದ್ದ. ಅವನಿಗಿನ್ನೂ ಮಂಜಪ್ಪನ ಮರಣದ ವಾರ್ತೆ ತಲುಪಿರಲಿಲ್ಲ. ಬಿಸಿಲ ಹೆಜ್ಜೆ ಹೆಜ್ಜೆಗೂ ಏರುತ್ತ ಬಂದು ಮಸೀದಿಯ ಬಳಿಯಲ್ಲಿನ ಮರಗಳನ್ನೂ ಬಿಸಿಪೇರಿಸುತ್ತಿತ್ತು. ಗೂಡ್ಸ್ ಬಂಡಿಯೊಂದು ಲಯಬದ್ಧವಾಗಿ ಶಬ್ದ ಸುತ್ತಾ ದಟ್ಟವಾಗಿ ಹೊಗೆಯನ್ನು ಕಾರನ್ನು ಹಾದು ಹೋಯಿತು.

ಜನರ ಗುಂಪೊಂದು ಮಂಜಪ್ಪನ ಶವವನ್ನು ಮಸೀದಿ ಬಳಿಯಲಿನ ಶ್ಮಶಾನ ಭೂಮಿಗೆ ಹೊತ್ತು ತರುತ್ತಿತ್ತು. ಅಷ್ಟರಲ್ಲಿ ಐತ ಬಂದು ಅಲ್ಲಿಗೆ ತಲು ಪಿದ್ದ. ಆಡುತ್ತಿದ್ದ ಹುಡುಗರ ಗುಂಪನ್ನು ಕೇಳಿದ

"ಯಾರು ತೀರಿಕೊಂಡದ್ದು?"

"ಕೋಡಿಮನೆ ಮಂಜಪ್ಪಣ್ಣ"

"ಏನಾಗಿತ್ತೋ?"

"ಬಂಡೆಯಲ್ಲಿ ಜಾರಿ ಬಿದ್ದದ್ದು."

ಐತ ಅವಾಕ್ಕಾಗಿ, ಬೀಸುಗಾಲು ಹಾಕಿದ. ಶವ ಬಳಿಗೆ ಒಬ್ಬಾತನ ಕೈಯಲ್ಲಿ ಮಣ್ಣಿನ ಪಾತ್ರೆ ಯೊಂದಿತ್ತು. ಅದರಿಂದ ಸುವಾಸನೆಯ ಧೂಪ ಹೊಗೆ ಏಳುತ್ತಿತ್ತು. ಇನ್ನೊಬ್ಬ ಅರಸಿನದ ನೀರಿ ಪಾತ್ರೆಯನ್ನು ಹಿಡಿದುಕೊಂಡಿದ್ದ. ತಲೆಗೆ ಬಿಳಿ ಮುಸುಕು ಹಾಕಿದ್ದ ನಾಲ್ವರು ಸಿದಿಗೆಗೆ ಹೆಗಲ ಕೊಟ್ಟಿದ್ದರು. ಅವರ ಮೇಲೆ ಮಂಜಪ್ಪನ ದೇಹ ಅಲಂಕೃತವಾಗಿ ಮಲಗಿತ್ತು. ಬಿಕ್ಕಿ ಬಿಕ್ಕಿ ಅಳುತ್ತ ತಂದೆಯ ಶವವನ್ನು ಹಿಂಬಾಲಿಸುತ್ತಿದ್ದ ಕೃಷ್ಣಪ್ಪ.

ಮೊದಲೆ ಅಗೆದಿದ್ದ ಹೊಂಡದ ಬಳಿಗೆ ಶವವನ್ನು ಒಯ್ದರು. ಹಿರಿಯನೊಬ್ಬ ಕಟ್ಟಳೆಯಂತೆ ಶವ ದಫನ ಮಾಡಲು ನೆರೆದವರ ಅನುಮತಿ ಕೇಳಿದ. ಇಬ್ಬರು ಹೊಂಡಕ್ಕಿಳಿದು ಅದರ ತಳವನ್ನು ಪ್ರಶಸ್ತಗೊಳಿಸಿ, ಅರಿಸಿನದ ನೀರಿನಲ್ಲಿ ಅದ್ದಿದ್ದ ಬಟ್ಟೆಯನ್ನು ಹಾಸಿದರು. ಮೃತ ದೇಹವನ್ನು ದಫನ ಕುಂಡದಲ್ಲಿ ಮಲಗಿಸಿ ಬಿಳಿಯ ವಸ್ತ್ರದ ಪೋಷಾಕು ಹಾಕಿದರು. ಎಲ್ಲರೂ ಮೂರು ಮೂರು ಹಿಡಿ ಮಣ್ಣು ಅರ್ಪಿಸುತ್ತ 'ಸ್ವರ್ಗಕ್ಕೇ ಹೋಗು' ಎಂದು ಪ್ರಾರ್ಥಿಸಿದರು. ಹೊಂಡ ಅರ್ಧ ತುಂಬಿದಮೇಲೆ ಸಿದಿಗೆಯನ್ನೂ ಅದರೊಳಗೆ ಹಾಕಿ ಮತ್ತೆ ಮರಳನ್ನು ತುಂಬಿಸಿದರು. ಮರಳಗೋರಿಯ ದಿಬ್ಬದ ಮೇಲೆ ಹೂಮಾಲೆಗಳು ಬಿಸಿಲಲ್ಲಿ ಬಾಡುತ್ತಾ ಹರಡಿ ಬಿದ್ದವು.

ವಾಡಿಕೆಯಂತೆ ಕ್ಷೌರದ ನಾಯಿ ತನ್ನ ಗಿಂಡಿಯ ನೀರನ್ನು ಮಾವಿನೆಲೆಯಿಂದ ಸಿಂಪಡಿಸಿ ನೆರೆದವರ ಮೇಲೆ ಕಳಿದ. ಏಳನೇ ದಿನದ ಉತ್ತರ ಕ್ರಿಯೆಗಾಗಿ ಮುಂಜಪ್ಪನ ಕುಟುಂಬದವನೊಬ್ಬ ನೆರೆದ ಸಮುದಾಯದ ಅಪ್ಪಣೆಯನ್ನು ಪಡೆದುಕೊಂಡ.

ನೆರವಿ ಚದುರಿತು.

ಐತ ವಿಧಿಯ ಆಟವನ್ನು ಎಣಿಸುತ್ತ ಮಸಣದಿಂದ ನೇರವಾಗಿ ಉದ್ಯಾವರಕ್ಕೆ ನಡೆದ. ನೀಲಮ್ಮನ ನಕ್ಷತ್ರವೆ ಚೆನ್ನಾಗಿಲ್ಲ ಎಂದು ತರ್ಕಿಸಿತು ಆತನ ಮನಸ್ಸು. ಮೊದಲನೆಯ ಮದುವೆ ಆಗಿ ಗಂಡ ಸತ್ತ. ಎರಡನೆಯ ಮದುವೆಯ ಮಾತಿನ ಮಧ್ಯದಲ್ಲೆ ತಂದೆಗೆ ಹೀಗಾಯಿತು. ಇಂಥವಳನ್ನು ಮನೆಗೆ ತಂದುಕೊಳ್ಳುವುದು ಗಂಡಾಂತರ ವಿಷಯ ಎಂದಿತ

ಅವನ ಮನಸ್ಸು.

× × ×

ಕಡಲ ಕರೆಯ ಮರಳಲ್ಲಿ ಮನೆ ಕಟ್ಟಲು ಹಿಡಿದಿದ್ದ ಚೆಂದಪ್ಪ. ತಾಯಿ, ಮಗ, ದುಡಿಯುತ್ತಿದ್ದರು. ಉದ್ಯಾವರದಿಂದ ಬಂದ ಅಕ್ಕ ಪೊನ್ನಮ್ಮ ತಾನೂ ಮಣ್ಣಿನ ಬುಟ್ಟಿಗೆ ತಲೆ ಕೊಟ್ಟಳು.

ತಾಯಿ ಮತ್ತು ಅಕ್ಕನಿಗೆ ಚೆಂದಪ್ಪ ಕೆಳಮನೆಯನ್ನು ಬಿಟ್ಟು ಬಂದು ಇಲ್ಲಿ ಕಡಲ ಕರೆಯಲ್ಲಿ ಮನೆ ಕಟ್ಟಿ ವಾಸಿಸುವುದು ಅಷ್ಟೊಂದು ಇಷ್ಟವಿರಲಿಲ್ಲ.

ಕೆಲವು ತಲೆಮಾರುಗಳಿಂದ ತಮ್ಮ ಶಾಖೆಯವರೆ 'ತರವಾಡು' ಮನೆಯಲ್ಲಿ ದುಡಿದವರು, ಬದುಕಿದವರು. ಚೆಂದಪ್ಪನಿಗಿಂತ ಮೊದಲು ಅವನ ಸೋದರಮಾವ ಆತನಿಗಿಂತ ಮುಂಚೆ ಅವನ ಸೋದರಮಾವ ಹೀಗೆ ಆ ಜಾಗಕ್ಕೆ ಚೆಂದಪ್ಪನ ಹಿರಿಯರೇ ಬೆವರು ಸುರಿಸಿದವರು. ಮನೆಗೆ, ನಂಬಿ ಬಂದ ದೈವಕ್ಕೆ ಖರ್ಚು ಮಾಡುವಲ್ಲಿ ಹಿರಿಯ ಪಾತ್ರ ವಹಿಸಿಕೊಂಡು ಬಂದವರು. ತೆಂಗು, ಮಾವು, ಹಲಸು ಮೊದಲಾದ ಮರಗಳನ್ನು ನೆಟ್ಟು ಬೆಳೆಸಿದವರು. ಹೀಗಿರುವಾಗ ಸೋಮಪ್ಪ ಮನೆಗೆ ತಾನೂ ಹಕ್ಕುದಾರನೆಂದು ಹೇಳಿದನೆಂದು, ಅಷ್ಟು ಸುಲಭದಲ್ಲಿ ಹಿರಿಯರು ಬಾಳಿ ಬಂದ ಮನೆಯನ್ನು ಬಿಟ್ಟುಕೊಟ್ಟು ತಾವು ಕೈ ಬೀಸಿಕೊಂಡು ಕಡಲ ದಂಡೆಗೆ ಹೋಗುವುದು ಯಾಕೆ? ಎನ್ನುವುದು ಅವರ ವಾದ.

ಚೆಂದಪ್ಪನಿಗೂ ಅವರ ಮಾತಿನಲ್ಲಿ ಹುರುಳಿದೆ ಎಂದು ಗೊತ್ತಿತ್ತು. ಆದರೆ ಹಿರಿಯರ ಆಸ್ತಿಯನ್ನು ತಾನೇ ಆಳಬೇಕೆಂಬ ಆತುರ ಆತನಿಗಿರಲಿಲ್ಲ. ಹಿರಿಯರ ಸೊತ್ತು ಹಾಳಾಗಬಾರದು. ಅದನ್ನು ಕೇಳುವವರಿಲ್ಲದಾಗ ರಕ್ಷಿಸುವುದು ಸರಿ. ಕೇಳುವವರಿರುವಾಗ ಅದಕ್ಕೇ ಅಂಟಿಕೊಂಡು ನಿಲ್ಲುವುದು ಆತನಿಗೆ ಸಮ್ಮತವಿಲ್ಲ. ಯಾರೇ ಆಗಲಿ ಹಿರಿಯರ ಮನೆಯನ್ನು ಮನೆತನಕ್ಕೆ ಸಂಬಂಧಪಟ್ಟ ಕಟ್ಟು ಕಟ್ಟಳೆಗಳನ್ನು ನಡೆಸಿಕೊಂಡು ಬಂದರೆ ಸೈ, ತಾನು ತನ್ನ ಕೈಲಾದ ಸಹಾಯ ಕೊಡುತ್ತೇನೆ ಎನ್ನುವ ಮನೋಭಾವ ಅವನದು.

ಅಂದು ಮಣ್ಣು ಹೊರುವಾಗ ಮದುವೆಯ ಪ್ರಸ್ತಾಪ ಬಾರದಿರಲಿಲ್ಲ. ಪೊನ್ನಮ್ಮ ಬಂದಾಗಲೆಲ್ಲ ದೇಯಿ "ನೀನಾದರೂ ನಿನ್ನ ತಮ್ಮನಿಗೆ ಹೇಳಬಾರದೆ ಮಗು? ಏನಂತೆ ಅವನ ಅವಸ್ಥೆ? ಇವನ ಪ್ರಾಯದವರಿಗೆಲ್ಲ ಎಷ್ಟು ಮಕ್ಕಳಾದುವು? ನನಗಂತೂ ಹೇಳಿ ಹೇಳಿ ಗಂಟಲಿನ ಪಸೆ ಆರಿ ಹೋಯಿತು. ನಾನೊಬ್ಬಳೆ ಎಷ್ಟೊಂದು ಹೊಡಕೊಳ್ಳಲಿ" ಎಂದು ಗೋಗರೆದಳು. ನೀಲಮ್ಮ ತಪ್ಪಿ ಹೋಗಿ ಆತನ ಮನಸ್ಸು ಮುರಿದುದು ತಿಳಿದಿದ್ದ ಪೊನ್ನಮ್ಮ ಸ್ವಲ್ಪ ಸಮಯ ಕಳೆಯಲಿ, ಮತ್ತೆ ಸರಿಯಾಗುತ್ತದೆ ಎಂದು ತಿಳಿದಿದ್ದಳು. ಆದರೆ ಇನ್ನೂ ಆ ಸೂಚನೆ ಕಂಡುಬರದೆ ಆಕೆ ಮಣ್ಣು ಹೊರುವಾಗ ನಗುತ್ತಾ ಎಂದಳು "ಹೌದಾ ಚೆಂದಪ್ಪ, ಯಾರು ಹೊರುವ ಮಣ್ಣು ಯಾರು ಹೊರುತ್ತಿದ್ದೇವೆ?"

"ಯಾರು?"

"ಬೇರೆ ಯಾರು? ನಿನ್ನ ಹೆಂಡತಿ."

"ಓಹೋ,"

"ಓಹೋ, ಅಹೋ ಎಂದು ಹೇಳುತ್ತ ನೀನು ದಿನ ತೆಗೆ. ಅಮ್ಮನಿಗೆ ಏಳಲು ಕೂಡುವುದಿಲ್ಲ. ಮೊದಲು ಮದುವೆ ಕೆಳಮನೆಯಲ್ಲಿ ನಡೆಯಲಿ ಮತ್ತೆ ಹೊಸ ಮನೆ ಕಟ್ಟಿ ಇಲ್ಲಿಗೆ ಬಂದರಾಯಿತು."

"ಮೊದಲು ಹಿಡಿದ ಈ ಕೆಲಸ ಮುಗಿಯಲಿ. ಮತ್ತೆ ಮದುವೆ" ಎಂದು ಚೆಂದ... ರಿಸಿದಾಗ ತಾಯಿ ಮಗಳಿಬ್ಬರೂ ಸೋತ

'ತಾನು ಮದುವೆಯಾಗುವುದು ನೀಲಮ್ಮನನ್ನು ಎಂದು ಹೇಳಿ ಬಿಡಲೆ ಅವರಲ್ಲಿ' ಒಮ್ಮೆನಿಸಿತ ಚೆಂದಪ್ಪನಿಗೆ. ವಿಧವೆಯನ್ನು ತಂದುಕೊಳ್ಳಲು ತಾಯಿ, ಅಕ್ಕ ಒಪ್ಪಿಯಾರೆ? ಒಪ್ಪಿಸಲು ಪ್ರಯತ್ನಿಸಬೇಕು. ಒಪ್ಪದಿದ್ದರೂ ನೀಲಮ್ಮನನ್ನು ಕೈ ಬಿಡುವಂತಿಲ್ಲ. ನೀಲಮ್ಮನ ದುಃಖ ಕಳೆಯದೆ ಮದುವೆಯಾಗುವಂತೆಯೂ ಇಲ್ಲ. ತನ್ನ ಗುಡಿಸಲು ಸಿದ್ಧವಾಗಲಿ. ಹಿತ್ತಿಲ ತೆಂಗಿನ ಸಸಿಗಳಲ್ಲಿ ಇನ್ನೆರಡು ಗರಿಗಳು ಮೂಡಲಿ. ನೀಲಮ್ಮನ ತಂದೆ ಇನ್ನಿಲ್ಲ. ಆತ ಇರುತ್ತಿದ್ದರೆ ತಮ್ಮ ಮದುವೆಗೆ ಎಂದೂ ಒಪ್ಪುತ್ತಿರಲಿಲ್ಲ. ತಾನು ನೀಲಮ್ಮ ಒಂದಾಗಿ ಬಾಳಲು ಅದೃಷ್ಟವೇ ಅನುವು ಮಾಡಿಕೊಡುತ್ತ ಹೋಗುತ್ತಿದೆ. ಈಗಂತೂ ನೀಲಮ್ಮ ತುಂಬ ದುಃಖಿತೆ

ಅದು ಸಹಜವೂ ಹೌದು. ಕಾಲ ಎಲ್ಲವನ್ನೂ ಮಾಸುತ್ತದೆ. ಇಂದಲ್ಲ ನಾಳೆ ಕಣ್ಣೀರು ಆರಿ ಹೋಗುತ್ತದೆ. ಬದುಕು ಕೈ ಮಾಡಿ ಕರೆಯುತ್ತದೆ. ಅಂದು ತಾನು ತೋರಿಸಿದ ಬದಿಯಲ್ಲಿ ನೀಲಮ್ಮನಲ್ಲಿ ತಪ್ಪು ಮಾಡುವೆನು ಕುರಿತು ಆಡಿದ್ದು ಆಕೆ ಅಸಹಾಯಕಳಂತೆ ನಡೆದುಕೊಂಡಿದ್ದು ಎಲ್ಲ ಚಿತ್ರ ಕಟ್ಟಿ ಹಾದು ಹೋದವು.

ಮಣ್ಣು ಹೊರುವ ಅಂದಿನ ಕೆಲಸ ಮುಗಿಸಿ ದೇಯಿ, ಪೊನ್ನಮ್ಮ ಕೆಳ ಮನೆಗೆ ಹೊರಟರು. ಮಣ್ಣಿನ ಕೊಡದಿಂದ ನೀರು ನೊಗೆದು ಮಿಂದ ಚಂದಪ್ಪ. ತೆಂಕುಗಾಳಿ ಈಗ ತಿರುಗಿ ಬಡಗಣ ಗಾಳಿ ತುಸು ಬಿರುಸಾಗಿಯೆ ಬೀಸುತ್ತಿತ್ತು. ಕಡಲ ನೀರು ಸ್ವಚ್ಛವಾಗಿತ್ತು. ತೆರೆಗಳು ಒಂದನ್ನೊಂದು ಅಟ್ಟುವ ಆಟ ಆಡುತ್ತಲಿದ್ದವು.

ಚಂದಪ್ಪ ಬೇಲಿಯಲ್ಲಿ ಸಿಲುಕಿದ್ದ ನೂಲೋಣವನ್ನು ತೆಗೆದುಕೊಂಡು ನೂಲು ಕಾಯಿಸುತ್ತ ನಿಧಾನವಾಗಿ ರುದ್ರನ ಬಂಡೆಯತ್ತ ನಡೆದ.

× × ×

ಕೋಡಿ ಮನೆಯಲ್ಲಿ ಮಂಜಪ್ಪನ ಉತ್ತರ ಕ್ರಿಯಾದಿಗಳು ಮುಗಿದು, ಬಂದ ಹತ್ತಿರದ, ದೂರದ ನೆಂಟರಿಷ್ಟರೆಲ್ಲ ನೀಲಮ್ಮನಿಗೂ ಕೃಷ್ಣಪ್ಪನಿಗೂ ಸಮಾಧಾನ ಹೇಳಿ ಹೊರಟು ಹೋದರು. ಕೋಡಿ ಮನೆ ಮಂಜಪ್ಪನ ಸ್ವಾರ್ಜಿತವಾದುದರಿಂದಲೂ, ಆತನಿಗೆ ಸೋದರಳಿಯಂದಿರು ಇಲ್ಲದಿದ್ದುದರಿಂದಲೂ ಆ ಮನೆ ಹಾಗು ಆತನ ದೋಣಿ-ಬಲೆ ಎಲ್ಲವೂ ಆತನ ಮಕ್ಕಳ ಪಾಲಿಗೆ ಬಂದಿತ್ತು.

ಕೃಷ್ಣಪ್ಪ ಶಾಲೆಗೆ ಹೋಗುತ್ತ ಇದ್ದಾನೆ. ಆತ ಓದಿ ಜಾಣನಾಗಬೇಕು ಎಂಬ ಆಸೆ ನೀಲಮ್ಮನಿಗೆ, ಕೃಷ್ಣಪ್ಪ ಶಾಲೆಗೆ ಹೋದಮೇಲೆ ಮನೆಯಲ್ಲಿ ನೀಲಮ್ಮನೊಬ್ಬಳೆ. ಬಲೆ ಕಟ್ಟುವುದು, ಸೆಣಬು ನೇಯುವುದು. ಮೀನು ಒಣಗಿಸುವುದು, ತೆಂಗಿನ ಮರಗಳಿಗೂ, ಹೂ ಗಿಡಗಳಿಗೂ ನೀರೆರೆಯುವುದು.

ಅಡುಗೆ, ಬಟ್ಟೆಯೊಗೆಯುವುದು ಎಂದು ದಿನದ ಸಮಯ ಉರುಳುತ್ತಿತ್ತು.

ಬಿಡುವಿಲ್ಲದ ಕೆಲಸದ ನಡುವೆಯೂ ನೀಲಮ್ಮನಿಗೆ ಚಂದಪ್ಪನ ನೆನಪು ಮರುಕಳಿಸುತ್ತಿತ್ತು. ಸಣಬು ನೆನೆ ಹಾಕಲು ಹೋದಾಗ ನಡೆದ ಘಟನೆಯನ್ನು ಮೆಲುಕು ಹಾಕುತ್ತದೆ. ಮನಸ್ಸು ಅದೆಲ್ಲ ಆಗುವ ಹೋಗುವ ಮಾತೇ? ತಾನು ಮದುವೆಯಾಗಿ ಅಡ್ಡಕ್ಕೆ ಹೋದರೆ ಈ ಮನೆಯಲ್ಲಿ ಇರುವುದು ಯಾರು? ಕೃಷ್ಣಪ್ಪನನ್ನು ಬಿಟ್ಟು ಹೋಗುವುದಂತೂ ಸಾಧ್ಯವಿಲ್ಲ. ಅಥವಾ 'ಅವರು' ಈ ಮನೆಗೆ ಬಂದು ಕುಳಿತರೆ? ಆದರೆ ಹಾಗೆಲ್ಲ ಅವರು ಹೆಂಡತಿಯ ಮನೆಗೆ ಕುಳಿತುಕೊಳ್ಳಲು ಬಂದಾರೆ? ದಿನದ ಕೆಲಸ ಅವಳನ್ನು ಕೈ ಬೀಸಿ ಕರೆಯುವಾಗ ಹಗಲುಗನಸುಗಳನ್ನು ಕೊಡವಿ, ಅತ್ತ ನಡೆಯುತ್ತಾಳೆ ನೀಲಮ್ಮ.

ಕೆಲವು ದಿನಗಳಿಂದ ಬಲೆಗಾರರು ದೋಣಿಗೆ ಕಾಲಿರಿಸಿರಲಿಲ್ಲ. ಕಡಲಿನ ಸ್ಥಿತಿಯೂ, ಗಾಳಿಯೂ ಅನುಕೂಲವಿಲ್ಲದುದರಿಂದ ಮೀನಿನ ಪಲ್ಯಕ್ಕಾಗಿ ಕೆಲವರು ಗಾಳ ಹೊಳೆಯ ಬಲೆಯನ್ನು ಹೊತ್ತು ಹೊಳೆಗೆ ಹೊರಡುತ್ತಿದ್ದರು. ಕರಿಯನೂ, ಮೂಡು ಮನೆ ಬಸಪ್ಪನೂ ಹೊಳೆಯಲ್ಲಿ ಬಲೆಯನ್ನು ಎಸೆಯುತ್ತಾ ಆಗಾಗ ಕೆಸರಿಗಿಳಿದು ಮೀನನ್ನು ಹುಡುಕಿ ಮೇಲೆ ತೆಗೆಯುತ್ತಿದ್ದರು. ಬಸಪ್ಪ ಕೆಸರಿನಲ್ಲಿ ಬಗ್ಗಿ ತಡಕಾಡುತ್ತಿದ್ದ. ಆಗಲೆ ದೊಡ್ಡ ಮುಳ್ಳೊಂದು ಕಾಲಿಗೆ ನಾಟಿಕೊಂಡಿತು. ಗಳಿಗೆ ಗಳಿಗೆಗೆ ನೋವು, ನಂಜು ಹೆಚ್ಚಿ ಮನೆಯತ್ತ ಹೊರಟಿದ್ದ. ಉಬ್ಬಿಲಕ್ಕೆ ಬಂದು ಮುಟ್ಟಿದಾಗ ದಾರಿಯಲ್ಲಿ ಬಾಗಿನ ಹಿತ್ತಿಲ ಚನಿಯ ಕಾಣಸಿಕ್ಕಿದ. ತನ್ನ ಮನೆಯಲ್ಲಿ ನಂಜಿನ ಮದ್ದು ಇದೆ ಎಂದು ತನ್ನೊಂದಿಗೆ ಕರೆದೊಯ್ದ.

ಚನಿಯ ತನ್ನ ಮಗಳನ್ನು ಮದುವೆ ಆಗುವಂತೆ ಚಂದಪ್ಪನ ಮನ ಒಲಿಸುವಂತೆ ಬಸಪ್ಪನಿಗೆ ಸಾಧ್ಯವಾದೆಲ್ಲ ಆತಿಥ್ಯ ಮಾಡಿದ್ದ. ತನ್ನ ಯೋಜನೆ ಏನಾಯಿತೆಂದು ತಿಳಿಯುವ ತವಕದಿಂದ ಮದ್ದಿನ ನೆಪ ಹೇಳಿ ಮನೆಗೆ ಕರದೊಯ್ದ. ಮಂತ್ರವಾದ, ತಾಯಿತ, ವಶೀಕರಣಗಳಲ್ಲಿ ಪರಮವಿಶ್ವಾಸವಿದ್ದ ಚನಿಯ, ಅಪ್ಪಯ್ಯ ಪಂಡಿತರ ಭಸ್ಮದ ಮೂಲಕ ಚಂದಪ್ಪನ ಮನಸ್ಸನ್ನು ತಿರುಗಿಸಬಯಸಿದ.

ಅದಕ್ಕೆ ಮದ್ದಿನ ಆಸೆ ತೋರಿಸಿ ಬಸಪ್ಪನ ಜೊತೆ ನಡೆದ.

ಅಪ್ಪಯ್ಯ ಪಂಡಿತರಿಂದ ಮಂತ್ರಿಸಿ ತಂದಿದ್ದ ಚೂರ್ಣವನ್ನು ಚಂದಪ್ಪನ ಮೇಲೆ ಪ್ರಯೋಗ ಮಾಡುವುದು ಹೇಗೆಂಬುದು ಬಸಪ್ಪನಿಗೆ ಸಮಸ್ಯೆ

ಯಾಯಿತು. ಆತ ಕಡಲ ತಡಿಯ ಜಾಗದಲ್ಲಿ ಮನೆ ಕಟ್ಟುವ ಕೆಲಸಕ್ಕೆ ಇಳಿದಿದ್ದಾನೆಂದು ಅವನಿಗೆ ಗೊತ್ತಿತ್ತು. ಮಧ್ಯಾಹ್ನ ತಿರುಗುವ ಹೊತ್ತಿಗೆ ಬಸಪ್ಪ ಆ ಕಡೆ ಹೊರಟ. ಮನೆಯ ಪಂಚಾಂಗದ ಮಣ್ಣನ್ನು ಕಲಸುವ ಕೆಲಸವನ್ನು ಮಧ್ಯಾಹ್ನದ ವರೆಗೆ ಮಾಡಿದ್ದ ಚಂದಪ್ಪ ಅಲ್ಲೇ ಬಂದು ನೆರಳಲ್ಲಿ ಮಲಗಿದ್ದ. ಆಯಾಸಗೊಂಡು ಉಂಡು ಮಲಗಿದವ ನಿಗೆ ಒಳ್ಳೇ ನಿದ್ದೆ ಬಂದಿತ್ತು. ಬಸಪ್ಪ ಸಂದರ್ಭ ಅನುಕೂಲವಾಗಿ ಒದಗಿ ಬಂದುದಕ್ಕೆ ಸಂತೋಷ ಗೊಂಡ. ಬಟ್ಟೆಯ ಕೊನೆಯಲ್ಲಿ ಗಂಟಿಕ್ಕಿ. ಸೊಂಟ ದಲ್ಲಿ ಅಡಗಿಸಿಕೊಂಡಿದ್ದ ಚೂರ್ಣದ ಕಟ್ಟನ್ನು ಮೆಲ್ಲನೆ ಹೊರ ತೆಗೆದ. ಅವನ ಕೈ ಸೂಕ್ಷ್ಮವಾಗಿ ಕಂಪಿಸು ತ್ತಿತ್ತು. ಸುತ್ತಲೂ ನೋಡಿದ. ಯಾರೂ ಕಾಣಿಸ ಲಿಲ್ಲ. ಕಟ್ಟನ್ನು ಬಿಡಿಸಿ ಅದರಲ್ಲಿದ್ದ ಬೂದು ಬಣ್ಣದ ಚೂರ್ಣವನ್ನು ಚಂದಪ್ಪನ ತಲೆಗೆ ಸುರುವಿ, ಅಲ್ಲಿಂದ ತುಸು ವೇಗವಾಗಿ ಕಡಲ ಕರೆಗೆ ದಾಟಿದ ಬಸಪ್ಪ.

ಚಂದಪ್ಪನ ಮೇಲೆ ಚೂರ್ಣ ಪ್ರಯೋಗ ಮಾಡಿ ಕೆಲವು ದಿನಗಳಾದ ಮೇಲೆ ಅವನೊಡನೆ ಜನಿಯನ ಮಗಳನ್ನು ಮದುವೆಯಾಗುವ ಕುರಿತು ಆಡ ಬಹುದು ಎಂದು ಭಾವಿಸಿದ್ದ ಬಸಪ್ಪ. ಆದರೆ ಆತನ ಕಾಲಿಗೆ ಚುಚ್ಚಿದ ಗಾಜು ಮುಳ್ಳಿನ ಪರಿಣಾಮವಾಗಿ ಕಾಲು ಬೀಗಿ, ಗಾಯದಿಂದ, ಕರಿ ನೆತ್ತರು, ಕೀವು ಸೋರತೊಡಗಿ, ಮಿಡಿತ ಅಸಹನೀಯವಾಗಿತ್ತು. ಜ್ವರ ಏರಿ ಬಾಯಿಗೆ ಅನ್ನ ಸೇರುತ್ತಿರಲಿಲ್ಲ. ತನ್ನ ಸೋದರ ಮಾವ ಇದೇ ಬಗೆಯಲ್ಲಿ ತೀರಿಕೊಂಡುದು ನೆನೆದು ಬಸಪ್ಪ ಭಯಗೊಂಡ. ಅಪ್ಪಯ್ಯ ಪಂಡಿತನ ಮದ್ದಿ ಲೇಪದಿಂದ ಗುಣ ಕಾಣದೆ ಹಾಸಿಗೆ ಹಿಡಿದ ಬಸಪ್ಪ. ತನ್ನ ಅಕೃತ್ಯ ಅವನ ಮನಸ್ಸನ್ನು ಕುಕ್ಕುತ್ತಲೆ ಇದ್ದವು.

ಚಂದಪ್ಪ ತನ್ನನ್ನು ನೋಡಲು ಬಂದಾಗ ಆತನ ಕೈ ಹಿಡಿದು ಅಳುತ್ತಳುತ್ತ ತಾನು ಮಾಡಿದುದ ನ್ನೆಲ್ಲ ಹೇಳಿಬಿಟ್ಟ. ಸ್ವಲ್ಪ ಹೊತ್ತು ಮಾತಾಡುತ್ತ ಕುಳಿತಿದ್ದು ಸಂತೈಕೆಯ ಮಾತುಗಳನ್ನು ಹೇಳಿ ಚಂದಪ್ಪ ಹೊರಟ. ಬರುವಾಗ ಭಗವತಿಯ ಗುಡಿಗೆ ಹೋಗಿ ಕೈ ಮುಗಿದು ಸೋಮೇಶ್ವರಕ್ಕೆ ಹೋಗಿ ಕಡಲಿಗಿಳಿದು ತಲೆಯನ್ನು ಚೆನ್ನಾಗಿ ತಿಕ್ಕಿ ತೊಳೆದ. ಆಮೇಲೆ ದೇವರ ಕೆರೆಯಲ್ಲಿ ಸ್ನಾನ ಮಾಡಿ, ದೇವ ಸ್ಥಾನಕ್ಕೆ ಬಂದು ಒಂದಿಷ್ಟು ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ, 'ಪಸಿದ್ದನೂ ಇದರಿಂದ ನಿವಾರಣೆಯಾಗಲಿ' ಎಂದು ಕೇಳಿಕೊಂಡ.

ಚಂದಪ್ಪ ಗುಡಿಸಲಿನ ಕೆಲಸದಲ್ಲಿ ತೊಡಗಿದ್ದಾಗ ಪಕೀರ ಮೂಡುಮನೆ ಬಸಪ್ಪ ತೀರಿಕೊಂಡ ಸುದ್ದಿ ತಂದ. ಚಂದಪ್ಪ ಅಲ್ಲಿಯೇ ಕೆಲಸ ನಿಲ್ಲಿಸಿ ಅತ್ತ ನಡೆದ.

× × ×

ನೀಲಮ್ಮನ ತಂದೆ ಸತ್ತ ಮೇಲೆ ದೋಣಿಯ ಮೇಲ್ವಿಚಾರಣೆ ನೋಡುತ್ತಿದ್ದ ದೂರದ ಬಂಧು ಸೋಮಪ್ಪ ಮೀನು ಅಥವಾ ಮೀನು ಮಾರಿದ ಹಣವನ್ನು ಸರಿಯಾಗಿ ಕೊಡುತ್ತಲೆ ಬಂದಿದ್ದ. ನೀಲ ಮ್ಮನಿಗೆ, ಅವನಿಗೆ ತನ್ನ ಮೇಲಿನ ವಿಶೇಷ ಸಹಾನು ಭೂತಿ ನೀಲಮ್ಮನಿಗೆ ಹಿತವಾಗಿ ಕಂಡಿರಲಿಲ್ಲ.

ಎರಡು ದಿನ ಮನೆ ಬಾಗಿಲು ಹಾಕಿ ನೀಲಮ್ಮ ತಮ್ಮನೊಂದಿಗೆ ಅಡ್ಕಕ್ಕೆ ಹೋಗಿದ್ದಳು. ಸೋಮಪ್ಪ ಎರಡೂ ದಿನವೂ ಹಣ ಕೊಡಲು ಬಂದು ಮುಚ್ಚಿದ ಬಾಗಿಲು ನೋಡಿ ಹಿಂದೆ ಹೋಗಿದ್ದ. ಅಂದು ನೀಲಮ್ಮನಿಗೆ ಮೀನಿನ ಹಣ ಕೊಡಲು ಸೋಮಪ್ಪ ಕೋಡಿ ಮನೆಗೆ ಬಂದಾಗ ರಾತ್ರಿ ಹೊತ್ತು ಮೀರಿತ್ತು. ಕೃಷ್ಣಪ್ಪ ಆಗಲೆ ಉಂಡು ಮಲಗಿದ್ದ. ನೀಲಮ್ಮನಿಗೆ ಇನ್ನೂ ನಿದ್ರೆ ಹತ್ತಿರಲಿಲ್ಲ. ಸೋಮಪ್ಪ ಬಾಗಿಲು ತೆರೆಯುವಂತೆ ಕರೆದಾಗ ನೀಲಮ್ಮ ನಿರಾ ಕರಿಸಿದಳು. ಮಿಣುಕು ದೀಪದ ಮಂದ ಪ್ರಕಾಶದಲ್ಲಿ ತೋರಿಬರುವ ನೀಲಮ್ಮನ ದೇಹದ ಆಕೃತಿಯನ್ನು ಅಸ್ಪಷ್ಟವಾಗಿ ಕಿಟಕಿಯ ಮೂಲಕ ನೋಡುತ್ತಿದ್ದ ಸೋಮಪ್ಪನ ಮನಸ್ಸಿನ ಸಂಯಮ ನೀರಾಗಿತ್ತು. ಕುಡಿತದ ಅಮಲಿನಲ್ಲಿದ್ದ ಆತ ಒತ್ತಾಯಿಸಿದಾಗ ನೀಲಮ್ಮ ಒಮ್ಮೆ "ಹೋಗಿ ಬಿಡಿ" ಎಂದು ಅಂಗ ಲಾಚಿದಳು.

"ನಾನು ಮಾತ್ರ ಹೋಗಬೇಕೆ? ನಿನ್ನ ಕತೆ ಗೊತ್ತಿಲ್ಲವೆಂದು ಭಾವಿಸಬೇಡ. ಆ ಚಂದಪ್ಪ ನಿಲ್ಲವೆ ಚಕ್ಕಂದವಾಡಲಿಕ್ಕೆ? ನನಗೇನೂ ತಿಳಿಯ ದೆಂದು ಭಾವಿಸಿದೆಯಾ?"

ನೀಲಮ್ಮನ ಮೋರೆಗೆ ಬರಲಿನಿಂದ ಅಪ್ಪಳಿಸಿ ದಂತಾಯಿತು. ಅವಳು ಬಿಕ್ಕಿ ಬಿಕ್ಕಿ ಅತ್ತಳು. ಕೃಷ್ಣಪ್ಪ ನಿಗೆ ಎಚ್ಚರವಾದಾಗ, "ಇರಲಿ ಒಮ್ಮೆಗಾದರೂ.

ನಿನ್ನನ್ನು ನೋಡದೆ ಬಿಡಲಿಕ್ಕಿಲ್ಲ" ಎಂದು ಪಟ್ಟ ಗುಟ್ಟುತ್ತ ಮೆಲ್ಲನೆ ಅಲ್ಲಿಂದ ಜಾರಿದ

ಸೋಮಪ್ಪ ಹೊರಟು ಹೋದಾಗ ನೀಲಮ್ಮ ಹಾಯೆಂದು ಉಸುರ್ಗರೆದು ಮಲಗಿಕೊಂಡಳು. ನಿದ್ರೆ ಅವಳ ಬಳಿಗೆ ಸುಳಿಯಲು ತುಂಬ ತಡಮಾಡಿತು.

× × ×

ಬಸಪ್ಪ ತೀರಿಕೊಂಡಿದ್ದು ಚೆನ್ನಯನಿಗೆ ದೊಡ್ಡ ಆಘಾತವಾಯಿತು. ತಾನು ಮದ್ದನ್ನು ಪ್ರಯೋಗ ಮಾಡಿದ್ದೇನೆಂದು ಬಸಪ್ಪ ತನ್ನೊಡನೆ ಹೇಳಿದ್ದ. ಆದರೆ ಅದರ ಪರಿಣಾಮವೇನೂ ಗೊತ್ತಾಗಲಿಲ್ಲ. ಇನ್ನು ಯಾರ ಮೂಲಕ ಮಾತಾಡಿಸುವುದು?—ಯೋಚಿಸುತ್ತಿದ್ದ ಚೆನ್ನಯನಿಗೆ ನೆನಪಾದುದು ಪಕೀರನ ಹೆಸರು. ಚೆನ್ನಯ ಪಕೀರನನ್ನು ಭೇಟಿಯಾಗಲು ಸೋಮೇಶ್ವರಕ್ಕೆ ಬಂದಾಗ ಆತ ದೋಣಿ ಚಪ್ಪರದಲ್ಲಿ ತೊರಕೆ ಬಲೆ ಕಟ್ಟುತ್ತ ಕುಳಿತಿದ್ದ. ವಿಷಯ ಪ್ರಸ್ತಾಪಿಸಿದ ಚೆನ್ನಯ "ನೀವು ಹೇಳಿದರೆ ಚೊದಪ್ಪ ಅಲ್ಲವೆನ್ನಲಿಕ್ಕಿಲ್ಲ" ಎಂದು ಪಕೀರನ ಮೇಲೆ ಜವಾಬ್ದಾರಿ ಹೇರಿದ. "ನಾನು ಹೆಚ್ಚಾಗಿ ಈ ಮದುವೆ ವಿಚಾರಗಳಲ್ಲಿ ತಲೆ ಹಾಕುವವನಲ್ಲ. ಅವರವರ ಹಣೆಯಲ್ಲಿ ಬರೆದದ್ದು ಆಗುತ್ತದೆ. ಚೊದಪ್ಪನಿಗೆ ಒಂದು ಮಾತು ಹೇಳಿ ನೋಡುತ್ತೇನೆ. ಆದರೆ ಒತ್ತಾಯ ಮಾಡಲಾರೆ."

ಪಕೀರ ಕೊಟ್ಟ ವೀಳ್ಯವನ್ನು ಮೆದ್ದು ಚೆನ್ನಯ ಕಡಲ ಬದಿಯಿಂದಲೇ ಉಚ್ಚಿಲಕ್ಕೆ ಹೊರಟ. ಚೊದಪ್ಪ ತನ್ನ ತೋಟದ ಕೆಲಸದಲ್ಲಿ ನಿರತನಾಗಿದ್ದ. ಅವನನ್ನು ಮಾತಾಡಿಸುವ ಮನಸ್ಸಾದರೂ ಈಗ ಬೇಡ ಎಂದು ತಡೆ ಹಿಡಿದು ಚೆನ್ನಯ ಮುಂದುವರೆದ.

× × ×

ಚೊದಪ್ಪನ ಹೊಸ ಮನೆ ಸಿದ್ಧವಾಗಿತ್ತು. ಚೊದಪ್ಪ ಒಕ್ಕಲು ಹೋಗುವ ದಿವಸ ನೀಲಮ್ಮ ಅಡ್ಯಾರಲ್ಲಿದ್ದಳು. ಅವಳ ದೊಡ್ಡಮ್ಮನಿಗೆ ಸೌಖ್ಯ ಮರುಕಳಿಸಿತ್ತು. ಹೊಸ ಮನೆಯ ಪ್ರವೇಶಕ್ಕೆ ನೀಲಮ್ಮನನ್ನು ಕರೆಯಲು ಹೋಗಿದ್ದ ಚೊದಪ್ಪ ಹೇಳಿಕೆ ಮಾಡಿದಾಗ "ನಾನು ಈಗ ಬರುವುದಿಲ್ಲ. ನೀವೇನೂ ತಿಳಿದುಕೊಳ್ಳಬೇಡಿ. ಕೃಷ್ಣಪ್ಪ ಬರುತ್ತಾನೆ" ಮೆಲ್ಲನೆ ಎಂದಳು ನೀಲಮ್ಮ. ಸೋಮಪ್ಪನ ಮಾತಿನಿಂದ ತಮ್ಮ ಕುರಿತು ಜನರ ಕಣ್ಣು ಬಿದ್ದಿದೆ. ಆದಷ್ಟು ಜಾಗ್ರತೆ ವಹಿಸಬೇಕು. ಚೊದಪ್ಪ ಇನ್ನು ಕಡಲ ಬದಿಯಲ್ಲಿ ಹೋಗಿ ನೆಲೆಸುತ್ತಾನೆ. ಇನ್ನು ಅವನನ್ನು ಕಾಣಲು ಅಲ್ಲಿಗೇ ಹೋಗಬೇಕು. ಆಗಿಂದಾಗ ಹೋಗುವುದು ಸಾಧ್ಯವೇ? ಹೇಗೂ ಸ್ವಲ್ಪ ಸಮಯ ತಾಳ್ಮೆಯಿಂದ ಕಳೆಯಬೇಕು. ಮತ್ತೆ ಹೇಗೂ ತಾನು ಅವನವಳಾಗುತ್ತೇನಲ್ಲ...ತೊಳಲಾಡುತ್ತಿದ್ದ ಮನಸ್ಸಿಗೆ ಸಮಾಧಾನ ತಂದುಕೊಂಡಳು. ನೀಲಮ್ಮ.

ಚೊದಪ್ಪನ ಮನೆಯ ಒಕ್ಕಲು ಆಡಂಬರವಿಲ್ಲದೆ ನಡೆದು ಹೋಯಿತು. ತಡೆಯಿಲ್ಲದೆ ಬೀಸುವ ಸೊಗಸಾದ ಗಾಳಿಯುಣ್ಣುತ್ತ ಕಡಲಿಗೆ ಸಮೀಪವಾಗಿ ಬಾಳುವ ಆತುರ, ಪ್ರಾಚೀನ ತರವಾಡು ಮನೆಯನ್ನು ಬಿಟ್ಟು ಬರುವ ವ್ಯಥೆಯನ್ನು ಮರೆಯಿಸಿತ್ತು. ಆದರೆ ದೇಯಿ ಮಾತ್ರ ಕಣ್ಣೀರಿಳಿಸುತ್ತಾ ಒಂದೊಂದೇ ಸಾಮಾಗ್ರಿಗಳ ಹೊರೆಯನ್ನು ಹೊಸ ಮನೆಗೆ ಹೊತ್ತಳು. ಉದ್ಯಾವರದಿಂದ ಅಕ್ಕ ಪೊನ್ನಮ್ಮನೂ ಬಂದಿದ್ದಳು. ತನ್ನದೇ ಆದ ಜೋಪಡಿಯಲ್ಲಿ ಹಾಲು ಕಾಯಿಸಿ ಕುಡಿದ ದಿನ ಚೊದಪ್ಪನ ಮನಸ್ಸು ಗರಿಗೆದರಿ ನೀರಲ್ಲಿ ಆಡುವ ಮೀನಿನಂತೆ ನಲಿಯುತ್ತಿತ್ತು. ಚಿಕ್ಕದಾದ ಆ ಮನೆ ಅವನ ಪಾಲಿಗೆ ಅರಮನೆಯಾಗಿತ್ತು. ಸ್ವಂತ ದೋಣಿಯಾಯಿತು. ಸ್ವಂತ ಮನೆಯಾಯಿತು. ತನ್ನ ಒಂದೊಂದೆ ಕನಸುಗಳು ಕೈಗೂಡುತ್ತ ಬರುತ್ತಿವೆ. ದೈವದ ಅನುಗ್ರಹ

ಈ ನಡುವೆ ಪಕೀರ ಚೆನ್ನಯ ಹೇಳಿ ಹೋದ ವಿಚಾರವನ್ನು ಚೊದಪ್ಪನ ಕಿವಿಗೆ ತಂದ. "ಇದು ಆಗುವುದಿಲ್ಲ ಎಂದು ಚೆನ್ನಯಣ್ಣನಿಗೆ ತಿಳಿಸಿಬಿಡಿ. ತೀರಿ ಹೋದ ಬಸಪ್ಪಣ್ಣನಲ್ಲಿಯೂ ಹೀಗೆಯೇ ಹೇಳಿದ್ದೆ." ದೃಢವಾಗಿ ಅಂದ ಚೊದಪ್ಪ.

ಚೊದಪ್ಪನ ನಿರಾಕರಣೆಯನ್ನು ಪಕೀರನಿಂದ ತಿಳಿದ ಮೇಲೆ ಅವನ ಕುರಿತು ಇನ್ನು ಆಸೆ ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ ಎಂದು ಬಗೆದ ಚೆನ್ನಯ. ಬಹುಶಃ ಬಸಪ್ಪ ಚೂರ್ಣ ಪ್ರಯೋಗಿಸಿಯೇ ಇಲ್ಲ. ಇಲ್ಲದಿದ್ದರೆ ಚೊದಪ್ಪನಿಂದ ಇಂಥ ಉತ್ತರ ಬರುತ್ತಿರಲಿಲ್ಲ ಎಂದುಕೊಂಡ.

'ಎಟಕದ ಹಣ್ಣು ಹುಳಿ' ಎಂಬಂತೆ ಚಂದಪ್ಪನ ಮೇಲೆ ಒಂದು ಬಗೆಯ ತಿರಸ್ಕಾರ ಹುಟ್ಟಲಾರಂಭಿಸಿತ್ತು ಚನ್ನಯ್ಯನಿಗೆ, "ಹುಡುಗನಿಗೆ ಏನು ಸೊಕ್ಕು? ಕರೆದು ಹೆಣ್ಣು ಕೊಟ್ಟರೆ ಮೂಲರೋಗ ಬರುತ್ತದೆ! ನಮ್ಮ, ಬಲೆ, ಬದುಕು ಕೊಟ್ಟರೆ ಎಷ್ಟು ಮಂದಿ ಬೇಕು? ಇವನೊಬ್ಬ ದೊಡ್ಡ ಕುಂಬಳಕಾಯಿ." ಎಂದು ಹಲ್ಲು ಕಡಿದ. ಈಚೆಗೆ ಚಂದಪ್ಪ ನೀಲಮ್ಮರೊಳಗೆ ರಹಸ್ಯವಾದ ಪ್ರಣಯ ವ್ಯವಹಾರವಿದೆ ಎನ್ನುವ ವದಂತಿ ತಿಳಿದ ಮೇಲೆ "ಥೂ, ಮುಂಡೆಯೊಡನೆ ಸರಸವಾಡುವವನಿಗೆ ಎಂದೂ ನನ್ನ ಮಗಳನ್ನು ಕೊಡಲಾರೆ: ಅವನ ಸ್ವರೂಪಕ್ಕೆ ಬೆಂಕಿ ಹಾಕಿತು. ಮರ್ಯಾದೆಯಿಂದ ಹೆಣ್ಣೊಬ್ಬಳನ್ನು ಮದುವೆಯಾಗಿ ಮನೆ ನಡೆಸುವ ಯೋಗ್ಯತೆ ಬೇಕಲ್ಲ" ಎಂದು ಹೀಗಳೆದ.

× ×

ಚಂದಪ್ಪನ ಹೊಸ ಮನೆಯ ತೆಂಕು ಬದಿಯಲ್ಲಿದ್ದ ಗಾಳಿಮರದ 'ಹಾಡಿ'ಗೆ ತರಗಿಗೆಂದು ಬುಟ್ಟಿ ಹಿಡಿದುಕೊಂಡು ಬಂದಿದ್ದಳು ನೀಲಮ್ಮ. ಬೇಲಿಯ ಬಳಿ ನಿಂತು ಮನೆಯನ್ನು ದಿಟ್ಟಿಸಿ ನೋಡುತ್ತ ನಿಟ್ಟುಸಿರುಗರೆದಳು. ಮನೆಯಲ್ಲಿ ಯಾರೂ ಇದ್ದಂತಿರಲಿಲ್ಲ, ನಾಯಿ ಬಾಗಿಲಲ್ಲಿ ಮುದುಡಿ ಮಲಗಿತ್ತು. ಮತ್ತೆ ಕೆಲಸಕ್ಕೆ ಕೈಯಿಕ್ಕಿದಳು. "ನೀಲಮ್ಮ" ಕರೆದುದು ಕೇಳಿಸಿತು. ಬಗ್ಗಿದಲ್ಲಿಂದಲೆ ತಿರುಗಿ ನೋಡಿದಳು. ಚಂದಪ್ಪ ನಗುತ್ತ ನಿಂತಿದ್ದ. ಅವನ ಕೈಯಲ್ಲಿ ನೂಲು ತಿರುಪುವ ನೂಲೋಡು ಇತ್ತು.

"ಬಾ, ನೀಲಮ್ಮ ಮನೆಯ ಕಡೆ ಹೋಗೋಣ."

"ಬೇಡ ಇನ್ನೊಮ್ಮೆ ಬರುತ್ತೇನೆ."

"ಇನ್ನೊಮ್ಮೆ ಯಾವಾಗ?"

"ಯಾವಾಗ ಎಂದರೆ..." ಚಂದಪ್ಪನ ಮುಖವನ್ನೊಮ್ಮೆ ನೋಡಿ ತಲೆ ತಗ್ಗಿಸಿದಳು ನೀಲಮ್ಮ.

"ಬಾ, ಈಗ ಹೋಗೋಣ. ನೀನು ಮನೆಯನ್ನು ನೋಡಿಲ್ಲವಲ್ಲ ಅಮ್ಮ ಇಲ್ಲ, ಮೂಡಲಿಗೆ ಹೋಗಿದ್ದಾಳೆ."

ತರಗು ತುಂಬಿದ ಬುಟ್ಟಿ ಹೊತ್ತು, ಚಂದಪ್ಪನ ಹಿಂದಿನಿಂದ ಹೆಜ್ಜೆ ಹಾಕಿದಳು ನೀಲಮ್ಮ. ಎಲ್ಲಿಂದಲೋ ಟಿಟ್ಟಿಭವೊಂದು ಅಲಾಪನೆ ಮಾಡುತ್ತ ಬಂದು ಗಾಳಿಮರವೊಂದರ ಮೇಲೆ ಕುಳಿತಿತು. ಅಷ್ಟರಲ್ಲಿ ದೂರದಿಂದ ಇನ್ನೊಂದು ಟಿಟ್ಟಿಭದ ಮಧುರ ಕಂಠ ಕೇಳಿಸಿತು. ಪದಿಯಲ್ಲಿ ಕಾತರ ತುಂಬಿತ್ತು. ಅಡಿಗಡಿಗೂ ಅದು ಕರೆಯುತ್ತಿರಲು ಗಾಳಿಮರದ ಕೊಂಬೆಯಲ್ಲಿ ಕುಳಿತ ಹಕ್ಕಿ ಓಗೊಡತೊಡಗಿತು. ಕೂಗು ಮರು ಕೂಗುಗಳು ಹೆಚ್ಚಿದವು. ದೂರದಲ್ಲಿದ್ದ ಹಕ್ಕಿ ಹಾಡುತ್ತ ಗಾಳಿಮರದ ಬಳಿ ಬಂತು. ಬಂದು ಅವರ ಸನಿಹದಲ್ಲೆ ಕುಳಿತಿತು ತುಸು ಹೊತ್ತಿನ ಮೇಲೆ ಅವೆರಡೂ ಜತೆಯಾಗಿ ಹಾಡುತ್ತ ಎತ್ತಲೋ ಸಾಗಿದವು...

ಮನೆಯೊಳಗೆಲ್ಲ ನೋಡಿದ ನೀಲಮ್ಮ, ಚೆನ್ನಾಗಿದೆ ಮನೆ ಎಂದಳು. "ನೀಲಮ್ಮ ನಾನು ಗಂಜಿ ಮಾಡಿದ್ದೇನೆ ಒಟ್ಟಿಗೆ ಎರಡೆರಡು ತುತ್ತು ಉಂಡರೇನು?" ಚಂದಪ್ಪ ಕೇಳಿದ.

"ಇಲ್ಲ, ನಾನು ಈಗ ತಾನೆ ಉಂಡು ಬಂದೆ, ಬೇಕಾದರೆ ಒಂದಿಷ್ಟು 'ತಿಳಿ' ಕುಡಿಯುತ್ತೇನೆ."

"ಸರಿ, ಬಡಿಸು ಹಾಗಾದರೆ."

ನೀಲಮ್ಮ ಬಟ್ಟಲಿಟ್ಟು ಗಂಜಿ ಬಡಿಸಿದಳು. ಹಿಂದಿನ ದಿನ ಮಿಕ್ಕಿದ್ದ ಮೀನಿನ ಗಸಿಯನ್ನು ಇಕ್ಕಿದಳು.

"ಇಷ್ಟಕ್ಕೆ ಎಷ್ಟು ಕಾಲ ಕಾಯಬೇಕಾಯಿತು?" ಎಂದ ಚಂದಪ್ಪ ನೀಲಮ್ಮ ಗಂಜಿ ತಿಳಿ ಬಗ್ಗಿಸಬೇಕೆಂದಿರುವಾಗ ದಾಸು ಬೊಗಳಿದ ಸದ್ದು ಕೇಳಿಸಿತು.

"ಯಾರು ಒಳಗೆ- ಊಟವಾಗುತ್ತದಾ ಚಂದಪ್ಪ" ಎಂದು ಒಳಗೆ ಬಂದಳು ತೇಜಮ್ಮ. "ಬಂಡೆಗೆ ಮೀನು ಬಲೆಗೆಂದು ತಂದಿದ್ದ. ಬಂದದ್ದಾಯಿತು. ಸ್ವಲ್ಪ ನೀರು ಕುಡಿಯೋಣವೆಂದು ಬಂದೆ" ಎನ್ನುವಾಗ ನೀಲಮ್ಮ ಅವಳ ಕಣ್ಣಿಗೆ ಬಿದ್ದಳು. "ಅದಾರು? ನೀಲಮ್ಮನೇನು?" ಅವಳ ಕಣ್ಣು ವಿಸ್ಮಯದಿಂದ ಬೆಳಗಿತು. "ಹೌದಕ್ಕ, ಗಾಳಿ ಮರದ ಹಾಡಿಗೆ ಬಂದಿದ್ದೆ. ಬಾಯಾರಿಕೆಯಾಗಿ ಈ ಕಡೆ ಬಂದೆ."

"ನೀಲಮ್ಮ ನಮ್ಮ ಮನೆ ನೋಡಿರಲಿಲ್ಲ. ಹಾಗಾಗಿ ಮನೆ ತೋರಿಸೋಣ ಎಂದು ನಾನು

ಕರೆದೆ" ಎಂದು ಹೇಳಬೇಕೆಂದಿದ್ದ ಚೆಂದಪ್ಪ. ಆದರೆ ಅಷ್ಟರಲ್ಲೇ ನೀಲಮ್ಮ ಉತ್ತರಿಸಿಯಾಗಿತ್ತು.

ತೇಜಮ್ಮನಿಗೆ ಮಾತ್ರ ಸಂಶಯ ಬಾರದೆ ಇರಲಿಲ್ಲ. ಚೆಂದಪ್ಪ ಒಬ್ಬನೇ ಇದ್ದ ಹೊತ್ತಿನಲ್ಲಿ ನೀಲಮ್ಮ ಒಬ್ಬಳೇ ಇಲ್ಲಿಗೆ ಬರಲು ಕಾರಣವೇನಿರಬಹುದು? ಅವಳು ಈ ಮೊದಲೆ ಕೇಳಿದ್ದ ಗುಸು ಗುಸು ವರ್ತಮಾನಕ್ಕೆ ಸ್ಪಷ್ಟ ಆಕಾರವನ್ನು ಕೊಡ ಹತ್ತಿತು. ಅವಳ ಮಾನಸ್ಸು.

ನೀರು ಕುಡಿದು ತೇಜಮ್ಮ ಹೊರಟಾಗ ನೀಲಮ್ಮನಿಗೆ ಮಾತ್ರ ನಿಲ್ಲಲಾಗಲಿಲ್ಲ. ಅವಳು ಹೊರಟಾಗ ತಡೆಯಬೇಕೆನ್ನುವ ಮನಸ್ಸಿದ್ದರೂ ಚೆಂದಪ್ಪ ಹಾಗೆ ಮಾಡಲಿಲ್ಲ.

ಇಲ್ಲವಾದನ್ನು ಕಲ್ಪಿಸಿ ಇನ್ನು ತೇಜಮ್ಮ ಏನು ಮಾತಾಡಿ ಹಬ್ಬಿಸುತ್ತಾಳೋ ಎನ್ನುವ ಯೋಚನೆ ಚೆಂದಪ್ಪನಿಗೆ. ಬಟ್ಟಲಲ್ಲಿ ಉಳಿದ ಗಂಜಿಯನ್ನು ನಾಯಿಗಿಕ್ಕಿ ಮುಖ ತೊಳೆದುಕೊಂಡ.

× × ×

ಬೆಳಕು ಹರಿದಿರಲಿಲ್ಲ. ಕುಳಿರ್ಗಾಳಿ ಬೀಸುತ್ತಿತ್ತು. ಕಡಲತೀರದಲ್ಲಿ ಕೆಲವು ಬಲೆಯ ದೋಣಿಗಳು ಪಯಣಕ್ಕೆ ಹೊರಟು ನಿಂತಿದ್ದುವು. ಕಡಲು ಅಷ್ಟೊಂದು ಅನುಕೂಲವಾಗಿರಲಿಲ್ಲ. ತೆರೆಗಳು ಆಗಿಂದಾಗ ಬಿರುಸಾಗುತ್ತಿದ್ದುವು.

ಚೆಂದಪ್ಪನ ದೋಣಿ ಕಡಲಿಗಿಳಿದು ಕೆಲವೆ ಮಾರು ಮುಂದೆ ಹೋದಾಗ ಬಲವಾದ ಏರು ತೆರೆಗಳು ಮೊರೆದು ಬರುವುದು ಆ ಅಸ್ಪಷ್ಟ ಬೆಳಕಿನಲ್ಲಿ ಕಾಣಿಸಿತು. ಆ ಕ್ಷಣದಲ್ಲಿ ತೆರೆಗಳ ದಾಳಿ ಹೆಚ್ಚಿತು. ಎಷ್ಟು ಜಾಗ್ರತೆ ವಹಿಸಿದರೂ ದೋಣಿಯು ಹಿಡಿತ ತಪ್ಪಿ ಹೋಗಿ ಅದು ತೆರೆಯ ಬಡಿತಕ್ಕೆ ಅಡ್ಡವಾಗಿ ಹಾರಿಹೋಗಿಬಿಟ್ಟಿತು. ಮರುಕ್ಷಣದಲ್ಲೇ ದೋಣಿಯಲ್ಲಿದ್ದವರೆಲ್ಲ ನೀರಿಗುರುಳಿದರು. ಬಲೆ, ಹುಟ್ಟು, ಚುಕ್ಕಾಣಿ, ಹಾಯಿ, ಕಟ್ಟಿಗೆಳೆಲ್ಲ ಚೆಲ್ಲಾಪಿಲ್ಲಿಯಾದುವು. ತೆರೆಯ ಬಾಯಿಗೆ ಸಿಕ್ಕಿ ಬರಿಯ ದೋಣಿ ವೇಗವಾಗಿ ದಡದತ್ತ ಧಾವಿಸಿತು. ನಡುವೆ ಇನ್ನೊಂದು ತೆರೆ ಅದನ್ನು ಪಕ್ಕದ ಕಡಪಿನ ಕಲ್ಲಿಗೆ ಅಪ್ಪಳಿಸಿತು. ಆ ಜಡಿತಕ್ಕೆ ಅದರ ಮುಂತುದಿ ನುಚ್ಚು ನೂರಾದುದಲ್ಲದೆ ಕೆಳಭಾಗ ಉದ್ದಕ್ಕೆ ಬಿರಿದು ಬಾಯಿ ಬಿಟ್ಟಿತು. ಕೊಂಬು ಮರವೂ ಮುರಿಯಿತು.

ದೋಣಿಯಿಂದ ನೀರಿಗುರುಳಿದವರು ಈಸಿ ದಡ ಸೇರಿದರು. ತೆರೆಗಳ ಅಬ್ಬರ ತುಸು ಸ್ತಿಮಿತಕ್ಕೆ ಬಂದ ಮೇಲೆ ಈಸಿ ಹೋಗಿ ಚೆಂದಪ್ಪ ದೋಣಿಯ 'ತಳೆ' ಹಿಡಿದ. ಮಿಕ್ಕವರೂ ಸೇರಿ ಮುರಿದು, ನೀರು ತುಂಬಿದ ದೋಣಿಯನ್ನು ಹೇಗೂ ಮೇಲಕ್ಕೆ ತಂದರು. ಚೆಂದಪ್ಪ ಮಾತಾಡುತ್ತಿರಲಿಲ್ಲ. ಅವನ ಕಣ್ಣಿನಿಂದ ಒಂದೇ ಸಮನೆ ಕಂಬನಿ ತೊಟ್ಟಿಕ್ಕುತ್ತಿತ್ತು. ಆಪ್ತಬಂಧುವಿನ ಶವವನ್ನು ಹೊರುವಷ್ಟೆ ಶೋಕದಿಂದ ಉಳಿದವರೊಂದಿಗೆ ದೋಣಿಯನ್ನು ಹೊತ್ತು ಮರಳದಿಣ್ಣೆಯ ಮೇಲೆ ನಿಲ್ಲಿಸಿದ. ಮುರಿದ ದೋಣಿ ಕಂಡ ಪಕೀರನಿಗೆ ತುಂಬ ಸಂಕಟವಾಯಿತು. ಮನುಷ್ಯ ಜೀವಕ್ಕೆ ಅಪಾಯವಾಗದೆ ಇದ್ದುದೇ ದೊಡ್ಡದು ಎಂದ ಪಕೀರ. ಎಲ್ಲರೂ ಮರಳ ದಿಣ್ಣೆಯ ಮೇಲೆ ಸುಮ್ಮನೆ ಕುಳಿತು ಕೊಂಡಿದ್ದರು. ಮೂಡಲಲ್ಲಿ ಬೆಳ್ಳಿ ಮೂಡಿ ನಗುತ್ತಿತ್ತು.

ಬಬ್ಬರ್ಯನ ಗುಡಿಯ ಬಳಿಯಿದ್ದ ಹೊನ್ನೆ ಮರದಡಿಯಲ್ಲಿ ಕುಳಿತು ಚೆಂದಪ್ಪ ಕಂತ ಬಲೆಯೊಂದನ್ನು ಕಟ್ಟುತ್ತಿದ್ದ. ಯಾವಾಗಲೂ ಹೀಗೆ ಕುಳಿತು ಬಲೆ ಕಟ್ಟುತ್ತಿರುವಾಗ ಚೆಂದಪ್ಪನ ಬಾಯಿಯಿಂದ ಯಕ್ಷಗಾನದ ಸೊಲ್ಲುಗಳು ನುಸುಳುತ್ತಿದ್ದುವು. ಆದರೆ ಈ ದಿನ ಬಾಯಿ ಬಿಗಿದಿತ್ತು. ಕೈಗಳು ಯಾಂತ್ರಿಕವಾಗಿ ಬಿಡುವಿಲ್ಲದೆ ಬಲಹೀನವಾಗಿ ಚಲಿಸುತ್ತಿದ್ದುವು. ಬೆರಳುಗಳಿಂದ ಬಲೆ ಹೆಣೆಯುತ್ತಿದ್ದರೂ ಅಭ್ಯಾಸವಾಗಿತ್ತು. ಚೆಂದಪ್ಪ ನಗೆ ಆಡರು. ಏಕೋ ಅತನಿಗೆ ಕುಳಿತಲ್ಲಿಂದ ಏಳಲಿಕ್ಕೇ ಮನಸ್ಸಾಗದು.

ಚೆಂದಪ್ಪ ಬೀಡಿಯೊಂದನ್ನು ಹಚ್ಚಿ, ಮಗ್ಗಲಲ್ಲಿ ಮುರಿದು ಬಿದ್ದ ತನ್ನ ಭಾಗ್ಯದ ಸೊತ್ತು—ಅನ್ನದ ಗಡಿಗೆಯನ್ನು ನೋಡಿದಾಗ ದುಃಖ ಉಕ್ಕಿ ಬಂತು. ಮೀನಿನೆಣ್ಣೆಯ ಲೇಪದಿಂದ ನಿನ್ನೆ ಕಪ್ಪಾಗಿ ಮಿರುಗುತ್ತಿದ್ದ ದೋಣಿ, ಈಗ ಆಕಾರಗೆಟ್ಟು ಭಗ್ನವಾಗಿ ಬಿದ್ದಿತ್ತು. ಎಷ್ಟೊಂದು ಲಕ್ಷಣವಾದ ದೋಣಿಯಾಗಿತ್ತು! ಇದು ಎಷ್ಟೋ ದೋಣಿಗಳು ಬರಿದಾಗಿ ಕರೆ ಹಿಡಿದರೆ ಇದರಲ್ಲಿ ತುಸು ಹುಡಿ

ಮೀನಾದರೂ ಇದ್ದೇ ಇರುತ್ತಿತ್ತು. ಅನ್ನವನ್ನಿತ್ತ ಕಡಲ ತಾಯಿಯೇ ಮುಳಿದು ನಿಷ್ಕರುಣೆಯಾಗಿ ತನ್ನ ಭಾಗ್ಯವನ್ನು ಹಿಡಿದಪ್ಪಳಿಸಿದ್ದಾಳೆ.

ಮಗನನ್ನು ಉಣ್ಣಲು ಕರೆಯಲೆಂದು ದೇಯಿ ಹುಡುಕಿಕೊಂಡು ಬಂದಳು. ದೋಣಿಗಾದ ದುರವಸ್ಥೆ ಅವರಿಂದ ಮಗನಿಗಾದ ನೋವು ಅರಿತ ಆ ತಾಯಿ ಮಗನನ್ನರಸಿ ಬಂದಿದ್ದಳು. ತಾಯಿ ಕರೆದಾಗ ಬಿರಿದ ದೋಣಿಗೆ ಸೋಗೆ ಮುಚ್ಚಿ ಕಟ್ಟಿದ ಬಲೆಯನ್ನು ಸುರುಳಿ ಮಾಡಿ ಹಿಡಿದು ಮನೆಯತ್ತ ನಡೆದ.

ಚೆಂದಪ್ಪನ ದೋಣಿಗೆ ಬಂದ ಆಪತ್ತು ಕೆಲವು ಕೆಲವು ದಿನ ಹಸಿ ಸುದ್ದಿ ಮಾಡಿ ಮತ್ತೆ ಮರವೆಯ ತೆರೆ ಮುಸುಕಿತ್ತು. ನೀಲಮ್ಮನಿಗೆ ದೋಣಿಗಾದ ಅಪಾಯವನ್ನು ಕಂಡು ಬಹಳ ದುಃಖವಾಯಿತು. ಇನ್ನು ಅವರ ದುಡಿಮೆಯ ಗತಿ ಏನು? ಎಂದೇ ಮನಸ್ಸು ಚಿಂತಿಸುತ್ತಿತ್ತು. ಸೋಮಪ್ಪ ಮುಂಡೆಯ ಸಹವಾಸವನ್ನು ದೈವ ಮೆಚ್ಚೀತೇ ಮತ್ತೆ' ಎಂದು ಬೇರೊಂದೇ ಕಾರಣವನ್ನು ಕಂಡು ಹಿಡಿದ.

ಪಕೀರ ಚೆಂದಪ್ಪನ ಮನಸ್ಸಿಗೆ ಧೈರ್ಯ ತುಂಬಿ ದೋಣಿಯ ರಿಪೇರಿಗೆ ವ್ಯವಸ್ಥೆ ಮಾಡಿದ. ಅದಕ್ಕಾಗಿ ತಾಯಿಯ ಒಂದು ಚಿನ್ನದ ಸರವನ್ನು ಅಡ ಇಡಬೇಕಾಗಿ ಬಂದಾಗ ಚೆಂದಪ್ಪನಿಗೆ ಬಹಳ ವ್ಯಥೆಯಾಯಿತು. ಆದರೂ ಅದು ಅನಿವಾರ್ಯವಾಗಿತ್ತು. ಗೋವಿಂದಾಚಾರಿಯಿಂದ ದೋಣಿ ದುರಸ್ತಿ ಕಾರ್ಯ ಪ್ರಾರಂಭವಾಯಿತು.

ಚೆಂದಪ್ಪನಿಗೆ ಈಗ ಹಣದ ಅಗತ್ಯವಿದೆ ಎಂದು ತಿಳಿದ ನೀಲಮ್ಮ ತಾನೀಗ ಸಹಾಯಕ್ಕೆ ನಿಲ್ಲಬೇಕೆಂದು ಎಣಿಸಿದಳು.

ಅಂದು ಬೊಬ್ಬರ್ಯನ ಗುಡಿಯ ಬಳಿಯ ಹೊನ್ನೆ ಮರದಡಿಯಲ್ಲಿ ಚೆಂದಪ್ಪ ಕಂತ ಬಲೆ ಕಟ್ಟುತ್ತ ಕುಳಿತಿದ್ದ. ರುದ್ರನ ಬಂಡೆಯ ಮೇಲೆ ಮೀನು ಒಣ ಹಾಕಿ ಕೆಳಗಿಳಿದು ಚೆಂದಪ್ಪನಿದ್ದಲ್ಲಿಗೆ ಬಂದಳು. ದೋಣಿ ದುರಸ್ತಿಯಾಗುತ್ತಿರುವುದನ್ನು ಕಂಡಾಗ ಆಕೆಯ ಮನಸ್ಸಿಗೆ ಸಮಾಧಾನವಾಯಿತು. ನೀಲಮ್ಮ ತನ್ನ ಸಹಾಯದ ವಿಚಾರವನ್ನು ಪ್ರಸ್ತಾಪ ಮಾಡಿದಳು. "ಬೇಡ ನೀಲಮ್ಮ. ಹಣ ನಿನ್ನಲ್ಲಿದ್ದರೆ ನನ್ನಲ್ಲಿದ್ದ ಹಾಗೇ. ಬೇಕಾದಾಗ ನಾನೇ ಕೇಳಿ ತೆಗೆದುಕೊಳ್ಳುತ್ತೇನೆ. ದುಡ್ಡು, ದಾಗೀನೆ ಮುಖ್ಯವಲ್ಲ, ವಿಶ್ವಾಸ ಮುಖ್ಯ" ಎಂದ.

"ಕಡಲಾವೆಯ ಮೊಟ್ಟೆಗಳು ಸಿಕ್ಕಿವೆ. ನೀನೂ ಸ್ವಲ್ಪ ಕೊಂಡು ಹೋಗು ಬಾ ಮನೆಯತ್ತ" ಎಂದಾಗ ನೀಲಮ್ಮ ಒಪ್ಪಿಗೆ ಸೂಚಿಸಿದಳು. ಚೆಂದಪ್ಪ- ನೀಲಮ್ಮ ಮಾತಾಡುವುದನ್ನು ಕಂಡು ಆಗಲೆ ಒಂದೆರಡು ಜನ ಮನಸ್ಸಿನಲ್ಲೆ ನಕ್ಕರು.

× × ×

ಇರುಳು ಬಲೆಗೆ ಮೀನು ಬೀಳುವ ಹೊತ್ತಿಗೆ ಗೋವಿಂದಾಚಾರಿ ದೋಣಿಯ ದುರಸ್ತಿ ಕೆಲಸವನ್ನು ಪೂರೈಸಿ ಕೊಟ್ಟ. ದೋಣಿ ಮೊದಲಿನಂತಾದಾಗ ಚೆಂದಪ್ಪನಿಗೆ ಸಂತಸವಾಯಿತು. "ಇರುಳು" ಬಲೆಗೆ ಸಂಜೆಯೆ ಬಲೆಗಳನ್ನು ಜೋಡಿಸಿ ದೋಣಿಯಲ್ಲಿ ಇಟ್ಟಿದ್ದಾನೆ ಪಕೀರ. ಸುಬ್ಬ ಕಾರ್ಣವ ಜೊತೆಗೆ ಬರುವವರಿದ್ದಾರೆ. ಸುಬ್ಬ ಕಾರ್ಣವನಿಲ್ಲದಾಗ ಚೆಂದಪ್ಪ ಪಕೀರನನ್ನು ಕರೆದು "ಅಜ್ಜ, ಬಹಳ ದಿನದಿಂದ ನಿಮ್ಮಲ್ಲಿ ಒಂದು ವಿಷಯ ಹೇಳಬೇಕೆಂದಿದ್ದೆ. ನಾನು ಕೋಡಿಮನೆ ನೀಲಮ್ಮನನ್ನು ಮದುವೆಯಾದರೆ ಹೇಗೆ?" ಎಂದು ಕೇಳಿದ.

"ಹೌದಾ? ಹೀಗೆ ಏನೋ ಉಂಟು ಅಂತ ಎಣಿಸಿದ್ದೆ. ಇರಲಿ, ಇದಕ್ಕೆ ನಿನ್ನ ತಾಯಿ ಒಪ್ಪಬೇಕು. ನಮ್ಮ ಜನ ಒಪ್ಪಬೇಕಲ್ಲ."

"ನನಗೂ ಅದೇ ಯೋಚನೆ."

"ನಮಗೆ ಧೈರ್ಯವಿದ್ದರೆ ನಾವು ಒಂದು ದಾರಿ ಹುಡುಕಬೇಕು. ಹಾಗೆಂದು ಸುಮ್ಮನೆ ಎಲ್ಲರನ್ನೂ ಇದಿರು ಹಾಕಿಕೊಳ್ಳುವುದು ಜಾಣತನವಲ್ಲ. ಮೊದಲಿಗೆ ಧಾರೆ ಮದುವೆ ಆಗದೆ 'ಕೈ ಹಿಡಿಸುವ' ಮದುವೆ ಆಗುವ ವಾಡಿಕೆಯಿಲ್ಲವಲ್ಲ. ಶಾಸ್ತ್ರಕ್ಕಾಗಿ ಮೊದಲು ಒಂದು ಬಾಳೆಯ ಗಿಡದೊಂದಿಗೆ ಧಾರೆ ಆಗಲಿ. ಮತ್ತೆ 'ಕೈ ಹಿಡಿಸುವ' ಕಾರ್ಯ ನಡೆಸಬಹುದು. ಜನ ಆಡುತ್ತಾರೆಂದು ನಂಬಿದ ಹೆಣ್ಣನ್ನು ಕೈ ಬಿಡುವುದು ಮಾತ್ರ ನೀತಿಯಲ್ಲ. ನೀನು ಹುಟ್ಟುವ ಮುಂಚೆ ಇಂಥ ಒಂದೆರಡು ಪ್ರಸಂಗಗಳು ನಡೆದುದರ ನೆನಪು ನನಗುಂಟು. ಆದರೆ ಹೇಗಾದರೂ ಇದಕ್ಕೆ ನಿನ್ನ ತಾಯಿಯನ್ನು ಒಪ್ಪಿಸಬೇಕು ನೀನು. ನಾಳೆ ಒಂದು ಮನೆಯಲ್ಲಿ

ಬಾಳಿಹೋದವರ ದೋಣಿಗಳು ಪರಸ್ಪರ ವಿರೋಧ ದಿಕ್ಕುಗಳಿಗಿರಬಾರದಷ್ಟೇ." ಹಳೆಯ ನಂಬಿಕೆಗಳ ನೆರಳಲ್ಲಿ ಬಾಳುತ್ತ ಬಂದ ಮುದುಕನಿಂದ ಇಂಥ ಸಲಹೆ ಬಂದೀತೆಂದು ಚಂದಪ್ಪ ಭಾವಿಸಿರಲಿಲ್ಲ. "ನನ್ನ ಅಮ್ಮನಿಗೆ ನೀವೂ ಒಂದು ಮಾತು ಹೇಳಿ" ಎಂದ ಪಕೀರಜ್ಜನೊಡನೆ.

× × ×

"ಯಾವುದಾದರೂ ಒಳ್ಳೆಯ ಕಡೆ ಹೆಣ್ಣು ಗೊತ್ತು ಮಾಡುವುದು ಬಿಟ್ಟು ಹೀಗೆಲ್ಲ ನಡೆಯುವುದುಂಟೇ? ಇದೆಲ್ಲ ಚಂದವೇನೆ ದೇಯಕ್ಕ?" ಯಾರೋ ಹಿತೋಪದೇಶ ಮಾಡಿದ್ದರು ದೇಯಿಗೆ. ಮಂದಿ ಹೇಳಿದ ಕತೆಗಳೆಲ್ಲವೂ ಸುಳ್ಳಾಗಿರಲಾರದು. ತಾನು, ಮಗಳು ಇಷ್ಟು ಸಮಯದಿಂದ ಒತ್ತಾಯ ಮಾಡುತ್ತಿದ್ದರೂ ಕಿವಿಗೆ ಹಾಕಿಕೊಳ್ಳದೆ ಈಗ ಇಂಥ ನಾಚಿಕೆಗೇಡಿನ ಕೆಲಸಕ್ಕೆ ಇಳಿದನಲ್ಲ" ಎಂದು ಕೊರಗೂ ಸಿಟ್ಟೂ ಒಟ್ಟೊಟ್ಟಿಗೇ ಬಂದುವು ಆಕೆಗೆ.

ಆ ಮಧ್ಯಾಹ್ನ ಚಂದಪ್ಪ ಉಂಡು ಕಡಲ ಬದಿಗೆ ಹೊರಟಾಗ ದೇಯಿ ಮಗನನ್ನು ಕರೆದು ಕೇಳಿದಳು.

"ಹೌದಮ್ಮ. ನಾನೇ ನಿಮ್ಮಲ್ಲಿ ಇಂದು ನಾಳೆ ಕೇಳುವುದರಲ್ಲಿದ್ದೆ. ನಾನು ನೀಲಮ್ಮನನ್ನು ಮದುವೆ ಆಗುವುದೆಂದು ಯೋಚಿಸಿದ್ದೇನೆ".

"ನಿನಗೆ ಮರುಳೇನೋ? ಊರಲ್ಲಿ ಬೇರೆ ಯಾರೂ ಹುಡುಗಿಯರಿಲ್ಲವೆ? ಗಂಡ ಸತ್ತ ಅವಳು ಮರುಳು ಮಾಡಿದಳೆಂದು ನೀನೂ ಕುಣಿಯುವುದೇ?"

"ಅವಳೇನೂ ಮರುಳು ಮಾಡಿಲ್ಲ; ನಾನೇ ಮದುವೆಯಾಗುವುದೆಂದು ನಿರ್ಧಾರ ಮಾಡಿದ್ದು."

"ಗಂಡ ಸತ್ತವಳನ್ನು ತಂದುಕೊಳ್ಳುವುದಕ್ಕೆ



"ಎಲಾ ಇವನ! ನಾವು ಹೊಡೆದದ್ದು ಐವತ್ತೇ ಸಾವಿರ— ಇನ್ನೈವತ್ತು ಮ್ಯಾನೇಜರ ಜೇಬಿಗಿಳಿಯಿತೆ!"

ಊರು ಒಪ್ಪುತ್ತದೆಯೋ? ಅಲ್ಲದೆ ಅವರಿಗೂ ನಮಗೂ ಕೂಡುಕಟ್ಟು ಇಲ್ಲ ಎಂಬುದು ನಿನಗೆ ಗೊತ್ತಿಲ್ಲವೇ? ನೀನು ಅವಳನ್ನು ಮರೆತುಬಿಡು. ಹೆಣ್ಣಿನ ಮೇಲೆ ಒಮ್ಮೆ ಗಂಡಿನ ಮನಸ್ಸು ಹೋದೊಡನೆ ಮದುವೆಯಾಗಿಯೇ ತೀರಬೇಕೆಂದೇನೂ ಇಲ್ಲ."

"ನನಗೆ ಮೊದಲಿನಿಂದಲೂ ಅವಳನ್ನೇ ಆಗಬೇಕೆಂದು ಮನಸ್ಸು.. ಏನಿದ್ದರೂ ಅವಳ ಕೈಬಿಟ್ಟು ಹಾಕುವುದು ನನಗೆ ಸಾಧ್ಯವಿಲ್ಲಮ್ಮ".

"ನೀನು ಏನೇ ಹೇಳು. ನನಗೆ ಇದೆಲ್ಲ ಸೊಗಸು ಅಂತ ಕಾಣುವುದಿಲ್ಲ" ದೇಯಿ ಸುಮ್ಮನಾದಳು. ಇನ್ನು ಮಾತು ಬೆಳೆಯಿಸಿ ಮನಸ್ತಾಪ ಮಾಡಿಕೊಳ್ಳಬಾರದು. ಪಕೀರಜ್ಜನಿಂದ ಹೇಳಿಸಿ ಒಪ್ಪಿಸಬಹುದು. ಎಂದುಕೊಂಡ ಚೆಂದಪ್ಪ ಮನೆಯಿಂದ ಹೊರಟ.

× × ×

ಕೆಲವು ದಿನಗಳಿಂದ ಇರುಳು ಬಲೆ ತಕ್ಕಮಟ್ಟಿಗೆ ಚೆನ್ನಾಗಿ ಉತ್ಪತ್ತಿಯನ್ನು ತಂದುಕೊಟ್ಟಿತ್ತು. ಕಡಲ ತಾಯಿ 'ದೊಡ್ಡವಳು' ಎಂಬ ಪಕೀರನ ಮಾತು ನೆನೆದ ಚೆಂದಪ್ಪ. ಬಲೆ ನೀರಿಗಿಳಿಸಿ ಕುಳಿತುಕೊಳ್ಳುವಷ್ಟರಲ್ಲಿ ಗಾಳಿ ರುಮು ರಮು ಎಂದು ಬೀಸತೊಡಗಿತು. ಶಾಂತವಾಗಿದ್ದ ಕಡಲು ಕವಡಿತು. ದೋಣಿ ಹೊಯ್ದಾಡತೊಡಗಿತು. ಬಲೆಯನ್ನು ಬೇಗಬೇಗನೆ ಎಳೆದು ದೋಣಿಯಲ್ಲಿ ತುಂಬಿಸಿದರು. ದೋಣಿ ಒಂದೇ ಸಮನೆ ತೂಗುಯ್ಯಾಲೆಯಂತೆ ತೂಗುತ್ತಿತ್ತು. ಅಡ್ಡ ಹಲಗೆಗೆ ತೂಗಿಸಿದ್ದ ಲಾಟಾನಿನ ಬುರುಡೆ ಒಡೆದು ಅದು ನಂದಿಹೋಯಿತು. ಪರಸ್ಪರ ದೋಣಿಗಳು ಕೂಗಿ ಕರೆದು "ಹೋಯನ್, ಈ ಕಡೇ ಬನ್ನೀ, ಹಾಯಿಯ ಬಿದಿರು ಬಿಟ್ಟೀ. ಅಡ್ಡ ಹಾಯಿಸೀ" ಎಂದು ಬೊಬ್ಬಿಡುತ್ತಿದ್ದರು. ಎಲ್ಲರೂ ಗಾಬರಿಯಿಂದ ಬೆಬ್ಬಳಿಸಿ ಹೋಗಿದ್ದರು. ಹಾಯಿ ಏರಿಸುವ ಬಿದಿರನ್ನು ಕಳಚಿ ದೋಣಿಯ ಅಡಿ ಭಾಗಕ್ಕೆ ಅಡ್ಡಲಾಗಿ ಹಾಯಿಸಿ ಬಿಗಿದರು. ದೋಣಿಯ ಕುಣಿದಾಟದಲ್ಲಿ ಅದು ಸುಲಭವಾದ ಕೆಲಸವಾಗಿರಲಿಲ್ಲ. ತುಫಾನು ನಿಲ್ಲಲೆ ಇಲ್ಲ, ಹೆಚ್ಚಾದಂತೆಯೇ ತೋರಿತು. ಬಿರುಗಾಳಿಯ ಹೊಯ್ಲಿನಿಂದ ಚೆಂದಪ್ಪನ ಕಿವಿ ಟೊಪ್ಪಿಗೆಯೂ ಅವರ ಮೇಲೆ ಸುತ್ತಿದ್ದ ಎಲ್ಲಾ ವಸ್ತ್ರವೂ ನೀರಿಗೆಸೆಯಲ್ಪಟ್ಟವು. ಸುಪ್ಪ ಕಾರ್ಣವನ ಕೈಯ ಹುಟ್ಟು ಗಡಿಬಿಡಿಯಿಂದ ಕೈ ಬಿಟ್ಟಿತು.

ದೈವ ದೇವರುಗಳ ಸ್ಮರಣೆ ಎಡೆಬಿಡದೆ ಸಾಗಿತ್ತು. ಕರೆಗೆ ಹೊರಡುವ ಪ್ರಯತ್ನ ಸಫಲವಾಗದೆ ಎಲ್ಲರೂ ಅದೃಷ್ಟದ ಮೇಲೆ ಭಾರ ಹಾಕಿ ಕುಳಿತರು. ತುಸು ಹೊತ್ತಿನಲ್ಲಿ ಜಡಿ ಮಳೆಯೂ ಬಡಿಯತೊಡಗಿತು. ದೋಣಿಯಲ್ಲಿ ತುಂಬಿಕೊಳ್ಳುತ್ತಿದ್ದ ನೀರನ್ನು ಆಗಿಂದಾಗ ಕವುಗಿನ ಹಾಳೆಯ ದೊನ್ನೆಯ ಮೂಲಕ ಬರಿದು ಮಾಡುತ್ತಿದ್ದರು. ಮಳೆಯ ನೀರಲ್ಲದೆ ತೆರೆಯ ತಾಕಲಾಟದಿಂದಲೂ ನೀರು ದೋಣಿಯೊಳಕ್ಕೆ ಬೀಳುತ್ತಿತ್ತು.

ಮಳೆ ಬೇಗನೆ ನಿಂತಿತು. ತುಫಾನು ಮಾತ್ರ ನಿಲ್ಲಲೇ ಇಲ್ಲ. ಕಡಲ ತೀರದಲ್ಲಿ ಅಳುಬೊಬ್ಬೆ, ಓಡಾಟ ಪ್ರಾರಂಭವಾಯಿತು. ಬಿರುಗಾಳಿ ಯಾರ ಆರ್ತನಾದವನ್ನೂ ಕೇಳದೆ ಒಂದೇ ಸಮನೆ ಬೀಸುತ್ತಿತ್ತು. ಮರಳು ತೆರೆ ತೆರೆಯಾಗಿ ಮೇಲೆದ್ದು ಮೈಗೆ ರಾಚಿ ಬಡಿಯುತ್ತಿತ್ತು. ತೆಂಗುಗಳು ಕರ್ಕಶವಾಗಿ ಮೊರೆಯುತ್ತ ಸಿಟ್ಟನ್ನು ಕಾರುತ್ತಿದ್ದವು. ಗಾಳಿ ಮರಗಳು ಲಟಲಟನೆ ಮುರಿದು ಬೀಳುವ ಸದ್ದು ಕೇಳಿಸುತ್ತಿತ್ತು. ಹಲವು ತೆಂಗಿನ ಮರಗಳು ನೆಲ ತಾಯಿಗೆ ಉದ್ದಂಡ ನಮಸ್ಕಾರ ಮಾಡಿದವು.

ಅತ್ತ, ಬಿರುಗಾಳಿಯ ರಭಸದ ಸದ್ದು ಕೇಳಿ ಹೊರಗೆ ಬಂದಳು ದೇಯಿ, ಕಡಲು ಒಮ್ಮೆಲೇ ಸೊಕ್ಕೇರಿ ಕುಣಿಯುವಂತಿತ್ತು. "ಅಯ್ಯಯ್ಯೋ! ದೇವರೆ ಎಂದು ಅತ್ತಿತ್ತ ಓಡಾಡಿದಳು. ದೈವಗಳಿಗೆ ಮೊರೆಯಿಟ್ಟಳು. ಹರಕೆ ಹೊತ್ತಳು. ದೇವರ ಕಂಡಿಗೆ ದುಡ್ಡು ಹಾಕಿ ಕೈ ಮುಗಿದಳು.

ಕಡಲಿನ ಮೊರೆತ ಸಮೀಪ_ ಸಮೀಪಕ್ಕೆ ಬರುತ್ತಿತ್ತು. ದೇಯಿ ಹೆದರಿದಳು. ಸ್ವಲ್ಪ ಹೊತ್ತಿನಲ್ಲೇ ಕಡಲ ನೀರು ಮುಂಗಡದ ಬೇಲಿಯನ್ನು ದಾಟಿ ಮುಂದೆ ನುಗ್ಗಿತು. ದೇಯಿಗೆ ಕೈಕಾಲುಗಳೇ ಕು... ದಂತಾಯಿತು. ಸ್ವಲ್ಪ ದೂರದ ಹೂವಪ್ಪನ ಮನೆ... ಹಿಡಿದಳು. "ನನ್ನ ಚೆಂದಪ್ಪ ಕಡಲಿಗೆ ಹೋಗಿದ... ನಲ್ಲಪ್ಪ. ದೇವರೇ, ನಮ್ಮ ಮನೆಯೂ ನೀರು ಪಾಲಾಗುತ್ತಿದೆ; ಏನು ಮಾಡಲಿ?" ಎಂದು ಗೋಳಾಡಿದಳು. ಹೂವಪ್ಪ ಆಕೆಗೆ ಸಮಾಧಾ... ಹೇಳುತ್ತ ಅವಳ ಜತೆಗೆ ಬಂದ. ಇನ್ನೂ ಎರಡ...

ಗೌರಮ್ಮನ ಹಸಿದೊಡಲಿನಲ್ಲಿ ಮಗುವೊಂದು ಆಕಾರ ತಳೆಯುತ್ತಿತ್ತು. ಆದರೂ ಅವಳು ದುಡಿಯುತ್ತಲೇ ಇದ್ದಳು

ಈಗ ಆಕೆಗೆ ದುಡಿಮೆಯಿಂದ ವಿರಾಮ- ರಾಜ್ಯ ಸರಕಾರದ ನೆರವಿನಿಂದ

ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಹೆರಿಗೆ ಭತ್ಯ ನೀಡುವ ಕರ್ನಾಟಕ ಸರ್ಕಾರದ ಯೋಜನೆಯಿಂದ ಈಗ ದಿನ ತುಂಬಿದ ಗರ್ಭಿಣಿಯರಿಗೆ ಹೊಸ ಆಸರೆ ಸಿಕ್ಕಿದಂತಾಗಿದೆ.

ಗೌರಮ್ಮನದು ಕೂಲಿಕಾರರ ಕುಟುಂಬ. ಬೆಳಗಿನಿಂದ ಸಂಜೆಯುವರೆಗೂ ಹೊಲದಲ್ಲಿ ಮೈ ಮುರಿಯುವಂಥ ದುಡಿಮೆ. ಹಾಗಿದ್ದರೂ ಆಕೆಯ ಮುಖದ ಮೇಲೆ ದಿನ ತುಂಬಿದ ಗರ್ಭಿಣಿಯ ಕಳೆ. ಆಗಾಗ ತಲೆತಿರುಗಿ ಬೀಳುವ ಸ್ಥಿತಿ. ಆದರೆ ಆಕೆಯು ದುಡಿಯದೆ ಬೇರೆ ದಾರಿಯಿಲ್ಲ. ಕುಟುಂಬದ ಹೊಟ್ಟೆ ತುಂಬಲು ಆಕೆಯ ದಿನಗೂಲಿ ಬೇಕೇ ಬೇಕು. ಕರ್ನಾಟಕ ಸರ್ಕಾರ ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಹೆರಿಗೆ ಭತ್ಯ ನೀಡುವ ತನ್ನ ಕ್ರಾಂತಿಕಾರಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಾಗ ಆಕೆಗೂ ಆಕೆಯ ಕುಟುಂಬಕ್ಕೂ ಹೊಸದೊಂದು ಆಸರೆ ದೊರೆಯಿತು. ಈಗ ಆಕೆಗೆ ದುಡಿಮೆಯಿಂದ ವಿರಾಮ.

ಈ ಯೋಜನೆಯಿಂದಾಗಿ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು ತುಂಬು ಗರ್ಭಿಣಿಯರಾದ ಕಾಲದಲ್ಲಿ ಮೂರು ತಿಂಗಳವರೆಗೆ ರೂ. ೧೦೦ ರಂತೆ ಒಟ್ಟು ರೂ. ೩೦೦ ಹೆರಿಗೆ ಭತ್ಯ ಪಡೆಯುತ್ತಾರೆ. ಈ ಭತ್ಯ ಮೊದಲ ಹಾಗೂ ಎರಡನೆಯ ಮಗುವಿನ ಜನನ ಕಾಲದಲ್ಲಿ ಲಭ್ಯ. ಇದರಿಂದಾಗಿ ಮಹಿಳೆಯರು ದುಡಿಯಲಾರದ ಸಮಯದಲ್ಲಿ ಅವರ ಕುಟುಂಬಗಳಿಗೆ ಆಧಾರ. ಅಲ್ಲದೆ ಅವರು ಉತ್ತಮ ಪೌಷ್ಟಿಕ ಆಹಾರ ಪಡೆಯಲೂ ಸಾಧ್ಯ.

ಅನುಷ್ಠಾನಕ್ಕೆ ಬಂದ ನಾಲ್ಕೇ ತಿಂಗಳಲ್ಲಿ ೧,೫೧೪ ಮಂದಿ ಮಹಿಳಾ ಕೃಷಿ ಕಾರ್ಮಿಕರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಹೌದು, ರಾಜ್ಯ ಸರ್ಕಾರ ದೀನ ದಲಿತರಿಗಾಗಿ ಏನು ಮಾಡಿದೆ ಎಂಬುದಕ್ಕೆ ಇದೊಂದು ನಿದರ್ಶನ. ಸರ್ಕಾರದ ಅಸಂಖ್ಯಾತ ಕಾರ್ಯಕ್ರಮಗಳು ದುರ್ಬಲ ಹಾಗೂ ದಲಿತ ವರ್ಗದವರ ಜನ ಜೀವನವನ್ನು ಸುಧಾರಿಸಿವೆ. ಭೂರಹಿತ ಕೃಷಿ ಕಾರ್ಮಿಕರಿಂದ ಹಿಡಿದು ಅನಾಥ ವಿಧವೆಯರವರೆಗೆ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಂದ ಹಿಡಿದು ಎಲ್ಲ ಹಳ್ಳಿಗಳಲ್ಲಿರುವ ಕುಟುಂಬಗಳಿಗೆ ಕಲ್ಯಾಣವನ್ನುಂಟು ಮಾಡಿದೆ.

"ಕರ್ನಾಟಕ ವಾರ್ತೆ"

ಡಿಐಪಿ/೧೫೪೦/೮೪-೮೫

ಮೂರು ಮಂದಿ ಹೊರಟರು,

ಕಡಲಿನ ತೆರೆಗಳನ್ನು ಹಿಡಿದು ನಿಲ್ಲಿಸುವಂತಿರಲಿಲ್ಲ. ಮರಳ ದಂಡೆ ಕ್ಷಣ ಕ್ಷಣಕ್ಕೂ ಕರಗುತ್ತಿತ್ತು. ಮನೆಯ ಹಿಂಬದಿಯಲ್ಲಿದ್ದ ತೆಂಗಿನ ಸಸಿಗಳು ಒಂದೊಂದೇ ಕಡಲ ಪಾಲಾಗುತ್ತಿದ್ದುವು... ಮನೆಯನ್ನು ಮುಟ್ಟಲು ನೀರು ತವಕಿಸುತ್ತಿತ್ತು.

ಕೂಡಲೆ ಪೂವಪ್ಪ, ದೇಯಿ, ಇತರರೂ, ಮನೆಯೊಳಗಿನ ಸಾಮಗ್ರಿಗಳನ್ನೆಲ್ಲ ಬೇಗ ಬೇಗನೆ ತಂದು ಒಂದು ದಿಣ್ಣೆಯ ಮೇಲೆ ರಾಶಿ ಹಾಕತೊಡಗಿದರು. "ಕಡಲಿಗೆ ಹೋದವರು ಚೆನ್ನಾಗಿ ಒಮ್ಮೆ ಕರೆ ಹಿಡಿಯಲಿ ದೇವರೇ," ದೇಯಿ ನಡುನಡುವೆ ಅಂದು ಕೊಳ್ಳುತ್ತಿದ್ದಳು. ದಾಸು ಗಾಬರಿಯಿಂದ ಅತ್ತಿತ್ತ ತಿರುಗಾಡುತ್ತಿತ್ತು, ಮನೆಯ ಹಿಂಬದಿಗೆ ನೀರು ಬಂದು ಹೊಡೆಯುತ್ತಿತ್ತು. ಪೂವಪ್ಪ, ಅವನ ತಮ್ಮಂದಿರು ಹಾರೆಯಲ್ಲಿ ಮರಳನ್ನು ಎತ್ತಿ ಎತ್ತಿ ಮನೆಯ ಹಿಂಭಾಗಕ್ಕೆ ಬೀಸತೊಡಗಿದರು. ಆದರೆ ಅವರ ಪ್ರಯತ್ನ ನಿಷ್ಫಲವಾಗಿ ನೀರು ತನ್ನಾಟ ಮೆರೆಸಿತು.

ಬಿರುಗಾಳಿಯ ಭರ ನಿಲ್ಲುವಾಗ ಮುಂಜಾನೆ ಮುಖ ತೋರಿಸಿತ್ತು, ಮೋಡಗಳು, ಚದರಿ ಆಕಾಶ ಶುಭ್ರವಾಗಿ ಗಾಳಿಯ ಅಬ್ಬರವೂ ಕಡಿಮೆಯಾದಾಗ ದೋಣಿಗಳು ಹಾಯಿ ಕೊಂಬು ಮರಕ್ಕೇರಿ ಕರೆಗೆ ಹೊರಟಿತು.

ತನ್ನ ಮನೆಗಾದ ಅವಸ್ಥೆಯನ್ನು ಕಂಡು ಮಗ ಎಷ್ಟು ಸಂಕಟ ಪಟ್ಟುಕೊಳ್ಳುತ್ತಾನೋ. ಇದಕ್ಕೆಲ್ಲ ತರವಾಡು ಮನೆ ಬಿಟ್ಟು ಬಂದುದೆ ಕಾರಣ ಅನಿಸದೆ ಇರಲಿಲ್ಲ ದೇಯಿಗೆ. ನಸುಕಿನಿಂದಲೆ ಆಕೆ ಕಡವಿಗೆ ಬಂದು ಕಾದಿದ್ದಳು. ಚೆಂದಪ್ಪನನ್ನು ಅಳುತ್ತಾ ಇದಿರುಗೊಂಡಳಾಕೆ.

"ನಮ್ಮ ಮನೆ..." ಒತ್ತಿ ಬಂದ ದುಃಖ ಗಂಟಲನ್ನು ಕಟ್ಟಿಸಿತು. ಚೆಂದಪ್ಪ. ಪಕೀರ ಒಡನೆಯೆ ಅತ್ತ ಧಾವಿಸಿದರು. ದೇಯಿ ಕಣ್ಣೀರೊರಸುತ್ತ ಅವರ ಹಿಂದೆಯೇ ಬಂದಳು.

ಮನೆಯ ಅವಸ್ಥೆಯನ್ನು ಕಂಡ ಚೆಂದಪ್ಪ ಅವಾಕ್ಕಾಗಿ ನಿಂತು ಬಿಟ್ಟ. ಮನೆಯ ಹಿಂಭಾಗದ ಮಣ್ಣಿನ ಹೊಸ ಗೋಡೆ ಕುಸಿದು ಬಿದ್ದಿತ್ತು. ಮುಂಭಾಗ ಶಿಥಿಲವಾಗಿ ನಿಂತಿತ್ತು. ಮಾಡು ಗಾಳಿಯ ಜಡಿತಕ್ಕೆ ಸಿಕ್ಕಿ ಅಸ್ತವ್ಯಸ್ತಗೊಂಡಿತ್ತು. ಹತ್ತಾರು ತೆಂಗಿನ ಸಸಿಗಳು ಕಡಲ ಪಾಲಾಗಿದ್ದವು. ಬೇಲಿ ಕೊಚ್ಚಿಹೋಗಿತ್ತು. ವ್ಯೈ ಸೋತು ಹೋ... ದಾಸು ನಾಯಿ ಅರೆಗಣ್ಣಾಗಿ ಸುಮ್ಮನೆ ಬಿದ್ದುಕೊಂಡಿತ್ತು.

ಚೆಂದಪ್ಪನ ಬಾಯಿಯಿಂದ ಯಾವ ಉದ್ಗಾರವೂ ಹೊರಡಲಿಲ್ಲ. ಆತ ಕಣ್ಣೀರೂ ಸುರಿಸಲಿಲ್ಲ. ಸುಮ್ಮನೆ ನಿಂತೇ ಇದ್ದ.

ಕೆಲವು ನಿಮಿಷ ಕಂಬದಂತೆ ನಿಂತಿದ್ದ ಮಾ... ಫಕ್ಕನೆ ಎಚ್ಚೆತ್ತವನಂತೆ, ಬುಡ ಕೊರೆದು ಹೋ... ಬೀಳಲಾಗಿದ್ದ ತೆಂಗಿನ ಗಿಡವೊಂದರ ಬುಡಕ್ಕೆ ಮ... ಳನ್ನು ತುಂಬಿಸತೊಡಗಿದ.

ದೇಯಿಯೂ ಪಕೀರಜ್ಜನೂ ಸುಮ್ಮನೆ ನಿಂ... ಅವನನ್ನೇ ನೋಡುತ್ತಿದ್ದರು.

ಏನೂ ಅರಿಯದಂತೆ ತೆರೆಗಳು ಎಂ... ಉಯ್ಯಾಲೆಯಾಟದಲ್ಲಿ ಮಗ್ನವಾದಂತಿದ್ದವು.

Edited, Printed & published by M. N. Mahishi on behalf of the Receiv... (Moveables), Loka Shikshna Trust, Samykuta Karnataka Press, Koppik... Road, Hubli- 580 020. Rept: Bombay; V. Satyamurthy Phone: 55105... Calcutta: H. Majumdar Phone: 46-42331 Madras: K. A. Subramani... Phone: 842201; New Delhi: V. K. Chopra Phone: 7114785.

Registered with the Registrar of News papers for India under No. 3530/57



M. K. Publicity

Licensed to Post without Pre payment. *Licence No. L2l20/WPP No. 33*